ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

ಸಾಧನೆ

ಸಂಪುಟ 3
ಸಂಚಿಕೆ 4
ಅಕ್ಟೋಬರ್ - ಡಿಸೆಂಬರ್ 1974

ಸಾಧನೆ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

SADHANE : Kannada Quarterly of the Bangalore University, Bangalore
Vol. 3 No. 4 October–December 1974

Chief Editor : Dr. G. S. Sivarudrappa

ವಾರ್ಷಿಕ ಚಂದಾ : ರೂ. 6–00
ರೂ. 4–00 [ವಿದ್ಯಾರ್ಥಿಗಳಿಗೆ]

ಪ್ರಕಾಶಕರು : ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056

ಮುದ್ರಕರು :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ, ಬೆಂಗಳೂರು 560056

ಪರಿವಿಡಿ

ಸಂತ ಅಗ್ನೆಸ್‌ಳ ಹಬ್ಬ (The Eve of St. Agnes) *

ಮೂಲ : **ಜಾನ್ ಕೀಟ್ಸ್**
ಅನು : **ದಿವಂಗತ ಡಿ. ಎಲ್. ನರಸಿಂಹಾಚಾರ್**

1

ಚಳಿರಾಯನಿರುಳಿಂದು - ಕುಳಿರೇನು ಕೊರೆಯುತಿದೆ !
ಕಣ್ಮುಚ್ಚಿ ನಡುಗುತಿದೆ ತುಪ್ಪುಳಿನ ಗೂಗೆ ;
ಇಬ್ಬನಿಯು ಗರುಕೆಯಲಿ ನೆಗೆಯಲಾರದು ಮೊಲವು,
ಅಲುಗದೆಯೆ ಮಲಗಿಹುದು ರೊಪ್ಪದಲಿ ಕುರಿಯು :
ಜಪಸರವನೆಣಿಸುತಿಹ ಮುನಿಯ ಕೈಬೆರಳುಗಳು
ಕಡ್ಡಿಯಾದವು ಸೆಡೆತು ; ಮೇಣಾತನುಸಿರ್ಗಾಳಿ
ಕಿಚ್ಚಿಟ್ಟ ಧೂಪದಿಂದೊಗೆದ ಹೊಗೆಯಂತೆ
ಆದಿದೈವದ ಬಿಂಬದಿದಿರಲ್ಲಿ ಹೊರಟು
ಅಡರುತಿದೆ ಸಾಯದೆಯೆ ಸಗ್ಗಕ್ಕೆ ಜಾನಿಸುತಲಾತನಿಹನು.

2

ಮುಗಿಸಿದನು ಜಾನವನು ಮುನಿವರನು ; ಮೌನದಿಂ
ಮೇಲೆದ್ದು ಮರಳಿದನು ಗುಡಿಯನ್ನು ಬೆಳಗಿ,
ಸೊಡರಿಂದಲೊಬ್ಬನೇ ಚಿಂತೆಯಲಿ ಮುಳುಗಿ,
ಮೆಲ್ಲಮೆಲ್ಲನೆ ಗೋಡೆಯಂಚಿನಲಿ ಸರಿದು ;
ಎಡಬಲದ ಕೆತ್ತನೆಯ ಕಪ್ಪಾದ ಕಲ್ಲುಗಳ
ಬೊಂಬೆಗಳು ಕೊರೆಯುತಿರೆ ತಂಪಿನೊಳು ಹುದುಗಿ ;
ಕೈಮುಗಿದ ಮೊಸೆಗಾರ ಮುಗುದೆಯರ ದಾಟಿ
ತೆರಳಿದನು ಮುಂದೆ ; ಅಳಿದ ಹುರುಪಿನ ಮುದುಕ
ತಾನೆಂತು ತಿಳಿಯುವನು ಕಾತರಿಸಿ ಬಳಲಿರುವ ಓಪರೆದೆಯ.

---

* ಮೂಲ ಖಂಡಕಾವ್ಯದಲ್ಲಿ 34 ಖಂಡಗಳಿದ್ದು ಅದರಲ್ಲಿ 9 ಖಂಡಗಳನ್ನು ಮಾತ್ರ ಅನುವಾದಿಸಿರುವುದು ನಮಗೆ ದೊರಕಿದೆ. ಕನ್ನಡ ಶೀರ್ಷಿಕೆಯನ್ನು ಸಂಪಾದಕರು ಕೊಟ್ಟಿದ್ದಾರೆ

3

ಬಲಗಡೆಗೆ ತಿರುಗಿದನು ಮುನಿವರನು ; ಒಂದೆರಡು
ಹೆಜ್ಜೆಗಳನಿಟ್ಟಿಲ್ಲ - ಆಗಲೇ ವಾಣಿ
ಯಿಂಗೊರಲ ಮೆಲುದನಿಯು ಕಣ್ಣಿನಿಂ ನೀರ
ತುಳುಕಿಸಿತು - ಜವಗಂಟೆ ಕರೆದಿರುವ ಬಾಳ
ಬೆಲೆಯರಿತಿರುವ ಮುದುಕಗೇತಕೀ ಜೇನದನಿ ;
ದಾರುಣದ ತಪವೊಂದೆ ಸಾಲದೇನಿವಗೆ ;
ಅದರಿಂದ ಮತ್ತೊಂದು ದಾರಿಯನು ಹಿಡಿದು
ಆತ್ಮಶಾಂತಿಯನರಸಿ ಮಸಣಕ್ಕೆ ಬಂದು
ಜಗದ ಗೋಳನು ಕಂಡು ಮರುಗಲೀ ಇರುಳೆಲ್ಲ ಕುಳಿತನಲ್ಲಿ.

4

ಇಂಚರದ ಪಲ್ಲವಿಯೆ ಕೇಳಿಸಿತು ಮುದುಕನಿಗೆ
ಈ ರಾತ್ರಿ ನಿಜವಾಗಿ ಜನರ ಸಂದಣಿಯು
ಸಡಗರವು ; ಮಂಗಳದ ವಾದ್ಯಗಳ ದನಿಯು
ಬಾಂದಳವ ಮುತ್ತಿಟ್ಟು ಹರಡುತಿದೆ ದೆಸೆಗೆ :
ಆ ಗುಡಿಯು ಅಂಗಳವು ಸಿಂಗರದ ಗಾಡಿಯಿಂ
ದಿಬ್ಬಣಕೆ ಕರೆಯುತಿದೆ ಜಂಗುಳಿಯು ಜನರ:
ಕಿನ್ನರ ಪ್ರತಿಮೆಗಳ ಸಾಲು ಕೌತುಕದ
ಕಣ್ಣಿನಿಂ ನೋಡಿದವು ಬಳ್ಳಿಗಳ ನಡುವೆ,
ಕೆದರಿರುವ ಮುಂಗುರುಳ ವೊಗೆದಿರುವ ರೆಕ್ಕೆಗಳು ಮುಚ್ಚಲೆದೆಯ

5

ಮೂಡಿದುದು ಚಂದ್ರಿಕೆಯನೇಳಿಸುವ ಮೆರವಣಿಗೆ,
ಬಜ್ಜರದ ಸಿಂಗರದ ಹೊನಲುಕ್ಕಿದಂತೆ
ಜವ್ವನದ ಕಲ್ಪನೆಯ ಬಾನಿನೊಳು ಸುಳಿವ
ಎಣಿಕೆಯಿಲ್ಲದ ಚಿತ್ರದಾಳುಗಳ ಬೆಡಗ–
ನಿಮ್ಮಡಿಸಿ. ಒಳ್ಳೆಯದ ಬಯಸುತ್ತಲಿದಕೀಗ
ದಿಟ್ಟಿಯನು ಸುಳಿಸೋಣ, ಎಲ್ಲರನು ಬಿಟ್ಟು

ಪ್ರೇಮದಲಿ ಚಿಂತೆಯಲಿ ಹಗಲೆಲ್ಲ ನೊಂದು
ದೀನತೆಯೆ ರೂಪುಗೊಂಡಂತೆ ಕಂಗೊಳಿಪ,
ದಯಶಾಲಿ ಮದನನಿಗೆ ನೋಹಿಗಳನೆಸಗಿರುವ ಕನ್ನೆ ಕಡೆಗೆ.

6

ವ್ರತಗಳನು ಭಕ್ತಿಯಿಂ ಮಾಡಿರುವ ತರಳೆಯರು
ಕಾಣುವರು ಈ ರಾತ್ರಿ ಸವಿಗನಸುಗಳನು ;
ಬಯಕೆಗಳ ಸಲಿಸುವರು ಕಾದಲರು ಮೆಚ್ಚಿ,
ನಟ್ಟಿರುಳ ಮೌನದಲಿ ಪಡೆಯುವರು ಸುಖವ ;
ಇಂತಿಂತು ಹೇಳಿದರು ಮುತ್ತಹೆಂಗಳು ಹರಸಿ
ಇದನೆಲ್ಲಿ ಕೇಳಿದ್ದ ಳಾಕನ್ನೆ ಕಮಲೆ,
ಒಳಗೊಳಗೆ ಮರುಗಿದಳು ಹೆಚ್ಚಲಾ ಬಯಕೆ
ಅತ್ತಿತ್ತ ನೋಡದೆಯೆ ನುಡಿಯದೆಯೆ ಆವ
ನಲ್ಲವನು ಒಲಿಸುವನೊ ಬಿದಿಯೆಂದು ಬೇಡುತ್ತ ನಿಂತಲವಳು.

7

ಈ ಪರಿಯ ಕದಡುಬಗೆ ಕಮಲೆಯನು ಕಾಡಿಸಿತು
ಸವಿಗಡಲ ತೆರೆಯಂತೆ ಪೊಣ್ಮುವಾ ಗೀತ
ಕಿವಿಗಿನಿತು ಕೇಳಿಸದು ; ಅವಳ ಕಣ್ಣುಗಳು
ದಿವ್ಯತರಳತೆಯ ಬೀಡುಗಳು, ನೋಡಿದವು
ಸಡಗರದ ನೆರವಿಯನು, - ನೋಡಲೊಲ್ಲದು ಮನವು.
ಸಿಂಗರದ ನಾಯಕರು ಹತ್ತಿರಕೆ ಬಂದು
ಮರಳಿದರು ಬರಿದೆ ; ಅವಳೆದೆಯ ಒಲುಮೆ
ಎಲ್ಲಿಗೊ ಕರೆಯೇರಿ ಹರಿದು ಹೊನಲಾಗಿ
ಚಳಿಯಿರುಳ ಕನಸುಗಳ ಸವಿಗೆಳಸಿ ಸೇರಿದುದು ಇರುಳ ಕಡಲ.

8

ನಡುಗುತಿಹ ತುಟಿಯಿಂದ ಪದರುತಿಹ ಎದೆಯಿಂದ
ತಿರುಗಿದಳು ಲೆಕ್ಕಿಸದ ಕಣ್ಣುಗಳ ಕಮಲೆ ;
ಅಭಿಲಾಷೆ ಕೈಗೂಡುವಾಗಳಿನೆ ಸಾರಿ

ಹತ್ತಿರಕೆ ಬರುತಿರಲು, ಗೇಯುಗಳ ನಡುವೆ,
ನಿಟ್ಟುಸಿರನಿಕ್ಕಿದಳು ; ಗಣಿಸದೆಯೆ ಸಂದಣಿಯು
ಮಂದಿಗಳ ಪಂತಗಳ ಪಾಡುಗಳ ಮಿಗಿಲ
ಹೆಬ್ಬಯಕೆಗೀಡಾಗಿ ಉಕ್ಕುತಿರೆಯೊಲುಮೆ,
ಚಳಿಯಿರುಳ ದೇವತೆಯು ಮನವಾರೆ ನುತಿಸಿ
ಕನಸುಗಳ ಸಗ್ಗವನು ಕೊಡು ಎಂದು ಬೇಡಿದಳು ನಿದ್ದೆಕವಿಯೆ.

9

ನಿದ್ದೆ ಹಕ್ಕಿಯು ಸುಳಿದು ಜೋಗುಳವ ಹಾಡಿದರು
ಮಲಗದೆಯೆ ನಿಂತಳಾ ಕಮಲೆ ; ಕಾಡುಗಳ
ಮೋಡುಗಳ ಕಳೆದೊಲುಮೆಗಿಚ್ಚಿನಲಿ ಬೆಂದು
ದೂರದಿಂ ಬಂದಿಹನು ಕಮಲೆಯನು ಬಯಸಿ
ಜವ್ವನದ ಕಳೆಯೇರಿ ತೊಳಗುತಿಹ ಮಾಧವನು ;
ಚಂದ್ರಿಕೆಯ ನಸು ಬೆಳಗೆ ಮರೆಯಾಗೆ ನಿಂತು
ಬಾಗಿಲಲಿ ಕಾದಿಹನು ತನ್ನ ದೇವತೆಯ -
ನೊಮ್ಮೆ ನೋಡಿದರು ನುಡಿಸಿದರು ಸಾಕೆಂದು,
ಮನದಣಿಯೆ ಮುತ್ತುಗಳ ಹೂಗಳಿಂದರ್ಚಿಸಲು ಬಾಳಸಿರಿಯ.

[ಅಪೂರ್ಣ]

ಪುಸ್ತಕಾಲಯ ಪೋಷಕರ ಗುಣಸ್ವಭಾವಗಳು
ನಗರ ಕೇಂದ್ರ ಪುಸ್ತಕಾಲಯ, ಮೈಸೂರು* (ಒಂದು ಸಮೀಕ್ಷೆ)

ಕೆ. ಉಮಾಪತಿ ಶೆಟ್ಟಿ

ಕರ್ನಾಟಕ ಸಾರ್ವಜನಿಕ ಪುಸ್ತಕಾಲಯ ಕಾನೂನು 1966 ರಲ್ಲಿ ಜಾರಿಗೆ ಬಂದ ನಂತರ ಸಾಕಷ್ಟು ಸಂಖ್ಯೆಯಲ್ಲಿ ಸಾರ್ವಜನಿಕ ಪುಸ್ತಕಾಲಯಗಳು ಯೋಜಿತ ರೀತಿಯಲ್ಲಿ ರೂಪುಗೊಳ್ಳುತ್ತಿವೆ. ಅವುಗಳ ಬೆಳವಣಿಗೆಯಲ್ಲಿ ಅಷ್ಟಿಷ್ಟು ಪ್ರಗತಿಯಾಗಿದೆ. ಆದರೆ ಈ ಪುಸ್ತಕಾಲಯಗಳ ಪೋಷಕರ ಉಪಯೋಗಿಸುವವರ ಗುಣಸ್ವಭಾವಗಳನ್ನು ಕುರಿತ ಖಚಿತ ತಿಳುವಳಿಕೆ ನಮಗಿಲ್ಲ. ಸಾರ್ವಜನಿಕ ಪುಸ್ತಕಾಲಯಗಳ ಪೋಷಕರು ಪುಸ್ತಕಾಲಯ ಸೇವೆಯನ್ನು ಜೀವನದ ಅವಶ್ಯಕತೆಗಳಲ್ಲಿ ಒಂದೆಂದು ಭಾವಿಸುವರೋ ಇಲ್ಲವೋ ನಮಗೆ ತಿಳಿಯದು. ಪುಸ್ತಕಾಲಯ ಸೇವೆಯನ್ನು ನಿಲ್ಲಿಸಿದರೆ ಅವರೇನು ಮಾಡಿಯಾರು ಎಂಬುದರ ಸುಳಿವೂ ನಮಗಿಲ್ಲ. ಇಂಥ ವಿಷಯಗಳಲ್ಲಿ ಪುಸ್ತಕಾಲಯ ಪೋಷಕರ ಮನೋಧರ್ಮದ ಅರಿವು ಪುಸ್ತಕಾಲಯಗಳ ಹುಟ್ಟು ಬೆಳವಣಿಗೆಗಳಿಗೂ ಪುಸ್ತಕಾಲಯ ವಿಜ್ಞಾನಿಗಳ ವೃತ್ತಿಯ ಪೋಷಣೆಗೂ ಅತ್ಯಗತ್ಯ. ಈ ಸಮೀಕ್ಷೆ ಇಂಥ ಕೊರತೆಯನ್ನು ತುಂಬುವ ಒಂದು ಪುಟ್ಟ ಪ್ರಯತ್ನ.

ಸಮೀಕ್ಷೆ ನಡೆಸಲು ಅನುಸರಿಸಿದ ಕ್ರಮ

ಹನ್ನೆರಡು ಪ್ರಶ್ನೆಗಳನ್ನೊಳಗೊಂಡ ಪ್ರಶ್ನಾವಳಿಯನ್ನು ಕನ್ನಡ ಹಾಗೂ ಇಂಗ್ಲಿಷ್‌ಗಳಲ್ಲಿ ಸಿದ್ಧಮಾಡಲಾಯಿತು. ಪೋಷಕರು ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲು ಅನುಕೂಲ ಆಗಲೆಂದು ಬಹುಮುಖಿ ಉತ್ತರಗಳನ್ನು ಅಳವಡಿಸಲಾಯಿತು. ಸಾರ್ವಜನಿಕ ಪುಸ್ತಕಾಲಯ ಪೋಷಕರು ಯಾವುದಾದರೊಂದು ಉತ್ತರವನ್ನು ಆರಿಸುವುದರ ಮೂಲಕವೋ, ತಮ್ಮದೇ ಆದ ಉತ್ತರವನ್ನು ಕೊಡುವುದರ ಮೂಲಕವೋ ತಮ್ಮ ಅಭಿಪ್ರಾಯವನ್ನು ಅಡ್ಡಿ ಆತಂಕ ಇಲ್ಲದೆ ವ್ಯಕ್ತಪಡಿಸುವ ಅವಕಾಶ ಕೊಡಲಾಯಿತು. ಮೇ 23, 1974 ಗುರುವಾರ ಮಧ್ಯಾಹ್ನ

---

* ಸಮೀಕ್ಷೆ ನಡೆಸಲು ಅನುಕೂಲ ಮಾಡಿಕೊಟ್ಟು ಸಹಕರಿಸಿದ ಮೈಸೂರು ನಗರದ ಕೇಂದ್ರ ಸಾರ್ವಜನಿಕ ಪುಸ್ತಕಾಲಯದ ಪಾಲಕ ಶ್ರೀ ಡಿ. ರಾಮಯ್ಯನವರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.—ಲೇಖಕ

2–00 ಗಂಟೆ ಸಮಯದಲ್ಲಿ ಮೈಸೂರು ನಗರ ಕೇಂದ್ರ ಪುಸ್ತಕಾಲಯದಲ್ಲಿ ಇದ್ದ ಎಲ್ಲ ಪೋಷಕರಿಗೂ ಪ್ರಶ್ನಾವಳಿ ಕೊಡಲಾಯಿತು. ಗೊತ್ತಾದ ಶುಲ್ಕವನ್ನು ಕೊಟ್ಟು ಪುಸ್ತಕಗಳನ್ನು ಎರವಲು ಪಡೆಯುವ ಸೌಲಭ್ಯ ಉಳ್ಳ ಪುಸ್ತಕಾಲಯ ಸದಸ್ಯರ ಹಾಗೂ ಪುಸ್ತಕಾಲಯದಲ್ಲಿಯೇ ಕುಳಿತು ವ್ಯಾಸಂಗ ಮಾಡಲು ಬಂದವರ ನಡುವೆ ಯಾವ ತಾರತಮ್ಯವನ್ನೂ ತೋರಿಸಲಿಲ್ಲ. ಪ್ರಶ್ನಾವಳಿ ಭರ್ತಿ ಮಾಡಲು ಅಗತ್ಯವೆನಿಸಿದರೆ ಸಹಾಯ ಮಾಡಲು ಲೇಖಕ ಸ್ಥಳದಲ್ಲಿಯೇ ಹಾಜರಿದ್ದರೂ ಬಹು ಸಂಖ್ಯೆಯ ಪೋಷಕರು ಯಾವ ಸಹಾಯವನ್ನೂ ಅಪೇಕ್ಷಿಸಲಿಲ್ಲ. ಯಾವುದೇ ರೀತಿಯ ದಾಕ್ಷಿಣ್ಯ, ನಿರ್ಬಂಧ, ಹೆದರಿಕೆ ಇಲ್ಲದೆ ತೆರೆದ ಮನದಿಂದ ಪೋಷಕರು ಉತ್ತರ ಕೊಡಲು ಸಹಾಯವಾಗಲೆಂದು ಅವರ ಹೆಸರು, ವಿಳಾಸಗಳ ವಿವರ ಬೇಕಾಗಿಲ್ಲವೆಂದು ಮೊದಲೇ ತಿಳಿಸಲಾಗಿತ್ತು. ಪೋಷಕರ ಸಮೂಹದಲ್ಲಿದ್ದ ಇಬ್ಬರು ವಯೋವೃದ್ಧರು ಪ್ರಶ್ನಾವಳಿಗೆ ಉತ್ತರ ಕೊಡಲು ನಿರಾಕರಿಸಿದರು. ಇದೇ ಕಾರ್ಯಕ್ರಮದ ಪುನರಾವರ್ತನೆ ಮೇ 26, 1974 ಭಾನುವಾರ ಸಂಜೆ 5–00 ಗಂಟೆ ಸಮಯದಲ್ಲಿ ನಡೆಯಿತು. ಸಮಾಜದ ವಿವಿಧ ರಂಗಗಳಿಂದ ಬಂದ ಪೋಷಕರನ್ನು ಸಮೀಕ್ಷೆಗೆ ಒಳಪಡಿಸಿ, ವ್ಯಕ್ತಪಡಬಹುದಾದ ವಿಚಾರಗಳಿಗೆ ಹೆಚ್ಚು ತೂಕ ಬರಲೆಂಬ ಉದ್ದೇಶದಿಂದ ಬೇರೊಂದು ದಿನ, ಬೇರೊಂದು ಸಮಯದಲ್ಲಿ ಸಮೀಕ್ಷೆ ನಡೆಸಲಾಯಿತು. ಎರಡು ದಿನಗಳಿಂದ ಒಂದು ನೂರು ಪ್ರಶ್ನಾವಳಿಗಳನ್ನು ಪೋಷಕರಿಗೆ ಹಂಚಲಾಗಿದ್ದು ತೊಂಬತ್ತೆರಡು ಪ್ರಶ್ನಾವಳಿಗಳು ಪೋಷಕರ ಉತ್ತರಗಳೊಡನೆ ಹಿಂತಿರುಗಿ ಬಂದವು.

ಪುಸ್ತಕಾಲಯ ಪೋಷಕರ ಗುಣಸ್ವಭಾವಗಳು[1]

1.[2] ವಯಸ್ಸು

ಶೇ. 32 ರಷ್ಟು ಪೋಷಕರು 16–20 ವರ್ಷ ವಯಸ್ಸಿನ ಗುಂಪಿಗೂ; ಶೇ. 42 ರಷ್ಟು ಮಂದಿ 21–30 ವರ್ಷ ವಯಸ್ಸಿನ ಗುಂಪಿಗೂ ಸೇರಿದವರು. ಯುವಕರು ಇತರರಿಗಿಂತಲೂ ಹೆಚ್ಚಾಗಿ ಸಾರ್ವಜನಿಕ ಪುಸ್ತಕಾಲಯವನ್ನು ಉಪಯೋಗಿಸುತ್ತಿರುವುದು ಕಂಡುಬರುತ್ತದೆ. ಭಾರತದ ಜನಸಂಖ್ಯೆಯ ಶೇ. 66 ರಷ್ಟು ಮಂದಿ 0–29 ವರ್ಷ ವಯಸ್ಸಿನ ಗುಂಪಿಗೆ ಸೇರಿದವರೆಂಬುದನ್ನು ಗಮನಿಸಿದಾಗ, ಈ ಅಂಶ ಪುಸ್ತಕಾಲಯಗಳ ಬೆಳವಣಿಗೆ, ವಿಸ್ತರಣೆಗಳಿಗೆ ಶುಭ ಸೂಚಕವಾಗಿದೆ.[3] ಶೇ. 6.5 ರಷ್ಟು ಮಂದಿ 31–40 ವರ್ಷ ವಯಸ್ಸಿನ ಗುಂಪಿಗೆ ಸೇರಿದ

---

[1] ಪುಸ್ತಕಾಲಯ ಪೋಷಕರ ಗುಣಸ್ವಭಾವಗಳ ಸಾರಾಂಶವನ್ನು ಪಟ್ಟಿ 1 ರಲ್ಲಿ ಕೊಡಲಾಗಿದೆ

[2] ಅಂಕಿಗಳು ಪ್ರಶ್ನಾವಳಿಯಲ್ಲಿನ ಅಂಕಿಗಳನ್ನು ಸೂಚಿಸುತ್ತವೆ

[3] *India, A Reference Annual 1973*, New Delhi. Publications Division, Government of India 1973. P. 9

ವರಾದರೆ, ಶೇ. 5.4 ರಷ್ಟು ಮಂದಿ 41–50 ವರ್ಷ ವಯಸ್ಸಿನ ಗುಂಪಿಗೆ ಸೇರಿದವರು. ಶೇ. 1.1 ರಷ್ಟು ಮಂದಿ 50 ವರ್ಷಕ್ಕೂ ಹೆಚ್ಚು ವಯಸ್ಸಾದವರು. ಈ ಗುಂಪಿನ ಜನ ಶಾಲಾ ಕಾಲೇಜುಗಳಿಗೆ ಹೋಗಿ ವಿದ್ಯಾಭ್ಯಾಸ ಮಾಡುವ ವಯಸ್ಸಿನವರಾಗಿದ್ದಾಗ ವಿದ್ಯಾರ್ಜನೆಗೆ ಸಾಕಷ್ಟು ಅನುಕೂಲಗಳು ದೇಶದಲ್ಲಿ ಇಲ್ಲದೆ ಇದ್ದುದ್ದು, ವಯಸ್ಕರ ಶಿಕ್ಷಣಕ್ಕೆ ಸಾರ್ವತ್ರಿಕ ಅವಕಾಶಗಳಿಲ್ಲದಿರುವುದೂ, ವಯಸ್ಕರು ಶಿಕ್ಷಣ ಪಡೆದ ನಂತರ, ಶಿಕ್ಷಿತರಾಗಿ ಉಳಿಯಲು ಸಾಕಷ್ಟು ಸೌಕರ್ಯ ಗಳಿಲ್ಲದಿರುವುದೂ ಮತ್ತು ಸಾರ್ವಜನಿಕ ಪುಸ್ತಕಾಲಯಗಳು ಬಹುಮಟ್ಟಿಗೆ ಪುಸ್ತಕ ಗಳನ್ನೇ ಅವಲಂಬಿಸಿರುವ ಸೇವೆಯನ್ನು ಮಾತ್ರ ಕೊಡುತ್ತಿರುವುದೂ ಇಂಥ ಸ್ಥಿತಿಗೆ ಕಾರಣ. ಶೇ. 6.5 ರಷ್ಟು ಪೋಷಕರು 10–15 ವರ್ಷ ವಯಸ್ಸಿನ ಗುಂಪಿಗೆ ಸೇರಿ ದವರು. ಪುಸ್ತಕಾಲಯ ಮಕ್ಕಳಿಗೆ ಗಮನಾರ್ಹ ಸೇವೆ ಸಲ್ಲಿಸದಿರುವುದು, ಬೆಳೆಯುವ ಯುವಕರಿಗೆ ಯಾವ ರೀತಿಯ ವಿಶೇಷ ಗಮನವನ್ನೂ ಕೊಡದೆ ಇರುವುದು ನೋಡಿದಾಗ ಇಷ್ಟು ಮಂದಿಯಾದರೂ ಪುಸ್ತಕಾಲಯಕ್ಕೆ ಬರುತ್ತಿರುವುದು ಮೆಚ್ಚಿಕೆಯ ವಿಚಾರ ಎನಿಸುತ್ತದೆ.

2. ಹೆಂಗಸು ಅಥವ ಗಂಡಸು

ಶೇ. 80 ರಷ್ಟು ಪೋಷಕರು ಗಂಡಸರು ಮತ್ತು ಶೇ. 12 ರಷ್ಟು ಮಂದಿ ಹೆಂಗಸರು. ದೇಶದ ಪ್ರಜಾ ಸಂಖ್ಯೆಯ ಸುಮಾರು ಅರ್ಧದಷ್ಟು ಮಂದಿ ಮಹಿಳೆ–ಯರೆಂಬುದನ್ನು ಗಮನಿಸಿದಾಗ ಈ ಅಂಶ ಕುರಿತು ವಿಚಾರಿಸಬೇಕಾಗಿದೆಯಲ್ಲದೆ, ಪುಸ್ತಕಾಲಯಗಳು ಹೆಚ್ಚು ಮಂದಿ ಮಹಿಳೆಯರನ್ನು ಆಕರ್ಷಿಸಲು ವಿಶೇಷ ರೀತಿಯ ಪ್ರಯತ್ನಗಳನ್ನು ಮಾಡಬೇಕಾಗಿದೆ.

3. ವಿದ್ಯಾರ್ಹತೆ

ಶೇ. 4.3 ರಷ್ಟು ಮಂದಿ ಮಾತ್ರ ಎಸ್. ಎಸ್. ಎಲ್. ಸಿ. ಗಿಂತ ಕಡಿಮೆ ದರ್ಜೆಯ ವಿದ್ಯಾರ್ಹತೆ ಪಡೆದಿದ್ದರು. ಸಾರ್ವಜನಿಕ ಪುಸ್ತಕಾಲಯಗಳನ್ನು ಉಪಯೋಗಿಸಿ, ಪ್ರಯೋಜನ ಪಡೆಯಲು ಒಂದು ಕನಿಷ್ಠ ಮಟ್ಟದ ವಿದ್ಯಾರ್ಹತೆ ಅಗತ್ಯವೆಂದು ತೋರುತ್ತದೆ. ಪುಸ್ತಕಾಲಯಗಳು ಅತಿ ಹೆಚ್ಚು ಎನ್ನುವಂಥ ಪ್ರಾಮುಖ್ಯತೆಯನ್ನು ಅಚ್ಚಾದ ಪುಸ್ತಕ, ಪತ್ರಿಕೆಗಳಿಗೆ ಕೊಡುವುದರಿಂದ ಹೀಗಾಗಿದೆ. ಭಾರತದ ಪ್ರಜಾಸಂಖ್ಯೆಯ ಕೇವಲ ಶೇ. 29.95 ರಷ್ಟು ಮಂದಿ ಮಾತ್ರ ಅಕ್ಷರಸ್ಥರು.[4] ಪುಸ್ತಕಾಲಯಗಳು ತಮ್ಮ ಆಕರಣ ನೀತಿಯನ್ನು ಪುನರ್ವಿಮರ್ಶಿಸಿ

[4] *India, A Reference Annual 1973*, New Delhi. Publications Division, Government of India, 1973, P. 5

ಅನಕ್ಷರಸ್ಥರಿಗೂ ಉಪಯೋಗವಾಗುವಂಥ ಪುಸ್ತಕೇತರ ಸಾಮಗ್ರಿಗಳನ್ನು (ಉದಾ. ಟೇಪು, ಟೇಪ್ ರೆಕಾರ್ಡರ್, ಗ್ರಾಮಫೋನು, ಚಲನ ಚಿತ್ರ ಸ್ಲೈಡ್, ಸ್ಲೈಡ್ ಪ್ರೊಜೆಕ್ಟರ್ ಇತ್ಯಾದಿ) ಒದಗಿಸದಿದ್ದಲ್ಲಿ ನಮ್ಮ ಜನತೆಯ ಬಹುಭಾಗಕ್ಕೆ ಅವು ಯಾವ ಸೇವೆಯನ್ನು ಸಲ್ಲಿಸಲಾರವು. ಶೇ. 16 ರಷ್ಟು ಮಂದಿ ಎಸ್.ಎಸ್.ಎಲ್.ಸಿ. ಪರೀಕ್ಷೆ ತೇರ್ಗಡೆ ಆದವರು. ಶೇ. 20.6 ರಷ್ಟು ಮಂದಿ ಪ್ರಿ ಯೂನಿವರ್ಸಿಟಿ ; ಶೇ. 19.5 ರಷ್ಟು ಮಂದಿ ಡಿಗ್ರಿ ತರಗತಿಗಳಲ್ಲಿ ಓದಿದವರು ಅಥವ ಓದುತ್ತಿರುವವರು. ಇದರಿಂದ ಮೈಸೂರು ನಗರದ ಸಾಕಷ್ಟು ಮಂದಿ ವಿದ್ಯಾರ್ಥಿಗಳು ನಗರ ಕೇಂದ್ರ ಪುಸ್ತಕಾಲಯವನ್ನು ಉಪಯೋಗಿಸುತ್ತಿರುವುದು ವ್ಯಕ್ತಪಡುತ್ತದೆ. ಈ ಅಂಶವನ್ನು ಗಮನಿಸಿ ಪುಸ್ತಕಾಲಯ ನಗರದ ಶಾಲಾ ಕಾಲೇಜುಗಳ ಸಹಕಾರ ದಿಂದಲೋ, ಅಥವ ಅದಿಲ್ಲದೆಯೋ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪುಸ್ತಕ ಮತ್ತಿತರ ಸಲಕರಣೆಗಳನ್ನು ಒದಗಿಸಲು ವಿಶೇಷ ಗಮನ ಕೊಡಬೇಕಾದ ಅಗತ್ಯ ಕಂಡು ಬರುತ್ತದೆ. ಶೇ. 30.4 ರಷ್ಟು ಪೋಷಕರು ವಿಶ್ವವಿದ್ಯಾನಿಲಯದ ಒಂದು ಪದವಿ ಪಡೆದಿದ್ದು, ಶೇ. 8.7 ರಷ್ಟು ಪೋಷಕರು ಸ್ನಾತಕೋತ್ತರ ಪದವಿ ಪಡೆದವರು. ಉನ್ನತ ವ್ಯಾಸಂಗ ನಡೆಸಿದ ಜನರು ಸಾರ್ವಜನಿಕ ಪುಸ್ತಕಾಲಯದ ಪೋಷಕರಾಗಿ ಮುಂದುವರೆಯುತ್ತಿರುವುದು ಸಮಾಧಾನದ ವಿಷಯ.

4. ಉದ್ಯೋಗ

ಸಾರ್ವಜನಿಕ ಪುಸ್ತಕಾಲಯದ ಪೋಷಕರಲ್ಲಿ ಯಾವ ಒಂದು ವೃತ್ತಿಗೂ ಪ್ರಾಮುಖ್ಯತೆ ಇಲ್ಲದಂತೆ ನಾನಾ ವೃತ್ತಿಗಳ ಪ್ರತಿನಿಧಿಗಳಿರುವುದು ಸಮೀಕ್ಷೆಯಿಂದ ವ್ಯಕ್ತಪಟ್ಟಿದೆ. ಇದು ಸಮಾಜದ ವಿವಿಧ ವರ್ಗಗಳ ಜನರು ಪುಸ್ತಕಾಲಯ ಸೇವೆಯಲ್ಲಿ ಆಸಕ್ತಿ ಹೊಂದಿರುವುದನ್ನು ಸೂಚಿಸುತ್ತದೆ. ಅಲ್ಲದೆ ಪೋಷಕರು ಜೀವನದ ಎಲ್ಲ ಮಟ್ಟಗಳನ್ನೂ ಪ್ರತಿನಿಧಿಸುತ್ತಾರೆ. ಕೆಳದರ್ಜೆಯ ಸರಕಾರಿ ನೌಕರನಿಂದ ಆರಂಭಿಸಿ ಉನ್ನತಾಧಿಕಾರಿಗಳವರೆಗೂ ಪೋಷಕರ ಗುಂಪು ಹರಡಿದೆ. ಶೇ. 29 ರಷ್ಟು ಮಂದಿ ಈ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ. ಅಲ್ಲದೆ ಶೇ. 6.5 ರಷ್ಟು ಮಂದಿ ತಾವು ನಿರುದ್ಯೋಗಿಗಳೆಂದು ತಿಳಿಸಿದ್ದಾರೆ. ಶೇ. 29 ರಷ್ಟು ಮಂದಿ ಈ ಪ್ರಶ್ನೆಗೆ ಉತ್ತರ ಕೊಡುವಾಗ ತಾವು ವಿದ್ಯಾರ್ಥಿಗಳೆಂದು ಹೇಳಿಕೊಂಡಿದ್ದಾರೆ.

5. ಮಾಹೆಯಾನ ವರಮಾನ

ಪುಸ್ತಕಾಲಯದ ಪೋಷಕರು ವಿವಿಧ ಮಟ್ಟದ ಆದಾಯಹೊಂದಿದ್ದು ಸಮಗ್ರ ಸಮಾಜದ ಕೈಗನ್ನಡಿಯಂತಿದ್ದಾರೆ. ಶೇ. 9.7 ರಷ್ಟು ಮಂದಿಯ ಆದಾಯ ಮಾಹೆಯಾನ 100 ರೂ. ಅಥವಾ ಅದಕ್ಕೂ ಕಡಿಮೆ ಇದ್ದರೆ ಶೇ. 2.2 ರಷ್ಟು

ಮಂದಿಯ ತಿಂಗಳ ವರಮಾನ 1,500 ರೂ. ಶೇ. 56.5 ರಷ್ಟು ಮಂದಿ ಯಾವ ಆದಾಯವೂ ಇಲ್ಲ ಎಂದು ತಿಳಿಸಿದ್ದಾರೆ. ಇವರಲ್ಲಿ ಅನೇಕರು ವಿದ್ಯಾರ್ಥಿಗಳಿರಬಹುದೆಂದು ತೋರುತ್ತದೆ. ಶೇ. 3.2 ರಷ್ಟು ಮಂದಿ ಈ ಪ್ರಶ್ನೆಗೆ ಉತ್ತರ ಕೊಟ್ಟಿಲ್ಲ.

8. ಪುಸ್ತಕಾಲಯಕ್ಕೆ ಎಷ್ಟುಬಾರಿ ಬರುತ್ತೀರಿ ?

ಶೇ. 41.3 ರಷ್ಟು ಮಂದಿ ಗ್ರಂಥಾಲಯಕ್ಕೆ ಪ್ರತಿದಿನ ಬಂದರೆ, ಶೇ. 38 ರಷ್ಟು ಮಂದಿ ವಾರಕ್ಕೆರಡು ಬಾರಿ, ಶೇ. 15.1 ರಷ್ಟು ಮಂದಿ ವಾರಕ್ಕೊಂದು ಬಾರಿ ಬರುತ್ತಾರೆ. ಶೇ. 3.2 ರಷ್ಟು ಮಂದಿ ಎರಡು ವಾರಕ್ಕೊಮ್ಮೆ, ಶೇ. 2.2 ರಷ್ಟು ಮಂದಿ ತಿಂಗಳಿಗೊಮ್ಮೆ ಪುಸ್ತಕಾಲಯಕ್ಕೆ ಬರುತ್ತಾರೆ. ಆಗಾಗ ಪುಸ್ತಕಾಲಯಕ್ಕೆ ತಪ್ಪದೆ ಭೇಟಿ ಕೊಡುವ ಜನವರ್ಗವೊಂದು ರೂಪುಗೊಳ್ಳುತ್ತಿರುವುದನ್ನು ಈ ಅಂಕಿ ಅಂಶ ವ್ಯಕ್ತಪಡಿಸುತ್ತದೆ. ಇದು ಪುಸ್ತಕಾಲಯಗಳಿಗೆ ತೃಪ್ತಿಯ ವಿಚಾರ. ಆದರೆ ಸಮೀಕ್ಷೆ ನಡೆದದ್ದು ಮೇ 1974 ರಲ್ಲಿ, ಆಗ ಶಾಲಾ ಕಾಲೇಜುಗಳಿಗೆ ಬೇಸಿಗೆ ರಜೆ ಇದ್ದು ವಿದ್ಯಾರ್ಥಿಗಳಿಗೆ ಹೆಚ್ಚು ವಿರಾಮ ಇರುತ್ತದೆ ಎಂಬುದನ್ನು ಗಮನಿಸಬೇಕು.

9. ಪುಸ್ತಕಾಲಯಕ್ಕೆ ಬರುವುದೇಕೆ ?[5]

ಶೇ. 47.8ರಷ್ಟು ಮಂದಿ ವೃತ್ತ ಪತ್ರಿಕೆಗಳನ್ನು ಓದಲು ಬರುತ್ತೇವೆಂದೂ; ಶೇ. 46.7 ರಷ್ಟು ಮಂದಿ ನಿಯತಕಾಲಿಕಗಳನ್ನು ಓದಲು ಬರುವುದಾಗಿಯೂ; ಶೇ. 46.7 ರಷ್ಟು ಮಂದಿ ಪುಸ್ತಕಗಳನ್ನು ಓದಲು ಬರುವುದೆಂದೂ; ಶೇ. 33.6 ರಷ್ಟು ಮಂದಿ ಪುಸ್ತಕ ಎರವಲು ಪಡೆಯಲು ಬರುವುದಾಗಿಯೂ ತಿಳಿಸಿದ್ದಾರೆ. ಶೇ. 7.6ರಷ್ಟು ಮಂದಿ ಪುಸ್ತಕಾಲಯ ಪಾಲಕರಿಂದ ಸುದ್ದಿ ಸಂಗ್ರಹಿಸಲು ಬಂದುದಾಗಿಯೂ, ಶೇ. 3.2 ರಷ್ಟು ಮಂದಿ ಪುಸ್ತಕಾಲಯದಲ್ಲಿ ವಿಶ್ರಾಂತಿ ಪಡೆಯಲು ಬಂದೆವೆಂದೂ, ಶೇ. 1.1 ರಷ್ಟು ಮಂದಿ ಸ್ನೇಹಿತರನ್ನು ಭೇಟಿಯಾಗಲು ಬಂದುದಾಗಿಯೂ ತಿಳಿಸಿದ್ದಾರೆ. ಬಹುಸಂಖ್ಯಾತ ಪೋಷಕರು ವೃತ್ತಪತ್ರಿಕೆ, ನಿಯತಕಾಲಿಕ, ಪುಸ್ತಕ ಓದಲೋ, ಎರವಲು ಪಡೆಯಲೋ ಪುಸ್ತಕಾಲಯಕ್ಕೆ ಬರುತ್ತಾರೆ. ಈ ಅಂಕಿ ಅಂಶಗಳು ಪುಸ್ತಕಾಲಯದಲ್ಲಿ ಪೋಷಕರಿಗೆ ಬೇಕಾದ ಸುದ್ದಿ ಒದಗಿಸುವ, ಅವರ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಕೆಲಸಗಳಿಗೆ ಅಷ್ಟು ಪ್ರಾಮುಖ್ಯತೆ ಇಲ್ಲದಿರುವುದನ್ನು ತೋರಿಸುತ್ತವೆ. ಪುಸ್ತಕಾಲಯ ತಮಗೆ ಬೇಕಾದ ವಿಚಾರ, ಸುದ್ದಿ ಒದಗಿಸುವ ಜೀವಂತ ಕೇಂದ್ರ ಎಂಬುದಾಗಿ ಜನರು ಭಾವಿಸಿರುವಂತೆ ಕಾಣುವುದಿಲ್ಲ. ಜೊತೆಗೆ ಪುಸ್ತಕಾಲಯ ಸಹ ಅದು ತನ್ನ ನ್ಯಾಯವಾದ ಕೆಲಸ ಎಂದು ತಿಳಿದಂತಿಲ್ಲ. ಪುಸ್ತಕಾಲಯ ಕೇವಲ

---

[5] ನಕ್ಷೆ ನೋಡಿ

ಪುಸ್ತಕ, ನಿಯತಕಾಲಿಕಗಳನ್ನು ಬೇಕೆಂದವರಿಗೆ ಒದಗಿಸುವ 'ಅಂಗಡಿ' ಮಾತ್ರವೋ ಅಥವ ಹೊಸಕಾಲಕ್ಕೆ ಅನುಗುಣವಾದ ಹೊಸ ರೀತಿಯ ಸೇವೆಗಳನ್ನು ಒದಗಿಸುವ, ರಾಷ್ಟ್ರದ ಬೆಳವಣಿಗೆಯ ಮಹಾಕಾರ್ಯದಲ್ಲಿ ಕ್ರಿಯಾತ್ಮಕ ಪಾತ್ರವಹಿಸುವ ಜೀವಂತ ಸಂಸ್ಥೆಯೋ ಎಂಬುದನ್ನು ಪುಸ್ತಕಾಲಯ ಪಾಲಕರು, ಅಧಿಕಾರಿಗಳು. ಸಂಬಂಧಪಟ್ಟ ಮತ್ತಿತರರು ನಿರ್ಣಯಿಸಬೇಕಾದ ಕಾಲ ಬಂದಿದೆ.

10. ಪೋಷಕರು ಉಪಯೋಗಿಸುವ ಪುಸ್ತಕ, ಪತ್ರಿಕೆಗಳ ಭಾಷೆ

ಶೇ. 70.6 ರಷ್ಟು ಮಂದಿ ಕರ್ನಾಟಕದ ಅಧಿಕೃತ ಭಾಷೆಯಾದ ಕನ್ನಡದಲ್ಲಿ ಗ್ರಂಥ, ನಿಯತ ಕಾಲಿಕಗಳನ್ನು ಉಪಯೋಗಿಸಿದರೆ, ಶೇ. 67.3 ರಷ್ಟು ಮಂದಿ ಇಂಗ್ಲಿಷ್ ಭಾಷೆಯ ಪುಸ್ತಕ ಪತ್ರಿಕೆಗಳನ್ನು ಉಪಯೋಗಿಸುವುದಾಗಿ ತಿಳಿಸಿದ್ದಾರೆ. ಶೇ. 7.6 ರಷ್ಟು ಮಂದಿ ಉರ್ದು; ಶೇ. 6.5 ರಷ್ಟು ಮಂದಿ ಹಿಂದಿ ; ಶೇ .3.2 ರಷ್ಟು ಮಂದಿ ತೆಲುಗು; ಶೇ. 1.1 ರಷ್ಟು ಮಂದಿ ತಮಿಳು ಹಾಗೂ ಮಲೆಯಾಳ ಭಾಷೆಗಳಲ್ಲಿರುವ ಗ್ರಂಥ, ನಿಯತಕಾಲಿಕ, ಪತ್ರಿಕೆಗಳನ್ನು ಉಪಯೋಗಿಸುತ್ತಾರೆ. ಪುಸ್ತಕಾಲಯದ ಪುಸ್ತಕ ಸಂಪತ್ತು ಮುಖ್ಯವಾಗಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿದ್ದು, ಪೋಷಕರ ಅವಶ್ಯಕತೆಗನುಗುಣವಾದ ಭಾಷೆಗಳಲ್ಲಿನ ಪುಸ್ತಕ ಪತ್ರಿಕೆಗಳನ್ನು ಒದಗಿಸಬೇಕಾದ ಜವಾಬ್ದಾರಿ ಪುಸ್ತಕಾಲಯದ್ದಾಗಿದೆ.

11. ಪುಸ್ತಕಾಲಯ ಉತ್ತಮಪಡಿಸಲು ಸಲಹೆ

ಶೇ. 59.7 ರಷ್ಟು ಮಂದಿ ಹೆಚ್ಚು ಸಂಖ್ಯೆಯ ಹೊಸ ಪುಸ್ತಕಗಳನ್ನು ತರಿಸಬೇಕೆಂದೂ; ಶೇ. 19.5 ರಷ್ಟು ಮಂದಿ ಹೆಚ್ಚು ಕಾಲ ಪುಸ್ತಕಾಲಯವನ್ನು ತೆರೆದಿರಬೇಕೆಂದೂ; ಶೇ. 20.6 ರಷ್ಟು ಮಂದಿ ಹೆಚ್ಚು ಪುಸ್ತಕಗಳನ್ನು ಎರವಲು ಪಡೆಯುವ ಸೌಲಭ್ಯಬೇಕೆಂದೂ; ಶೇ. 17.3 ರಷ್ಟು ಮಂದಿ ತಮ್ಮ ಪ್ರಶ್ನೆಗಳಿಗೆ ಉತ್ತರ ಒದಗಿಸುವ ಸೌಕರ್ಯಬೇಕೆಂದೂ ತಿಳಿಸಿದ್ದಾರೆ. ಶೇ. 21.7 ರಷ್ಟು ಮಂದಿ ಪುಸ್ತಕಾಲಯದ ಕೆಲಸಗಾರರು ನಗು ಮುಖದಿಂದಿದ್ದು ಕೆಲಸ ಮಾಡಬೇಕೆಂದು ಸೂಚಿಸಿದ್ದಾರೆ. ಇದು ಪುಸ್ತಕಾಲಯ ಕೆಲಸಗಾರರಿಗೆ ಸಂತೋಷದ ಸುದ್ದಿಯಲ್ಲವಾಗಿದ್ದು ವಿಚಾರಕ್ಕೆ ಅರ್ಹವಾಗಿದೆ. ಪುಸ್ತಕಾಲಯಕ್ಕೂ, ಸಾರ್ವಜನಿಕರಿಗೂ ಮಧುರ ಬಾಂಧವ್ಯ ಇರಲು ನಗುಮುಖದ ಸ್ವಾಗತ, ಸೇವೆ ಒದಗಿಸುವುದು ಅಗತ್ಯ. ಇದರಿಂದ ಕೆಲಸಗಾರರಿಗೂ, ಪೋಷಕರಿಗೂ, ಪುಸ್ತಕಾಲಯಕ್ಕೂ ಏಕಕಾಲದಲ್ಲಿ ಒಳ್ಳೆಯದಾಗುತ್ತದೆ. ಪುಸ್ತಕಾಲಯದ ಅಧಿಕಾರಿಗಳು ಈ ಅಂಶವನ್ನು ತಮ್ಮ ಕೆಲಸಗಾರರಿಗೆ ಅರ್ಥವಾಗುವಂತೆ ಮಾಡುವ ಭಾರ ಹೊತ್ತಿದ್ದಾರೆ. ಸ್ವಚ್ಛಗಾಳಿ, ಹೆಚ್ಚು ಬೆಳಕು, ಫ್ಯಾನು. ಮತ್ತಿಗಳು, ಗ್ರಂಥ ಸಂಪತ್ತಿನ ಉತ್ತಮ ವರ್ಗೀಕರಣ, ವಿಜ್ಞಾನ ವಿಚಾರ

ಗಳಿಗೆ ಸಂಬಂಧಪಟ್ಟ ಹೆಚ್ಚು ಸಂಖ್ಯೆಯ ಪುಸ್ತಕಗಳ ಬೇಡಿಕೆ—ಇತರ ಸಲಹೆಗಳಲ್ಲಿ ಗಮನಾರ್ಹವಾದವು. ಹೆಚ್ಚು ಹೊಸ ಪುಸ್ತಕಗಳನ್ನು ಒದಗಿಸುವುದು ಹೆಚ್ಚು ಹಣ ಒದಗುವುದನ್ನು ಅವಲಂಬಿಸಿದ್ದು ಸಾರ್ವಜನಿಕ ಪುಸ್ತಕಾಲಯಗಳಿಗೆ ಹೆಚ್ಚಿನ ಆರ್ಥಿಕ ನೆರವು ತಕ್ಷಣ ದೊರೆಯಬೇಕಾಗಿದೆ.

6–7 ಸಾರ್ವಜನಿಕ ಪುಸ್ತಕಾಲಯ ಅವಶ್ಯಕವೇ ?

ಪ್ರಶ್ನಾವಳಿಗೆ ಉತ್ತರ ಕೊಟ್ಟ ಪ್ರತಿಯೊಬ್ಬ ಪೋಷಕನೂ ಪುಸ್ತಕಾಲಯ ಅವಶ್ಯಕ ಎಂದು 6 ನೆ ಪ್ರಶ್ನೆಗೆ ಉತ್ತರ ಕೊಡುವಾಗ ಖಚಿತಪಡಿಸಿದ್ದಾನೆ. ಆದರೆ ಈ ಉತ್ತರ ಕೊಟ್ಟವರು ಪುಸ್ತಕಾಲಯದ ಒಳಗಡೆ ಬಂದಿರುವ ಸಾರ್ವಜನಿಕರೇ ಹೊರತು. ಹೊರಗಿರುವ ಸಾರ್ವಜನಿಕರಲ್ಲ. ಆದ್ದರಿಂದ ಅವರ ಅಭಿಪ್ರಾಯ ಒಟ್ಟು ಸಾರ್ವಜನಿಕರ ಅಭಿಪ್ರಾಯವನ್ನು ಪ್ರತಿಬಿಂಬಿಸುವುದೆಂದು ಹೇಳಲಾಗದು. ಆದ್ದರಿಂದಲೇ ಪುಸ್ತಕಾಲಯ ಮುಚ್ಚಿದರೆ ನೀವು ಏನು ಮಾಡುವಿರಿ ಎಂಬ 7 ನೇ ಪ್ರಶ್ನೆಯನ್ನು ಪ್ರಶ್ನಾವಳಿಯಲ್ಲಿ ಸೇರಿಸಲಾಗಿತ್ತು. ಶೇ. 46.7 ರಷ್ಟು ಮಂದಿ ಪುಸ್ತಕಾಲಯ ಮುಚ್ಚಿದಲ್ಲಿ ಅದಕ್ಕೆ ಕಾರಣ ಏನು ಎಂದು ವಿಚಾರಿಸುತ್ತೇವೆ ಎಂದು ತಿಳಿಸಿದ್ದಾರೆ. ಶೇ. 32.6 ರಷ್ಟು ಮಂದಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯುವುದಾಗಿಯೂ, ಶೇ. 13 ರಷ್ಟು ಮಂದಿ ವೃತ್ತಪತ್ರಿಕೆಗಳಲ್ಲಿ ಪ್ರತಿಭಟನಾ ಪತ್ರ ಬರೆಯುವುದಾಗಿಯೂ: ಶೇ. 23.9 ರಷ್ಟು ಮಂದಿ ತಮ್ಮ ಚುನಾಯಿತ ಪ್ರತಿನಿಧಿಗಳ ಮೂಲಕ ಪುಸ್ತಕಾಲಯ ಪುನರಾರಂಭಕ್ಕೆ ಪ್ರಯತ್ನ ಮಾಡುವುದಾಗಿಯೂ ಸೂಚಿಸಿದ್ದಾರೆ. ಶೇ. 4.3 ರಷ್ಟು ಮಂದಿ ಮಾತ್ರ ಏನನ್ನೂ ಮಾಡುವುದಿಲ್ಲ ಎಂದಿದ್ದಾರೆ. ಇದರಿಂದ ಸಾಕಷ್ಟು ಮಂದಿ ಪುಸ್ತಕಾಲಯ ಮುಚ್ಚಿದಲ್ಲಿ ಅದರ ಪುನರಾರಂಭಕ್ಕೆ ಏನನ್ನಾದರೂ ಕ್ರಿಯಾತ್ಮಕವಾಗಿ ಮಾಡುವ ಅಪೇಕ್ಷೆ ಹೊಂದಿರುವುದು ವ್ಯಕ್ತಪಡುತ್ತದೆ. ನಮ್ಮ ದೇಶದಲ್ಲಿ ಸಾರ್ವಜನಿಕ ಪುಸ್ತಕಾಲಯ ಸೇವೆಯ ಸಮೃದ್ಧ ಬೆಳವಣಿಗೆಗೆ ಇದು ಅತ್ಯುತ್ತಮವಾದ ಜೀವವಿಮೆ.

8. ಪುಸ್ತಕಾಲಯ ಪಾಲಕನಿಗೂ ಪೋಷಕರಿಗೂ ಇರುವ ಅಂತರ

ಶೇ. 50 ರಷ್ಟು ಮಂದಿ ಪೋಷಕರು ಪುಸ್ತಕಾಲಯ ಪಾಲಕನನ್ನು ನೋಡಿರುವುದಾಗಿಯೂ: ಶೇ. 35.8 ರಷ್ಟು ಮಂದಿ ನೋಡಿಲ್ಲ ಎಂದೂ ತಿಳಿಸಿದ್ದಾರೆ. ಶೇ. 41.3 ರಷ್ಟು ಮಂದಿ ಪುಸ್ತಕಾಲಯ ಪಾಲಕರೊಡನೆ ಮಾತನಾಡುವ ಅವಶ್ಯಕತೆ ಇತ್ತೆಂದು ತಿಳಿಸಿದ್ದರೂ, ಶೇ. 29.3 ರಷ್ಟು ಮಂದಿ ಮಾತ್ರ ಅವರೊಡನೆ ಮಾತನಾಡಿರುವುದಾಗಿ ತಿಳಿಸಿದ್ದಾರೆ. ಶೇ. 35.8 ರಷ್ಟು ಮಂದಿ ಅವರೊಡನೆ ಮಾತನಾಡುವ ಅವಶ್ಯಕತೆ ಇರಲಿಲ್ಲವೆಂದೂ, ಶೇ. 46.7 ರಷ್ಟು ಮಂದಿ ತಾವೆಂದೂ

ಅವರೊಡನೆ ಮಾತನಾಡಿಲ್ಲವೆಂದೂ ಹೇಳಿದ್ದಾರೆ. ಪುಸ್ತಕಾಲಯ ಪಾಲಕ ಆಗಿಂದಾಗ ತನ್ನ ಕಛೇರಿ–ಕೊಟಡಿಯಿಂದ ಹೊರಬಂದು ಸಾರ್ವಜನಿಕ ಸಂಪರ್ಕ ಇರುವಂಥ ಸ್ಥಳಗಳಲ್ಲಿ ಪ್ರತಿದಿನ ಅರ್ಧ ಗಂಟೆ, ಒಂದು ಗಂಟೆ ಕೆಲಸ ಮಾಡುವುದು ಒಳ್ಳೆಯದೆಂದು ತೋರುತ್ತದೆ. ತರಪೇತಿ ಪಡೆದ ಒಬ್ಬನೇ ಪುಸ್ತಕಾಲಯ ವಿಜ್ಞಾನಿ ಇರುವ ಅನೇಕ ಸಾರ್ವಜನಿಕ ಪುಸ್ತಕಾಲಯಗಳಲ್ಲಿ ಇದು ಅಗತ್ಯ. ವಿಶೇಷ ರೀತಿಯ ಪ್ರಯತ್ನ ಮಾಡದಿದ್ದಲ್ಲಿ ಪೋಷಕರು ನಾನಾ ಹಂತದ ಪುಸ್ತಕಾಲಯದ ಕೆಲಸಗಾರರೊಡನೆ ತಮಗಾದ ಅನುಭವದ ಆಧಾರದ ಮೇಲೆಯೇ ಪುಸ್ತಕಾಲಯ, ಪುಸ್ತಕಾಲಯ ಪಾಲಕ, ಪುಸ್ತಕಾಲಯ ವಿಜ್ಞಾನಿ ಎಂಥವನು ಎಂಬ ಅಭಿಪ್ರಾಯ ರೂಪಿಸಿಕೊಳ್ಳುತ್ತಾರೆ. ಇದರಿಂದ ಈಗಾಗಲೇ ಜನಮನದಲ್ಲಿ ಪುಸ್ತಕಾಲಯ ಪಾಲಕರ ಬಗ್ಗೆ ಇರುವ ಅಷ್ಟೇನೂ ತೃಪ್ತಿಕರವಲ್ಲದ ಅಭಿಪ್ರಾಯಕ್ಕೆ ಪುಷ್ಟಿ ದೊರೆತೀತು.

ಪಟ್ಟಿ 1


ಪುಸ್ತಕಾಲಯ ಪೋಷಕರ ಗುಣ ಸ್ವಭಾವಗಳು : ನಗರ ಕೇಂದ್ರ ಸಾರ್ವಜನಿಕ ಪುಸ್ತಕಾಲಯ, ಮೈಸೂರು

ವಯಸ್ಸು	ಹೆಂಗಸು – ಗಂಡಸು	ವಿದ್ಯಾರ್ಹತೆ	ಉದ್ಯೋಗ		ಮಾಹೆಯಾನ ವರಮಾನ	
10–15 ವರ್ಷ :	ಹೆಂಗಸು	ಎಸ್.ಎಸ್.ಎಲ್.ಸಿ.	ಉಪಾಧ್ಯಾಯ	7 (7.6%)	100 ರೂ. ವರೆಗೆ	9 (9.7%)
6 (6.5%)	12 (13%)	ಗಿಂತ ಕಡಮೆ	ಗುಮಾಸ್ತೆ	6 (6.5%)	200 ರೂ. ,,	7 (7.6%)
10–20 ವರ್ಷ :	ಗಂಡಸು	4 (4.3%)	ಬ್ಯಾಂಕ್ ನೌಕರ	3 (3.2%)	300 ರೂ. ,,	4 (4.3%)
32 (34.7%)	80 (87%)	ಎಸ್.ಎಸ್.ಎಲ್.ಸಿ.	ರೈತ	2 (2.2%)	400 ರೂ. ,,	9 (9.7%)
21–30 ವರ್ಷ		15 (16%)	ರೈಲ್ವೆ ನೌಕರ		500 ರೂ. ,,	5 (5.4%)
42 (45.6%)		ಪಿ.ಯು.ಸಿ.	ಅಂಗಡಿಯ ಜವಾನ		600 ರೂ. ,,	1 (1.1%)
31–40 ವರ್ಷ :		19 (20.6%)	ಜವಾನ	ಪ್ರತಿ ವೃತ್ತಿಗೂ,	1500 ರೂ.	2 (2.2%)
5 (5.4%)		ಪದವಿ ಪೂರ್ವ	ಪೋಸ್ಟ್ ಮಾಸ್ಟರ್	ಒಬ್ಬರು	ವರಮಾನ ಇಲ್ಲ.	52 (56.5%)
50 + ವರ್ಷ :		18 (19.5%)	ಎಂಜನಿಯರ್		ಉತ್ತರ ಕೊಡದವರು.	3 (3.2%)
1 (1.1%)		ಮೊದಲ ಪದವಿ	ಆಡಿಟರ್			
		28 (30.4%)	ದರ್ಜಿ	(1.1%)		
		ಸ್ನಾತಕೋತ್ತರ	ಅಕ್ಕಸಾಲಿಗ			
		8 (8.7%)	ವಿಜ್ಞಾನಿ			
			ಸ್ಟೆನೋಗ್ರಾಫರ್			
			ವ್ಯಾಪಾರಿ			
			ಕೈಗಾರಿಕೋದ್ಯಮಿ			
			ನಿವೃತ್ತರಾದವರು	2 (2.2%)		
			ನಿರುದ್ಯೋಗಿಗಳು	6 (6.5%)		
			ವಿದ್ಯಾರ್ಥಿಗಳು	27 (29%)		
			ಉತ್ತರ ಕೊಡದವರು	27 (29%)		

ಪುಸ್ತಕಾಲಯ ಉಪಯೋಗಿಸುವವರು ಭರ್ತಿ ಮಾಡಬೇಕಾದ ಪ್ರಶ್ನಾವಳಿ

1.	ವಯಸ್ಸು	....
2.	ಹೆಂಗಸು ಅಥವಾ ಗಂಡಸು	....
3.	ವಿದ್ಯಾರ್ಹತೆ	....
4.	ಉದ್ಯೋಗ	....
5.	ಮಾಹೆಯಾನ ವರಮಾನ	....
	(ನಿಮಗೆ ಸೂಕ್ತ ಕಾಣುವ ಉತ್ತರ ಅಥವ ಉತ್ತರಗಳ ಮುಂದೆ ಗುರುತು ಮಾಡಿ ಸೂಚಿಸಿರಿ.)	
6.	ನಿಮ್ಮ ಅಭಿಪ್ರಾಯದಲ್ಲಿ ಪುಸ್ತಕಾಲಯ ಅವಶ್ಯಕವೆ ?	ಅವಶ್ಯಕ......... ಅವಶ್ಯಕ ಅಲ್ಲ.........
7.	ಪುಸ್ತಕಾಲಯ ಮುಚ್ಚಿದರೆ ಅದರ ಪುನರಾರಂಭಕ್ಕೆ ನೀವು ಏನು ಮಾಡುವಿರಿ ?	ಮುಚ್ಚಲು ಏನು ಕಾರಣ ಎಂದು ವಿಚಾರಿಸುತ್ತೇನೆ. ...... ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯುತ್ತೇನೆ. ...... ನಮ್ಮ ಕ್ಷೇತ್ರದ ಚುನಾಯಿತ ಪ್ರತಿನಿಧಿಗಳಿಗೆ ಪುಸ್ತಕಾಲಯ ಪುನರಾರಂಭಿಸಲು ಯತ್ನಿಸುವಂತೆ ಆಗ್ರಹ ಮಾಡುತ್ತೇನೆ... ಪತ್ರಿಕೆಗಳ ವಾಚಕರ ವಾಣಿಯಲ್ಲಿ ಪ್ರತಿಭಟನಾ ಪತ್ರ ಬರೆಯುತ್ತೇನೆ. ...... ಏನೂ ಮಾಡಲು ಸಾಧ್ಯವಿಲ್ಲ ಎಂದು ಸುಮ್ಮನಿರುತ್ತೇನೆ. ...... ಇತರ (ವಿವರಿಸಿ) ......
8.	ನೀವು ಪುಸ್ತಕಾಲಯಕ್ಕೆ ಎಷ್ಟು ಬಾರಿ ಬರುತ್ತೀರಿ ?	ಪ್ರತಿದಿನ ...... ವಾರಕ್ಕೆರಡು ದಿನ ...... ವಾರಕ್ಕೊಮ್ಮೆ ...... ಎರಡು ವಾರಕ್ಕೆ ಒಂದು ಸಲ ...... ತಿಂಗಳಿಗೆ ಒಂದು ಸಲ ......

9. ಪುಸ್ತಕಾಲಯಕ್ಕೆ ನೀವು ಏಕೆ ಬರುತ್ತೀರಿ ?	ವೃತ್ತಪತ್ರಿಕೆ ಓದಲು	……
	ವಾರಪತ್ರಿಕೆ ಓದಲು	……
	ಮಾಸಪತ್ರಿಕೆ ಓದಲು	……
	ಪುಸ್ತಕ ಓದಲು	……
	ಪುಸ್ತಕ ಎರವಲು ಪಡೆಯಲು	……
	ಆವಶ್ಯಕ ವಿಚಾರವನ್ನು ಲೈಬ್ರೇರಿಯನ್ನರಿಂದ ತಿಳಿಯಲು	……
	ನೆರಳಿನಲ್ಲಿ ಕುಳಿತು ವಿಶ್ರಮಿಸಲು	……
	ಸ್ನೇಹಿತರನ್ನು ಭೇಟಿ ಮಾಡಲು	……



10.	ನೀವು ಯಾವ ಭಾಷೆಯ ಪುಸ್ತಕ ಅಥವ ಪತ್ರಿಕೆ ಓದುತ್ತೀರಿ ?	ಕನ್ನಡ ...... ಇಂಗ್ಲಿಷ್ ...... ಇತರ (ವಿವರಿಸಿ) ......
11.	ಪುಸ್ತಕಾಲಯ ಉತ್ತಮ ಪಡಿಸಲು ನಿಮ್ಮ ಸಲಹೆ ಏನು ?	ಹೆಚ್ಚು ಕಾಲ ತೆರೆದಿರಬೇಕು ...... ನಮ್ಮ ಪ್ರಶ್ನೆಗಳಿಗೆ ಉತ್ತರ ಒದಗಿಸಬೇಕು ...... ಟೇಪು ಮತ್ತು ಟೇಪ್ ರೆಕಾರ್ಡರ್ ಒದಗಿಸಬೇಕು ...... ಸಂಗೀತದ ರೆಕಾರ್ಡುಗಳನ್ನು ಒದಗಿಸಬೇಕು ...... ಹೆಚ್ಚು ಪುಸ್ತಕ ಎರವಲು ಕೊಡಬೇಕು ... ಲೈಬ್ರರಿ ಕೆಲಸಗಾರರು ನಗುತ್ತಾ ಕೆಲಸ ಮಾಡಬೇಕು ...... ಕೂರಲು ಒಳ್ಳೆಯ ಕುರ್ಚಿಗಳು ಬೇಕು ... ಹೆಚ್ಚು ಬೆಳಕು ಬೇಕು ...... ಹೆಚ್ಚು ಹೊಸ ಪುಸ್ತಕಗಳನ್ನು ತರಿಸಬೇಕು ...... ಇತರ (ವಿವರಿಸಿ) ......
12.	ಪುಸ್ತಕಾಲಯದ ಅಧಿಕಾರಿ (ಲೈಬ್ರೇರಿಯನ್)ಯನ್ನು ನೀವು ಯಾವಾಗಲಾದರೂ ನೋಡಿರುವಿರ ?	ಹೌದು ...... ಇಲ್ಲ ......
ಬಿ)	ಅವರೊಡನೆ ಮಾತನಾಡಿರುವಿರ	ಹೌದು ...... ಇಲ್ಲ ......
ಸಿ)	ಅಂಥ ಅವಶ್ಯಕತೆ ಯಾವಾಗಲೂ ಇತ್ತೆ ?	ಹೌದು ...... ಇಲ್ಲ ......

ಎರಡು ಚುಟುಕಗಳು

ಜಿ. ಎಸ್. ಶಿವರುದ್ರಪ್ಪ

1

ಯಾರು ಇರಿಸಿದ್ದಾನೊ ತನ್ನ ಬಾಯಲ್ಲೊಂದು
ಚಪ್ಪಲಿಯ ಖಾರ್ಖಾನೆ,
ಅಂಥವನು ಎಲ್ಲರನ್ನೂ ಮೆಟ್ಟಿ ಬದುಕುತ್ತಾನೆ.

ಯಾರು ಬೆಳೆಸಿದ್ದಾನೊ ತನ್ನ ಬಾಯಲ್ಲೊಂದು
ಹೂವಿನ ತೋಟ,
ತಪ್ಪಿದ್ದಲ್ಲ ಅವನಿಗೆ ಸದಾ ತುಡುಗು ದನಗಳ ಕಾಟ

2

ಕೆಲವರಿಗೆ ಇದ್ದಕ್ಕಿದ್ದಂತೆ
ಹುತಾತ್ಮರಾಗುವ ಬಯಕೆ.
ಅದಕ್ಕೆ
ಕಂಡ ಕಂಡದ್ದಕ್ಕೆ
ಹರಿಹಾಯುದ್ದ ಗುದ್ದುತ್ತಾರೆ.
ಆದರೂ ಹೋಗುವುದಿಲ್ಲ ಪ್ರಾಣ
ಒಂದಿಷ್ಟು ಕಡಮೆಯಾಗುತ್ತದೆ
ಮೈಯೊಳಗಿನ ತ್ರಾಣ !

ಚಾಣಾಕ್ಯರಿಸಿಯ ಕಥೆ — ಪರಾಮರ್ಶೆ

ಹಂಪ. ನಾಗರಾಜಯ್ಯ

ವಡ್ಡಾರಾಧನೆಯಲ್ಲಿನ ಚಾಣಾಕ್ಯರಿಸಿಯ ಕಥೆ, ಭದ್ರಬಾಹು ಭಟ್ಟಾರಕ ಕಥೆ ಮುಂತಾದ ಕೆಲವು ಕಥೆಗಳು ಚರಿತ್ರಕಾರರಿಗೆ ಉತ್ತಮ ಸಾಮಗ್ರಿ ದೊರಕಿಸುವಂತೆ ಸಮಸ್ಯೆಯನ್ನೂ ಒಡ್ಡುತ್ತವೆ. ಈ ಕಥೆಗಳು ಸಂಶೋಧಕರಿಗಂತೂ ಆಡುಂಬೊಲ. ಕರ್ನಾಟಕದ ಜೈನ ಇತಿಹಾಸ ಕಲ್ಪವನ್ನು ಪುನಾರಚಿಸುವಲ್ಲಿ ಭದ್ರಬಾಹುಭಟ್ಟಾರರ ಕಥೆಯ ಪಾತ್ರ ಮಹತ್ವದ್ದು. ಭಾರತದ ಇತಿಹಾಸವನ್ನು, ಜೈನ ಚರಿತ್ರೆಯನ್ನು ಪುನಾರಚಿಸುವಲ್ಲೂ ಭದ್ರಬಾಹುಭಟ್ಟಾರರ ಕಥೆಯಷ್ಟೇ ಚಾಣಾಕ್ಯರಿಸಿಯ ಕಥೆಯೂ ಪ್ರಮುಖ ದಾಖಲೆಗಳನ್ನು ನೀಡುತ್ತದೆ. ಸಂಶೋಧನ ಸಲಿಕೆ ಇದುವರೆಗೆ ಕನ್ನಡದಲ್ಲಿ ಈ ವಿಚಾರದಲ್ಲಿ ಕಾರ್ಯ ಪ್ರವೃತ್ತವಾಗಿಲ್ಲ. ಆ ದಿಕ್ಕಿನಲ್ಲಿ 'ಗುದ್ದಲಿ ಪೂಜೆ'ಯೆಂದು ಈ ಪ್ರಬಂಧ ರಚನೆಗೆ ತೊಡಗಿದ್ದೇನೆ. ಮುಂದಾನೊಂದು ಕಾಲದಲ್ಲಿ ಸಂಶೋಧಕರು ನನ್ನ ಪ್ರಯತ್ನವನ್ನು ವಿಚಿಕಿತ್ಸೆಗೊಳಗುಮಾಡಿ ಲಬ್ಧಾಧಾರಗಳ ಬೆಳಕಿನಲ್ಲಿ ಪುನರ್ ಪರಿಶೀಲಿಸಬಹುದು.

1. ಚಾಣಕ್ಯ, ಕೌಟಿಲ್ಯ, ವಿಷ್ಣುಗುಪ್ತ ಎಂಬ ಹೆಸರುಗಳಿಂದ ಖ್ಯಾತ ರಾಜನೀತಿಜ್ಞನಾದ ಚಾಣಕ್ಯನನ್ನು ಕುರಿತು ದೊರೆತ ವಿವರಗಳ ತುಲನೆ ಈ ಲೇಖನದ ಪ್ರಧಾನ ಉದ್ದೇಶ. ಆನುಷಂಗಿಕವಾಗಿ ಉಳಿದ ವಿವರಗಳೂ ಉದ್ದೇಶ ಸಮರ್ಥನೆಗಾಗಿ ಬಂದಿವೆ. ಈಗ ಒಂದು ವರ್ಗದ ವಿದ್ವಜ್ಜನ ಪ್ರತೀತಿಯಂತೆ ಚಾಣಕ್ಯ ತಕ್ಷಶಿಲೆಯವನು. ಬ್ರಾಹ್ಮಣ ಜಾತಿಯವನು (?). ಈತನಿಗೆ ತಾಯಿ ತಂದೆ ಇಟ್ಟ ಹೆಸರು ವಿಷ್ಣುಗುಪ್ತನೆಂದು. ಕುಟಿಲ ಎಂಬ ಗೋತ್ರ ಪ್ರವರ್ತಕನ ವಂಶದಲ್ಲಿ ಜನಿಸಿದವನಾದುದರಿಂದ ಕೌಟಿಲ್ಯ; ಚಣಕ ದೇಶದಲ್ಲಿ ಹುಟ್ಟಿದವನಾದುದರಿಂದ ಚಾಣಕ್ಯ ಎಂಬ ಹೆಸರುಗಳಿಗೆ ಕಾರಣವಾಯಿತು. ಚಾಣಕ್ಯ ನಂದ ವಂಶದ ರಾಜರಲ್ಲಿ ಕಡೆಯ ನಂದನ ಕಾಲದಲ್ಲಿದ್ದವನು. ಆ ಅಂತಿಮ ನಂದನನ್ನು ಈತ ಸಿಂಹಾಸನ ಚ್ಯುತನನ್ನಾಗಿಸಿದ. ಚಂದ್ರಗುಪ್ತಮೌರ್ಯನಿಗೆ ಸಿಂಹಾಸನ ದೊರಕಿಸಿಕೊಟ್ಟು ತಾನೇ ಪ್ರಧಾನಿಯಾಗಿದ್ದ. ಚಂದ್ರಗುಪ್ತನ ನಂತರ ಬಂದ ದೊರೆ ಬಿಂಬಸಾರ. ಈತನ ರಾಜ್ಯಾಡಳಿತದ ಅವಧಿಯಲ್ಲೂ ಚಾಣಕ್ಯ ಕೆಲವು ಕಾಲ ಪ್ರಧಾನಿಯಾಗಿದ್ದನೆಂಬ ನಂಬಿಕೆ (ಈ ವಿಚಾರದಲ್ಲಿ ಚರ್ಚೆ) ಯೂ ಇದೆ.

ಚಾಣಕ್ಯನನ್ನು ಇಟಲಿಯ ಮ್ಯಾಕಿಯವೆಲಿಗೂ ಗ್ರೀಸಿನ ಅರಿಸ್ಟಾಟಲನಿಗೂ ಹೋಲಿಸುವುದು ವಾಡಿಕೆ. ಚಾಣಕ್ಯನ ಕೃತಿ ಹದಿನೈದು ಅಧಿಕರಣಗಳ ಅರ್ಥಶಾಸ್ತ್ರ. ಕ್ರಿ. ಪೂ. ೩೨೫–೨೯೬ ರ ಅವಧಿಯಲ್ಲಿ ರಚಿತವಾದ ಈ ಕೃತಿಯ ಮೇಲೆ ವ್ಯಾಖ್ಯಾನಗಳಿವೆ. ಅರ್ಥಶಾಸ್ತ್ರ ಇಂಗ್ಲಿಷ್ ಜರ್ಮನ್ ಫ್ರೆಂಚ್ ಭಾಷೆಗಳಿಗೂ ಅನುವಾದವಾಗಿದೆ.

2. ಚಾಣಕ್ಯನ ಜೀವನವನ್ನು ಕುರಿತು ಸಿಗುವ ವಿವರ ಇಷ್ಟು ; ಜೈನೇತರ ಆಧಾರಗಳಿಂದ. ಜೈನ ವಾಙ್ಮಯದಲ್ಲಿ ಈ ವಿವರವನ್ನೂ ಒಳಗೊಂಡು ಇನ್ನೂ ಸಮಗ್ರವೂ ವ್ಯಾಪಕವೂ ಆದ ಸಂಗತಿಗಳು ಸಿಗುತ್ತವೆ. ಅವುಗಳನ್ನು ಒಂದೊಂದಾಗಿ ಅವಲೋಕಿಸಬಹುದು. ಕನ್ನಡದ ಮೊದಲ ಗದ್ಯ ಗ್ರಂಥವೆಂದು (?) ಸದ್ಯಕ್ಕೆ ಮಾನ್ಯವಾಗಿರುವ ವಡ್ಡಾರಾಧನೆಯಲ್ಲಿ ಬರುವ ಹದಿನೆಂಟನೆಯ ಕಥೆ ಚಾಣಕ್ಯರಿಸಿಯ ಕಥೆ. ಅದರ ಸಾರಾಂಶ :

ಭರತಕ್ಷೇತ್ರದ ಮಗಧೆ ನಾಡಿನಲ್ಲಿನ ಪಾಟಲೀ ಪುತ್ರ ಪಟ್ಟಣವನ್ನು ನಂದ ವಂಶದ ಪದ್ಮರಾಜ ಆಳುತ್ತಿದ್ದ. ಪದ್ಮನ ರಾಣಿ ಸುಂದರಿ. ಮಗ ಮಹಾಪದ್ಮ. ಮಂತ್ರಿ ಕಾಪಿ. ಕಾಪಿಗೆ ವಿಶ್ವಸೇನನೆಂಬ ಹೆಸರು ಇತ್ತು. ಕಾಪಿ, ರಾಣಿ ಸುಂದರಿಯನ್ನು ಮೋಹಿಸಿದ. ರಾಜನನ್ನು ಕೊಂದು ರಾಣಿಯೊಂದಿಗೆ ಬಾಳ ಬಯಸಿದ. ಹಗೆಗಳನ್ನು ಅರಸನ ಮೇಲೆ ಎತ್ತಿ ಕಟ್ಟಿದ. ಹಗೆಗಳನ್ನು ಕಾಳಗದಲ್ಲಿ ಎದುರಿಸುವ ಮುನ್ನ ಭಂಡಾರವನ್ನು ಬಚ್ಚಿಡಲು ತಕ್ಕ ತಾಣ ತೋರಿಸುವುದಾಗಿ ತಿಳಿಸಿ, ರಾಜನೊಡನೆ ಹೊರಟ. ಬೆಳಗಿನ ಜಾವದ ಮುಸುಕಿನಲ್ಲಿ ಹಾಳು ಬಾವಿಯ ಬಳಿ ಅರಸನನ್ನು ಕಾಪಿ ಇರಿದು ಕೊಂದು ಕೆಸರು ಬಾವಿಗೆ ತಳ್ಳಿದ. ಇದನ್ನು ಮರದ ಮೇಲೆ ಹೂ ಬಿಡಿಸುತ್ತಿದ್ದ ಮಾಲೆಗಾರ ವಸಂತಕನೆಂಬಾತ ನೋಡಿದ. ಆತ ಭಯ ಭೀತನಾಗಿ ಓಡುವಾಗ ಮರ ಅಲುಗಾಡಿತು ; ಕಾಪಿಗೂ ಗಾಬರಿ ಆಯಿತು. ಅರಮನೆಗೆ ಹಿಂತಿರುಗಿದ. ಮರುದಿನ ಏನೂ ತಿಳಿಯದವನಂತೆ ಅರಮನೆಯಲ್ಲಿ ಅರಸನನ್ನು ಅರಸುವ ಹಾಗೆ ಮಾಡಿ ದುಃಖ ತೋರಿದ. ಮಹಾ ಪದ್ಮನಿಗೆ ರಾಜ್ಯ ಪಟ್ಟ ಕಟ್ಟಿದ. ಆಮೇಲೆ ಕಾಪಿ ಸುಂದರಿಯೊಂದಿಗೆ ಕಳ್ಳ ಬಾಳು ನಡಸುತ್ತಿದ್ದ.

ಮಹಾ ಪದ್ಮನಿಗೆ ತನ್ನ ತಂದೆಯ ಮರಣದ ರಹಸ್ಯ ಪತ್ತೆ ಮಾಡುವ ತನಕ ಇರುಳಲ್ಲಿ ಮನೆ ಮನೆಗೂ ಸುತ್ತು ಹಾಕಿದ. ಜನರು ಆಡುವ ಮಾತನ್ನು ಆಲಿಸುತ್ತಿದ್ದ. ಒಮ್ಮೆ ವಸಂತಕನು ಮಾಲೆಗಾರನ ಮನೆಯ ಬಳಿ ಬಂದ. ವಸಂತಕ ತನ್ನ ಮಡದಿಯ ಅಗಲಿಕೆಯಿಂದ 'ನೀಲೋತ್ಪಲದಳದ ಹಾಗೆ ಶ್ಯಾಮಲ ಬಣ್ಣದವಳಾದ ಬಾಲೆಯೇ ನಿನ್ನ ಸದ್ಗುಣಗಳು ನನ್ನನ್ನು ಸುಡುತ್ತಿವೆ, ಪಿಪ್ಪ ಮರದ ಕೊಂಬೆಯಿಂದ ನಡುಗುವ ಹಾಗೆ' ಎಂದು ಗೌಪ್ಯಾರ್ಥದಿಂದ ನುಡಿದುಕೊಳ್ಳುತ್ತಿದ್ದ.

ಮರುದಿನ ಮಹಾಪದ್ಮ ವಸಂತಕನನ್ನು ಸಭೆಗೆ ಕರೆಸಿದ. 'ದೊರೆ ಸತ್ತ ಸಂಗತಿ ನಿನಗೆ ಗೊತ್ತಿದೆ. ಹೆದರಿಕೆಯಿಲ್ಲದೆ ಹೇಳು. ಇಲ್ಲವಾದಲ್ಲಿ ನಿನ್ನನ್ನು ಕೊಲ್ಲಿಸುವೆ' ಎಂದು ಹೆದರಿಸಿದ. ವಸಂತಕ "ದೇವಾ, ಬಯ್ಗಿರುಳಿನ ಜಾವದಲ್ಲಿ ವಿಶ್ವಸೇನ ಮಂತ್ರಿ ದೊರೆಯನ್ನು ಉದ್ಯಾನವನದ ಬಾವಿಯ ದಡದಲ್ಲಿ ಇರಿದು ಕೊಂದು ಬಾವಿಗೆ ತಳ್ಳಿದ್ದನ್ನು ಮರದ ಮೇಲೆ ಹೂ ಬಿಡಿಸುತ್ತಿದ್ದ ನಾನು ನೋಡಿದೆ. ನನ್ನನ್ನು ಕೊಂದಾನೆಂದು ಹೆದರಿ ಓಡಿದೆ" ಎಂದು ನನ್ನಿ ನುಡಿದ. ಅವನನ್ನು ಉಡುಗರೆಯಿತ್ತು ಮಹಾಪದ್ಮ ಕಳಿಸಿದ. ಮಂತ್ರಿ ಮಾಡಿದ ಕೆಟ್ಟ ಕೆಲಸ ತಿಳಿಸಿ ಮಂತ್ರಿಯನ್ನು ಅವನ ಮಡದಿ–ಮಕ್ಕಳನ್ನೂ ಕೊಲ್ಲಿಸಲು ಆಜ್ಞಾಪಿಸಿದ. ಉಳಿದ ಮಂತ್ರಿಗಳು ಅಡ್ಡ ಬಂದು ತಡೆದು ಬೇರೆ ಸೂಚನೆ ಕೊಟ್ಟರು. ಅದರಂತೆ ಎಲ್ಲರನ್ನೂ ನೆಲಮಾಳಿಗೆಗೆ ಹಾಕಿ, ಮಣ್ಣಿನ ಪಾತ್ರೆ ಹಿಡಿಸುವಷ್ಟು ಮಾತ್ರ ಜಾಗ ಬಿಟ್ಟು ಬಾಗಿಲನ್ನು ಭದ್ರಪಡಿಸಿದ. ಆ ಕಿಂಡಿಯಿಂದ ಮಣ್ಣಿನ ಪಾತ್ರೆಯಲ್ಲಿ ದಿನವೂ ಒಂದು ಪಾತ್ರೆ ಅನ್ನ ಒಂದು ಕುಡಿಕೆ ನೀರು ಒದಗಿಸುತ್ತಿದ್ದರು. ಅದಕ್ಕೆ ಕಾಪಿ 'ಹಗೆಯನ್ನು ನಾಶಮಾಡಿ ನಂದ ವಂಶ ನಿರ್ಮೂಲಿಸುವ ಕಸುವನ್ನೂ ಜಾಣ್ಮೆಯನ್ನೂ ನಮ್ಮಲ್ಲಿ ಯಾರು ಹೊಂದಿದ್ದಾನೋ ಆತ ಈ ಅನ್ನ ತಿಂದು ಬದುಕಲಿ' ಎಂದು ನುಡಿದ. ಆಗ ಕಾಪಿಯ ಮಗ ಸುಬಂಧು ಮುಂದೆ ಬಂದು ಪ್ರಾಣ್ಕೈಗೈದ. ಅವನಿಗೆ ಅನ್ನ ಬಿಟ್ಟುಕೊಟ್ಟು ಉಳಿದವರು ಮಡಿದರು.

ಮೂರು ವರ್ಷಗಳು ಅದಮೇಲೆ ಗಡಿಯ ಅರಸರು ಮಹಾಪದ್ಮನ ರಾಜ್ಯವನ್ನು ಮುತ್ತಿದರು. ದೊರೆಗೆ ನೆಲಮಾಳಿಗೆಯವರ ನೆನಪಾಯಿತು, ಸುಬಂಧು ಒಬ್ಬ ಬದುಕಿರುವುದು ತಿಳಿಯಿತು. ಅವನನ್ನು ಬಿಡಿಸಿ ಸನ್ಮಾನಿಸಿ ಮಂತ್ರಿ ಪದವಿಯಿತ್ತ. ಸುಬಂಧು ಪುಂಡೆದ್ದ ಪ್ರತ್ಯಂತಪ ರಾಜರನ್ನು ನಿಗ್ರಹಿಸಿದ. ಮಹಾಪದ್ಮನಿಗೆ ಒಸಗೆ ಹೆಚ್ಚಿ ಸುಬಂಧುವಿಗೆ ಅವನ ತಂದೆ ಕಾಪಿಗಿಂತ ಮೇಲಿನ ಸ್ಥಾನಮಾನವಿತ್ತ. ಎರಡನೆಯ ಸಚಿವ ಶಕಟಾಳ. ಅವನ ಮಗಳು ನಂದವತಿ. ಸುಬಂಧು ನಂದವತಿಯರ ಮದುವೆ ಆಯಿತು. ಸುಬಂಧು ಪ್ರಧಾನಿಯಾದ.

ಮಗಧೆ ನಾಡಿನ ಶಾಲ್ಮಲಿ ಅಗ್ರಹಾರದಲ್ಲಿ ಸೋಮಶರ್ಮ–ಕಪಿಳೆಯರಿಗೆ ನಾಲ್ಕು ಹಲ್ಲಿನ ಗಂಡು ಮಗು ಹುಟ್ಟಿತು. ಮಗನಿಗೆ ಚಾಣಕ್ಯನೆಂದು ಹೆಸರಿಟ್ಟರು. 'ನಾಲ್ಕು ಹಲ್ಲುಗಳಿಂದ ಹುಟ್ಟಿದ ಮಗನಿಂದ ನಂದವಂಶ ನಾಶವಾಗುತ್ತದೆ' ಎಂಬ ಭವಿಷ್ಯ ಕೇಳಿ ಸೋಮಶರ್ಮ ಕೈಸಾಣೆಯಿಂದ ಹಲ್ಲುಗಳನ್ನು ಉಜ್ಜಿಸಿ ಕೀಳಿಸಿ ಸಮಮಾಡಿದ. ಚಾಣಕ್ಯ ನಾಲ್ಕು ವೇದ. ಆರು ಅಂಗ, ಹದಿನೆಂಟು ಧರ್ಮಶಾಸ್ತ್ರ. ಮಿಮಾಂಸೆ, ವ್ಯಾಕರಣ, ಪ್ರಮಾಣ, ಛಂದಸ್ಸು, ಅಲಂಕಾರ, ನಿಘಂಟು, ಶಾಲಿಹೋತ್ರ ವೈದ್ಯ, ಸಾಮುದ್ರಿಕ, ನೀತಿಶಾಸ್ತ್ರ ಮುಂತಾದ ವಿದ್ಯೆ ಕಲಿತ. ಋಷಿಗಳ ಹತ್ತಿರ,

ಧರ್ಮ ತಿಳಿದು ಶ್ರಾವಕ ವ್ರತ ಸ್ವೀಕರಿಸಿ ಸಮ್ಯಗ್ ದೃಷ್ಟಿಯುಳ್ಳವನಾದ. ಪಾಟಲೀಪುತ್ರದಲ್ಲಿ ಅವನ ಪಂಡಿತಿಕೆ, ದೇಹಾಕಾರ, ಸಮ್ಯಕ್ತ್ವ ಕಂಡು ಶಕಟಾಳ ತನ್ನ ಇಸ್ಟೊಬ್ಬ ಮಗಳು ಯಶೋಮತಿಯನ್ನು ಇತ್ತು ಮದುವೆ ಗೈದ.

ಒಮ್ಮೆ ಶೋಣಾ ನದಿಯ ತೀರದಲ್ಲಿ ಚಾಣಕ್ಯನ ಕಾಲಿಗೆ ದರ್ಭೆ ಕುಡಿ ಚುಚ್ಚಿ ರಕ್ತ ಬಂತು. ಅದರ ಮೇಲೆ ಮುಳಿಸುಕ್ಕಿ ಅದನ್ನು ಅಗೆದು ಸುಡತೊಡಗಿದ. ಸುಬಂಧು ನೋಡಿದ. ಚಾಣಕ್ಯನಿಗೆ ತನ್ನ ವೃತ್ತಾಂತವನ್ನೆಲ್ಲ ಅರಿಪಿದರೆ ವೈರಿ ವಿಧ್ವಂಸನ ಸುಲಭ ಸಾಧ್ಯವಾಗುವುದೆಂದು ಭಾವಿಸಿದ. ಸುಬಂಧು ಚಾಣಕ್ಯನ ಬುದ್ಧಿಯನ್ನು ಪರೀಕ್ಷಿಸಲು 'ಭಟ್ಟಮಂಟಪ'ದಲ್ಲಿ-

"ರಾಜನೀತಿ ಶಾಸ್ತ್ರದಲ್ಲಿ ಪಾರಂಗತರಾದವರು ಸಾವಿರಾರು ಶಕ್ತಿ ಸಮನ್ವಿತರು ಉದ್ಯಮವನ್ನು ಎರಡನೆಯದಾಗುಳ್ಳವರು ಭೂಮಂಡಲ ಗೆಲ್ಲಲು ಶಕ್ತರು' ಎಂದು ಶ್ಲೋಕ ಬರೆದು ಹೋದ. ಚಾಣಕ್ಯ ಅದನ್ನು ಅಳಿಸಿ 'ರಾಜನೀತಿಶಾಸ್ತ್ರ ಪಾರಂಗತನಾದವನು ಉದ್ಯಮಶೀಲನಾದವನು. ತನ್ನ ಒಂದೇ ಶರೀರದಿಂದ ಭೂಮಂಡಲ ಗೆಲ್ಲಲೂ ಶಕ್ತ' ಎಂದು ಬರೆದು ಹೋದ. ಸುಬಂಧುವು ಚಾಣಕ್ಯ ಸಾಮರ್ಥ್ಯಕ್ಕನುಗುಣವಾಗಿ ಬುದ್ಧಿಯನ್ನು ಪಡೆದಿರುವುದನ್ನು ಮನದಟ್ಟುಮಾಡಿಕೊಂಡ. ತನ್ನ ಮಗಳ ಜೋಳಂಗಿಯಂದು ನಂಟರಿಷ್ಟರನ್ನು ಕರೆಸಿ, ದಿವ್ಯಾಹಾರ ಉಣಬಡಿಸಿದ. ಚಾಣಕ್ಯ ದಂಪತಿಗಳಿಗೆ ತುಸು ಅನ್ನದ ಗಂಜಿ ಕಳಿಸಿದ. ಚಾಣಕ್ಯ 'ದಾರಿದ್ರ್ಯಕ್ಕಿಂತ ಬೇರೆ ಕಷ್ಟವಿಲ್ಲ. ದಾರಿದ್ರ್ಯವೇ ಮಹಾಪಾತಕ. ಬಡವನ ಸಂಗವನ್ನು ಬಂಧುಗಳು ಬೆಳಸರು. ಮಾತೂ ಆಡಿಸರು. ಸಮಾರಂಭಗಳಲ್ಲಿ ಬೆಲೆ ಬಾಳುವ ಬಟ್ಟೆ ಹಾಕಿರದ ಬಡವನನ್ನು ಕಳಪೆಯಾಗಿ ಕಾಣುವರು. ಬಡತನವನ್ನು ತೋರಿಸುವುದು ಕಷ್ಟ' ಎಂದು ಚಿಂತಿಸಿ ಧನ ಸಂಪಾದನೆಗೆ ತೀರ್ಮಾನಿಸಿದ. ಸುಬಂಧುಗೆ ಇದು ತಿಳಿಯಿತು. ಚಾಣಕ್ಯನನ್ನು ಕಂಡು "ಬಡತನ ಹರಿಯುತ್ತೆ, ದೊರೆಯನ್ನು ಆರು ಹಳ್ಳಿಯ ವರಮಾನವಿರುವ ಅಗ್ರಾಸನ ಬೇಡಿಕೊಳ್ಳಿ" ಎಂದ. ಚಾಣಕ್ಯ ಮಹಾಪದ್ಮನನ್ನು ಸ್ತುತಿಸಿ ಅಗ್ರಾಸನ ಮನ್ನಣೆ ಪಡೆದ.

ಸುಬಂಧುಗೆ ಮಹಾಪದ್ಮನನ್ನು ನಾಶಮಾಡುವುದೇ ಚಿಂತೆ. ಅದನ್ನು ಈಗ ಕಾರ್ಯಕ್ಕಿಳಿಸತೊಡಗಿದ. ಬ್ರಾಹ್ಮಣರು ನಂದ ಮಹಾರಾಜನ ಕಾಲದಿಂದಲೂ ಕ್ರಮಾಗತವಾಗಿ ಅಗ್ರಾಸನ ಅನುಭವಿಸುತ್ತಿದ್ದರು. ಸುಬಂಧು ಅವರನ್ನು ಕರೆದು "ನಿಮ್ಮ ಈ ಪದವಿ ನಂದ ಮಹಾರಾಜ, ವಿಜಯ, ನಂದನ. ಸುನಂದನ, ನಂದಿವರ್ಧನ, ನಂದನ, ಶ್ರೀನಂದನ, ಪದ್ಮ, ಮಹಾಪದ್ಮ-ಎಂಬ ಒಂಬತ್ತು ತಲೆಮಾರೆಯಿಂದ ಬಂದಿದೆ. ಈ ಅಗ್ರಹಾರ ಅಗ್ರಾಸನವನ್ನು ಬೇರೆಯವರು ಅನುಭವಿಸಲು ನೀವು ಸುಮ್ಮನೆ ನೋಡುತ್ತಿರುವುದು ಇದಾವ ರೀತಿ?' ಎಂದನು. ಅವರುಗಳು

ಇಂತೆಂದರು 'ನಿಮ್ಮ ಬಲದಿಂದ ನಾವು ನಮ್ಮ ಪದವಿಯನ್ನು ಪಡೆಯುತ್ತೇವೆ.' ಹಾಗೇ ಮಾಡಿರೆಂದ. ಅವರು ಅರಸನಿಗೆ ಹೀಗೆಂದು ಬಿನ್ನವಿಸಿದರು- "ಮಹಾರಾಜಾ! ನಾವು ಕುಲ ಕ್ರಮಾಗತರು, ನಿಮ್ಮ ಪ್ರಸಾದದಿಂದ ಬಾಳುತ್ತಿರುವವರು. ಕ್ರಮದಿಂದ ಬಂದ ನಮ್ಮ ಪದವಿಯನ್ನು ತಾವು ಕೆಡಿಸಲಾಗದು". ಸುಬಂಧುವು ಹೀಗೆಂದ- "ಕ್ಷತ್ರಿಯರಿಗೆ ಧರ್ಮವೆಂದರೆ ಪೂರ್ವಕ್ರಮಾಗತವಾದುದನ್ನು ಕೆಡಿಸದೆ ಸಲಿಸುವುದು". ಅರಸ–"ಅಗ್ರಾಸನದಿಂದ ಚಾಣಕ್ಯನನ್ನು ತೆಗೆಯಿರಿ' ಎಂದನು. ಸುಬಂಧು ಹಾಗೇ ಮಾಡುವೆನೆಂದು ಹೋಗಿ ಅಗ್ರಾಸನದಲ್ಲಿ ಉಣಲೆಂದು ಬಂದು ಮಣೆಯೊಳಿದ್ದವನನ್ನು "ನಿಮಗೆ ತುಂಬ ಕೋಪಿಸಿಕೊಂಡು ದೊರೆ ಹೇಳಿದ – ಮದ ವಿಹ್ವಲೆಯರಾದ ವೇಶ್ಯೆಯರಲ್ಲಿ ಆಸಕ್ತ ವಿಟಜನನಿವಾಸಿ ನನ್ನ ಅಗ್ರಾಸನದಲ್ಲಿ ಉಣಲು ಯೋಗ್ಯನಲ್ಲ. ಅದರಿಂದ ಅವನನ್ನು ಅಟ್ಟಿ ಕಳೆಯಿರಿ."- ಎಂದು ಹೀಗೆ ಹೇಳಿ, ಬಾಗಿಲು ಕಾಯ್ವನಿಂದ ಎಳಸಿ ಹೆಡ ತಲೆಯನ್ನು ಹಿಡಿದು ನೂಕುತ್ತ, ಅರಮನೆಯಿಂದ ಹೊರವಡಿಸಿ ಆಚೆಗೆ ಅಟ್ಟಿಬಿಟ್ಟ. ಚಾಣಕ್ಯ ಅಪಮಾನ ಮುಳಿದು ಹೀಗೆಂದ – 'ನಂದನನ್ನು ಅನಂದನಾಗಿ ಸುಬಂಧುವನ್ನು ಅಬಂಧುವಾಗಿ ಮಾಡುತ್ತೇನೆ". ಈ ರೀತಿ ಪ್ರತಿಜ್ಞೆ ಮಾಡಿ ಪಟ್ಟಣದಿಂದ ಹೊರಟುಹೋದ. '12 ವರ್ಷಗಳಲ್ಲಿ ಮಹಾಪದ್ಮನನ್ನು ನಾಶಮಾಡಿದ ಹೊರತು ಕಾಸೆಗಳನ್ನು ಕಳೆಯೆ'ನೆಂದು ಕಾವಿಬಟ್ಟೆ ತೊಟ್ಟು ಸನ್ಯಾಸಿ ವೇಷ ಕೈಕೊಂಡು ಮಹೋದಕ ಪಟ್ಟಣ ಸೇರಿದ.

ಮಹೋದಕವನ್ನು ಆಳುತ್ತಿದ್ದ ದೊರೆ ಮಯೂರ ವಂಶದ ಕುಮುದ, ಅವನ ರಾಣಿ ಮಂದೆ. ಅವಳು ಗರ್ಭವತಿಯಾದಾಗ ಚಂದ್ರನನ್ನು ನುಂಗುವ ಬಯಕೆಯಾಯಿತು. ಆ ಹಂಬಲದಲ್ಲಿ ಬಡವಾದಳು. ಅವಳ ಇಷ್ಟ ಪೂರೈಸುವ ಬಗೆ ಹೇಗೆಂದು ತಿಳಿಯದೆ ದೊರೆ ದುಃಖಿಯಾದ. ಆಗ ಆಕೆಯ ಬಸಿರಲ್ಲಿ ಹುಟ್ಟಿದ ಮಗುವನ್ನು ತನಗೆ ಕೊಡುವುದಾದರೆ ತಾನು ಬಯಕೆ ಈಡೇರಿಸುವುದಾಗಿ ಚಾಣಕ್ಯ ತಿಳಿಸಿದ. ದೊರೆ ಒಪ್ಪಿದ. ಚಾಣಕ್ಯ ಗುಟ್ಟಾಗಿ ಅರಮನೆ ಉಪ್ಪರಿಗೆಯ ಚಾವಣಿಯಲ್ಲಿ ಒಂದು ತೂತು ಮಾಡಿಸಿದ. (ಅದರ ಮೂಲಕ) ನೀರು ತುಂಬಿದ ಪಾತ್ರೆಯೊಳಗೆ ಚಂದನ ಪ್ರತಿಬಿಂಬ ಬೀಳುವ ಹಾಗೆ ಏರ್ಪಾಡು ಮಾಡಿದ. ಒಂದು ದಿನ ರಾಣಿಗೆ ಬಾಯಾರಿಕೆಯಾಗುವಂತಹ ಆಹಾರಗಳನ್ನು ಚೆನ್ನಾಗಿ ತಿನ್ನಿಸಿದ. ಆಕೆಗೆ ಬಾಯಾರಿತು. ಆಗ 'ಮಂತ್ರದಿಂದ ಚಂದ್ರನನ್ನು ತಂದಿದೆ, ನುಂಗುವಿಯಂತೆ ಬಾ' ಎಂದು ತಿಳಿಸಿ ಕಣ್ಣು ಕಟ್ಟಿ ಅಲ್ಲಿಗೆ ಕರೆತಂದು ಅಲ್ಲಿ ದೊಡ್ಡ ಗಾಜಿನ ಪಾತ್ರೆಯಲ್ಲಿ ಮಧುರವಾದ ಸುವಾಸನೆ ಚೆಲ್ಲುವ ನೀರಿನಲ್ಲಿ ತಳ ತಳನೆ ಹೊಳೆಯುತ್ತಿದ್ದ ಚಂದ್ರಬಿಂಬ ತೋರಿಸಿದ. ಆಕೆಗೆ ಸಂತೋಷವಾಗಿ ಆ ನೀರನ್ನು ಕುಡಿದು, ಚಂದ್ರನನ್ನು ನುಂಗಿದ ತೃಪ್ತಿ ಹೊಂದಿದಳು. ಮುಂದೆ ಮಂದೆ ಗಂಡು ಮಗು ಹಡೆದಳು. ದಾದಿ ಆ ಮಗುವನ್ನು ಚಾಣಕ್ಯನಿಗೆ ತಲುಪಿಸಿದಳು. ಮಗುವಿಗೆ ಚಂದ್ರಭುಕ್ತ

ಎಂಬ ಹೆಸರಿಟ್ಟ. ಮಗುವಿಗೆ ಎಳವೆಯಿಂದಲೇ ಬೆಣ್ಣೆ ತಿನ್ನಿಸುವಾಗ ಅದರ ಜೊತೆಯಲ್ಲಿ ತುಸು ವಿಷವನ್ನು ತಿನ್ನಿಸತೊಡಗಿದ. ಚಂದ್ರಗುಪ್ತ ಹದಿನಾರರ ಹರೆಯದವನಾದ. ಚಾಣಕ್ಯ ಚಂದ್ರಗುಪ್ತನಿಗೆ ನೆಲವನ್ನು ಆಳುವ ಲಕ್ಷಣಗಳಿವೆ. ಇವನನ್ನು ರಾಜನನ್ನಾಗಿ ಮಾಡುವೆ. ನಿಮಗೆಲ್ಲ ಈಗಿರುವುದಕ್ಕಿಂತಲೂ ಹಲವು ಪಟ್ಟು ಪದವಿ ಸೊತ್ತು ಕೊಡಿಸುವೆ,' ಎಂದು ಮಂತ್ರಿ, ಸಾಮಂತ, ರಾಜಕುವರ, ತಳವಾರರಿಗೆ ಆಮಿಷ ಒಡ್ಡಿದ. ಎಲ್ಲರನ್ನು ಶ್ರೀ ಪರ್ವತದಲ್ಲಿ ಕಲೆ ಹಾಕಿದ. ಹೊನ್ನು ತಯಾರಿಸುವ ಆಸೆಯಿಂದ ಔಷಧಿ ಹುಡುಕುವವನಂತೆ, ಆ ಪರ್ವತ ತಪ್ಪಲಲ್ಲಿ ಅಲೆದಾಡುತ್ತಿರುವಾಗ ಗುಂಡಗಿರುವ ರಸದ ಬಾವಿ ನೋಡಿದ. ಒಳಗೆ ಒಬ್ಬ ಪುರುಷನಿದ್ದ. 'ನೀನೇಕೆ ಇಲ್ಲಿದ್ದೀಯೆ' ಎಂದು ಚಾಣಕ್ಯ ಕೇಳಿದ್ದಕ್ಕೆ 'ನಾನು ರಸವಾದಕ ಸನ್ಯಾಸಿ. ನನ್ನನ್ನು ನಂಬಿಸಿ ಒಬ್ಬ ಈ ಬಾವಿಯಲ್ಲಿ ಇಳಿಸಿ ಮೋಸ ಮಾಡಿದ್ದಾನೆ' ಎಂದನು. ಚಾಣಕ್ಯ ಒಂದು ಸೋರೆ ಬುರುಡೆಯಲ್ಲಿ ರಸವನ್ನು ತುಂಬಿಸಿಕೊಂಡು ಆ ವ್ಯಕ್ತಿಯನ್ನು ಮೇಲಕ್ಕೆತ್ತಿ ಬದುಕಿಸಿ ಕಳಿಸಿದ. ಆ ರಸದಿಂದ ಚಾಣಕ್ಯ ವಿಪುಲ ಪ್ರಮಾಣದ ಚಿನ್ನ ಮಾಡಿದ. ಆಮೇಲೆ 'ಶ್ರೀ ಪರ್ವತದ ಮೇಲಕ್ಕೆ ಯಾರು ಒಂದು ಹೇರು ಮಣ್ಣು ತಂದು ಒಟ್ಟುವರೋ ಅವರಿಗೆ ಹೇರು ಹೊನ್ನು ಕೊಡುವೆ' ಎಂದು ಸಾರಿದ. ಒಬ್ಬ ಒಕ್ಕಲಿಗ ಒಂದು ಹೇರು ಮಣ್ಣು ತಂದು ಹಾಕಿದ. ಚಾಣಕ್ಯ ಮಾತಿನಂತೆ ಹೇರು ಹೊನ್ನು ಕೊಟ್ಟ. ಸುದ್ದಿ ಹಬ್ಬಿತು. ನಾಡ ಒಕ್ಕಲಿನವರು ಒಂದಾಗಿ ಹೇರು ಮಣ್ಣು ತಂದು ರಾಶಿ ಒಟ್ಟಿದರು. ಚಾಣಕ್ಯ 'ನಾನೇನೂ ನಿಮ್ಮನ್ನು ಮಣ್ಣು ಬೇಕೆಂದು ಕೇಳಲಿಲ್ಲವಲ್ಲಾ! ಒಂದು ಹೇರು ಮಣ್ಣು ಬೇಕಿತ್ತು ತರಿಸಿಕೊಂಡೆ. ನಿಮ್ಮ ಮಣ್ಣು ನೀವು ತೆಗೆದುಕೊಂಡು ಹೋಗಬಹುದು' ಎಂದ. ಬಂದವರು ಪೆಚ್ಚಾಗಿ ಮಣ್ಣು ಅಲ್ಲೇ ಬಿಟ್ಟು ಹೋದರು.

ಚಾಣಕ್ಯ ರಾಶಿಯೊಟ್ಟಿದ ಮಣ್ಣಿನಿಂದ ಕೋಟೆ, ಪಟ್ಟಣ ಕಟ್ಟಿದ. ಚಿನ್ನ ಕೊಟ್ಟು ಕುದುರೆಗಳನ್ನು ತರಿಸಿದ. ಹೀಗೆ ಒಂದು ಸೈನ್ಯವನ್ನೆ ಕಟ್ಟಿದ. ಆಮೇಲೆ ಶಕ್ತಿಯುತ ಸೈನ್ಯ ಸಮೇತ ಚಂದ್ರಗುಪ್ತನನ್ನು ಕರೆದುಕೊಂಡು ಹೋಗಿ ಮಹಾಪದ್ಮನ ಮೇಲೆ ಯುದ್ಧಿಸಿದ. ಆದರೆ ಕಾಳಗದಲ್ಲಿ ಸೋತು ಓಡಿ ಬದುಕಿದ. ಹಲವು ವರ್ಷ ಹೀಗೆ, ಯುದ್ಧ ಮಾಡುವುದು–ಸೋಲುವುದು ನಡೆಯಿತು. ಒಂದುಸಲ ಯುದ್ಧಭೂಮಿಯಿಂದ ಓಡಿಬರಲು ದಾರಿಯಿಲ್ಲದೆ ತಾವರೆಕೆರೆಯಲ್ಲಿ ಹಗಲು ತಲೆ ಮರೆಸಿಕೊಂಡಿದ್ದು ಇರುಳು ಹೊರಬಂದು ಪಾಟಲಿಪುತ್ರ ಹೊಕ್ಕ. ಹಸಿವಾಯಿತು. ಒಬ್ಬ ನೇಕಾರನ ಮನೆಗೆ ಹೋದ. ಅಲ್ಲಿದ್ದ ಮುದುಕಿಯನ್ನು ಏನಾದರೂ ತಿನ್ನಲು ಕೇಳಿದ. ಅವಳು ಮಣೆ ಹಾಕಿ ತಟ್ಟೆಯಿಟ್ಟು ಬಿಸಿ ಅಂಬಲಿ ಬಡಿಸಿದಳು.

ಚಾಣಕ್ಯ ಹಸಿವಿನಿಂದ ಅಂಬಲಿಯನ್ನು ಬಾಯಿಗಿಟ್ಟ. ಬಿಸಿ ಕೈ ಬಾಯಿಗೆ ತಟ್ಟಿ ಸುಟ್ಟಿತು. ಕೈ ಒದರುತ್ತಾ ಒದ್ದಾಡಿದ. ಮುದುಕಿ ನೋಡಿ ನಕ್ಕು "ಈ ಲೋಕದಲ್ಲಿ ಮೂವರು ಮೂರ್ಖರನ್ನು ಕಂಡೆ" ಎಂದಳು ; ಚಾಣಕ್ಯ ಯಾರ್‍ಯಾರೆಂದು ಕೇಳಿದ. 'ನೀನು ನಂದ ಚಾಣಕ್ಯ' ಎಂದಳು. ಹೇಗೆ ಎಂಬುದಕ್ಕೆ ಹೀಗೆ ಉತ್ತರಿಸಿದಳು. ಬುದ್ಧಿಯಿರುವಾತ ಬಿಸಿ ಅಂಬಲಿಯನ್ನು ಕಂಚಿನ ಅಂಚಿನಿಂದ ಕಿರಿ ಕಿರಿದಾಗಿ ಆರಿಸುತ್ತಾ ಉಣ್ಣುತ್ತಾನೆ. ನೀನು ಅದು ತಿಳಿಯದ ವಡ್ಡ. ನಂದ ಮಹಾ ಪದ್ಮ ತಾನು ಕೊಟ್ಟ ದಾನವನ್ನೂ ಸಲ್ಲಿಸಲಿಲ್ಲ. ಸಿಟ್ಟಿಗೆದ್ದು ಹೋದ ಚಾಣಕ್ಯನನ್ನು ಅಂದೇ ಕೊಲ್ಲದೆ ಬಿಟ್ಟ. ಆದರಿಂದ ಮೂರ್ಖ. ಚಾಣಕ್ಯನಿಗೆ ತನ್ನ ಕೋಪವೊಂದೇ ಗೊತ್ತು. ಕೆಲಸದ ಕ್ರಮ ಅರಿಯ. ಮೂಲ ತಂತ್ರ ಬಲ್ಲ ಕ್ಷತ್ರಿಯನಲ್ಲ. ಕ್ಷತ್ರಿಯರ ಜೊತೆ ಯುದ್ಧ ಮಾಡುವುದು ಗೊತ್ತಿದೆ, ಬುದ್ಧಿಯಿಲ್ಲ. ಬುದ್ಧಿಯಿದ್ದರೆ ತನ್ನ ಹಗೆಯ ನಾಡನ್ನು ಕೆಡಿಸಿ ಪ್ರತಿ ಪಕ್ಷಗಳನ್ನು ತನ್ನ ಪಕ್ಷಕ್ಕೆ ತಂದುಕೊಂಡು ಸಾಮಂತರನ್ನು ಹಣದಿಂದ ಭೇದಿಸುವುದು – ಮಾಡುತ್ತಿದ್ದ. ಇಷ್ಟು ಮಾಡಿದರೆ ಮಹಾ ಪದ್ಮ ಒಬ್ಬನೇ ಉಳಿಯುತ್ತಾನೆ. ಆಗ ಅವನನ್ನು ಸೋಲಿಸುವುದು ಸುಲಭ." ಚಾಣಕ್ಯ ಸಂತಸಗೊಂಡು ಶ್ರೀಪರ್ವತಕ್ಕೆ ಹಿಂತಿರುಗಿದ. ಮುಂದಿನ ಸಲ ಮುದುಕಿ ಹೇಳಿದ ಮಾದರಿಯ ಮಾರ್ಗವನ್ನೇ ಮುಂದುಮಾಡಿದ. ಮಹಾಪದ್ಮ ಸೋತು ಓಡಿದ. ಸುಬಂಧು ಸೆರೆಯಾದ. ಚಾಣಕ್ಯ ಗೆಲುವಿನಿಂದ ಪಾಟಲಿಪುತ್ರ ಪ್ರವೇಶಿಸಿದ. ಕನ್ನೆಮಾಡಕ್ಕೂ ಭಂಡಾರಕ್ಕೂ ಕಾವಲಿಟ್ಟ. ಪ್ರಜೆಗಳನ್ನು ಸಮಾಧಾನಿಸಿ ಚಂದ್ರ ಭುಕ್ತನಿಗೆ ಪಟ್ಟ ಕಟ್ಟಿದ. ಮಹಾಪದ್ಮನ ರಾಣಿ ಚಂದ್ರಮತಿ ಮಹಾದೇವಿಯನ್ನೇ ಪಟ್ಟದ ರಾಣಿಯನ್ನಾಗಿ ಮಾಡಿದ. ತಮ್ಮ ಭಂಡಾರದಲ್ಲೂ ನಂದರಾಜನ ಭಂಡಾರದಲ್ಲೂ ಹಣವಿರಲಿಲ್ಲ. ಪಟ್ಟಣದ ಜನರನ್ನು ಊಟಕ್ಕೆ ಕರೆದ. ಮತ್ತು ಬರುವ ಆಹಾರ ಬಡಿಸಿದ. ಅವರು ತಿಂದು ಮೈ ಮರೆತಿರುವಾಗ 'ನಿಮ್ಮ ಹಣ ಎಲ್ಲಿಟ್ಟಿದ್ದೀರಿ' ಎಂಬುದಕ್ಕೆ ಇಂತಿಂತಹ ಕಡೆ ಇರುವುದಾಗಿ ಹೇಳಿದರು. ಚಾಣಕ್ಯ ಅದನ್ನು ಸಂಗ್ರಹಿಸಿ ರಾಜ ಭಂಡಾರ ತುಂಬಿದ.

ಚಾಣಕ್ಯ ಅರಮನೆ ಅಂಗಳದಲ್ಲಿ ನಿಂತು 'ಹನ್ನೆರಡು ವರ್ಷಗಳಿಂದ ನಂದನ ವಂಶ ನಿರ್ಮೂಲಿಸುವ ಪ್ರತಿಜ್ಞೆ ಪೂರೈಸಿತು. ನನ್ನ ಬಳಿಯಿರುವುದು ಕಾವಿಯ ಈ ಎರಡು ಬಟ್ಟೆ, ಚಿನ್ನದ ಕಮಂಡಲ, ತ್ರಿದಂಡ ಮಾತ್ರ. ಮಗಧ ನಾಡಿನ ದ್ರವ್ಯವೆಲ್ಲ ತಂದು ಭಂಡಾರ ತುಂಬಿದೆ. ಗುಣ ಅರಿಯುವ ಅರಸನೂ ನನ್ನ ವಶ. ಹೊಡೆ ತಮಟೆಯನ್ನು' ಎಂದು ತಮಟೆ ಹೊಡೆಸಿ ಸಂತೋಷ ಪಟ್ಟು ಕುಣಿದಾಡಿದ. ಶ್ರೀ ಪರ್ವತದಲ್ಲಿದ್ದ ತನ್ನ ಮಡದಿ ಯಶೋಮತಿಯನ್ನು ಕರೆಸಿಕೊಂಡು ಸುಖವಾಗಿದ್ದ.

ಚಂದ್ರಭುಕ್ತನ ಹೆಂಡತಿ ಚಂದ್ರಮತಿ ಮಹಾದೇವಿ ಗರ್ಭ ಧರಿಸಿದಳು. ಒಮ್ಮೆ ಅವಳು ರಥ ಹತ್ತಿದಾಗ ರಥ ಚಕ್ರದ ಹತ್ತು ಅರೆಕಾಲು ನೆಲದಲ್ಲಿ ಹೂತುವು.

ಈ ನೆಲವನ್ನು ಮುಂದೆ ಹತ್ತು ಜನ ಮೌರ್ಯರು ಆಳುವರೆಂದು ಚಾಣಕ್ಯ ತಿಳಿದ. ನವ ಮಾಸ ತುಂಬಿದ ಚಂದ್ರಮತಿ ಒಂದು ದಿನ ಊಟದ ಸಮಯದಲ್ಲಿ ಚಂದ್ರಭುಕ್ತ ರಾಜನ ಪಕ್ಕದಲ್ಲಿ ಕುಳಿತಿದ್ದಳು. ಯಥಾ ಪ್ರಕಾರ ವಿಷಪೂರಿತ ಆಹಾರ ತಿನ್ನುತ್ತಾ ತನ್ನ ರಾಣಿಗೂ ತನ್ನೊಡನೆ ತಿನ್ನುವ ಬಯಕೆಯುಂಟಾದುದನ್ನು ತಿಳಿದು ತನ್ನ ಕೈಯಿಂದಲೇ ತುತ್ತನ್ನು ಅವಳಿಗಿಟ್ಟ. ಬಳಿಯಲ್ಲೇ ಹಿರಿದ ಕತ್ತಿಯೊಂದಿಗೆ ನಿಂತಿದ್ದ ಚಾಣಕ್ಯ ಮಿಂಚಾಗಿ ಅವಳ ತಲೆಯನ್ನು ಕತ್ತರಿಸಿದ. ಕೂಡಲೇ ರಾಣಿಯ ಬಸಿರನ್ನು ಸೀಳಿ ಮೊದಲು ಕೂಸನ್ನು ಹೊರತೆಗೆದ. ಚಂದ್ರಭುಕ್ತ ಸತ್ತ ರಾಣಿಗಾಗಿ ಅತ್ತು ಕಡೆಗೆ ಸತ್ತೇ ಹೋದ. ಮಗು ಬದುಕಿತು. ಅದರ ತಲೆಯ ಮೇಲೆ ಒಂದೇ ತೊಟ್ಟು ವಿಷ ಬಿದ್ದಿತ್ತು. ಚಾಣಕ್ಯ ಬಿಂದು ಸಾಗರ ಎಂದು ಹೆಸರಿಟ್ಟ. ಅದಕ್ಕೆ ಪಟ್ಟ ಕಟ್ಟಿದ. ಅದನ್ನೇ ಮುಂದಿಟ್ಟು ರಾಜ್ಯವಾಳಿದ. ಯೌವನ ಪ್ರಾಪ್ತ ಬಿಂದು ಸಾಗರನಿಗೆ ಪಟ್ಟಗಟ್ಟಿದ. ಸುಬಂಧುವನ್ನು ಸೆರೆಗಳಚಿ ಸನ್ಮಾನಿಸಿ ಬಿಂದುಸಾಗರನಿಗೆ ಮಂತ್ರಿಮಾಡಿದ. ಸಂಸಾರ ಬಂಧನವನ್ನೆಲ್ಲಾ ತೊರೆದು ದೀಕ್ಷೆ ಪಡೆದ. ತಪಸ್ಸಿಗೆ ನಿಂತ ಜೈನಾಗಮ ಕಲಿತು ಆಚಾರ್ಯನಾಗಿ ಧರ್ಮವಿಹಾರ ಮಾಡಿ ಕೆಲವು ಕಾಲಾನಂತರ ಇದೇ ಪಾಟಲೀ ಪುತ್ರದ ಬಳಿ ಶೋಣೆ ನದಿಯ ದಡದ ತುರುಪಟ್ಟಿಯಲ್ಲಿ ಬಂದು ನಿಂತ. ಸುಬಂಧುವಿಗೆ ಇದು ತಿಳಿಯಿತು. ಹಳೆಯ ರೊಚ್ಚಿನಿಂದ ಚಾಣಕ್ಯ ರಿಸಿಯ ಬಳಿ ಬಂದ. ನಮಸ್ಕರಿಸುವ ನೆಪದಿಂದ ಅರ್ಚನೆಗಳಿಂದ ಅರ್ಚಿಸಿ ತನ್ನ ಜನರಿಗೆ 'ಇದು ಮಾಗಿಕಾಲ. ರಿಸಿಯರಿಗೆ ಶೀತಹಿಂಸೆ. ಅದರಿಂದ ಸುತ್ತ ಗೊಬ್ಬರ ಒಟ್ಟಿ' ಎಂದು ಗೊಬ್ಬರ ರಾಶಿ ಒಟ್ಟಿಸಿದ. ತಾನು ಹೋಗುವಾಗ ಅದಕ್ಕೆ ಬೆಂಕಿಯಿಡಿ ಎಂದು ಬೇರೆ ಹೇಳಿ ಹೋದ. ಅವರು ಅದರಂತೆ ಮಾಡಿದರು. ಚಾಣಕ್ಯ ಮತ್ತು ಇತರ ರಿಸಿಯರು ಕ್ಷಮೆಯನ್ನೇ ಭಾವಿಸಿ ಆಹಾರ ಶರೀರ ನಿವೃತ್ತಿಗೈದು ಇಂಗಿಣೀ ಮರಣದಿಂದ ಸಜೀವವಾಗಿ ಸತ್ತು ಹೋದರು.

3. ವಡ್ಡಾರಾಧನೆಯ ಕಥೆಯಿಂದ ಕೆಲವು ಅಂಶಗಳು ವ್ಯಕ್ತವಾಗುತ್ತವೆ. ಚಾಣಕ್ಯ ಜೈನನೆಂಬುದು ಅವುಗಳಲ್ಲೊಂದು. ಚಾಣಕ್ಯ ಬ್ರಾಹ್ಮಣನೆಂಬ ರೂಢಿಯ ಹೇಳಿಕೆಯಿರುವಾಗ ಇಲ್ಲಿನ ವಿವರಣೆಯನ್ನು ಹೇಗೆ ಒಪ್ಪಿಕೊಳ್ಳಬೇಕೆಂಬ ಸಂದೇಹ ಸಹಜವಾಗಿ ಅಂಕುರಿಸುತ್ತದೆ. ಚರಿತ್ರೆ ಮತ್ತು ಸಾಹಿತ್ಯ ದೃಷ್ಟಿಯಿಂದ ಈ ಕಥೆಗೆ ವಿಶೇಷಮಹತ್ವವಿರುವಂತೆ, ಈ ಅಂಶದಿಂದಲೂ ಈ ಕಥೆ ಜಿಜ್ಞಾಸೆಗೆ ಅವಕಾಶಮಾಡಿ ಕೊಟ್ಟಿದೆ. ಚಾಣಕ್ಯ ಜೈನನೆಂಬ ಇಲ್ಲಿನ ಹೇಳಿಕೆ ಒಂಟಿ ದನಿಯಲ್ಲ. ಇದನ್ನು ಪೋಷಿಸುವ ಸಾಹಿತ್ಯಿಕಾಧಾರಗಳು ಸಾಕಷ್ಟಿವೆ. ವಡ್ಡಾರಾಧನೆಯ ಕಾಲ ವಿಚಾರದಲ್ಲಿ ಚರ್ಚೆಯಿದ್ದರೂ ತಾತ್ಕಾಲಿಕವಾಗಿ ಅದನ್ನು ಹತ್ತನೆಯ ಶತಮಾನದ ಕೃತಿಯೆಂದು ಪರಿಗಣಿಸಬಹುದು. ತತ್ಪೂರ್ವ ರಚಿತ ಕೆಲವು ಸಂಸ್ಕೃತ ಪ್ರಾಕೃತ ಕೃತಿಗಳಲ್ಲಿ ಇದೇ

ಚಾಣಕ್ಯನ ಕಥೆ ಅಲ್ಪ ಸ್ವಲ್ಪ ವ್ಯತ್ಯಾಸಗಳೊಡನೆ ಕಂಡುಬರುತ್ತದೆ. ಅವುಗಳಲ್ಲಿ ಕೆಲವು ಕೃತಿಗಳ ಸಮೀಕ್ಷೆಯನ್ನು ಮುಂದೆ ಕೊಟ್ಟಿದೆ.

4. ವಿಶೇಷಾವಶ್ಯಕ ವಾಕ್ಯ, ಆವಶ್ಯಕ ಚೂರ್ಣಿ – ಇವುಗಳ ಆಧಾರದಿಂದ ಚಾಣಕ್ಯ ಹುಟ್ಟಿನಿಂದ ಜೈನನೆಂದೂ ಸಂತೃಪ್ತ ಶ್ರಾವಕನೆಂದೂ, ಜೈನ ಶಾಸ್ತ್ರಾಗಮ ವಿಶಾರದನೆಂದೂ ತಿಳಿದುಬರುತ್ತದೆ.

ಗೊಲ್‌ನಲ್ಲಿ ಚಣಕವೆಂಬ ಹಳ್ಳಿ. ಅಲ್ಲಿ ಚಣಿ ಎಂಬ (ಜೈನ) ಬ್ರಾಹ್ಮಣ. ಆತ ಶ್ರದ್ಧಾವಂತ ಶ್ರಾವಕ. ಒಮ್ಮೆ ಕೆಲವು ಜೈನ ಮುನಿಗಳು ಅವನ ಮನೆಯಲ್ಲಿ ಇಳಿದಿದ್ದರು. ಆ ಕಾಲದಲ್ಲಿ ಚಣಿಗೆ ಒಬ್ಬ ಮಗ ಹುಟ್ಟಿದ. ಅದು ಅಪರೂಪದ ಮಗು. ಹುಟ್ಟುವಾಗಲೇ ಹಲ್ಲುಗಳೆಲ್ಲಾ ಹುಟ್ಟಿದ್ದುವು. ಚಣಿ ಮುನಿಗಳ ಪಾದಗಳ ಬಳಿ ಮಗುವನ್ನಿಟ್ಟು: 'ಹುಟ್ಟುವಾಗಲೇ ಹಲ್ಲುಗಳಿದ್ದ ಈ ಮಗುವಿಗೆ ಎಂಥ ಭವಿಷ್ಯ ಕಾದಿದೆ?' ಎಂದು ಕೇಳಿದ. ಮಗು ಮುಂದೆ ರಾಜನಾಗುವನೆಂದರು. ಚಣಿ ಚಿಂತಿಸಿದ: ರಾಜ್ಯಪಾಲನೆಗಾಗಿ ರಾಜ ಕೆಲವೊಮ್ಮೆ ಪಾಪಕಾರ್ಯಗಳಿಗೂ ತೊಡಗಬೇಕು. ಆಧ್ಯಾತ್ಮದ ದೃಷ್ಟಿಯಿಂದ ಇದು ಪಾಪ ಸಂಘಟನೆಗೆ ಹೇತು. ಮಗು ಅಂಥ ವ್ಯಸನ ದಿಂದ ನೋಯುವುದು ಬೇಡ– ಹೀಗೆಂದು ತೀರ್ಮಾನಿಸಿದ ಚಣಿ ಮಗುವಿನ ದಂತ ಗಳನ್ನು ಚಾಣ (ಉಳಿ) ತೆಗೆದುಕೊಂಡು ಕಿತ್ತು ಹಾಕಿದ. ಆ ಮೇಲೆ ಮಗುವನ್ನು ಮತ್ತೆ ಮುನಿಗಳ ಹತ್ತಿರ ತಂದು 'ಮುಂದೇನು?' ಎಂದು ಕೇಳಿದ. ಅವರು 'ಈ ಮಗು ರಾಜ ಲಾಂಛನವಿಲ್ಲದೆ ರಾಜನಾಗುವುದು' ಎಂದರು.

ಮಗುವಿಗೆ ಚಾಣಕ್ಯನೆಂದು ಹೆಸರಾಯಿತು. ಚಿಕ್ಕಂದಿನಲ್ಲಿ ಹದಿನಾಲ್ಕು ಕಲೆ ಕಲಿತ. ತತ್ವಜ್ಞನೂ ಆದ ಶ್ರಾವಕನಾದ. ತೃಪ್ತನಾಗಿ ಬಾಳತೊಡಗಿದ. ಮದುವೆ ಆಯಿತು. ಗೃಹಸ್ಥನಾದ. ಚಾಣಕ್ಯನ ಹೆಂಡತಿಗೆ ಅವಳ ತಂದೆ ಮನೆಯಲ್ಲಿ ಅಪಮಾನ ಮಾಡಿದರು. ಚಾಣಕ್ಯ ನಂದ ದೊರೆಯ ಆಸ್ಥಾನವತ್ತ ಹೊರಟ. ಅಲ್ಲಿ ದಾಸಿಯೊಬ್ಬಳು ಅಪಮಾನಿಸಿದಳು. ಚಾಣಕ್ಯ ನಂದ ವಂಶ ನಿರ್ಮೂಲನಕ್ಕೆ ಪ್ರತಿಜ್ಞೆ ಮಾಡಿದ. ಚಂದ್ರಗುಪ್ತ ಅಧಿಕಾರಾರೂಢನಾದ. ಪರ್ವತ ರಾಜನೊಡನೆ ಸ್ನೇಹ ವಾಯಿತು. ನಂದ ದೊರೆಯೊಡನೆ ಕಾಳಗವಾಯಿತು. ನಂದರ ಪತನ. ನಂದ ದೊರೆಯ ಮಗಳನ್ನು ಚಂದ್ರಗುಪ್ತನಿಗಿತ್ತು ಮದುವೆ. ಈ ಎಲ್ಲ ಘಟನೆಗಳ ಹಿಂದೆ ಚಾಣಕ್ಯನ ದೂರ ದೃಷ್ಟಿಯ ರಾಜ ತಂತ್ರಜ್ಞತೆ ಪ್ರಕಟ. ಚಣಿಯ ಮನೆಯಲ್ಲಿ ಜಿನ ಮುನಿಗಳು ಧರ್ಮ ವಿಹಾರ ಕಾಲದಲ್ಲಿ ತಂಗಿದ್ದರೆಂಬುದರಿಂದ, ಆತ ಜೈನ ಶ್ರಾವಕನೆಂಬುದು ವಿದಿತವಾಗುತ್ತೆ. ಹೀಗೆ ಜೈನಯತಿಗಳು ನಿಂತ ಶ್ರಾವಕನ ಮನೆಗೆ 'ಸಯ್ಯಾತರ' ಎಂದು ಕರೆಯುತ್ತಾರೆ. ಈ ಸಯ್ಯಾತರ ಒಂದು ಅಪರೂಪ ಅವಕಾಶ. ಈ ಪುಣ್ಯ ಪ್ರಸಂಗ ಶ್ರದ್ಧಾವಂತ ಶ್ರಾವಕನಿಗೆ ಲಭ್ಯ. ಚಣಿ ಆ ಹಳ್ಳಿಯಲ್ಲಿ ಅಂಥ ಶ್ರಾವಕನಾಗಿದ್ದ.

5. ಆವಶ್ಯಕ ಮಲಯಗಿರಿ ವೃತ್ತಿ ಕೂಡ ಆವಶ್ಯಕ ಚೂರ್ಣಿಯಿಂದ ತಿಳಿದು ಬರುವ ಸಂಗತಿಗಳನ್ನು ಪುಷ್ಟೀಕರಿಸುತ್ತದೆ. ಘಟನೆಗಳು ಸಮಾನಾಂತರವಾಗಿವೆ. ನವ ಪದಾರ್ಥಗಳ ವಿಚಾರದಲ್ಲಿ ಶ್ರಾವಕ ಚಣಿ ನಿಷ್ಣಾತನಾಗಿದ್ದನೆಂದೂ ಇಲ್ಲಿ ಹೇಳಿದೆ. ಉಪದೇಶ ಪದದಲ್ಲಿ ಚಾಣಕ್ಯನ ಜೀವನ ಇನ್ನೂ ಅಚ್ಚುಕಟ್ಟಾಗಿ ಪೂರ್ಣ ರೂಪದಲ್ಲಿ ಬಂದಿದೆ. ಇದರ ಕರ್ತೃ ಆಚಾರ್ಯ ಹರಿಭದ್ರಸೂರಿ ಹೇಳಿರುವಂತೆ ಚಣಿ ಒಬ್ಬ ಶ್ರಾವಕ. ಮನುಷ್ಯನಲ್ಲಿ ಅಂಗಗಳಲ್ಲಿನ ಅಸಾಮಾನ್ಯತೆ ವಿಚಾರದಲ್ಲಿ ವಿವರಣೆ ನೀಡಬಲ್ಲ ತಜ್ಞ ಜಿನ ಮುನಿಗಳು ಅವನ ಮನೆಗೆ ಬಂದಿದ್ದರು. ಆವಶ್ಯಕ ಚೂರ್ಣಿ, ಆವಶ್ಯಕ ಮಲಯಗಿರಿ ವೃತ್ತಿಗಳಲ್ಲಿ ನಿರೂಪಿತವಾಗಿರುವುದನ್ನು ಅನುಮೋದಿಸುವ ಉಪದೇಶ ಪದ – 'ಚಾಣಕ್ಯ ಬಾಲಕನಾಗಿ ಬೆಳೆದು ವಿದ್ಯಾವಂತನಾಗಿ ಶ್ರಾವಕನಾಗಿ ಲೌಕಿಕಕ್ಕೆ ಅಂಟಿಕೊಳ್ಳದ ಜೀವನ ನಡೆಸಿದನು. ಆತ ತೃಪ್ತ, ಸಂತೋಷಿ. ಕಠಿಣವೂ ನಿಂದಾರ್ಹವೂ ಆದವುಗಳನ್ನು ಆತ ಮಾಡುತ್ತಿರಲಿಲ್ಲ' – ಎಂದು ನುಡಿದಿದೆ. ಆವಶ್ಯಕ ಚೂರ್ಣಿಯಲ್ಲಿ ಚಂದ್ರಗುಪ್ತ ಚಕ್ರವರ್ತಿಯಾದ ವಿಧಾನದ ಮತ್ತು ಆತ ಚಾಣಕ್ಯನ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡಸಿದ ಆಡಳಿತದ ವಿವರವಿದೆ. ಚಾಣಕ್ಯನ ಬಾಲ್ಯದ ಬಾಳು ಬಿಟ್ಟರೆ, ಉಳಿದ ಜೀವನ ಚಿತ್ರ ಇಲ್ಲಿ ಸಾಲದು. ಆಚಾರ್ಯ ಹರಿಭದ್ರಸೂರಿ ಈ ಕೊರತೆಯನ್ನು ನಿವಾರಿಸಿದ್ದಾರೆ. ಚಾಣಕ್ಯನ ಜೀವನದ ಎಲ್ಲ ಮುಖಗಳ ಪರಿಚಯ ಇಲ್ಲಿದೆ.

ಆಚಾರ್ಯ ಸಂಭೂತ ವಿಜಯರ ಕಾಲದಲ್ಲಿ ಭೀಕರ ಕ್ಷಾಮ ಬಂತು. ಆಹಾರ ಪಡೆಯಲು ಮುನಿಗಳಿಗೆ ಕಷ್ಟವಾಯಿತು. ಆಚಾರ್ಯ ಸಂಭೂತ ವಿಜಯರು ವೃದ್ಧರು. ಅವರಿಗೆ ದೂರ ಸಂಚಾರ ಸಾಧ್ಯವಿರಲಿಲ್ಲ. ಅವರು ತಮ್ಮ ಶಿಷ್ಯರನ್ನು ಕ್ಷಾಮವಿರದಿದ್ದ ಸಮುದ್ರತೀರ ಪ್ರದೇಶಕ್ಕೆ ಕಳಿಸಿದರು. ತಮ್ಮ ದೀಕ್ಷಾ ಗುರುವಿನ ಮೇಲಣ ಭಕ್ತಿಯಿಂದ ಇಬ್ಬರು ಶಿಷ್ಯರು ಆಮೇಲೆ ಹಿಂತಿರುಗಿದರು. ಒಂದು ಸಲ ಆಚಾರ್ಯ ಸಂಭೂತ ವಿಜಯರು ಮುಂದೆ ಆಚಾರ್ಯರಾಗಲಿದ್ದವರಿಗೆ ಮಂತ್ರ ತಂತ್ರಗಳ ರಹಸ್ಯ ತಿಳಿಸುತ್ತಿದ್ದರು. ಈ ಇಬ್ಬರು ಮುನಿಗಳೂ ಅನತಿ ದೂರದಲ್ಲಿ ಕುಳಿತು ಅವನ್ನು ಅಭ್ಯಸಿಸಿ ಆಚರಿಸತೊಡಗಿದರು. ಈ ಮಧ್ಯೆ ಕ್ಷಾಮ ಹೆಚ್ಚಿ ಸಂಗ್ರಹಿಸಿ ತರುತ್ತಿದ್ದ ಆಹಾರವನ್ನೂ ಆಚಾರ್ಯರು ಮೊದಲು ತರುಣ ಮುನಿಗಳಿಗೆ ಕೊಡುತ್ತಿದ್ದರು. ಅನಂತರ ಏನಾದರೂ ಉಳಿದರೆ ಅದನ್ನಷ್ಟೇ ಆಚಾರ್ಯರು ತೆಗೆದುಕೊಳ್ಳುತ್ತಿದ್ದರು. ದೇಹ ರಕ್ಷಣೆಗೆ ತಕ್ಕ ಆಹಾರದ ಅಭಾವದಿಂದಾಗಿ ಆಚಾರ್ಯರ ಶರೀರ ಕೃಶವಾಯಿತು. ಯುವಯತಿಗಳು ವ್ಯಥಿತರಾದರು. ಆಗ ಅವರು ಆಹಾರ ಪಡೆಯುವ ಬೇರೊಂದು ದಾರಿ ಹುಡುಕಿದರು. ಮಂತ್ರಗಳ ಬಲದಿಂದ ಅವರು ಚಂದ್ರಗುಪ್ತನ ಅರಮನೆ ಪ್ರವೇಶಿಸಿ ಚಕ್ರವರ್ತಿಗೆಂದು ಮೀಸಲಿಟ್ಟ ಆಹಾರವನ್ನು ಗೋಪ್ಯವಾಗಿ ತರತೊಡಗಿದರು. ಮುನಿಗಳ ಹಸಿವು ನಿವಾರಣೆಯಾಯಿತು.

ಚಂದ್ರಗುಪ್ತ ಚಕ್ರವರ್ತಿಗೆ ಎಂದಿನ ಆಹಾರವಿಲ್ಲದಂತಾಯಿತು. ದಿನದಿಂದ ದಿನಕ್ಕೆ ದೊರೆಯ ದೇಹ ದುರ್ಬಲವಾಯಿತು ಒಂದು ದಿನ ಚಂದ್ರಗುಪ್ತನನ್ನು ಚಾಣಕ್ಯ ಪ್ರಶ್ನಿಸಿದ. ಮಹಾರಾಜನಿಗೆ ಮುಡಿಪಿಟ್ಟ ಆಹಾರ ಅಗೋಚರರಿಂದ ಅದೃಶ್ಯವಾಗಿ ತನಗೆ ಹಸಿವು ಅನಿವಾರ್ಯವಾದುದರಿಂದ ಹೀಗಾಯಿತೆಂದು ಉತ್ತರ ಬಂತು. ಚಾಣಕ್ಯ ಸಂದರ್ಭವನ್ನು ಜಾಣ್ಮೆಯಿಂದ ನಿಭಾಯಿಸಿದ. ಮುನಿಗಳ ಚಾತುರ್ಯವನ್ನು ಪತ್ತೆ ಮಾಡಿದ. ಆಚಾರ್ಯ ಸಂಭೂತ ವಿಜಯರ ವಸತಿಗೆ ಹೋಗಿ ಮುನಿಗಳ ಮೇಲೆ ಚೌರ್ಯದ ಆರೋಪ ಮಾಡಿದ. ಪ್ರತಿಭಟಿಸಿದ ಆಚಾರ್ಯರೆಂದರು : " ನೀನು ಸಂಘದ ಪಾಲಕ. ಹಸಿವಿನಿಂದಾಗಿ ಯತಿಪಥ ಬಿಡಬೇಕಾದ ಅನಿವಾರ್ಯತೆ ಮುನಿಗಳಿಗೆ ಒದಗಿ ಬಂತು. ಇದರ ತಪ್ಪು ಪೂರ್ಣವಾಗಿ ನಿಂದಲ್ಲದೆ ಮತ್ತಾರದು ?". ಕೈಜೋಡಿಸಿ ಚಾಣಕ್ಯ ಆಚಾರ್ಯರಡಿಗಳಿಗೆರಗಿದ. ತಪ್ಪು ಒಪ್ಪಿಕೊಂಡ : ' ಮನ್ನಿಸಿ. ಇನ್ನು ಮುಂದೆ ಸಂಘದ ಸಂಕಷ್ಟಗಳ ನಿವಾರಣೆಯ ಹೊಣೆ ನನ್ನದು'.

6. ಈ ಕತೆಯ ಹಿಂದುಮುಂದು ಇನ್ನೂ ಹರಹಿನಿಂದ ಆಚಾರ್ಯ ಹರಿಭದ್ರರಲ್ಲಿ ಬಂದಿದೆ. ಇದರಲ್ಲಿ ಸ್ವಾರಸ್ಯವಾದ ಭಾಗಗಳಲ್ಲೊಂದು ಚಾಣಕ್ಯನ ಕಡೆಯ ದಿನಗಳಿಗೆ ಸಂಬಂಧಿಸಿದೆ. ರಾಣಿ ತಾಯಿಯ ಕೊಲೆಯ ಸುಳ್ಳು ಆರೋಪದ ಮೇಲೆ, ಅಶೋಕನ ತಂದೆ, ದೊರೆ ಬಿಂದುಸಾರನ ಮನಸ್ಸನ್ನು ಚಾಣಕ್ಯನ ವಿರುದ್ಧವಾಗಿ ಭಟ್ಟಂಗಿಗಳೂ ಚಾಡಿಕೋರರೂ ಸೇರಿ ತಿರುಗಿಸಿಬಿಟ್ಟರು. ಆ ವೇಳೆಗೆ ಚಾಣಕ್ಯ ತುಂಬ ಮುದುಕನೂ ಆಗಿದ್ದ. ತಿರಸ್ಕೃತ ಹಾಗೂ ನಿರ್ಲಜ್ಜ ಬದುಕು ನಡೆಸುವುದು ಚಾಣಕ್ಯನ ಸ್ವಭಾವಕ್ಕೆ ವಿರುದ್ಧ. ಆದರಿಂದ ಆತ ತನ್ನ ನಟ್ಟರಿಷ್ಟರ ಕ್ಷಮೆ ಕೋರಿದ. ಮನೆ ತೊರೆದ. ಕಾಡಿನಂಚಿನಲ್ಲಿದ್ದ ಗೋಕುಲದಲ್ಲಿ ಜೀವಿಸತೊಡಗಿದ. ಅಲ್ಲಿ ಇಂಗಿನೀಮರಣಕ್ಕೆ ಅಣಿಯಾದ (ನಿರ್ಧಾರಿತ ಸ್ಥಳದಲ್ಲಿ ಸಾಯುವತನಕ ಉಪವಾಸವಿರುವುದು). ಚಾಣಕ್ಯನಿಗೆ ಸಂಬಂಧಿಸಿದ ಸತ್ಯ ಸಂಗತಿಗಳು, ತನ್ನ ಮಲತಾಯಿಯ ಮೂಲಕ ಬಿಂದುಸಾರ ದೊರೆಗೂ ತಿಳಿಯಿತು. ದೊರೆ ಬಹುವಾಗಿ ಮರುಗಿದ. ಆತ ಗೋಕುಲಕ್ಕೆ ಬಂದ, ಚಾಣಕ್ಯನನ್ನು ಮತ್ತೆ ರಾಜಧಾನಿಗೆ ಕರೆದುಕೊಂಡು ಹೋಗಿ ಹಿಂದಿನ ಸ್ಥಾನದಲ್ಲಿ ನಿಲ್ಲಿಸಲು. ಚಾಣಕ್ಯ ಉತ್ತರಿಸಿದ- ' ಎಲ್ಲ ಲೌಕಿಕ ಸಂಬಂಧಗಳನ್ನು ಬಿಟ್ಟುಕೊಟ್ಟು ಮರಣದವರೆಗೆ ಉಪವಾಸ ನಡಸಲು ಪ್ರಾರಂಭಿಸಿದ್ದಾಗಿದೆ. ನಿಮ್ಮ ಸಾಮ್ರಾಜ್ಯದಲ್ಲಿ ನನಗೀಗ ಯಾವ ಆಸಕ್ತಿ ಇದೆ ? '. ಚಾಣಕ್ಯನಿಗೂ ಇದೆಲ್ಲಾ ತನ್ನ ವಿರುದ್ಧವಾಗಿ ಮಂತ್ರಿ ಸುಬಂಧು ನಡಸಿದ ಕುತಂತ್ರಗಳೆಂದು ತಿಳಿದಿತ್ತಾದರೂ ಬಿಂದುಸಾರನಿಗೆ ಆ ಬಗ್ಗೆ ಏನೊಂದನ್ನೂ ಹೇಳಲಿಲ್ಲ.

ನಿರಾಶನಾದ ಬಿಂದುಸಾರ ಅರಮನೆಗೆ ಹಿಂತಿರುಗಿದ. ಮಾನಸಿಕ ವೇದನೆಯಿಂದ ತಪ್ತನಾದ. ಚಾಣಕ್ಯನತ್ತ ದೊರೆ ಹೆಚ್ಚು ಆಕರ್ಷಿತನಾಗುತ್ತಿದ್ದಾನೆಂದು

ಸುಬಂಧು ಸಚಿವನಿಗೆ ಮನದಟ್ಟಾಯಿತು. ತನ್ನ ಒಳಸಂಚುಗಳು ಬಯಲಾದ ಬಗೆಗೂ ಗಾಬರಿಯಾಯಿತು. ಈ ಸಂದರ್ಭದ ಉಪಯೋಗಕ್ಕೆ ಮಸಲತ್ತು ಮಾಡಿದ. ದೊರೆಯ ಬಳಿ ಹೊರಟ. ತಾನು ಪ್ರಧಾನಿ ಚಾಣಕ್ಯರ ಬಳಿ ಹೋಗಿ ರಾಜಧಾನಿಗೆ ಹಿಂತಿರುಗುವಂತೆ ವಿನಂತಿಸಿ ಒಪ್ಪಿಸುವುದಕ್ಕೆ ಅಪ್ಪಣೆ ಬೇಡಿದ. ಒಮ್ಮೆಲೇ ದೊರೆ ಬಿಂದುಸಾರ ಅಪ್ಪಣೆಕೊಟ್ಟ. ಸುಬಂಧು ಚಾಣಕ್ಯನನ್ನು ಗೌರವಿಸುವವನಂತೆ ಹಾಲುಮಡ್ಡಿ ಸಾಂಬ್ರಾಣಿಗಳಿಂದಾದ ಸುಗಂಧದ್ರವ್ಯಗಳನ್ನು ಸಮರ್ಪಿಸಿ, ಚಾಣಕ್ಯನ ಸುತ್ತ ಇದ್ದ ಬೆರಣಿಯ ಮೇಲೆಲ್ಲ ಸಿಂಪಡಿಸಿದ. ಬೆರಣಿ ಇವುಗಳಿಂದಾಗಿ ಹತ್ತಿಕೊಂಡು ಉರಿಯತೊಡಗಿದವು. ಚಾಣಕ್ಯನ ದೇಹ ಹುರಿದಂತೆ ಉರಿದುಹೋಯಿತು. "ಆ ಸಮಯದಲ್ಲಿ ಚಾಣಕ್ಯ ಶುದ್ಧ ಮನಸ್ಕನಾಗಿದ್ದ. ಧರ್ಮ ಚಿಂತನೆಯಲ್ಲಿ ಆತ ತನ್ಮಯನಾಗಿದ್ದ. ಶರೀರ ಅಕಂಪನವಾಗಿತ್ತು. ಜ್ವಾಲೆಗಳಲ್ಲಿದ್ದರೂ ಪೂರ್ಣ ಧರ್ಮ ಶ್ರದ್ಧೆಯಿಂದ ಧರ್ಮ ಭಾವನೆಗಳಲ್ಲಿ ಮುಳುಗಿದ್ದ. ಆವನ ಮನಸ್ಸಿನಲ್ಲಿದ್ದ ಭಾವನೆಗಳಿವು." "ಮುಕ್ತರಾದವರು, ಅನುಗ್ರಹಕ್ಕೆ ಪಾತ್ರರಾದವರು, ಜೀವಿಸುವ ಜಂತುವನ್ನು ನೋಯಿಸರು. ಪ್ರಾಪಂಚಿಕ ವ್ಯವಹಾರದಲ್ಲಿ ನಿರತರಾದ ನನ್ನಂಥವರು ಅಧಾರ್ಮಿಕ ಕಾರ್ಯಗಳಲ್ಲಿ ತಮ್ಮ ಸಮಯ ಪೋಲು ಮಾಡುತ್ತಾರೆ. ನನಗೆ ದೇವರ ಧರ್ಮಬೋಧೆ ತಿಳಿದಿದ್ದರೂ ಭ್ರಾಂತಿ ಮತ್ತು ಅಜ್ಞಾನ ಶೃಂಖಲೆಯಲ್ಲಿ ಬಂಧಿತನಾಗಿಬಿಟ್ಟೆ. ವರ್ತಮಾನ ಭವಿಷ್ಯಗಳಿಗೆ ಹಾನಿಯುಂಟು ಮಾಡುವ ಕೆಲಸಗಳಲ್ಲಿ ನಾನು ತೊಡಗಿಬಿಟ್ಟೆ. ನಾನು ಹೀಗೆ ಕಾಲ ಕಳೆದು ಬಿಟ್ಟೆ? ಈ ಭವದಲ್ಲಿ ಮತ್ತು ಹಿಂದಿನ ಭವಗಳಲ್ಲಿ ಯಾವುದೇ ಜೀವಿಗಳಿಗೆ ನಾನು ಘಾಸಿಗೊಳಿಸಿದ್ದರೆ ಅವುಗಳಿಂದ ಕ್ಷಮೆ ಬೇಡುತ್ತೇನೆ. ನಾನು ಅವನ್ನು ಕ್ಷಮಿಸುತ್ತೇನೆ. ರಾಜ್ಯಾಡಳಿತದಲ್ಲಿ ನನ್ನ ಪಾಪ ಕಾರ್ಯಗಳಿಂದ ಸಂಪಾದಿಸಿದ ಯಾವುದೇ ಬಂಧನವನ್ನು ಮೂರು ಕರಣಗಳಿಂದ ಮೂರು ಯೋಗಗಳಿಂದ ಈಗ ವರ್ಜಿಸುತ್ತೇನೆ". ಬೆಂಕಿ ಚಾಣಕ್ಯನ ತನುವನ್ನು ಸ್ವಾಹಾ ಮಾಡ ತೊಡಗಿದಂತೆ ಆತನ ಕ್ರೂರ ಕಾರ್ಯಗಳೂ ದಗ್ಧವಾದುವು. ಪರಮೇಷ್ಠಿ ಪಂಚಕದಲ್ಲಿ ಮಗ್ನನಾಗಿ ಶುದ್ಧ ಭಾವನೆಗಳಿಂದ ಬಂಧನಗಳಿಲ್ಲದೆ ಪ್ರಕ್ಷುಬ್ಧತೆಗಳಿಲ್ಲದೆ ಮೃತ್ಯುವನ್ನು ಅಪ್ಪಿದ. ಸತ್ತು ಸ್ವರ್ಗಾಗ್ರವನ್ನೇರಿದ.

7. ಮೇಲಿನ ಈ ಘಟನೆಯನ್ನು ಭಟ್ಟ ಪಇಣ್ಣಾ, ಸಂತಾರಗಪಇಣ್ಣಾ, ಮರಣವಿಹಿ ಪಇಣ್ಣಾ ಗ್ರಂಥಗಳೂ ಸಬಲವಾಗಿ ಸಮರ್ಥಿಸುತ್ತವೆ. ಇವುಗಳಲ್ಲಿ ಚಾಣಕ್ಯ ಸಂಸಾರದಲ್ಲಿ ವೈರಾಗ್ಯಪರನಾದದ್ದೂ ಗೋಕುಲಕ್ಕೆ ಹೋದದ್ದೂ ಆಮರಣಾಂತ ಉಪವಾಸ ಮಾಡಿದ್ದೂ ಮಂತ್ರಿ ಸುಬಂಧುವಿನ (–ಸುಬುದ್ಧಿಯ) ತಂತ್ರದಿಂದ ಆತನ ಮೈ ಬೆಂದು ಬೂದಿಯಾದದ್ದು–ಇವುಗಳ ಸುದೀರ್ಘ ನಿರೂಪಣೆಯಿದೆ.

(ಬೃ) ವೃಹತ್ ಕಥಾ ಕೋಷದಲ್ಲಿ ಆಚಾರ್ಯ ಹರಿಷೇಣನು ಚಾಣಕ್ಯನ ಜೀವನ ಕಥೆಯನ್ನು, 143ನೆಯ ಸಂಖ್ಯೆಯ ಆಖ್ಯಾಯಿಕೆಯಲ್ಲಿ ವಿಸ್ತಾರವಾಗಿ ಪ್ರಸ್ತಾಪಿಸಿದ್ದಾನೆ. ಆಚಾರ್ಯ ಹರಿಷೇಣನ ಅಭಿಪ್ರಾಯದಂತೆ ಚಾಣಕ್ಯ ತನ್ನ ಕಡೆಯ ದಿನಗಳಲ್ಲಿ ಜೈನ ಮುನಿಜೀವನಕ್ಕೆ ದೀಕ್ಷಿತನಾದ, ಇನ್ನೂ 500 ಇತರ ಮುನಿಗಳ ಸಮೇತ ಶುದ್ಧ ಪರಿಭಾವನೆಯ ತಪಗೈದ. ಅವಿಚಲವಾಗಿಟ್ಟು ಆಮರಣಾಂತ ಉಪವಾಸದಿಂದ ತನ್ನ ಮರ್ತ್ಯ ದೇಹವನ್ನು ಬಿಟ್ಟ. ಅಲ್ಲಿನ ಸಂಕ್ಷಿಪ್ತ ವಿವರ: "ಪಾಟಲಿಪುತ್ರ ಸಾಮ್ರಾಜ್ಯವನ್ನು ನಂದ ದೊರೆಯನ್ನು ಸೋಲಿಸಿ ಚಂದ್ರಗುಪ್ತ ಚಾಣಕ್ಯರು ಪಡೆದರು. ಆಡಳಿತವನ್ನು ದೀರ್ಘಕಾಲ ನಡಸಿದಮೇಲೆ ಚಾಣಕ್ಯ ಎಲ್ಲ ಸಂಪರ್ಕಗಳಿಂದ ದೂರನಾದ. ಜೈನ ಧರ್ಮದ ಸಿದ್ಧಾಂತಗಳನ್ನು ಆಲಿಸಿ ಪ್ರಾಪಂಚಿಕ ಸ್ವತ್ತುಗಳನ್ನು ತ್ಯಜಿಸಿದ. ಜೀವಿತದ ಕಡೆಗೆ ಜೈನಯತಿಯೇ ಆದ. 500 ಮುನಿಗಳ ಸಂಘದೊಡನೆ ದಕ್ಷಿಣದಲ್ಲಿ ಒಮ್ಮೆ ಸಂಚರಿಸುತ್ತಿರುವಾಗ ಒಂದು ಕಾಡಿನ ಬಳಿ ಬಂದ. ಗೋಕುಲದಲ್ಲಿ ತಂಗಿ ತಪಸ್ಸಿನಲ್ಲಿ ತನ್ಮಯನಾದ. ಗೋಕುಲದ ಮೂಡಣಕ್ಕಿದ್ದುದು ಕ್ರೌಂಚಪುರ. ಅಲ್ಲಿ ಆಳುವ ದೊರೆ ಸುಮಿತ್ರ. ಗೋಕುಲದಲ್ಲಿ ಮುನಿ ಚಾಣಕ್ಯರು ಆಗಮಿಸಿರುವರೆಂದು ತಿಳಿದು ಆತ ಹರ್ಷಿಸಿದ. ತನ್ನ ಭಕ್ತಿ ಸಮರ್ಪಣೆಗೆ ಅಲ್ಲಿಗೆ ಹೊರಟ. ದೊರೆ ದರ್ಶನ ಪಡೆದು ಬಂದ ಮೇಲೆ ಚಾಣಕ್ಯ ಮುನಿ ಆಮರಣಾಂತ ಪ್ರಾಯೋಪಗಮನ ಉಪವಾಸವನ್ನು ಸ್ವೀಕರಿಸಿದ. ನಂದ ದೊರೆಗಳ ಮಾಜಿ ಮಂತ್ರಿ ಸುಬಂಧುವೂ, ಚಾಣಕ್ಯ ಯತಿ ದರ್ಶನಕ್ಕೆ ಆಗಮಿಸಿದ್ದ ಸುಮಿತ್ರ ದೊರೆಯ ಜೊತೆಯಲ್ಲಿ, ಬಂದಿದ್ದ. ಚಾಣಕ್ಯನ ಸುತ್ತ ಸುಬಂಧು ಬೆರಣಿ (– ಕುಳ್ಳು) ಆಯ್ದು ಬೆಂಕಿಯಿಟ್ಟ. ಅದರಲ್ಲಿ ಆಕಸ್ಮಿಕವಾಗಿ ಸುಬಂಧುವೂ ಸಿಕ್ಕಿ ಬಿದ್ದು ಸತ್ತುಹೋದ. ಚಾಣಕ್ಯನೂ ಅಯ್ನೂರ್ವರ ಮುನಿ ಸಂಘವೂ ಅಗ್ನಿ ಬಾಧೆಯನ್ನೆಲ್ಲ ತಾಳಿ ತಪಸ್ಸಿನಲ್ಲೇ ಮನವಿಟ್ಟು ಮುಡಿಪಿದರು".

8. ಪರಿಶಿಷ್ಟ ಪರ್ವನ್ ಕೃತಿಯ ಅಷ್ಟಮ ಅಧ್ಯಾಯದಲ್ಲಿ ಆಚಾರ್ಯ ಹೇಮಚಂದ್ರ ಚಾಣಕ್ಯ ಚಂದ್ರಗುಪ್ತರ ಜೀವಿತದ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಆಚಾರ್ಯ ಹರಿ ಭದ್ರ ಸೂರಿಯ ಉಪದೇಶ ಪದದ ಆಧಾರದಿಂದ ಆಚಾರ್ಯ ಹೇಮಚಂದ್ರ ಕೃತ ಪರಿಶಿಷ್ಟ ಪರ್ವನ್ ನಿಂತಂತೆ ತೋರುತ್ತದೆ. ಏಕೈಕ ವ್ಯತ್ಯಾಸವೆಂದರೆ ಉಪದೇಶಪದ ಪ್ರಾಕೃತ ಉಪಭಾಷೆಯಲ್ಲಿ ರಚಿತವಾಗಿದೆ. ಪರಿಶಿಷ್ಟ ಪರ್ವನ್ ಸೊಗಸಾದ ಸಂಸ್ಕೃತ ಶೈಲಿಯಲ್ಲಿ ವಿಸ್ತಾರವಾಗಿ ಸಂಕ್ಷಿಪ್ತ ರೂಪದಲ್ಲಿ ರಚಿತವಾಗಿದೆ. ಚಾಣಕ್ಯನನ್ನು ಆಚಾರ್ಯ ಹೇಮಚಂದ್ರ ಶ್ರಾವಕನನ್ನಾಗಿ ಚಿತ್ರಿಸುತ್ತಾ 'ಸಂಘ ಪುರುಷ ಪ್ರವಚನೋಪಹಾಸಭೀರು, ನಿರ್ಜರೋದ್ಯತ' ಮುಂತಾಗಿ ವಿಶೇಷಣಗಳಿಂದ ಸಂಬೋಧಿಸಿರುವುದನ್ನು ಗಮನಿಸಬೇಕು. ಚಂದ್ರ ಗುಪ್ತನಿಗೆ ಕೊಟ್ಟ ಭೋಜನ ಪಾತ್ರೆಗಳಿಂದ ಆಹಾರವನ್ನು, ಚರಿಗೆಯ ಆಹಾರ

ದಾನವ ಆಹಾರವೆಂದು ತೆಗೆದುಕೊಂಡು ಹೋಗುವುದನ್ನೂ ಹನ್ನೆರಡನೆಯ ಪ್ರತಿಜ್ಞೆಯಾದ ಅತಿಥಿ ಸತ್ಕಾರವನ್ನು ಸೂಚಿಸುತ್ತದೆಂದು ನಿರೂಪಿಸಲಾಗಿದೆ. ತನ್ನ ಮನೆಯಿಂದ ಅನ್ನ ಆಹಾರ ನೀರು ಅಥವಾ ಯಾವುದೇ ವಸ್ತುವನ್ನು ಮುನಿಗಳು ಅಗತ್ಯ ಬಿದ್ದಾಗ ತೆಗೆದುಕೊಂಡರೆ ತಾನು ಬಹು ಮನ್ನಣೆ ಪಡೆದಂತೆ ಸಂತೋಷಿಸುವುದಾಗೂ ಚಾಣಕ್ಯ ತಿಳಿಸುತ್ತಾನೆ. ಆಚಾರ್ಯ ಹೇಮಚಂದ್ರನ ಪ್ರಕಾರ ಚಂದ್ರಗುಪ್ತನನ್ನ ಜೈನನನ್ನಾಗಿ ಪರಿವರ್ತಿಸುವಲ್ಲಿ ಚಾಣಕ್ಯ ಬಹು ಪ್ರಮುಖ ಪಾತ್ರವಹಿಸಿದ್ದಾನೆ. ಚಂದ್ರಗುಪ್ತನಿಗೆ ಚಾಣಕ್ಯ ರಾಜಕೀಯ ಕ್ಷೇತ್ರವಲ್ಲೇ ಅಲ್ಲದೆ ಆಧ್ಯಾತ್ಮಿಕ ವಲಯದಲ್ಲೂ ಸಲಹೆಗಾರನಾಗಿ ವರ್ತಿಸಿ ಅವನನ್ನು ಉದ್ಧರಿಸಿದ. ಧರ್ಮ ಪರಿವರ್ತನೆಗೆ ಚಂದ್ರಗುಪ್ತ ತಕ್ಷಣ ಒಪ್ಪಲಿಲ್ಲ. ಚಂದ್ರಗುಪ್ತನಿಗೆ ಸಂಪೂರ್ಣವಾದ ವಿಶ್ವಾಸ ಮೂಡಿದಮೇಲೆ ತನ್ನ ಹಿಂದಿನ ಮತ ಬಿಟ್ಟು ಜೈನ ಧರ್ಮಕ್ಕೆ ಮತಾಂತರಗೊಂಡ.

9. ಸಮೀಕ್ಷೆ : ಆವಶ್ಯಕಚೂರ್ಣಿ, ಆವಶ್ಯಕ ಮಲಯಗಿರಿ ವೃತ್ತಿ, ಉಪದೇಶ ಪದ, ಭಟ್ಟಪಇಣ್ಣಾ, ಸಂತಾರಗ (ಸಂಥಾರಕ) ಪಇಣ್ಣಾ, ಮರಣ ವಿಹಿ ಪಇಣ್ಣಾ, ಬೃಹತ್ ಕಥಾಕೋಷ, ಪರಿಶಿಷ್ಟ ಪರ್ವನ್ ಇವು ಚಾಣಕ್ಯ ಜೈನನೆಂಬುದನ್ನು ಅವಿರೋಧವಾಗಿ ಒಪ್ಪಿಕೊಂಡಿವೆ.

ಚಾಣಕ್ಯನ ಜೀವನ ಕಥೆ ತಿಳಿಸುವಾಗ ಅತ ಮುನಿಯಾಗಿ ವಿಹಾರ ಮಾಡಿದ್ದು ಪವಿತ್ರ ಸೂತ್ರ, ಕಮಂಡ(ಡು)ಲು, ಬ್ರಾಹ್ಮಣನಾಗಿದ್ದುದು ಕೆಲವರು ಇವಿಷ್ಟನ್ನೇ ಪರಿಗಣಿಸಿದ್ದಾರೆ. ಇದುವರೆಗಿನ ತಿಳುವಳಿಕೆ ಏಕ ಮುಖವಿರಬಹುದೆಂಬ ಭಾವನೆಗೆ ಅವಕಾಶವಿದೆ. ಬ್ರಾಹ್ಮಣನಾಗಿರುವುದು. ಪವಿತ್ರ ಸೂತ್ರ ಹಾಕುವುದು, ಮುನಿಯಾಗಿ ಸಂಚರಿಸುವುದು–ಇವು ಜೈನ ಸಂಸ್ಕೃತಿಗೆ ಅವಿರೋಧವಾಗಿವೆ. ಮಗಧ ರಾಜ್ಯದಲ್ಲಿ ನಂದ ವಂಶ ಅಧಿಕಾರಕ್ಕೆ ಬಂದಾಗ, ಮೊದಲ ನಂದನಿಗೆ ಒಬ್ಬ ಸಮರ್ಥ ಪ್ರಧಾನಿಯು ಅಗತ್ಯವಿತ್ತು. ಆತನ ಗಮನ ಕಲ್ಪಕನ ಮೇಲೆ ಕೇಂದ್ರೀಕೃತವಾಯಿತು. ಕಲ್ಪಕನನ್ನು ಈ ಗೌರವಾರ್ಹ ಪದವಿಗೆ ಒಪ್ಪುವಂತೆ ನಂದ ಒತ್ತಾಯಿಸಿದ. ಕಲ್ಪಕ ಧಾರ್ಮಿಕ ಪ್ರವೃತ್ತಿಯವನಾದುದರಿಂದ ಈ ಪ್ರಧಾನಿ ಪದವನ್ನು ನಿರಾಕರಿಸಿದ. ಆದರಿಂದ ನಂದ ನಿರಾಶನಾಗಲಿಲ್ಲ. ತನ್ನ ಪ್ರಯತ್ನ ಬಿಟ್ಟು ಕೊಡಲಿಲ್ಲ. ಈ ಮಧ್ಯೆ ಸಂಭವಿಸಿದ ಒಂದು ಅಸಾಧಾರಣ ಘಟನೆಯ ಪರಿಣಾಮವಾಗಿ ಕಲ್ಪಕ ಪ್ರಧಾನಿಯಾಗಲು ಅಂತೂ ಒಪ್ಪಿದ. ಕಲ್ಪಕನೂ ಅವನ ತಂದೆಯೂ ಜೈನ ಶ್ರಾವಕರಾಗಿದ್ದರೆಂಬುದನ್ನು ಆಚಾರ್ಯ ಹೇಮಚಂದ್ರ ಮತ್ತು ಆಚಾರ್ಯ ಹರಿಭದ್ರರು ತಿಳಿಸಿದ್ದಾರೆ. ನಂದ ವಂಶದಲ್ಲಿ ಏಳುಜನ ನಂದರು (ಅಥವಾ ಒಂಬತ್ತುಜನ) ಕ್ರಮವಾಗಿ ಆಗಿಹೋದರು. ಕಲ್ಪಕನ ಮನೆತನದಲ್ಲೂ ಕೆಲವು ಪ್ರಾಜ್ಞರು ಆಗಿ ಹೋದರು. ಅವರೆಲ್ಲಾ ಪ್ರಧಾನಿ

ಗಳಾಗಿದ್ದರು. ನಂದರಲ್ಲಿ ಏಳನೆಯವನ ಕಾಲದಲ್ಲಿ 'ಸಕದಲ' ಪ್ರಧಾನಿಯಾಗಿದ್ದ. ಆತ ಕೂಡ ಕಲ್ಪಕನ ಧಾರ್ಮಿಕ ಸಂಪ್ರದಾಯವನ್ನೇ ಪಾಲಿಸಿದ.

ಈ ಕಲ್ಪಕನ ಮನೆತನದಲ್ಲಿ ಹುಟ್ಟಿದವನಲ್ಲವಾದರೂ, ಚಾಣಕ್ಯ ಶ್ರಾವಕ ಸಂಪ್ರದಾಯ ಮಸುಳದಂತೆ ನಿಲ್ಲಿಸಿದ. ಭವಿಷ್ಯ ದೃಷ್ಟಿಯಿಂದ ಸಾಮ್ರಾಜ್ಯದ ಆಡಳಿತವನ್ನು ಯಶಸ್ವಿಯಾಗಿ ನಡಸಿದ. ಜೈನ ಪುರಾಣಗಳ ಪ್ರಕಾರ ಪವಿತ್ರ ಸೂತ್ರ ಧರಿಸುವ ಪದ್ಧತಿ ಮೊದಲು ಋಷಭದೇವರ ಕಾಲದಲ್ಲಿ ರೂಢಿಗೆ ಬಂತು. ಪ್ರಥಮ ಚಕ್ರಿ ಭರತನಿಂದ ಪ್ರಾರಂಭವಾಯಿತು. ಅಂದು ಹಾಗೂ ಅಂದಿನಿಂದ ಮುತ್ಸದ್ದಿ ಶ್ರಾವಕರು ಅದನ್ನು ಧರಿಸಿದರು. ಇಂದಿಗೂ ಬಹುತೇಕ ಜೈನರು ಜನಿವಾರ ಹಾಕುತ್ತಾರೆ.

10. ಚಾಣಕ್ಯ ಪ್ರಧಾನಿಯಾಗಿದ್ದರೂ ತೃಪ್ತ ಸ್ವಭಾವದವನಾಗಿದ್ದ. ಆಚಾರ್ಯ ಹೇಮಚಂದ್ರ, ಆವಶ್ಯಕ ಚೂರ್ಣಿ ಕರ್ತೃ, ಹಾಗೂ ಆಚಾರ್ಯ ಹರಿಭದ್ರ ಮೂವರು ಚಾಣಕ್ಯ ಶ್ರಾವಕನಾಗಿ ಹೊಂದಿದ್ದ ಶ್ರೇಷ್ಠ ಗುಣಗಳ ಜೊತೆಗೆ ಈ ತೃಪ್ತ ಮನೋಭಾವವನ್ನೂ ಪ್ರಸ್ತಾಪಿಸಿದ್ದಾರೆ. ಈ ತೃಪ್ತಿ ಆತನ ಜೀವಿತದ ಅಂತ್ಯದವರೆಗೂ ಕಂಡು ಬರುತ್ತೆ. ಮುದ್ರಾರಾಕ್ಷಸ ನಾಟಕದಲ್ಲಿ ಕೂಡ ಪ್ರಧಾನಿ ಚಾಣಕ್ಯನಲ್ಲಿದ್ದ ತೃಪ್ತಿಯನ್ನು ಸ್ತುತಿಸಿದೆ.

> ಉಪಲ ಸಕಲ ಮೇತದ್ ಭೇದಕಮ್ ಗೋಮಯಾನಾಮ್
> ವಟುಭಿರುಪಧೃತಾನಾಮ್ ಬರ್ಹಿಷಾಮ್ ಸ್ತೋಮ ಏಷಾ ।
> ಶರಣಮಪಿ ಸಮಿದ್ಭಿಃ ಶುಶ್ಯಮಾಣಾಮಿರಾಭೀರ್
> ವಿನಮಿತ ಪಟಲಾಂತಮ್ ದೃಶ್ಯತೇ ಜೀರ್ಣಮ್ ಕುಡ್ಯಮ್ ॥

(ಒಂದು ಸಣ್ಣ ಕಲ್ಲು ಚೂರು, ಹಸು ಸಗಣಿ ಬೆರಣಿ ಪುಡಿ ಮಾಡಲು; ಶಿಷ್ಯರು ಕಿತ್ತು ತಂದ ಹುಲ್ಲು, ಆಯ್ದು ತಂದ ಕಟ್ಟಿಗೆ– ಇಷ್ಟೇ, ಮತ್ತು ಒಂದು ಬಾಗಿದ ಗುಡಿಸಲು ಹಾಗೂ ಜೀರ್ಣವಾದ ಗೋಡೆಗಳು). ಚಾಣಕ್ಯ ಅಜೈನನೆಂದು ಹೇಳಲು ಮುಂದಿಡುವ ಒಂದು ವಾದವೆಂದರೆ, ಆತನ ಅರ್ಥಶಾಸ್ತ್ರದಲ್ಲಿ ಆತ ವರ್ಣಾಶ್ರಮ ವ್ಯವಸ್ಥೆಗೆ ಹೆಚ್ಚು ಒತ್ತು ಕೊಟ್ಟಿದ್ದಾನೆ– ಎಂಬುದು. ಇದಕ್ಕೆ ಬೇರೆ ವಿವರವೂ ಇದೆ. ಆ ಕಾಲದ ಸಾಮಾಜಿಕ ರಚನೆಯಲ್ಲಿ ವರ್ಣಾಶ್ರಮ ವ್ಯವಸ್ಥೆ ರಕ್ಷಣೆಗಾಗಿ ಇತ್ತು. ಆ ವ್ಯವಸ್ಥೆಯಲ್ಲಿ ವ್ಯತ್ಯಾಸಗಳೂ ಬೆಳವಣಿಗೆಯೂ ಕಾಲಕ್ಕೆ ಸರಿಹೊಂದುವಂತೆ ನಡೆದಿವೆ. ತನ್ನ ಕಾಲಕ್ಕೆ ಆ ವ್ಯವಸ್ಥೆ ಉಪಯುಕ್ತವೆಂದು ಚಾಣಕ್ಯ ಪರಿಗಣಿಸಿದ. ಕಾಲ ಕಾಲಕ್ಕೆ ಇತರ ಸಾಮಾಜಿಕ ಪರಿವರ್ತನಕಾರರೂ ಅದನ್ನು ಅಳವಡಿಸಿದ್ದಾರೆ. ಜೈನರಲ್ಲೂ ಋಷಭ ದೇವನ ಕಾಲದಲ್ಲಿ ಈ ವರ್ಣ

ವ್ಯವಸ್ಥೆಯು ಉಗಮವಾಯಿತು : ಪಂಪನ ಆದಿ ಪುರಾಣದಲ್ಲೂ ಇದಕ್ಕೆ ಆಧಾರ ಉಂಟು.

ಚಾಣಕ್ಯ – ಅಜೈನನೆಂಬವರ ಅನ್ನಿಸಿಕೆಯಲ್ಲಿನ ಇನ್ನೊಂದು ವಾದವೆಂದರೆ ಚಾಣಕ್ಯ 'ಶಿಖಾ' (ಜುಟ್ಟು) ಬಿಟ್ಟಿದ್ದನೆಂಬುದು. ಶಿಖೆಯನ್ನು ಬಿಡುವ ಪದ್ಧತಿ ಇಂದಿಗೂ ಕೆಲವು ಜೈನರಲ್ಲಿದೆ. ನನ್ನ ತಂದೆ ಜುಟ್ಟು ಬಿಟ್ಟಿದ್ದರು. ನನ್ನ ಚಿಕ್ಕಪ್ಪ ಮತ್ತು ಇತರ ಕೆಲವು ಬಂಧುಗಳು ಈಗಲೂ ಶಿಖೆ ಬಿಟ್ಟಿದ್ದಾರೆ. ಪುರುದೇವ ದೀಕ್ಷಾ ಕಾಲದಲ್ಲಿ ಪಂಚ ಮುಷ್ಟಿಗಳಿಂದ ಕೂದಲು ಕೀಳುತ್ತಿದ್ದಾಗ ಇಂದ್ರನ ಕೋರಿಕೆಯಂತೆ ಶಿಖೆಯನ್ನು ಕೀಳಲಿಲ್ಲವೆಂಬ ಹೇಳಿಕೆಯೂ ಉಂಟು. ಅನೇಕ ಶಿಲಾಮೂರ್ತಿಗಳೂ ಇದನ್ನು ಅನುಮೋದಿಸುತ್ತವೆ.

ವ್ಯವಹಾರ ಚಾತುರ್ಯದಲ್ಲಿ ಚಾಣಕ್ಯ ಪ್ರಸಿದ್ಧ ಪುರುಷ. ವಂಚನೆ ದಗಲ ಬಾಜಿತನ ಮುಂತಾದುವು ಈ ತಂತ್ರದ ಜ್ಞಾತಿಗಳು. ಈ ಕಾರಣಗಳಿಗಾಗಿ ಕೆಲವು ವಿದ್ವಾಂಸರು ಚಾಣಕ್ಯನನ್ನು ಜೈನನೆಂದು ಒಪ್ಪಲು ಹಿಂಜರಿಯುತ್ತಾರೆ. ಅಹಿಂಸೆಯ ವ್ರತಗಳನ್ನು ತೆಗೆದುಕೊಂಡಾತ ಹೇಗೆ ತಾನೆ ಸಾಮೋಪಾಯ ತಂತ್ರಗಳಿಗೆ ಒಪ್ಪುತ್ತಾನೆ? ರಾಜತಂತ್ರ ಕೌಶಲವನ್ನು ಅನುಸರಿಸುವಾತ ಹೇಗೆ ತಾನೆ ಜೈನ ಆಗಬಲ್ಲ? ಎಂಬುವು ಅವರ ಅನುಮಾನಗಳು. ಈ ಹಿಂಜರಿಕೆ ಹಾಗೂ ವಾದ ತೀರ ದುರ್ಬಲ. ವೈದಿಕ ಧರ್ಮ ತಾನೆ ಇಂಥ ತಂತ್ರಕ್ಕೆ ಸಮ್ಮತಿಸಿದೆಯೆ ? ಮೋಸ ವಂಚನೆಯನ್ನು ಯಾವ ಧರ್ಮವೂ ಮಾನ್ಯ ಮಾಡದು. ವೀರಶೈವ ಧರ್ಮದಲ್ಲೂ ಕಳಬೇಡ– ಇತ್ಯಾದಿ ಇದೆ.

ಹಿಂದೆ ಆಗಿ ಹೋದ ದೊಡ್ಡ ದೊರೆಗಳು ಸಾಮಂತರು ಪ್ರಧಾನಿಗಳು ಮುಂತಾದವರು ಜೈನಬೌದ್ಧ ವೈದಿಕ – ಹೀಗೆ ಒಂದಿಲ್ಲೊಂದು ಧರ್ಮೀಯರು. ಅವರು ಘೋರ ಯುದ್ಧಗಳನ್ನು ಮಾಡಿದರು. ದಾಳಿ ಪ್ರತಿದಾಳಿಯೆಸಗಿದರು. ಅವರು ಹಿಂದೂಗಳು ಇಲ್ಲವೇ ಬೌದ್ಧರಾಗಿದ್ದರೂ ಏನೊಂದೂ ಹೇಳಿಲ್ಲ. ಹೀಗಿರುವಾಗ ಚಾಣಕ್ಯನ ರಾಜ ತಂತ್ರ, ಆತನು ಜೈನನಾಗಿರುವುದಕ್ಕೆ ಅಡ್ಡಿಯಾಗವು. ಹಲವು ವಾದಗಳ ಅಡ್ಡಿಯನ್ನೊಡ್ಡಿ ಚಾರಿತ್ರಿಕ ಸತ್ಯ ಸಂಗತಿಗೆ ಜಾತಿಯ ತೆರೆಯೆಳೆಯುವ ವಸ್ತುಸ್ಥಿತಿಯನ್ನು ಯಥಾವತ್ತಾಗಿ ಪರಿಭಾವಿಸುವ ಪರಿಶೀಲಿಸುವ ಅಗತ್ಯವಿದೆ.

ಸಾರಾಂಶ : 1. ಆ ಕಾಲದಲ್ಲಿ ಜೈನ ಬ್ರಾಹ್ಮಣರು ಇದ್ದರೆಂಬುದು ಗಣನೀಯ ಆಧಾರ. ಮಹಾವೀರರ ಗಣಧರರು ಮೊದಲು ಬ್ರಾಹ್ಮಣರಾಗಿದ್ದರು. ಭದ್ರಬಾಹು ಭಟಾರರು ಕೂಡ ಬ್ರಾಹ್ಮಣ ತಾಯಿ ತಂದೆಯರ ಮಗ.

2. ಚಾಣಕ್ಯನ ತಂದೆಯ ಮನೆಯ ಹೆಸರನ್ನು 'ಸಯ್ಯಾತರ' ಎಂದು ಕರೆದಿದೆ.

3. ಚಾಣಕ್ಯನನ್ನು 'ಸಂಘ' ದ ಸಂರಕ್ಷಕನೆನ್ನಲಾಗಿದೆ.

4. ಚಾಣಕ್ಯ ಜೈನ ಧರ್ಮದಲ್ಲಿ ನಿರೂಪಿಸಲಾದ ಇಂಗಿನೀಮರಣ ಪಡೆದ ನೆಂದು ತಿಳಿದು ಬರುತ್ತದೆ.

5. ಚಾಣಕ್ಯನ (ಚಾಣಾಕ್ಯ) ತಂದೆ ತಾಯಿ ಮತ್ತು ಹುಟ್ಟಿದ ಸ್ಥಳದ ಹೆಸರುಗಳಲ್ಲಿ ವ್ಯತ್ಯಾಸಗಳಿವೆ.

6. ಚಾಣಕ್ಯನ ಹಲ್ಲಿನ ಬಗ್ಗೆ ಒಂದಿಲ್ಲೊಂದು ಬಗೆಯ ಪ್ರಸ್ತಾಪ ಹೆಚ್ಚಿನ ಕಥೆಗಳಲ್ಲಿದೆ.

7. ಚಾಣಕ್ಯ ಬಾಲ್ಯದಿಂದಲೂ ಬುದ್ಧಿವಂತನೆಂಬ ಅಂಶ ಎಲ್ಲ ಕಥೆಗಳಲ್ಲೂ ವ್ಯಕ್ತವಾಗಿದೆ.

8. ಚಂದ್ರಗುಪ್ತ, ಬಿಂದುಸಾರ, ಮಗಧರಾಜ್ಯ, ಪಾಟಲೀಪುತ್ರ, ನಂದ ವಂಶ, ಮಹಾಪದ್ಮ – ಹೀಗೆ ಅನೇಕ ಚಾರಿತ್ರಿಕ ಸಂಗತಿಗಳಿವೆ, ಚಾಣಕ್ಯನನ್ನೂ ಸೇರಿಸಿಕೊಂಡು. ಹೀಗಿರುವಾಗ ಚರಿತ್ರೆಯ ಸತ್ಯವನ್ನು ವಿಪರೀತಗೊಳಿಸಿ ಅಜೈನ ಚಾಣಕ್ಯನನ್ನು ಜೈನ ಚಾಣಕ್ಯ ಮಾಡುವುದು ಬಹುಶಃ ಅಸಂಭವನೀಯ, ಅದೂ ಕ್ರಿ. ಶ. 4–5 ನೆಯ ಶತಮಾನದ ವೇಳೆಗೆ.

9. ಚಾಣಕ್ಯನ ಬದುಕಿನ ಬಗ್ಗೆ ಜೈನ ವಾಙ್ಮಯದಲ್ಲೇ ಇಷ್ಟು ವಿಸ್ತಾರ ವಾದ ವಿವರ ಸಿಗುವುದು.

10. ಅಂತೂ ಈ ಕಥೆ ಅನೇಕ ನಿಟ್ಟಿನಿಂದ ಅಭ್ಯಾಸ ಯೋಗ್ಯವಾಗಿದೆ.

ಆಧಾರ ಗ್ರಂಥಗಳು :

Muni Mahendra Kumar 'Pratham' :
"Canakya — was he a Jaina ?" (Jain Journal VIII–3)
ಅರ್ಥಶಾಸ್ತ್ರ — ಚಾಣಕ್ಯ
ಆವಶ್ಯಕ ಚೂರ್ಣಿ
ಆವಶ್ಯಕ ಮಲಯಗಿರಿ ವೃತ್ತಿ
ಉಪದೇಶಪದ — ಆಚಾರ್ಯ ಹರಿಭದ್ರಸೂರಿ, 8 ನೇ ಶತಮಾನ

ಪರಿಶಿಷ್ಟ ಪರ್ವನ್ — ಆಚಾರ್ಯ ಹೇಮಚಂದ್ರ
ಬೃಹತ್ ಕಥಾ ಕೋಶ — ಹರೀಷೇಣ, ಸಂ : ಡಾ॥ ಆ. ನೇ. ಉಪಾಧ್ಯ
ಭಗವತೀ ಆರಾಧನಾ
ಭಟ್ಟ ಪ ಇಣ್ಣಾ (— = ಪ್ರಕೀರ್ಣಕಾ)
ಮರಣ ವಿಹಿ ಪ ಇಣ್ಣಾ (ಮರಣ ಸಮಾಹಿ)
ವಿಶೇಷಾವಶ್ಯಕವಾಶ್ಯ (ಭಾಷ್ಯ) —ಜಿನಭದ್ರ, 6ನೆಯ ಶತಮಾನ
ಸಂತಾ (ಠಾ) ರಗ ಪಇಣ್ಣಾ — ಇಂಗ್ಲಿಷ್ ಅನು : Erther A. Solomon Gujarat Vidyasabha, 1966
ವಡ್ಡಾರಾಧನೆ :– ಸಂ : ಡಾ॥ ದೊ. ಲ. ನರಸಿಂಹಾಚಾರ್
ವಡ್ಡಾರಾಧನೆ : ಹಂಪ, ನಾಗರಾಜಯ್ಯ

ಕವಿತೆ

ಎಂ. ಎನ್. ಜೈಪ್ರಕಾಶ್

ವಾಸ್ತವಕೆ ಇಷ್ಟಗಲ ತೆರೆದ ಪ್ರಜ್ಞೆಯು ಕೋಶಕ್ಕೆ
ಎತ್ತನಿಂದಲೋ ಹತ್ತಾರು ಬಸಿಯುರುವ
ಚಿಂತನೆಯು ಕಿಡಿಕಿಡಿ ಧಾತು ಸಲ್ರಸೆ
ಹನಿಹನಿಯಾಗಿ ತೊಟ್ಟಿಕ್ಕುತ್ತದೆ.

ತೊಟತೊಟತೊಟ ತೊಟ್ಟಿಕ್ಕಿದ್ದು ಫಕ್ಕನೆ ಗೊತ್ತಾಗೊಲ್ಲ
ದಿನಮಾನ ಹರಿದಂತೆ ಹರಿದಂತೆ
ಋತುಚಕ್ರ ಸರಿದಂತೆ ಸರಿದಂತೆ
ಒಳಗೊಳಗೆ ಏನೇನೋ ಹರಿದಾಡಿ
ದಂತೆಲ್ಲ ಕೊರಳುಬ್ಬಿ ಬರುತ್ತದೆ.

ಗಂಟಲತನಕವೂಬಂದು ಮತ್ತಲ್ಲಿ ಎಲ್ಲೋ ಬತ್ತಿ
ದಂತಾಗಿ ಹಿಂತಿರುಗಿ ಪುನಃ
ವಿಚಿತ್ರ ಸಂಕಟದ ತಹತಹಕೆ ಪ್ರಾರಂಭ
ಕೂತಲ್ಲಿ ಎದ್ದಲ್ಲಿ ನಿಂತಲ್ಲಿ ಅಸ್ವಾಸ್ಥ್ಯ
ನೀರಡಿಕೆ ನೋವು ಬಯಕೆ ಒಟ್ಟಾಗಿ
ಭಗಭಗಾ ದಹದಹಿಸುತ್ತದೆ. ಭಗಭಗಾ

ತಾಳಲಾಗದೆ ಕೊನೆಗೊಮ್ಮೆ ಬೆಸಲಾದ ಬಯಕೆ ಬಾಯ್ದೆರೆದು
ಜೀವ ಎರಡಾಗುತ್ತದೆ :
ಅಂತೂ ಮೈ ಮನಕೆ ಹಗುರಾಗಿ
ಅಕ್ಷರಕ್ಷರವಾಗಿ ಅಕ್ಷರ ಪದ
ಪದವಾಗಿ ಪದ ಸಾಲುಸಾಲಾಗಿ
ಅಂಬೆಗಾಲಿಡುತ್ತದೆ ಹೊಸ್ತಿಲ ಹೊರಗೆ !

ಭಾರತದ ಸಮತಾ ಸಮಾಜ ಮತ್ತು ಗರಿಷ್ಠ ಮಿತಿಗಳು

ಟಿ. ಎನ್. ವಿಜಯಪ್ಪ

ಲೋಕಸಭೆಗೆ 1971ರಲ್ಲಿ ನಡೆದ ಮಧ್ಯಕಾಲಿಕ ಚುನಾವಣೆಯಾದ ಮೇಲೆ ಮತ್ತು 1972ರಲ್ಲಿ ರಾಜ್ಯ ಶಾಸನ ಸಭೆಗಳಿಗೆ ಜರುಗಿದ ಸಾರ್ವತ್ರಿಕ ಚುನಾವಣೆಗಳ ಅನಂತರ, ಭಾರತದ ಜನಜೀವನದ ಆರ್ಥಿಕ, ರಾಜಕೀಯ ಹಾಗು ಸಾಮಾಜಿಕ ಅಂಶಗಳಲ್ಲಿ ಮಹತ್ತರ ಮಾರ್ಪಾಟುಗಳಾಗುವ ಸೂಚನೆಗಳು ಕಂಡು ಬಂದವು. ಆರ್ಥಿಕ ಅಂಶಕ್ಕೆ ಸಂಬಂಧಿಸಿದಂತೆ ದೇಶಾದ್ಯಂತ ಆಗ ಕೇಳಿಬಂದ ಕೂಗು ವ್ಯಕ್ತಿಯ ಭೂಹಿಡುವಳಿ, ಆಸ್ತಿ ಮತ್ತು ವರಮಾನದ ಹಕ್ಕುಗಳನ್ನು, ಸಮತಾ ಸಮಾಜದ ಸ್ಥಾಪನೆಗೆ ಪೂರಕವಾಗಿ ಮಾರ್ಪಾಟು ಮಾಡುವುದೇ ಆಗಿತ್ತು. ಆದರೆ ಇದು ಕೇವಲ ಆರ್ಥಿಕ ಅಂಶವಾಗಿರುವುದು ಮಾತ್ರವಲ್ಲದೆ, ಗುರುತರವಾದ ರಾಜಕೀಯ ಹಾಗು ಸಾಮಾಜಿಕ ಮಾರ್ಪಾಟುಗಳಿಗೆ ಎಡೆಮಾಡಿಕೊಡುವ ಶಕ್ತಿಯನ್ನು ಹೊಂದಿದೆ. ಮೇಲಾಗಿ ಈ ದಿಶೆಯಲ್ಲಿ ಸರಕಾರವು ಕೈಗೊಳ್ಳುವ ನಾನಾ ಕ್ರಮಗಳು, ಭಾರತದ ಪ್ರತಿಯೊಬ್ಬ ನಾಗರಿಕನ ನಿತ್ಯಜೀವನದ ಮೇಲೆ ಒಂದಲ್ಲೊಂದು ರೀತಿಯಲ್ಲಿ ಪ್ರಭಾವವನ್ನು ಬೀರತಕ್ಕವುಗಳಾಗಿವೆ. ಜನತೆಯ ಈ ಆಶೋತ್ತರಗಳು ಸರಕಾರದ ಕ್ರಮಗಳಿಂದಾಗಿ ಎಷ್ಟು ಈಡೇರಿವೆ? ಈ ಎಲ್ಲ ಅಂಶಗಳ ಬಗ್ಗೆ ವಿವರವಾಗಿ ಅರಿತುಕೊಳ್ಳುವ ಯತ್ನ ಆಗಬೇಕಾಗಿದೆ.

ತಾತ್ತ್ವಿಕ ಅಂಶ

ಭೂಹಿಡುವಳಿ, ಆಸ್ತಿ, ವರಮಾನ ಮೊದಲಾದವುಗಳ ಮೇಲೆ ಗರಿಷ್ಠ ಮಿತಿಯನ್ನು ಗೊತ್ತುಮಾಡಬೇಕು ಎಂಬ ವಾದಕ್ಕೆ ಆಧಾರವಾದ ತಾತ್ತ್ವಿಕ ಅಂಶವನ್ನು ಮೊದಲು ಪರಿಶೀಲಿಸೋಣ. ಸಂಪತ್ತು ವರಮಾನ, ಅವಕಾಶ ಮೊದಲಾದವುಗಳಲ್ಲಿನ ಅಸಮಾನತೆಗಳನ್ನು ಹೋಗಲಾಡಿಸಿ, ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸಿ ಸಮತಾ ಸಮಾಜವನ್ನು ಸ್ಥಾಪಿಸಬೇಕೆನ್ನುವ ಗುರಿಯು ಈ ತಾತ್ತ್ವಿಕ ಅಂಶಕ್ಕೆ ಮೂಲಾಧಾರವಾಗಿದೆ. ಮುಖ್ಯವಾಗಿ ಬಂಡವಾಳ ಪ್ರಭುತ್ವ ಮತ್ತು ಸಮತಾ ಸಮಾಜವಾದಿ ಪದ್ಧತಿಗಳಲ್ಲಿನ ಅಂತರಗಳೇ ಈ ತಾತ್ತ್ವಿಕ ಅಂಶದ ಭದ್ರಬುನಾದಿಗಳಾಗಿವೆ ಎನ್ನಬಹುದು.

ಬಂಡವಾಳ ಪ್ರಭುತ್ವ ಉಳ್ಳ ಸಮಾಜದಲ್ಲಿ ವ್ಯಕ್ತಿಯು ಆರ್ಥಿಕ ಚಟುವಟಿಕೆಗಳ ಮೇಲೆ ಹತೋಟಿಗಳು ಅಷ್ಟಾಗಿ ಇರುವುದಿಲ್ಲ. ಆಸ್ತಿಪಾಸ್ತಿಗಳನ್ನು ಮಾಡುವುದು

ವರಮಾನ ಗಳಿಕೆ ಮೊದಲಾದವುಗಳಿಗೆ ಯಾವ ಇತಿಮಿತಿಯೂ ಇರುವುದಿಲ್ಲ. ಇಂತಹ ಅರ್ಥವ್ಯವಸ್ಥೆಯು ಮುಖ್ಯವಾಗಿ ಸ್ಪರ್ಧೆ, ಹಣದ ಮೂಲಕ ವಿನಿಮಯ ಮತ್ತು ಮಾರುಕಟ್ಟೆಗಳ ಮೇಲೆ ಆಧಾರಿತವಾಗಿರುತ್ತದೆ. ಹಣವನ್ನು ಗಳಿಸಬೇಕೆಂಬ ಅಂಶವು ಎಲ್ಲ ಆರ್ಥಿಕ ಚಟುವಟಿಕೆಗಳನ್ನೂ ನಿರ್ದೇಶಿಸುತ್ತಿರುತ್ತದೆ. ಅಲ್ಲದೆ ಸಾಧನಸಂಪತ್ತುಗಳ ಒಡೆತನ ಖಾಸಗಿ ವ್ಯಕ್ತಿಗಳ ಕೈಯಲ್ಲಿರುತ್ತದೆ. ಕೇವಲ ಲಾಭವನ್ನು ಗಳಿಸಬೇಕೆಂಬ ಉದ್ದೇಶವು ಅವುಗಳ ಬಳಕೆಯನ್ನು ನಿರ್ಧರಿಸುತ್ತದೆ. ಇಂತಹ ಅರ್ಥವ್ಯವಸ್ಥೆಯಲ್ಲಿ ಸಂಪೂರ್ಣ ಹತೋಟಿಗೊಳಪಡಿಸಿದ ಆರ್ಥಿಕ ಯೋಜನೆಗೆ ಯಾವ ಸ್ಥಾನವೂ ಇರುವುದಿಲ್ಲ. ಆದ್ದರಿಂದ ಬಂಡವಾಳ ಪ್ರಭುತ್ವ ಪದ್ಧತಿಯನ್ನು ಅನುಸರಿಸುತ್ತಿರುವ ನಾಡಿನಲ್ಲಿ ಸಂಪತ್ತು, ವರಮಾನ ಮತ್ತು ಅವಕಾಶಗಳ ಹಂಚಿಕೆಯಲ್ಲಿ ಹೆಚ್ಚಿನ ಅಸಮಾನತೆಗಳನ್ನು ನಾವು ಕಾಣಬಹುದು.

ಬಂಡವಾಳ ಪ್ರಭುತ್ವ ಪದ್ಧತಿಗೆ ತದ್ವಿರುದ್ಧವಾದ ಲಕ್ಷಣಗಳನ್ನು ಸಮತಾ ಸಮಾಜವಾದಿ ಪದ್ಧತಿಯು ಹೊಂದಿರುತ್ತದೆ. ಸಮತಾ ಸಮಾಜದಲ್ಲಿ ಮುಖ್ಯ ಆರ್ಥಿಕ ಚಟುವಟಿಕೆಗಳಾದ ಉತ್ಪಾದನೆ, ವಿನಿಮಯ, ಮೌಲ್ಯ ನಿರ್ಧಾರ, ವಿತರಣೆ, ಅನುಭೋಗ ಮೊದಲಾದವುಗಳನ್ನು ಸಂಪೂರ್ಣ ಹತೋಟಿಗೆ ಒಳಪಡಿಸಲಾಗಿರುತ್ತದೆ. ಅರ್ಥ ವ್ಯವಸ್ಥೆಯ ಎಲ್ಲ ಕ್ಷೇತ್ರಗಳಲ್ಲಿಯೂ ಸಾರ್ವಜನಿಕ ಕ್ಷೇತ್ರದ ಪ್ರಭಾವ ಅಧಿಕವಾಗಿದ್ದು, ಖಾಸಗಿ ವಲಯದ ಕಾರ್ಯ ಚಟುವಟಿಕೆಗಳು ನಿಕೃಷ್ಟವಾಗಿರುತ್ತವೆ. ಈ ರೀತಿಯ ಸಮಾಜದಲ್ಲಿ ಒಬ್ಬ ವ್ಯಕ್ತಿಯು ಶೇಖರಿಸುವ ಸಂಪತ್ತು ಮತ್ತು ಗಳಿಸುವ ವರಮಾನಗಳ ಮೇಲೆ ಗೊತ್ತಾದ ಮಿತಿಯಿರುತ್ತದೆ. ಒಟ್ಟಿನಲ್ಲಿ ಇಂತಹ ಅರ್ಥವ್ಯವಸ್ಥೆಯಲ್ಲಿ ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರ ರಾಷ್ಟ್ರದ ಒಟ್ಟು ಉತ್ಪಾದನೆಗೆ ಕೊಡುಗೆಯನ್ನು ಸಲ್ಲಿಸಿ, ಅದರಿಂದ ತನ್ನ ಅಗತ್ಯಗಳಿಗೆ ತಕ್ಕಂತೆ ಪಡೆಯಬೇಕು. ರಾಷ್ಟ್ರದ ಎಲ್ಲ ಸಾಧನ ಸಂಪತ್ತುಗಳ ಯಾಜಮಾನ್ಯ ಸರಕಾರದ ಕೈಯಲ್ಲಿರುತ್ತದೆ. ಅವುಗಳ ಉಪಯೋಗ ಸರಕಾರದ ನಿರ್ದೇಶನಕ್ಕೆ ಒಳಪಟ್ಟಿರುತ್ತದೆ. ಹೀಗೆ ಅವುಗಳನ್ನು ನಾನಾ ಉತ್ಪಾದನಾ ಕಾರ್ಯಗಳಲ್ಲಿ ಬಳಸುವಾಗ, ವೈಯಕ್ತಿಕ ವಾಗಿ ಲಾಭವನ್ನು ಗಳಿಸಿ ಸಂಪತ್ತನ್ನು ವೃದ್ಧಿಗೊಳಿಸಬೇಕೆನ್ನುವ ದೃಷ್ಟಿಯಿರುವು ದಿಲ್ಲ. ಎಲ್ಲ ಸಾಧನ ಸಂಪತ್ತುಗಳು ಒಂದು ಕೇಂದ್ರ ನಿರ್ದೇಶಿತ ಯೋಜನೆಯಂತೆ, ವಿವಿಧ ಉತ್ಪಾದನಾ ಕಾರ್ಯಗಳಲ್ಲಿ ವಿನಿಯೋಗವಾಗುತ್ತವೆ. ಅಂದರೆ ಜನರ ಎಲ್ಲ ಆರ್ಥಿಕ ಚಟುವಟಿಕೆಗಳನ್ನು ಒಂದು ಸುವ್ಯವಸ್ಥಿತ ಆರ್ಥಿಕ ಯೋಜನೆಗೆ ಒಳಪಡಿಸಿರುವುದು ಸಮತಾ ಸಮಾಜವಾದಿ ಪದ್ಧತಿಯ ಅತಿ ಮುಖ್ಯ ಲಕ್ಷಣ ವಾಗಿರುತ್ತದೆ. ಆದ್ದರಿಂದ ಇಂತಹ ಸಮಾಜದಲ್ಲಿ ಸಂಪತ್ತು, ವರಮಾನ ಮತ್ತು ಅವಕಾಶಗಳ ಹಂಚಿಕೆಯಲ್ಲಿ ಅಸಮಾನತೆಗಳು ಅತ್ಯಲ್ಪವಾಗಿರುತ್ತವೆ ಎಂದು ಹೇಳುತ್ತಾರೆ.

ಈ ತಾತ್ತ್ವಿಕ ಅಂಶದ ಆಧಾರದ ಮೇಲೆ ಭಾರತದಲ್ಲಿಯೂ ಸಹ ಅಸಮಾನತೆಗಳನ್ನು ತೊಡೆದುಹಾಕಿ, ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸಿ, ಸಮತಾ ಸಮಾಜವನ್ನು ಸ್ಥಾಪಿಸಬೇಕೆನ್ನುವ ಗುರಿಯನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳು ಹೊಂದಿವೆ. ನಮ್ಮ ಜನರಿಗೆ ಈ ಗುರಿಯ ಪರಿಚಯ ಸಾಕಷ್ಟು ಇದೆ. ಏಕೆಂದರೆ ಭಾರತದಲ್ಲಿ 1951ರಿಂದ ಯೋಜನಾ ಯುಗವು ಆರಂಭವಾದಾಗಿನಿಂದಲೂ, ಸರಕಾರಗಳು ಈ ಗುರಿಯನ್ನು ಸಾಧಿಸಬೇಕೆಂದು ಮೇಲಿಂದಮೇಲೆ ಪಣತೊಟ್ಟಿವೆ. ಆದರೆ 1972ರ ಸಾರ್ವತ್ರಿಕ ಚುನಾವಣೆಗಳ ಅನಂತರ ಈ ಗುರಿಯ ಸಾಧನೆಗೆ ಹೆಚ್ಚಿನ ಮಹತ್ವವನ್ನು ತೋರಿಸಲಾಯಿತು. ಈ ಚುನಾವಣಾ ಘೋಷಣೆಗಳಲ್ಲೊಂದಾದ "ಗರೀಬಿ ಹಟಾವೊ" ವನ್ನು ಕಾರ್ಯರಂಗಕ್ಕಿಳಿಸುವ ಸಲುವಾಗಿ ಆಸ್ತಿ, ಆದಾಯಗಳ ಮೇಲಿನ ಗರಿಷ್ಠ ಮಿತಿಗಳನ್ನು ಸರಕಾರಗಳು ಆಲೋಚಿಸತೊಡಗಿದವು. ಈ ದಿಶೆಯಲ್ಲಿ ಸರಕಾರಗಳು ಕೈಗೊಳ್ಳುವ ಕ್ರಮಗಳು ಅಸಮಾನತೆಗಳನ್ನು ಕಡಿಮೆಮಾಡಿ, ಸಾಮಾಜಿಕ ನ್ಯಾಯವನ್ನು ದೊರಕಿಸಿ, ಸಮತಾ ಸಮಾಜದತ್ತ ರಾಷ್ಟ್ರವನ್ನು ಕೊಂಡೊಯ್ಯುತ್ತವೆ ಎಂದು ದೃಢವಾಗಿ ನಂಬಲಾಯಿತು. ಆದ್ದರಿಂದ ಈ ಗರಿಷ್ಠ ಮಿತಿಗಳ ಆಗು ಹೋಗುಗಳನ್ನು ವಿವರವಾಗಿ ವಿವೇಚಿಸುವುದು ಅತ್ಯವಶ್ಯಕ.

ವಿವಿಧ ರೀತಿಯ ಗರಿಷ್ಠ ಮಿತಿಗಳು

ನಮ್ಮ ನಾಡಿನ ಸರಕಾರಗಳು ವಿಧಿಸಬೇಕೆಂದಿರುವ ಗರಿಷ್ಠ ಮಿತಿಗಳು ಕೇವಲ ಒಂದು ಅಂಶಕ್ಕೆ ಮಾತ್ರ ಸೀಮಿತವಾಗಿಲ್ಲ. ಇಂತಹ ಮಿತಿಗಳನ್ನು ಮುಖ್ಯವಾಗಿ ಭೂಹಿಡುವಳಿಗಳು, ನಗರ ಪ್ರದೇಶದ ಆಸ್ತಿಗಳು ಮತ್ತು ಆದಾಯಗಳ ಮೇಲೆ ವಿಧಿಸಬೇಕೆಂದು ಯೋಚಿಸಲಾಗುತ್ತಿದೆ. ಇವುಗಳಲ್ಲದೆ, ವಕೀಲರು, ವೈದ್ಯರು ಮುಂತಾದ ವಿಶಿಷ್ಟ ಸೇವಾವೃತ್ತಿಗಳಲ್ಲಿ ಅವರು ಸ್ವೀಕರಿಸುವ ಸಂಭಾವನೆಗಳ ಮೇಲೆ ಗರಿಷ್ಠ ಮಿತಿಯನ್ನು ವಿಧಿಸಬೇಕೆಂಬ ಸಲಹೆಗಳನ್ನೂ ಮಾಡಲಾಗಿದೆ.

ಗರಿಷ್ಠ ಮಿತಿಗಳ ವಿವಿಧ ರೀತಿಯವುಗಳಲ್ಲಿ ಬಹಳ ಮುಖ್ಯವಾದದ್ದು ಹಾಗು ತುಂಬ ಚರ್ಚೆಗೆ ಒಳಪಟ್ಟಿರುವ ವಿಷಯವೆಂದರೆ, ಭೂಹಿಡುವಳಿಗಳ ಮೇಲಿನ ಮಿತಿ. ಒಬ್ಬನು ಬೇಸಾಯವನ್ನು ಮಾಡುತ್ತಿರುವ ಭೂಮಿಯ ಪ್ರಮಾಣದ ಮೇಲೆ ಗರಿಷ್ಠ ಮಿತಿಯನ್ನು ಹೊರಿಸುವುದೇ ಈ ವಿಷಯದ ಮುಖ್ಯ ತಿರುಳಾಗಿದೆ. ಇಂತಹ ಮಿತಿಯನ್ನು ನಿರ್ಧರಿಸುವ ಮತ್ತು ವಿಧಿಸಿ ಆಚರಣೆಗೆ ತರುವ ಅಧಿಕಾರ ಮತ್ತು ಜವಾಬ್ದಾರಿಗಳನ್ನು ರಾಜ್ಯ ಸರಕಾರಗಳಿಗೆ ವಹಿಸಿಕೊಡಲಾಗಿದೆ. ಈ ವಿಷಯದಲ್ಲಿ ಕೇವಲ ಸ್ಥೂಲ ನಿರ್ದೇಶನವನ್ನು ಕೊಡುವ ಜವಾಬ್ದಾರಿಯನ್ನು ಮಾತ್ರ ಕೇಂದ್ರ ಸರಕಾರವು ಹೊಂದಿದೆ. ಇದರ ಫಲವಾಗಿ, ಭೂಹಿಡುವಳಿಗಳ ಮೇಲೆ ಸರಕಾರಗಳು

ವಿಧಿಸಬೇಕೆಂದಿರುವ ಗರಿಷ್ಠ ಮಿತಿಯ ಪ್ರಮಾಣಗಳಲ್ಲಿ ಒಂದು ರಾಜ್ಯದಿಂದ ಮತ್ತೊಂದಕ್ಕೆ ಸಾಕಷ್ಟು ವ್ಯತ್ಯಾಸಗಳನ್ನು ಕಾಣಬಹುದು. ಹಾಗೆಯೇ ಬೇಸಾಯವನ್ನು ಮಾಡುತ್ತಿರುವ ಭೂಮಿಯ ಗುಣದ ಆಧಾರದ ಮೇಲೆ, ಭೂಹಿಡುವಳಿಗಳ ಮೇಲಿನ ಗರಿಷ್ಠ ಮಿತಿಯು ವ್ಯತ್ಯಾಸವಾಗುತ್ತದೆ. ಇವಲ್ಲದೆ, ಕೆಲವು ರೀತಿಯ ವಿಶಿಷ್ಟ ತೋಟಗಳಿಗೆ ಗರಿಷ್ಠ ಮಿತಿಯನ್ನು ಅನ್ವಯಿಸದೆ ರಿಯಾಯಿತಿಗಳನ್ನೂ ತೋರಿಸಲಾಗಿದೆ. ಒಟ್ಟಿನಲ್ಲಿ ಐದು ಸದಸ್ಯರಿಂದ ಕೂಡಿರುವ ಒಂದು ಕುಟುಂಬವು ಸುಮಾರು 25 ರಿಂದ 100 ಎಕರೆ ಸಾಗುವಳಿ ಮಾಡಿರುವ ಜಮೀನನ್ನು ಹೊಂದಿರುವ ಸಾಧ್ಯತೆಯನ್ನು, ರಾಜ್ಯ ಸರಕಾರಗಳು ಕೈಗೊಳ್ಳಬೇಕೆಂದಿರುವ ಕ್ರಮಗಳು ಅವಕಾಶ ಮಾಡಿಕೊಟ್ಟಿವೆ. ಹೀಗಾಗಿ, ಗರಿಷ್ಠ ಮಿತಿಯನ್ನು ವಿಧಿಸಿದ ಮೇಲೆ ಸರಕಾರಗಳಿಗೆ ಪುನರ್‌ಹಂಚಿಕೆಗೆ ಸಿಕ್ಕುವ ಸಾಗುವಳಿ ಮಾಡಿದ ಜಮೀನಿನ ಒಟ್ಟು ಪ್ರಮಾಣ ತುಂಬ ಅತ್ಯಲ್ಪವಾಗಿದೆ ಎಂದು ಹೇಳುತ್ತಾರೆ. ಈ ಅಂಶ ಬಹುಮಟ್ಟಿಗೆ ನಿಜ. ಏಕೆಂದರೆ, ಗರಿಷ್ಠ ಮಿತಿಯನ್ನು ವಿಧಿಸಿದ ಮೇಲೆ ಪುನರ್‌ಹಂಚಿಕೆಗೆ ಸಿಗುವ ಒಟ್ಟು ಜಮೀನಿನ ಪ್ರಮಾಣ, ಇಡೀ ಭಾರತದಲ್ಲಿ 35 ಲಕ್ಷ ಎಕರೆಗಳು ಮತ್ತು ಕರ್ನಾಟಕ ರಾಜ್ಯದಲ್ಲಿ 4 ಲಕ್ಷ ಎಕರೆಗಳು ಎಂದು ಅಂದಾಜು ಮಾಡಲಾಗಿದೆ. ಆದರೆ ಭೂರಹಿತ ಕೃಷಿ ಕೆಲಸಗಾರರು ಮತ್ತು ಗೇಣಿದಾರರು ಇಡೀ ಭಾರತದಲ್ಲಿ 3 ಕೋಟಿಗಿಂತ ಮತ್ತು ಕರ್ನಾಟಕ ರಾಜ್ಯದಲ್ಲಿ 25 ಲಕ್ಷಕ್ಕಿಂತ ಹೆಚ್ಚಾಗಿದ್ದಾರೆ. ಇದೇ ಈ ರೀತಿಯ ಗರಿಷ್ಠ ಮಿತಿಯ ಮುಖ್ಯ ಸಮಸ್ಯೆಯಾಗಿದೆ.

ಒಬ್ಬನು ಹೊಂದಿರುವ ನಗರ ಪ್ರದೇಶದ ಆಸ್ತಿಗಳ, ಮುಖ್ಯವಾಗಿ ಮನೆ, ನಿವೇಶನ ಮೊದಲಾದವುಗಳ ಮೇಲೆ ಗರಿಷ್ಠ ಮಿತಿಯನ್ನು ಹೇರಿಸುವ ವಿಷಯ, ಇತ್ತೀಚೆಗೆ ನಮ್ಮ ಸರಕಾರಗಳ ಆಸಕ್ತಿಯನ್ನು ತುಂಬ ಕೆರಳಿಸಿವೆ. ಈ ವಿಷಯದಲ್ಲೂ ಸಹ ಅಭಿಪ್ರಾಯ ಭೇದ ಮತ್ತು ಆಚರಣೆಯಲ್ಲಿ ತರುವ ಅಂಶಗಳಲ್ಲಿ ವ್ಯತ್ಯಾಸಗಳನ್ನು ಕಾಣಬಹುದು. ಈ ಗರಿಷ್ಠ ಮಿತಿಯ ಪ್ರಮಾಣ ಸುಮಾರು ೨ ರಿಂದ ೧೦ ಲಕ್ಷ ರೂಪಾಯಿಗಳಷ್ಟು ಇರಬೇಕೆಂದು ನಾನಾ ರಾಜ್ಯ ಸರಕಾರಗಳ ಅಭಿಪ್ರಾಯವಾಗಿದೆ. ಆದರೆ ಈ ದಿಶೆಯಲ್ಲಿ ಒಂದೆರಡು ರಾಜ್ಯ ಸರಕಾರಗಳನ್ನು ಬಿಟ್ಟರೆ ಇತರ ರಾಜ್ಯ ಸರಕಾರಗಳು ಕೈಗೊಳ್ಳಬೇಕೆಂದಿರುವ ಕ್ರಮಗಳು ಇನ್ನು ತುಂಬ ಅಸ್ಪಷ್ಟವಾಗಿವೆ. ಅವು ನಿರ್ದಿಷ್ಟ ರೂಪವನ್ನು ತಳೆಯಬೇಕಾದರೆ ಸಾಕಷ್ಟು ಸಮಯ ಬೇಕೆಂದು ಹೇಳಬಹುದು. ಹೀಗಿದ್ದರೂ, ಇಂತಹ ಮಿತಿಯೊಂದನ್ನು ಸರಕಾರವು ವಿಧಿಸಬಹುದೆಂಬ ವಿಷಯವು ಜನರಲ್ಲಿ ಹೆಚ್ಚಿನ ಗಾಬರಿಯನ್ನುಂಟು ಮಾಡಿದೆ.

ವ್ಯಕ್ತಿಗಳು ಗಳಿಸುವ ಆದಾಯಗಳ ಮೇಲೆ ಗರಿಷ್ಠ ಮಿತಿಯನ್ನು ವಿಧಿಸಬೇಕೆಂಬ ವಿಷಯದಲ್ಲೂ ಕೇಂದ್ರ ಸರಕಾರದ ಅಭಿಪ್ರಾಯ ಅಷ್ಟು ಖಚಿತವಾಗಿಲ್ಲ.

ಸಾಮಾಜಿಕ ನ್ಯಾಯವನ್ನು ನೆಲೆಗೊಳಿಸುವ ಸಲುವಾಗಿ ಈ ರೀತಿಯ ಆದಾಯಗಳ ಮೇಲಿನ ಮಿತಿ ಅವಶ್ಯಕವಾಗಬಹುದೇನೋ ಎಂಬುದಾಗಿ ಸರಕಾರವು ಸ್ವಲ್ಪ ಸಮಯದ ಹಿಂದೆ ತನ್ನ ಎಣಿಕೆಯನ್ನು ತಿಳಿಸಿತ್ತು. ಆದರೆ ಇಂತಹ ಮಿತಿಯನ್ನು ಹೊರಿಸುವ ಯಾವ ಯೋಜನೆಯೂ ಕೇಂದ್ರ ಸರಕಾರಕ್ಕಿಲ್ಲ, ಎಂದು ಇತ್ತೀಚೆಗೆ ಹೇಳಲಾಗಿದೆ. ಇದೇ ರೀತಿ ಕೆಲವು ವಿಶಿಷ್ಟ ಸೇವಾವೃತ್ತಿಗಳಲ್ಲಿರುವ ಜನರು ಸ್ವೀಕರಿಸುವ ಸಂಭಾವನೆಗಳ ಮೇಲೆ ಗರಿಷ್ಠ ಮಿತಿಯನ್ನು ವಿಧಿಸಬೇಕೆಂಬುದು, ಕೇವಲ ಕೆಲವರ ಸಲಹೆಯಾಗಿದೆ. ಇದು ಒಂದು ನಿರ್ದಿಷ್ಟ ರೂಪವನ್ನು ತಳೆದು, ಮಹತ್ವದ ವಿಷಯವಾಗಿ ಸರಕಾರದ ಗಮನ ಸೆಳೆಯುವಂತಾಗುವುದು, ಆದಾಯಗಳ ಮೇಲಿನ ಮಿತಿಯ ಬಗ್ಗೆ ಸರಕಾರದ ಈಗಿನ ಧೋರಣೆಯನ್ನು ನೋಡಿದರೆ, ಸದ್ಯಕ್ಕಂತೂ ಅಸಾಧ್ಯವೆಂದು ಕಂಡುಬರುತ್ತದೆ.

ಆರ್ಥಿಕ. ರಾಜಕೀಯ ಮತ್ತು ಸಾಮಾಜಿಕ ಪರಿಣಾಮಗಳು

ಮೇಲೆ ತಿಳಿಸಿದ ನಾನಾ ರೀತಿಯ ಗರಿಷ್ಠ ಮಿತಿಗಳು ತಮ್ಮವೇ ಆದ ಆರ್ಥಿಕ, ರಾಜಕೀಯ ಹಾಗು ಸಾಮಾಜಿಕ ಪರಿಣಾಮಗಳನ್ನು ಉಂಟುಮಾಡಬಲ್ಲ ಶಕ್ತಿಯನ್ನು ಪಡೆದಿವೆ. ಆರ್ಥಿಕವಾಗಿ ಇಂತಹ ಮಿತಿಗಳು ಪ್ರೋತ್ಸಾಹದಾಯಕವಾಗಿರದೆ, ಬಂಡವಾಳ ಸಂಚಯಕ್ಕೆ ಧಕ್ಕೆಯನ್ನುಂಟುಮಾಡುತ್ತವೆ ಎಂದು ಕೆಲವರು ವಾದಿಸುತ್ತಾರೆ. ಅಲ್ಲದೆ ಇವು ಖಾಸಗಿ ಬಂಡವಾಳ ಹೂಡಿಕೆಯನ್ನು ಮತ್ತು ಉದ್ಯೋಗಾವಕಾಶಗಳ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತವೆ ಎಂದೂ ಅವರು ಹೇಳುತ್ತಾರೆ. ಈ ವಾದಸರಣಿಯಲ್ಲಿರುವ ತರ್ಕವನ್ನು ನಾವು ಅಲ್ಲಗಳೆಯಬೇಕಾಗಿಲ್ಲ. ಆದರೆ ಈ ವಾದದ ಮುಖ್ಯತಿರುಳು ಬಂಡವಾಳ ಪ್ರಭುತ್ವ ರೀತಿಯ ಅರ್ಥವ್ಯವಸ್ಥೆಗೆ ಹೆಚ್ಚಾಗಿ ಅನ್ವಯಿಸುತ್ತದೆ ಎಂಬುದನ್ನು ಮಾತ್ರ ಮರೆಯಬಾರದು. ಇದಕ್ಕೆ, ಬಂಡವಾಳ ಪ್ರಭುತ್ವದ ಅಭಿಮಾನಿಗಳು, ಅರ್ಥಶಾಸ್ತ್ರದ ತತ್ವಗಳು ಎಲ್ಲ ರೀತಿಯ ಅರ್ಥವ್ಯವಸ್ಥೆಗಳಿಗೂ ಏಕಪ್ರಕಾರವಾಗಿ ಅನ್ವಯಿಸುತ್ತವೆ ಎಂಬ ವಾದವನ್ನು ಮುಂದೊಡ್ಡುತ್ತಾರೆ. ಆದರೆ ಸಮತಾ ಸಮಾಜ ಸ್ಥಾಪನೆಯಾಗಬೇಕಾದರೆ, ಅರ್ಥಶಾಸ್ತ್ರದ ಮತ್ತು ಬಂಡವಾಳಪ್ರಭುತ್ವದ ಅನೇಕ ತತ್ವಗಳ ಅನ್ವಯದಲ್ಲಿ ಸೂಕ್ತ ಮಾರ್ಪಾಟುಗಳಾಗುವುದು ಅಗತ್ಯ ಹಾಗೂ ಅನಿವಾರ್ಯ. ಸಮತಾ ಸಮಾಜದಲ್ಲಿ ಅಸಮಾನತೆಗಳು ನಿರ್ಮೂಲವಾಗಿ, ಜನರ ಕಲ್ಯಾಣ ಒಂದೇಸಮನಾಗಿ ಹೆಚ್ಚುತ್ತಿದ್ದರೆ, ಆಗ ಅರ್ಥಶಾಸ್ತ್ರದ ತತ್ವಗಳು ಅವಕ್ಕೆ ತಕ್ಕಂತೆ ಹೊಂದಾಣಿಕೆಯನ್ನು ಮಾಡಿಕೊಳ್ಳಬೇಕೇ ವಿನಾ, ಇದಕ್ಕೆ ವಿಪರ್ಯಸ್ತವಾಗಿ ಅಲ್ಲ.

ರಾಜಕೀಯ ಪರಿಣಾಮಗಳಿಗೂ ಮೇಲಿನ ವಾದಸರಣಿ ಬಹುಮಟ್ಟಿಗೆ ಅನ್ವಯಿಸುತ್ತದೆ. ಏಕೆಂದರೆ, ಈ ನಾನಾ ರೀತಿಯ ಗರಿಷ್ಠ ಮಿತಿಗಳು ರಾಜಕೀಯವಾಗಿ

ಅನೇಕ ಮಾರ್ಪಾಟುಗಳಿಗೆ ಎಡೆಮಾಡಿ ಕೊಡುತ್ತವೆ. ಇವುಗಳಲ್ಲಿ ಮುಖ್ಯವಾದವುಗಳು ಯಾವುವೆಂದರೆ, ರಾಜ್ಯಾಂಗದಲ್ಲಿನ ಅಗತ್ಯವಾದ ಸುಧಾರಣೆಗಳು, ಸಾರ್ವಜನಿಕ ಆಡಳಿತದಲ್ಲಿನ ಸೂಕ್ತ ಮಾರ್ಪಾಟುಗಳು, ಮತ್ತು ರಾಷ್ಟ್ರದ ನಾಯಕತ್ವದ ಧ್ಯೇಯ ಮತ್ತು ಧೋರಣೆಯಲ್ಲಿ ಅತ್ಯವಶ್ಯಕವಾದ ಪರಿವರ್ತನೆಗಳು. ಮೊದಲನೆಯದಾಗಿ, ಈ ರೀತಿಯ ಗರಿಷ್ಠ ಮಿತಿಗಳನ್ನು ಅನುಷ್ಠಾನಕ್ಕೆ ತರಬೇಕಾದರೆ, ನಮ್ಮ ರಾಜ್ಯಾಂಗದಲ್ಲಿನ ಪ್ರಜೆಗಳ ಮೂಲಭೂತ ಹಕ್ಕುಗಳಲ್ಲಿ ಕೆಲವನ್ನು ತೀವ್ರವಾಗಿ ಮಾರ್ಪಾಟು ಮಾಡಬೇಕಾಗುತ್ತದೆ. ಇಂತಹ ಆಮೂಲಾಗ್ರವಾದ ಬದಲಾವಣೆಗಳಿಂದ ರಾಜ್ಯಾಂಗವು ತನ್ನ ವಿಶಿಷ್ಟತೆಯನ್ನು ಕಳೆದುಕೊಂಡು, ಸಮಾಜವು ಉಗ್ರಗಾಮಿ ಪ್ರಭುತ್ವಕ್ಕೆ ಒಳಪಡುವುದೆಂಬ ಭೀತಿಯನ್ನು ಅನೇಕರು ವ್ಯಕ್ತಮಾಡಿದ್ದಾರೆ. ಆದರೆ ಸಮತಾ ಸಮಾಜದ ಸ್ಥಾಪನೆಗೆ ಅಗತ್ಯವಾದ ರಾಜ್ಯಾಂಗದ ಸುಧಾರಣೆಗಳಿಗೆ, ಈ ರೀತಿಯ ವಿರೋಧವನ್ನು ವ್ಯಕ್ತಮಾಡಿರುವವರೆಲ್ಲ ಬಂಡವಾಳ ಪ್ರಭುತ್ವದ ಅನುಯಾಯಿಗಳು ಎಂಬುದನ್ನು ಮಾತ್ರ ಮರೆಯಬಾರದು. ಸಮಾಜದ ಒಟ್ಟು ಕಲ್ಯಾಣ ಅಧಿಕಗೊಂಡು ಅದರಿಂದ ದುರ್ಬಲರಿಗೆ ಹೆಚ್ಚು ಪ್ರಯೋಜನವಾಗಬೇಕಾದರೆ ವ್ಯಕ್ತಿಸ್ವಾತಂತ್ರ್ಯವನ್ನು ಮೊಟಕುಗೊಳಿಸುವುದು ಅನಿವಾರ್ಯವಾಗುತ್ತದೆ. ಒಟ್ಟಿನಲ್ಲಿ ವೈಯಕ್ತಿಕ ಮತ್ತು ಸಾಮಾಜಿಕ ಹಿತಾಸಕ್ತಿಗಳ ದ್ವಂದ್ವದಲ್ಲಿ ನಮ್ಮ ಒಲವು ಆಧುನಿಕ ಚಿಂತನದ ಪ್ರಕಾರ, ಕೊನೆಯದಕ್ಕೆ ಹರಿಯಬೇಕೇ ವಿನಾ ಮೊದಲನೆಯದಕ್ಕಲ್ಲ.

ರಾಜಕೀಯ ಪರಿಣಾಮಗಳ ಎರಡನೆಯ ಅಂಶ ಸಾರ್ವಜನಿಕ ಆಡಳಿತದಲ್ಲಿನ ಸೂಕ್ತ ಮಾರ್ಪಾಟುಗಳಿಗೆ ಸಂಬಂಧಿಸಿದೆ. ನಮ್ಮ ನಾಡಿನ ಈಗಿನ ಸಾರ್ವಜನಿಕ ಆಡಳಿತದಲ್ಲಿ ಭ್ರಷ್ಟಾಚಾರ, ಸ್ವಜನಪಕ್ಷಪಾತ ಮತ್ತು ನಿಧಾನ ಪ್ರವೃತ್ತಿಗಳು ಸಾಕಷ್ಟು ತಾಂಡವವಾಡುತ್ತಿವೆ. ಇವುಗಳ ಪರಿಣಾಮವಾಗಿ ಅದಕ್ಷತೆ ಹೆಚ್ಚುತ್ತಿದ್ದು, ಅರ್ಹತೆಗೆ ಬೆಲೆಯಿಲ್ಲದಂತಾಗಿ, ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆ ತೀವ್ರವಾಗಿ ಮಾಯವಾಗುತ್ತಿದೆ. ಕಳೆದ 25 ವರ್ಷಗಳಿಂದ ಅನುಸರಿಸಿಕೊಂಡು ಬಂದ ಪ್ರಜಾಪ್ರಭುತ್ವ ಆಧಾರಿತ ಬಂಡವಾಳಶಾಹಿಪ್ರಭುತ್ವ ಹಾಗು ಮಿಶ್ರ ಆರ್ಥಿಕ ನೀತಿಯ ಫಲ ಇದು ಎಂಬಂತಾಗಿದೆ. ಹೀಗಾಗಿ ಇಂತಹ ಅರ್ಥವ್ಯವಸ್ಥೆಗಳ ತತ್ವಗಳು ಸಮಾಜದ ಕಲ್ಯಾಣವನ್ನು ಗಮನಾರ್ಹವಾಗಿ ವೃದ್ಧಿಗೊಳಿಸಿ, ಅಸಮಾನತೆಗಳನ್ನು ತೊಡೆದು ಹಾಕುತ್ತವೆ ಎಂಬ ವಿಷಯದಲ್ಲಿ ನಮ್ಮ ನಂಬಿಕೆ ಸಂಪೂರ್ಣವಾಗಿ ನಶಿಸಿಹೋಗಿದೆ. ಆದ್ದರಿಂದ ಇನ್ನುಳಿದಿರುವ ಮಾರ್ಗವೆಂದರೆ, ಸಮತಾ ಸಮಾಜದ ರೀತಿಯ ಅರ್ಥವ್ಯವಸ್ಥೆಗೂ ಒಂದು ಅವಕಾಶವನ್ನು ಕೊಡುವುದೇ ಆಗಿದೆ. ಇದರಿಂದಲಾದರೂ ಸಾರ್ವಜನಿಕ ಆಡಳಿತದಲ್ಲಿನ ದುಷ್ಪ್ರವೃತ್ತಿಗಳು ಕೊನೆಗೊಂಡು ಜನರಿಗೆ ಹೆಚ್ಚು ಪ್ರಯೋಜನವಾಗಬಹುದೆಂದು ಸ್ವಾಭಾವಿಕವಾಗಿ ಆಶಿಸಬಹುದು.

ಇನ್ನು ರಾಷ್ಟ್ರದ ನಾಯಕತ್ವದ ಧ್ಯೇಯ ಮತ್ತು ಧೋರಣೆಗಳಲ್ಲಿಯೂ ಅಗತ್ಯವಾದ ಪರಿವರ್ತನೆಗಳು ಆಗಬೇಕು. ನಾಯಕರುಗಳ ನಡೆ, ನುಡಿ ಮತ್ತು ಕಾರ್ಯಗಳಲ್ಲಿ ಸಮನ್ವಯ ಇರಬೇಕು. ಆಗ ಅವರು ಗೌರವಕ್ಕೆ ಪಾತ್ರರಾಗುತ್ತಾರೆ. ತತ್ವಗಳ ಅನುಷ್ಠಾನಕ್ಕೆ ಎಂತಹ ಕಷ್ಟಗಳನ್ನು ಎದುರಿಸುವುದಕ್ಕೂ ಅಂತಹವರು ಸಿದ್ಧರಾಗಿರುತ್ತಾರೆ. ನಾನಾ ರೀತಿಯ ಗರಿಷ್ಠ ಮಿತಿಗಳನ್ನು ಆಚರಣೆಗೆ ತಂದು ಸಮತಾ ಸಮಾಜವನ್ನು ವಾಸ್ತವಿಕವಾಗಿ ಸ್ಥಾಪಿಸುವಲ್ಲಿ ಇಂತಹ ನಾಯಕರ ಪಾತ್ರ ಮಹತ್ವದ್ದು. ಸ್ವಾಭಾವಿಕವಾಗಿ ಈ ರೀತಿಯ ನಾಯಕರುಗಳು ಇತರರಿಗೆ ಮಾದರಿಯಾಗಿರುತ್ತಾರೆ. ಆದರೆ ನಮ್ಮ ರಾಷ್ಟ್ರದಲ್ಲಿ ಈಗಿರುವ ಪರಿಸ್ಥಿತಿ ಇದಕ್ಕೆ ತುಂಬ ಹೊರತಾಗಿದೆ. ಅತಿ ಉತ್ತಮ ಹಾಗು ವಿವೇಚನಾಯುತ ನಾಯಕತ್ವದ ಅಭಾವದಿಂದ, ಸಮತಾ ಸಮಾಜದ ಗುರಿಗಳನ್ನು ಸಾಧಿಸುವುದು ತುಂಬ ಅಸಾಧ್ಯವಾದ ವಿಷಯವೆಂದು ನಿಸ್ಸಂಶಯವಾಗಿ ಹೇಳಬಹುದು.

ಇನ್ನು ಕೊನೆಯದಾಗಿ ಸಾಮಾಜಿಕ ಪರಿಣಾಮಗಳ ಬಗ್ಗೆ ಹೇಳಬೇಕೆಂದರೆ, ನಾನಾ ರೀತಿಯ ಗರಿಷ್ಠ ಮಿತಿಗಳನ್ನು ಹೊರಿಸುವುದು ಅಷ್ಟು ಸುಲಭವಾದ ಕಾರ್ಯವಲ್ಲ. ಇದಕ್ಕೆ ವ್ಯಕ್ತಿಯ ಮನೋಭಾವ ಮತ್ತು ಸಮಾಜದ ದೃಷ್ಟಿಕೋನಗಳು ಸಂಪೂರ್ಣವಾಗಿ ರೂಪಾಂತರ ಹೊಂದುವುದು ಅತ್ಯಗತ್ಯ. ಇಂತಹ ರೂಪಾಂತರಕ್ಕೆ ಮೊದಲು, ಸಮತಾ ಸಮಾಜದ ಸ್ಥಾಪನೆಗೆ ಅಗತ್ಯವಾದ ಆರ್ಥಿಕ ಮತ್ತು ರಾಜಕೀಯ ಪರಿವರ್ತನೆಗಳು ಆಗಬೇಕು. ಈ ಎಲ್ಲ ಪರಿವರ್ತನೆಗಳು ವಿಕಾಸ ಅಥವಾ ವಿಪ್ಲವದ ಮೂಲಕ ನಡೆಯಬಹುದು. ವಿಕಾಸದ ಮೂಲಕ ಪರಿವರ್ತನೆಗಳು ಆಗಬೇಕಾದರೆ ತುಂಬ ಕಾಲ ಹಿಡಿಯುತ್ತದೆ. ಅಲ್ಲಿನವರೆಗೂ ಜನರ ತಾಳ್ಮೆಯನ್ನು ತಡೆಹಿಡಿಯುವುದು ಕಷ್ಟವೆಂದೇ ಹೇಳಬೇಕು. ಹೀಗಲ್ಲದೆ, ವಿಪ್ಲವ ಅಥವಾ ಕ್ರಾಂತಿಯ ಮೂಲಕ ಪರಿವರ್ತನೆಗಳು ಆಗಬೇಕಾದರೆ, ಹಿಂಸೆ ಮತ್ತು ರಕ್ತಪಾತ ಅನಿವಾರ್ಯವಾಗುತ್ತವೆ. ನಮ್ಮ ಜನರು ಇವುಗಳಲ್ಲಿ ಯಾವ ಮಾರ್ಗವನ್ನು ಆರಿಸಿಕೊಳ್ಳುತ್ತಾರೆ ಎಂಬುದು ಕಾಲ ಮತ್ತು ಭವಿಷ್ಯದ ಘಟನೆಗಳನ್ನು ಅವಲಂಬಿಸಿದೆ.

ಸಮತಾ ಸಮಾಜದ ಸ್ಥಾಪನೆ ಇನ್ನೂ ಕನಸಾಗಿದೆ

ಭಾರತವು ಸ್ವಾತಂತ್ರ್ಯವನ್ನು ಪಡೆದಾಗಿನಿಂದಲೂ ಸಮತಾ ಸಮಾಜವನ್ನು ಸ್ಥಾಪಿಸಬೇಕೆಂದು ಪದೇಪದೇ ಹೇಳುತ್ತಾ ಬಂದಿದೆ. ಇದಕ್ಕೆ ಪೂರಕವಾಗಿ ಮಿಶ್ರ ಅರ್ಥವ್ಯವಸ್ಥೆ ಮತ್ತು ಆರ್ಥಿಕಯೋಜನೆಯ ನೀತಿಗಳನ್ನು ಅನುಸರಿಸಿಕೊಂಡು ಬರಲಾಯಿತು. ಅಲ್ಲದೆ ಸರಕಾರಿ ವಲಯದ ಕಾರ್ಯಕ್ಷೇತ್ರಗಳನ್ನು ತೀವ್ರವಾಗಿ ವಿಶಾಲಗೊಳಿಸಿ ಹೆಚ್ಚು ಬಲಯುತವನ್ನಾಗಿ ಮಾಡಲಾಗಿದೆ. ಉತ್ಪಾದನಾಂಗಗಳು

ಮತ್ತು ಉತ್ಪಾದನಾ ಕಾರ್ಯ ಚಟುವಟಿಕೆಗಳು ಸಾಕಷ್ಟು ಪ್ರಮಾಣದಲ್ಲಿ ಹತೋಟಿಗೆ ಒಳಪಟ್ಟಿವೆ. ಆರ್ಥಿಕಶಕ್ತಿಯ ಕೇಂದ್ರೀಕರಣದ ಪ್ರವೃತ್ತಿಯೂ ಸಹ ಕಡಿಮೆ ಯಾಗುತ್ತಿದೆ ಎಂದು ಹೇಳಲಾಗಿದೆ.

ಮೇಲೆ ತಿಳಿಸಿದ ನೀತಿಗಳು ಮತ್ತು ಕ್ರಮಗಳು, ಕಳೆದ 25 ವರ್ಷಗಳಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಸಾಧಿಸಿರುವುದು ಮಾತ್ರ ತುಂಬ ನಿರಾಶಾದಾಯಕವಾಗಿದ್ದು ಸಮತಾ ಸಮಾಜದ ಸ್ಥಾಪನೆ ಇನ್ನೂ ಕನಸಾಗಿಯೇ ಉಳಿದಿದೆ. ಈ ಹೇಳಿಕೆಗೆ ಬೆಂಬಲವಾಗಿ ಕೆಲವು ಅಂಶಗಳನ್ನು ಅಂಕಿ ಅಂಶಗಳೊಂದಿಗೆ ವಿವರಿಸಬಹುದು. ಭಾರತದ ಆರ್ಥಿಕಾಭಿವೃದ್ಧಿಯ ಪ್ರಮಾಣ, ಕಳೆದ ಎರಡು ದಶಕಗಳಲ್ಲಿ ವಾರ್ಷಿಕವಾಗಿ ಸರಾಸರಿ ಶೇಕಡ 5ರಷ್ಟನ್ನೂ ಸಹ ಮುಟ್ಟಲಿಲ್ಲ. ಇನ್ನೂ ವಿವರವಾಗಿ ಹೇಳಬೇಕೆಂದರೆ, ವಿಶ್ವ ಬ್ಯಾಂಕು ಇತ್ತೀಚಿಗೆ ಪ್ರಕಟಿಸಿರುವ ಅಭಿವೃದ್ಧಿ ಪ್ರಮಾಣಗಳು ಮತ್ತು ಜನಸಂಖ್ಯೆ ಎಂಬ ಚಿತ್ರಪಟದ ಪ್ರಕಾರ, 1960ರ ದಶಕದಲ್ಲಿ ಭಾರತದ ಸರಾಸರಿ ವಾರ್ಷಿಕ ಅಭಿವೃದ್ಧಿಯ ಪ್ರಮಾಣ ಕೇವಲ ಶೇಕಡ 1-2ರಷ್ಟು ಇತ್ತು. ಆದರೆ ನಮ್ಮ ಜನಸಂಖ್ಯೆಯು ಇದೇ ಅಭಿವೃದ್ಧಿಯಲ್ಲಿ ವಾರ್ಷಿಕವಾಗಿ ಶೇಕಡ 2.3ರಷ್ಟು ಬೆಳೆಯಿತು. ವಿಶ್ವ ಬ್ಯಾಂಕಿನ ಈ ಚಿತ್ರಪಟದ ಪ್ರಕಾರ, ಪ್ರಪಂಚದ 122 ರಾಷ್ಟ್ರಗಳ ತಲಾ ವರಮಾನವನ್ನು ಇಳಿಕ್ರಮವಾಗಿ ಅವಲೋಕಿಸಿದಾಗ, ಭಾರತವು 102ನೇ ಸ್ಥಾನವನ್ನು ಆಕ್ರಮಿಸಿಕೊಂಡಿರುವುದು ಗೋಚರಿಸುತ್ತದೆ. ಅಲ್ಲದೆ ಲೋಕಸಭೆಯಲ್ಲಿ ಮುಂಗಡ ಪತ್ರಕ್ಕೆ ಮುಂಚೆ ಮಂಡಿಸಿದ 1972-73ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಆ ವರ್ಷದಲ್ಲಿ ರಾಷ್ಟ್ರೀಯ ವರಮಾನವು ಕೇವಲ ಶೇಕಡ 1.5 ರಿಂದ 2ರಷ್ಟು ಮಾತ್ರ ವೃದ್ಧಿಯಾಗಬಹುದೆಂದು ಹೇಳಲಾಗಿತ್ತು. ಆದರೆ ವಾಸ್ತವವಾಗಿ ಅದು ಶೇಕಡ 0.4ರಷ್ಟು ಮಾತ್ರ ವೃದ್ಧಿಯಾಗಿದೆ ಎಂದು ಇತ್ತೀಚಿನ ಅಂಕಿಅಂಶಗಳು ತಿಳಿಸುತ್ತವೆ. ಹೀಗೆ ನಮ್ಮ ರಾಷ್ಟ್ರೀಯ ಹಾಗು ತಲಾ ವರಮಾನಗಳು ವಾರ್ಷಿಕವಾಗಿ ಶೇಕಡ 5ಕ್ಕಿಂತ ಕಡಿಮೆ ಪ್ರಮಾಣದಲ್ಲಿ ವೃದ್ಧಿಯಾಗುತ್ತಿವೆ.

ರಾಷ್ಟ್ರದ ಒಟ್ಟು ವರಮಾನಕ್ಕೆ, ಸರಕಾರಿ ವಲಯದಲ್ಲಿನ ಉದ್ಯಮಗಳ ಲಾಭದ ಕೊಡುಗೆಯನ್ನು ಗಮನಿಸಿದಾಗ, ಅದು ಸಹ ತುಂಬ ಅತ್ಯಲ್ಪವಾಗಿರುವ ಅಂಶ ಮೇಲಿನ ಆರ್ಥಿಕ ಸಮೀಕ್ಷೆಯಿಂದ ತಿಳಿಯುತ್ತದೆ. ಕೇಂದ್ರ ಸರಕಾರವು ತನ್ನ ಶಾಖೇತರ ವಾಣಿಜ್ಯ ಉದ್ಯಮಗಳಲ್ಲಿ 5.000 ಕೋಟಿ ರೂಪಾಯಿಗಳಿಗಿಂತಲೂ ಮಿಗಿಲಾದ ಬಂಡವಾಳವನ್ನು ಹೂಡಿದೆ. ಇವುಗಳಲ್ಲಿ ಹಿಂದೂಸ್ಥಾನ ಉಕ್ಕಿನ ಸಂಸ್ಥೆಯನ್ನು ಬಿಟ್ಟು ಇತರ ಉದ್ಯಮಗಳ ಒಟ್ಟು ನಿವ್ವಳ ಲಾಭ 1971-72ರಲ್ಲಿ ಸುಮಾರು 27 ಕೋಟಿ ರೂಪಾಯಿಗಳಷ್ಟು ಇತ್ತು. ಈ ಲಾಭ ಇದರ ಹಿಂದಿನ ವರ್ಷದಲ್ಲಿ ಕೇವಲ 2.2 ಕೋಟಿ ರೂಪಾಯಿಗಳಾಗಿತ್ತು. ಅಲ್ಲದೆ 1971-72ರಲ್ಲಿ ಹಿಂದೂಸ್ಥಾನ

ಉಕ್ಕಿನ ಸಂಸ್ಥೆಯು ಸುಮಾರು 45½ ಕೋಟಿ ರೂಪಾಯಿಗಳಷ್ಟು ನಷ್ಟವನ್ನು
ಅನುಭವಿಸಿತ್ತು. ಹೀಗೆಯೇ ರೈಲ್ವೇಗಳೂ ಸಹ ನಷ್ಟವನ್ನು ಅನುಭವಿಸುತ್ತಿರುವುದ
ರಿಂದ, ಕೇಂದ್ರ ಸರಕಾರದ ವರಮಾನಕ್ಕೆ ಅವುಗಳ ಕೊಡುಗೆ ತುಂಬ ನಿಕೃಷ್ಟವಾಗಿದೆ.
ಅಂಚೆ ಮತ್ತು ತಂತಿ ಇಲಾಖೆಯ ಹಣಕಾಸಿನ ಪರಿಸ್ಥಿತಿ ಮಾತ್ರ ಸ್ವಲ್ಪ ಮಟ್ಟಿಗೆ
ಸುಧಾರಿಸಿದೆ. ಇನ್ನು ರಾಜ್ಯ ಸರಕಾರಗಳ ಉದ್ಯಮಗಳಾದ ವಿದ್ಯುಚ್ಛಕ್ತಿ ಮಂಡಲಿ
ಗಳು, ರಸ್ತೆ ಸಾರಿಗೆ ಮಂಡಲಿಗಳು, ನೀರಾವರಿ ಕಾರ್ಯಗಾರಗಳು, ಮೊದಲಾದವು
ಸಹ ಅನೇಕ ಸಂದರ್ಭಗಳಲ್ಲಿ ನಷ್ಟದಿಂದಲೇ ಸಾಗಿವೆ. ಸರಕಾರಿ ವಲಯದ ಉದ್ಯಮಗಳ
ಈ ನಷ್ಟಗಳಿಗೆ, ಅವುಗಳ ಆಡಳಿತ ಮತ್ತು ಕಾರ್ಯಾಚರಣೆಗಳಲ್ಲಿರುವ ನ್ಯೂನತೆ
ಗಳೇ ಮುಖ್ಯಕಾರಣಗಳಾಗಿವೆ ಎಂದು ಸ್ಪಷ್ಟವಾಗಿ ಆರ್ಥಿಕ ಸಮೀಕ್ಷೆ ತಿಳಿಸಿದೆ.

ಇನ್ನು ವಿದೇಶೀ ನೆರವಿನ ಬಗ್ಗೆ 1972-73ರ ಆರ್ಥಿಕ ಸಮೀಕ್ಷೆಯು, ಅದು
ಆ ವರ್ಷದಲ್ಲಿ 123 ಕೋಟಿ ರೂಪಾಯಿಗಳಿಗಿಂತಲೂ ಮಿಗಿಲಾಗಿರುವುದಿಲ್ಲವೆಂದು
ಹೇಳಿದೆ. ಆದರೆ ಭಾರತವು ಮಾಡಿರುವ ವಿದೇಶಿ ಸಾಲಗಳ ಮರುಪಾವತಿ ಮತ್ತು
ಬಡ್ಡಿಗಳಿಗಾಗಿ, ಪ್ರತಿ ವರ್ಷವೂ 500 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿ
ಕೊಡಬೇಕಾಗಿದೆ ಎಂದು ಸಮೀಕ್ಷೆಯು ತೋರಿಸಿದೆ. ಆದ್ದರಿಂದ ನಮ್ಮ ವಿದೇಶಿ
ಸಾಲಗಳನ್ನು ಪುನರ್ ವಿಮರ್ಶೆಗೆ ಒಳಪಡಿಸುವ ಅಗತ್ಯವನ್ನು ಅದು ಒತ್ತಿ ಹೇಳಿದೆ.

ಆತಂಕವನ್ನು ಹುಟ್ಟಿಸುವ ಇನ್ನೊಂದು ಮುಖ್ಯ ಅಂಶವೆಂದರೆ, ಬೆಲೆಗಳ
ತೀವ್ರವಾದ ಏರಿಕೆಯ ಪ್ರವೃತ್ತಿ. ಸಟ್ಟಾ ಬೆಲೆಗಳಲ್ಲಿನ ಏರಿಕೆಯು 1972ರಲ್ಲಿ
ಶೇಕಡ 7·8ರಷ್ಟು ಇತ್ತೆಂದು ಮೇಲಿನ ಆರ್ಥಿಕ ಸಮೀಕ್ಷೆಯು ತಿಳಿಸಿದೆ. ಹಣದ
ಸರಬರಾಜು ಸಹ ವಾರ್ಷಿಕವಾಗಿ ಶೇಕಡ 7 ರಿಂದ 8 ರಷ್ಟು ಹೆಚ್ಚುತ್ತಿದೆ. ಆದರೆ
ಈ ಬೆಲೆಗಳ ಏರಿಕೆಯಲ್ಲಿ, ಆಹಾರ ಪದಾರ್ಥಗಳ ಬೆಲೆಗಳ ಏರಿಕೆ ಸುಮಾರು 2/3
ರಷ್ಟು ಇರುವುದು ಗಮನಾರ್ಹವಾದ ಅಂಶ. ಅಧಿಕೃತ ವರದಿಗಳ ಪ್ರಕಾರ,
ಅನುಭೋಗಿ ಸರಕುಗಳ ಬೆಲೆಗಳ ಸೂಚ್ಯಂಕವು 1949 ರಲ್ಲಿ 100 ಇದ್ದುದು,
1914ರ ಮೇ ತಿಂಗಳಿನಲ್ಲಿ 244ನ್ನು ಮುಟ್ಟಿತ್ತು. ಬೆಲೆಗಳ ಈ ತೆರನಾದ ತೀವ್ರ
ಏರಿಕೆಯಿಂದಾಗಿ, ರೂಪಾಯಿಯ ಕೊಳ್ಳುವ ಶಕ್ತಿಯು 1974ರ ಮೇ ತಿಂಗಳಿನಲ್ಲಿ,
1949ರ ಅದರ ಕೊಳ್ಳುವ ಶಕ್ತಿಯೊಂದಿಗೆ ಹೋಲಿಸಿದಾಗ, ಕೇವಲ 29 ಪೈಸೆ
ಯಷ್ಟು ಇತ್ತು. ಆದರೆ ವಾಸ್ತವವಾಗಿ ರೂಪಾಯಿಯ ಕೊಳ್ಳುವ ಶಕ್ತಿಯು ಆಗ
20 ಪೈಸೆಯಷ್ಟೂ ಇರಲಿಲ್ಲವೆಂದು ಕೆಲವು ಅನಧಿಕೃತ ಅಂದಾಜುಗಳು ತಿಳಿಸಿವೆ.
ಇವೆಲ್ಲವುಗಳ ಫಲವಾಗಿ ನಿರ್ದಿಷ್ಟ ವರಮಾನ ಗಳಿಸುವ ಮಧ್ಯಮ ವರ್ಗ ಹಾಗು
ಬಡವರ ಬವಣೆ ಬೃಹದಾಕಾರ ತಾಳಿದೆ. ಅವರ ತ್ಯಾಗಕ್ಕೆ ಮಿತಿಯಿಲ್ಲವಾಗಿದೆ.

ಕಳೆದ ಎರಡೂವರೆ ದಶಕಗಳಲ್ಲಿ ನಡೆದಿರುವ ಆರ್ಥಿಕಾಭಿವೃದ್ಧಿಯು,
ಭಾರತದ ಜನಸಂಖ್ಯೆಯ ಬಹುಪಾಲು ಜನರ ಶಾಶ್ವತವಾದ ಬಡತನವನ್ನು

ಹೋಗಲಾಡಿಸುವುದರಲ್ಲಿ ವಿಫಲಗೊಂಡಿದೆ ಎಂಬುದರಲ್ಲಿ ಸಂಶಯವಿಲ್ಲ. ನಮ್ಮ ರಾಷ್ಟ್ರೀಯ ವರಮಾನವು 1947ರಿಂದ 1967ರ ಅವಧಿಯಲ್ಲಿ ಶೇಕಡ 73ರಷ್ಟು ಅಧಿಕಗೊಂಡಿದ್ದರೂ, ತಲಾ ವರಮಾನವು ಶೇಕಡ 20ರಷ್ಟು ಮಾತ್ರ ಹೆಚ್ಚಾಗಿದೆ. ಭಾರತದ ಈಗಿನ ಒಟ್ಟು ಜನಸಂಖ್ಯೆ ಸುಮಾರು 58 ಕೋಟಿ. ಇದರಲ್ಲಿ ಸುಮಾರು 25 ಕೋಟಿ ಜನರು ಬಡತನದ ಎಲ್ಲೆಯೊಳಗೆ ವಾಸಿಸುತ್ತಿದ್ದಾರೆಂದು ಅಧಿಕೃತವಾಗಿ ಹೇಳಲಾಗಿದೆ. ಇನ್ನೂ ಸ್ವಲ್ಪ ವಿವರವಾಗಿ ಹೇಳುವುದಾದರೆ, ಇವರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿರುವ ಶೇಕಡ 40ರಷ್ಟು ಮತ್ತು ನಗರ ಪ್ರದೇಶಗಳಲ್ಲಿರುವ ಶೇಕಡ 30 ರಷ್ಟು ಜನರ ಮಾಸಿಕ ವೆಚ್ಚ 15 ರೂಪಾಯಿಗಳಿಗಿಂತಲೂ ಕಡಿಮೆಯಾಗಿದೆ. ಇದೇ ರೀತಿ ಮಾಸಿಕ ವೆಚ್ಚ 30 ರೂಪಾಯಿಗಳಿಗಿಂತಲೂ ಕಡಿಮೆಯಾಗಿರುವವರ ಸಂಖ್ಯೆ ಗ್ರಾಮಾಂತರ ಪ್ರದೇಶಗಳಲ್ಲಿ ಶೇಕಡ 85 ಮತ್ತು ನಗರ ಪ್ರದೇಶಗಳಲ್ಲಿ ಶೇಕಡ 70ರಷ್ಟು ಇದೆ. ಮೇಲಾಗಿ 1974ರ ವೇಳೆಗೆ ನಮ್ಮ ದೇಶದಲ್ಲಿ ನಿರುದ್ಯೋಗ ಮತ್ತು ಅಪೂರ್ಣ ಉದ್ಯೋಗಗಳಿಂದ ನರಳುತ್ತಿರುವವರ ಸಂಖ್ಯೆ ಸುಮಾರು 2½ ಕೋಟಿಯನ್ನು ಮುಟ್ಟಬಹುದೆಂದು ಅಂದಾಜು ಮಾಡಲಾಗಿದೆ. ಈ ಎಲ್ಲ ಅಂಶಗಳು ನಿಜವಾಗಿಯೂ ತುಂಬ ಕಳವಳಕಾರಿಯಾದ ವಿಷಯಗಳಾಗಿವೆ. ಅವುಗಳ ಎಲ್ಲ ಪರಿಣಾಮಗಳನ್ನು ಸರಿಯಾಗಿ ಊಹಿಸುವುದು ಕಷ್ಟಸಾಧ್ಯ. ಆದರೆ ಸಮತಾ ಸಮಾಜವನ್ನು ಸ್ಥಾಪಿಸಲು, ನಾವು ಇನ್ನೂ ಎಷ್ಟು ದಾರಿ ಸವೆಸಬೇಕು ಎಂಬ ಅಂಶ ವನ್ನು ಮಾತ್ರ ಇವು ಸ್ಪಷ್ಟವಾಗಿ ತೋರಿಸುತ್ತಿವೆ.

ಸಮತಾ ಸಮಾಜದ ಸ್ಥಾಪನೆಗೆ ಅಡ್ಡಿಯಾಗಿ ನಮ್ಮ ಅರ್ಥವ್ಯವಸ್ಥೆಯಲ್ಲಿರುವ ಇತರ ಮುಖ್ಯ ಅಂಶಗಳು ಯಾವುವೆಂದರೆ, ಕಪ್ಪು ಹಣದ ಚಲಾವಣೆ, ಏಕಸ್ವಾಮ್ಯ ಗಳ ಪ್ರವೃತ್ತಿ, ಹಾಗೂ ಸರಕಾರಗಳ ದುಂದು ವೆಚ್ಚ. ಕಪ್ಪು ಹಣದ ಚಲಾವಣೆಯ ದುಷ್ಪರಿಣಾಮಗಳನ್ನು ತಡೆಗಟ್ಟುವುದು, ವಿವಿಧ ಗರಿಷ್ಠ ಮಿತಿಗಳ ಮುಖ್ಯ ಗುರಿಗಳಲ್ಲೊಂದಾಗಿದೆ. ತೆರಿಗೆಗಳ್ಳತನದಿಂದ ಮುಖ್ಯವಾಗಿ ಉದ್ಭವಿಸುವ ಈ ಕಪ್ಪು ಹಣವು ಕೇವಲ ಗಂಟಿನರೂಪದಲ್ಲಿ ಸ್ಥಾಯಿಯಾಗಿರದೆ ಅತಿ ಕ್ರಿಯಾತ್ಮಕ ವಾಗಿರುವುದರಿಂದ, ಇಡೀ ರಾಷ್ಟ್ರದ ಅರ್ಥವ್ಯವಸ್ಥೆಗೆ ಅದು ತುಂಬ ಅಪಾಯಕಾರಿ ಯಾಗಿದೆ ಎಂದು ಹೇಳಬಹುದು. ವಾಸ್ತವವಾಗಿ ನಮ್ಮ ದೇಶದಲ್ಲಿ ಕಪ್ಪು ಹಣದ ಚಲಾವಣೆಯು ತನ್ನದೇ ಆದ ಒಂದು ಸಮಾಂತರ ಅರ್ಥವ್ಯವಸ್ಥೆಯನ್ನು ಸೃಜಿಸಿದೆ. ಈ ಕಪ್ಪು ಹಣದ ಮೊತ್ತವನ್ನು ಸರಿಯಾಗಿ ಅಂದಾಜು ಮಾಡುವುದು ಕಷ್ಟವಾದರೂ ಅದು ಗಮನಾರ್ಹ ಪ್ರಮಾಣದಲ್ಲಿ ಚಲಾವಣೆಯಲ್ಲಿದೆ ಎಂಬ ಅಂಶ ಮಾತ್ರ ನಿರ್ವಿವಾದವಾಗಿದೆ. ಹೀಗೆಯೇ ದೇಶದಲ್ಲಿನ ಕೆಲವು ಏಕಸ್ವಾಮ್ಯ ಸಂಸ್ಥೆಗಳು, ಸರಕಾರಗಳ ಮೇಲಿನ ತಮ್ಮ ಪ್ರಭಾವವನ್ನು ದುರುಪಯೋಗಿಸಿಕೊಳ್ಳುತ್ತಿವೆ ಎಂದು ಆಪಾದಿಸಲಾಗಿದೆ. ಇವೆಲ್ಲಕ್ಕೂ ಮಿಗಿಲಾಗಿ ಸರಕಾರಗಳು ಸಹ ತಮ್ಮ ನಾನಾ

ರೀತಿಯ ದುಂದು ವೆಚ್ಚಗಳಿಗೆ ತಡೆಯನ್ನು ಹಾಕುವ ಸಾಕಷ್ಟು ಪ್ರಯತ್ನಗಳನ್ನು ಕೈಗೊಂಡಿಲ್ಲ ಎಂದು ಟೀಕಿಸಲಾಗಿದೆ. ಮೇಲಿನ ಈ ವಿಷಯಗಳಲ್ಲಿ ಕೆಲವು ತಜ್ಞ ಸಮಿತಿಗಳ ಅಭಿಪ್ರಾಯಗಳು ತುಂಬ ಮಹತ್ವದಿಂದ ಕೂಡಿವೆ. ಉದಾಹರಣೆಗೆ, ಕಪ್ಪು ಹಣ ಮತ್ತು ತೆರಿಗೆಗಳ್ಳತನದ ಕಾರ್ಯಕ್ಷೇತ್ರಗಳು ಎಷ್ಟು ವಿಶಾಲವಾಗಿವೆ ಯೆಂದರೆ, ಅವುಗಳ ಬಿಗಿ ಹಿಡಿತದಿಂದ ಸಮಾಜದ ಯಾವ ಗುಂಪೂ ತಪ್ಪಿಸಿ ಕೊಳ್ಳುವುದು ಅಸಾಧ್ಯವೇನೊ ಎಂಬುದಾಗಿ 1971ರ ಪ್ರತ್ಯಕ್ಷ ತೆರಿಗೆಗಳ ವಿಚಾರಣಾ ಸಮಿತಿಯು ವಿಷಾದದಿಂದ ಹೇಳಿದೆ. ಇದೇ ರೀತಿ ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿ ಹೆಚ್ಚು ಜವಾಬ್ದಾರಿಯನ್ನು ಹೊಂದಿರುವ ಮಂತ್ರಿಗಳ ನಡತೆಗಳಲ್ಲಿ ಪ್ರಾಮಾಣಿಕತೆಯ ಅಭಾವವಿರುವುದರ ಬಗ್ಗೆ ಭ್ರಷ್ಟಾಚಾರ ನಿವಾರಣಾ ಸಮಿತಿಯು ತೀವ್ರ ಗಮನವನ್ನು ಸೆಳೆದಿದೆ. ಭ್ರಷ್ಟಾಚಾರ ನಿರ್ಮೂಲನದ ಬಗ್ಗೆ ಒಬ್ಬರಾದ ಮೇಲೊಬ್ಬ ಹಣಕಾಸಿನ ಮಂತ್ರಿಗಳು ಪಣತೊಟ್ಟು, ಸರಿಯಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲರಾಗಿರುವ ವಿಷಯ ನಿಜಕ್ಕೂ ವಿಷಾದನೀಯ. ಒಟ್ಟಿನಲ್ಲಿ ರಾಜಕಾರಣಿಗಳು, ವರ್ತಕರು ಮತ್ತು ಸರಕಾರದ ಅಧಿಕಾರಿಗಳ ಮಧ್ಯೆ ಒಂದು ತ್ರಿಕೋಣಾಕಾರದ ಸಂಬಂಧವೇರ್ಪಟ್ಟಿದೆ. ಈಗಿನ ಪರಿಸ್ಥಿತಿಯಲ್ಲಿ ಈ ಸಂಬಂಧ ಅಭೇದ್ಯವಾಗಿರುವುದು ಮಾತ್ರವಲ್ಲದೆ ಸರ್ವವ್ಯಾಪಿಯಾಗಿದೆ. ಇಡೀ ಸಮಾಜವು ಅನುಭವಿಸುತ್ತಿರುವ ನಷ್ಟ, ಇವರೆಲ್ಲರ ವೈಯಕ್ತಿಕ ಲಾಭವಾಗಿದೆ.

ಭಾರತದಲ್ಲಿ ಸಮತಾ ಸಮಾಜವಾದ ಸ್ಥಾಪನೆಗೆ ಮೇಲಿನ ಎಲ್ಲ ಅಂಕಿ ಅಂಶಗಳು ಶುಭಸೂಚಕವಾಗಿಲ್ಲವೆಂದು ಖಂಡಿತವಾಗಿ ಹೇಳಬಹುದು. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ 10ಕ್ಕಿಂತ ಕಡಿಮೆ ಸಂಖ್ಯೆಯ ಜನರು, ಪ್ರಪಂಚದಲ್ಲಿ ದೊರೆಯುವ ಎಲ್ಲ ರೀತಿಯ ಭೋಗವಸ್ತುಗಳನ್ನು ಮಿತಿಮೀರಿ ಅನುಭವಿಸುತ್ತಿದ್ದಾರೆ. ಇದಕ್ಕೆ ತದ್ವಿರುದ್ಧವಾಗಿ ಶೇಕಡ 70ಕ್ಕಿಂತ ಹೆಚ್ಚಿನ ಜನರು, ನಿತ್ಯಜೀವನಕ್ಕೆ ಅತ್ಯಾವಶ್ಯಕವಾದ ವಸ್ತುಗಳನ್ನು ಸಾಕಷ್ಟು ಕೊಳ್ಳುವ ಶಕ್ತಿಯಿಲ್ಲದೆ ಬಳಲುತ್ತಿದ್ದಾರೆ. ಕಳೆದ ಕಾಲು ಶತಮಾನದ ಅವಧಿಯಲ್ಲಿನ ಆರ್ಥಿಕಾಭಿವೃದ್ಧಿಯು, ಈ ಪರಿಸ್ಥಿತಿ ಯನ್ನು ಮಾರ್ಪಡಿಸಿ, ದುರ್ಬಲ ವರ್ಗಗಳ ಹೆಚ್ಚಿನ ಕಲ್ಯಾಣವನ್ನು ಸಾಧಿಸುವಲ್ಲಿ ವಿಫಲಗೊಂಡಿದೆ. ನಮ್ಮ ಹೇಳಿಕೆಯ ಗುರಿಗಳು ಮತ್ತು ವಾಸ್ತವಿಕ ಸಾಧನೆಗಳ ಲ್ಲಿರುವ ಇಂತಹ ವಿರೋಧಾಭಾಸವನ್ನು ಗಮನಿಸಿದರೆ, ನಿಜವಾಗಿಯೂ ಸಮತಾ ಸಮಾಜ ತತ್ತ್ವವನ್ನೇ ಪರಿಹಾಸ್ಯ ಮಾಡುತ್ತಿದ್ದೇವೆ ಎಂದು ಹೇಳಬಹುದು.

ನಾನಾ ರೀತಿಯ ಗರಿಷ್ಠ ಮಿತಿಗಳನ್ನು ವಿಧಿಸುವ ಕ್ರಮ, ಸಮತಾ ಸಮಾಜ ವನ್ನು ಸ್ಥಾಪಿಸುವಲ್ಲಿ ಮೊದಲನೆಯ ಮುಖ್ಯ ಹೆಜ್ಜೆ. ಈ ಮಾರ್ಗದಲ್ಲಿ ಯಾವ ವಿರೋಧಗಳು ಬಂದರೂ, ಅವುಗಳನ್ನು ಸಮತಾ ಸಮಾಜದ ವಿರೋಧಗಳೆಂದೇ

ಭಾವಿಸಬೇಕು. ಸಮತಾ ಸಮಾಜದ ತತ್ತ್ವಗಳನ್ನು ಅನುಷ್ಠಾನಕ್ಕೆ ತರುವ ವಿಷಯದಲ್ಲಿಯೂ ಯಾವ ರೀತಿಯ ರಾಜಿ ಅಥವಾ ಹೊಂದಾಣಿಕೆಗಾಗಲಿ ಅವಕಾಶ ವಿಲ್ಲ. ಇಂತಹ ಸಮಾಜದ ಸ್ಥಾಪನೆಗೆ ಅಗತ್ಯವಾದ ಆರ್ಥಿಕ. ರಾಜಕೀಯ ಮತ್ತು ಸಾಮಾಜಿಕ ಮಾರ್ಪಾಟುಗಳು ಜನರ ಸ್ವಪ್ರೇರಣೆಯಿಂದ ಆಗುವಂತಹವುಗಳಲ್ಲ. ಇವುಗಳನ್ನು ಜನರು ಕಡ್ಡಾಯವಾಗಿ ಅನುಸರಿಸುವಂತೆ ಮಾಡಬೇಕು. ಪ್ರಜಾ ಪ್ರಭುತ್ವ, ಬಂಡವಾಳಶಾಹಿ ಮತ್ತು ಮಿಶ್ರ ಅರ್ಥವ್ಯವಸ್ಥೆಗಳು, ಹಾಗು ಸಮತಾ ಸಮಾಜದ ಸಮ್ಮಿಶ್ರಣ ಪರಿಣಾಮಕಾರಿಯಾಗಿ ಕಾರ್ಯವೆಸಗಲಾರದು.

ಇವೆಲ್ಲವುಗಳ ಫಲವಾಗಿ "ಗರೀಬಿ ಹಟಾವೊ", "ಬೇಕಾರಿ ಹಟಾವೊ" ಮೊದಲಾದವು ಇನ್ನೂ ಆಕರ್ಷಕವಾದ ಘೋಷಣೆಗಳಾಗಿ ಉಳಿದಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಘೋಷಣೆಗಳು ನಿಜವಾದ ಸಮತಾ ಸಮಾಜಕ್ಕೆ ಎಂದಿಗೂ ಬದಲಿಯಾಗಲಾರವು. ನಮ್ಮ ರಾಷ್ಟ್ರ ನಾಯಕರು ಇದನ್ನು ಖಚಿತವಾಗಿ ತಿಳಿದುಕೊಂಡು, ಇಂತಹ ಘೋಷಣೆಗಳಿಂದ ಜನತೆಯನ್ನು ಮೋಸಗೊಳಿಸುವ ಪ್ರವೃತ್ತಿಯನ್ನು ಇನ್ನು ಮುಂದಾದರೂ ಬಿಡಬೇಕು. ಈ ಎಲ್ಲ ಅಂಶಗಳನ್ನು ಗಮನಿಸಿದರೆ, ಭಾರತದಲ್ಲಿ ಸಮತಾ ಸಮಾಜವನ್ನು ಸ್ಥಾಪಿಸುವುದಕ್ಕೆ ಆಗತ್ಯವಾದ ಕ್ರಮಗಳನ್ನು ಹೆಚ್ಚು ಶ್ರದ್ಧೆಯಿಂದ ಕೈಗೊಳ್ಳದೇ ಇರುವುದು ವ್ಯಕ್ತವಾಗುತ್ತದೆ. ಇಲ್ಲಿನವರೆಗೂ ಕೈಗೊಂಡಿರುವ ಕ್ರಮಗಳು ಕೇವಲ ಕಣ್ಣೊರಸುವಂತಹವುಗಳಾಗಿವೆ ಎಂದು ಹೇಳದೆ ವಿಧಿಯಿಲ್ಲ. ಹೀಗಾಗಿ ಭಾರತದಲ್ಲಿ ಸಮತಾ ಸಮಾಜದ ಸ್ಥಾಪನೆ ಇನ್ನೂ ಕನಸಾಗಿಯೇ ಉಳಿದಿದೆ.

ಜಿ. ಎಸ್. ಸದಾಶಿವ ಅವರ ಕತೆಗಳು – ಒಂದು ಅಭ್ಯಾಸ

ಟಿ. ಎಸ್. ನಾಗರಾಜ ಶೆಟ್ಟಿ

ಅದು ಯಾವುದೇ ಸಾಹಿತ್ಯ ಪ್ರಕಾರವಾಗಿರಲಿ, ವ್ಯಕ್ತಿಯನ್ನು ಭಾವವಶ ಹನಿಗಣ್ಣಿನಿಂದ, ಕೆಲವು ನಂಬಿಕೆಗಳ ಮತ್ತು ಆದರ್ಶಗಳ ಹಿನ್ನಲೆಯಲ್ಲೇ, ಅರ್ಥಾತ್ ಒಂದು ಸಂಸ್ಕೃತಿಯಿಂದ ಕೂಡಿದ ಇಡೀ ಸಮಾಜದ ಚೌಕಟ್ಟಿನಲ್ಲೇ ನೋಡುವುದು ನವೋದಯ ಕಾಲದ ರೀತಿಯಾಗಿತ್ತು. ಇದು ಬಣ್ಣದ ಕನ್ನಡಕದ ಮೂಲಕ ಹರಿಸುವ ದೃಷ್ಟಿಯಾದ್ದರಿಂದ ಬದುಕಿನ ಇತರ ಬಣ್ಣಗಳು ಕಣ್ಣಿಗೆ ಕಾಣಲು ಸಾಧ್ಯವಾಗದೆ ಅನುಭವದ ಚಿತ್ರಣ ಏಕಮುಖವಾಯಿತು. ಹೀಗಾಗಿ ಅನೇಕ ಸೂಕ್ಷ್ಮತೆಗಳು, ಪ್ರತಿ ವ್ಯಕ್ತಿಯ ಸ್ವಂತಿಕೆ – ಮರೆಯಲ್ಲೇ ಅಡಗಿ ಕುಳಿತಿತ್ತು. ನಮಗೆ ಸ್ವಾತಂತ್ರ್ಯ ಲಭಿಸಿದ ಮೇಲೆ ಕ್ರಮೇಣ ವ್ಯಕ್ತಿಗೂ ಬದುಕಿಗೂ ನಡುವಿನ ಹೋರಾಟ ಮತ್ತು ವ್ಯಕ್ತಿ ವ್ಯಕ್ತಿಗಳ ನಡುವಿನ ಪರಸ್ಪರ ಸಂಬಂಧಗಳು ಇಡಿಯಾಗಿ ಬದಲಾದವು. ಬದುಕು ಸಂಕೀರ್ಣವಾಯಿತು. ಮೌಲ್ಯಗಳ ಹೊಸ ಪರಿಷ್ಕಾರದ ಸಮಸ್ಯೆ ನಮ್ಮ ಮುಂದೆ ಬೃಹದಾಕಾರದ ಪ್ರಶ್ನೆಯಾಗಿ ನಿಂತು ಗೊಂದಲಕ್ಕೀಡು ಮಾಡಿತು. ಈ ಕಾರಣದಿಂದಾಗಿ ಸಾಹಿತ್ಯದಲ್ಲೂ ಕೂಡ ಭಾವನಾತ್ಮಕ ಅಂಶಕ್ಕಿಂತ ಹೆಚ್ಚಾಗಿ ಬುದ್ಧಿಯೂ ಕೂಡಿಕೊಂಡು ಕಾರ್ಯನಿರತವಾಯಿತು. ಅಂದರೆ ದೃಷ್ಟಿಕೋನ ಅನಿವಾರ್ಯವಾಗಿ ಬದಲಾಯಿತು. ಈ ವಿಚಾರವಾಗಿ ಗಿರಡ್ಡಿ ಗೋವಿಂದರಾಜ ಅವರು ಹೇಳಿರುವ ಕೆಲವು ಮಾತುಗಳು ಪ್ರಸ್ತುತ ಸಂದರ್ಭದಲ್ಲಿ ಗಮನಾರ್ಹವಾಗುತ್ತವೆ.

"ಇಂದಿನ ಲೇಖಕ ಹೆಚ್ಚಾಗಿ ಅಂತರ್ಮುಖಿಯಾಗಿದ್ದಾನೆ. ಅವನ ಗಮನ ಸೆಳೆದಿರುವ ಸಮಸ್ಯೆಗಳು ವ್ಯಕ್ತಿಯ ಆಂತರಿಕ ಸಮಸ್ಯೆಗಳಾಗಿವೆ. ಪ್ರಜ್ಞಾಲೋಕದ ಅಂತಃಸತ್ಯವೇ ಬಾಹ್ಯ ಜಗತ್ತಿನ ತೋರಿಕೆಗಳಿಗಿಂತ ಹೆಚ್ಚು ಮೂರ್ತರೂಪಿಯಾದುದೆಂದು ಅವನು ಭಾವಿಸತೊಡಗಿದ್ದಾನೆ. ಅಂತೆಯೇ ತನ್ನ ವಸ್ತುವಿಗಾಗಿ ಸಾಮಾಜಿಕ ಸಮಸ್ಯೆಗಳಿಗಿಂತ ತನ್ನ 'ಸ್ವಂತ ಅನುಭವದ ಗುಪ್ತ ನಿಧಿ'ಗೆ ಕೈ ಹಾಕುತ್ತಾನೆ."

ಬದುಕಿನ ಎಲ್ಲ ಸಂವೇದನೆಗಳಿಗೆ ಅಭಿವ್ಯಕ್ತಿ ಕೊಡಲು ಭಾಷೆ, ತಂತ್ರಗಳನ್ನು ಸಹ ಬದಲಾಯಿಸಿಕೊಳ್ಳುವುದು ಅನಿವಾರ್ಯವಾಯಿತು. ಇದರಿಂದಾಗಿ ಸಾಹಿತ್ಯಕ್ಕೆ ಹೊಸ ಹೊಳಪು ಬಂತು. ಕನ್ನಡದಲ್ಲಂತೂ ಎಲ್ಲ ಸಾಹಿತ್ಯ ಪ್ರಕಾರಗಳಲ್ಲೂ ಈ ಹೊಳಪು, ಅರ್ಥಪೂರ್ಣವಾಗಿ, ಆರೋಗ್ಯಕರವಾಗಿ ಬಂದಿದ್ದು ನಾವು ಹೆಮ್ಮೆ ಪಡಬಹುದಾದಂತಹ ವಿಷಯವಾಗಿದೆ.

ಈ ಕೃಷಿಯಲ್ಲಿ ಸಣ್ಣಕತೆಯು ಸಾಧನೆಯಂತೂ ಮೇಲ್ಮಟ್ಟದ್ದಾಗಿದೆ. ಯಶವಂತ ಚಿತ್ತಾಲ, ಯು. ಆರ್. ಅನಂತಮೂರ್ತಿ, ಪಿ. ಲಂಕೇಶ್, ಕೆ. ಸದಾಶಿವ, ಟಿ. ಜಿ. ರಾಘವ, ರಾಘವೇಂದ್ರ ಖಾಸನೀಸ, ಪೂರ್ಣಚಂದ್ರ ತೇಜಸ್ವಿ, ಶಾಂತಿನಾಥ ದೇಸಾಯಿ, ಜಿ. ಎಸ್. ಸದಾಶಿವ ಮುಂತಾದವರು ಸಮರ್ಥ ಕತೆಗಳನ್ನು ರಚಿಸಿ, ಈ ಯಶಸ್ಸಿಗೆ ಕಾರಣರಾಗಿದ್ದಾರೆ. ಈಚಿನ ಎರಡು ದಶಕಗಳಲ್ಲಿನ ಸಾಹಿತ್ಯ (ವಿಶೇಷವಾಗಿ ಸಣ್ಣ ಕತೆಯ ಕ್ಷೇತ್ರದಲ್ಲಿ) ಶ್ರೀ ಕೆ. ಡಿ. ಕುರ್ತಕೋಟಿಯವರ ನವ್ಯತೆಯನ್ನು ಕುರಿತ ಎಲ್ಲ ಅನುಮಾನಗಳಿಗೂ ಸ್ಪಷ್ಟ ಉತ್ತರವಾಗುವ ರೀತಿಯಲ್ಲಿ ಸೃಷ್ಟಿಯಾಗಿವೆ.

ಜಿ. ಎಸ್. ಸದಾಶಿವರು ಹಲವಾರು ಕಾರಣಗಳಿಂದ ಗಮನಾರ್ಹ ಕತೆಗಾರ ರಾಗಿದ್ದಾರೆ. ಈವರೆಗೆ ಅವರ ಎರಡು ಕಥಾ ಸಂಕಲನಗಳು – 'ಮಗುವಾಗಿ ಬಂದವನು' ಮತ್ತು 'ತುಣುಕುಗಳು' – ಬಂದಿದ್ದು ಅವರಿಗೆ ಪ್ರತ್ಯೇಕ ಅಸ್ತಿತ್ವವನ್ನು ತಂದುಕೊಟ್ಟಿವೆ. ಈ ಎರಡು ಸಂಕಲನಗಳು ಅವರ ವೈಶಿಷ್ಟ್ಯವನ್ನು ಸಿದ್ಧಪಡಿಸು ತ್ತವೆ.

ಮೊದಲ ಸಂಕಲನದಲ್ಲೇ 'ಮಗುವಾಗಿ ಬಂದವನು' 'ಕತ್ತಲೆಯ ನೆರಳು', 'ಉಳಿಯುವುದು ನೆನಪು ಮಾತ್ರ' 'ಅರವತ್ತು' – ಹೆಸರಿನ ನಾಲ್ಕು ಉತ್ತಮ ಕತೆಗಳನ್ನು ಕೊಟ್ಟಿರುವುದು ಅವರು ಒಳ್ಳೆಯ ಕತೆಗಾರರೆನ್ನುವುದನ್ನು ತೋರಿಸುತ್ತದೆ. ಎರಡನೆಯ ಸಂಕಲನ ಇದನ್ನು ಖಚಿತಪಡಿಸುತ್ತದೆ. ಅವರ ಕತೆಗಳ ಬಗ್ಗೆ ಕೆಲವು ಆಕ್ಷೇಪಗಳಿವೆ. ಸದಾಶಿವರ ವೈಶಿಷ್ಟ್ಯದಲ್ಲೇ ಅವಕ್ಕೆ ಉತ್ತರವಿರುವುದರಿಂದ ಒಟ್ಟಿಗೆ ಉತ್ತರಿಸದೆ ಆಯಾ ಸಂದರ್ಭದಲ್ಲೇ ಅವನ್ನು ವಿಮರ್ಶಿಸುತ್ತೇನೆ.

ಗಿರಡ್ಡಿಯವರು ಅಭಿಪ್ರಾಯಿಸಿರುವಂತೆ 'ಮಗುವಾಗಿ ಬಂದವನು' ಸಂಕಲನದ ಬಹಳ ಕತೆಗಳಲ್ಲಿ ಭಾವ ಸಾಮ್ಯತೆ, ಲಯಸಾಮ್ಯತೆಗಳು ಕಂಡು ಬರುವುದು ಮೇಲು ನೋಟಕ್ಕೆ ಮಾತ್ರ. ಸೂಕ್ಷ್ಮವಾಗಿ ಪರಿಶೀಲಿಸಿದರೆ ವಸ್ತುವಿನಲ್ಲಿ ಭಿನ್ನತೆ ಕಾಣಸದೆ ಇರುವುದಿಲ್ಲ.

'ಮಗುವಾಗಿ ಬಂದವನು' ಕತೆಯಲ್ಲಿ ರಾಮಚಂದ್ರ, ತನಗೂ ಶ್ಯಾಮಲೆಗೂ ಹುಟ್ಟಿದ ಮಗು ಅರುಣ ತನ್ನಿಂದ ಶ್ಯಾಮಲೆಯನ್ನು ಕಸಿದುಕೊಳ್ಳುತ್ತಿರುವಂತೆ ತೀವ್ರವಾದ ನೋವನ್ನು ಅನುಭವಿಸುತ್ತಾನೆ. ಶ್ಯಾಮಲೆಯನ್ನು ಅಧಿಕವಾಗಿ ಪ್ರೀತಿಸಿದ್ದರಿಂದ ಅವಳ ಮಾತೃ ಪ್ರೇಮವೂ ಸಹ ಅವನನ್ನು ಸಂದಿಗ್ಧ ಸ್ಥಿತಿಗೆ ಒಯ್ಯುತ್ತದೆ. ಮನಸ್ಸಿನ ಇಂತಹ ಒಂದು ವಿಚಿತ್ರ ಸ್ಥಿತಿಯನ್ನು ನಾಯಕನ ತುಮುಲದ ಮೂಲಕ ಕತೆಗಾರರು ಬಹಳ ಸಮರ್ಪಕವಾಗಿ ಚಿತ್ರಿಸಿದ್ದಾರೆ. ಇದು ಸಹಜವಾಗಿಯೇ ಅವನ ಸಮಸ್ಯೆಯಾದ್ದರಿಂದ ಕತೆಗಾರರು ಈ ಬಗ್ಗೆ ಯಾವುದೇ ತೀರ್ಮಾನವನ್ನು ಕೊಡುವುದಿಲ್ಲ,

'ಕತ್ತಲೆಯ ನೆರಳು' ಕತೆಯಲ್ಲಿನ ಶಶಿಯ ಮನೋವಿಕೃತಿ ಇನ್ನೂ ಸಂಕೀರ್ಣವಾದುದು. ಅವಳಿಗೆ ಮದುವೆಯಾಗಿದ್ದು, ಓಡಾಡಬಲ್ಲ ಮಗಳೊಬ್ಬಳಾಗಿದ್ದೂ ಕೂಡ ತನ್ನ ಬಾಲ್ಯದಲ್ಲಿನ ಪಕ್ಕದ ಮನೆಯ ಸ್ನೇಹಿತ ಚಂದ್ರು ಮನೆಗೆ ಬಂದಾಗ ಅರ್ಥವಾಗದ ಸೆಳೆತಕ್ಕೊಳಗಾಗುತ್ತಾಳೆ. ತನಗೂ ಅವನಿಗೂ ನಡುವೆ ಪ್ರೀತಿ ಇತ್ತೆ ಅಥವ ಸ್ನೇಹ ಮಾತ್ರ ಇತ್ತೆ? ಅವನು ಬಂದದ್ದು ಒಳ್ಳೆಯದಾಯಿತೆ ಅಥವಾ ಬಾರದೇ ಇದ್ದಿದ್ದರೇನೇ ಚೆನ್ನಾಗಿರುತ್ತಿತ್ತೆ? – ಯಾವುದೂ ಅವಳಿಗೆ ಅರ್ಥವಾಗುವುದಿಲ್ಲ. ಯಾವುದೋ ತನ್ನ ಅರಿವನ್ನು ಮೀರಿದ ಶಕ್ತಿ ಅವಳನ್ನು ಚಂದ್ರುವಿನ ಕಡೆಗೆ ಎಳೆಯುತ್ತಿರುವುದಂತೂ ನಿಜ. ಅದೇನೆಂದು ಕೊನೆಗೂ ಬಗೆ ಹರಿಯದೆಯೇ ಕತೆ ಮುಕ್ತಾಯವಾಗುತ್ತದೆ. ಇಲ್ಲೂ ಕತೆಗಾರರ ನಿರ್ಣಯ ಯಾವುದೂ ಇಲ್ಲ, ಅದು ನಮಗೆ ಬಿಟ್ಟಿದ್ದು. ಅನೇಕರಿಗೆ ಈ ವಸ್ತು ಅಸಹಜವಾಗಿ ಕಾಣಬಹುದು. ಆದರೆ ಇಂಥಹ ವಿಶಿಷ್ಟ ಮನಸ್ಥಿತಿಗಳು ಒಮ್ಮೊಮ್ಮೆ ಕೆಲವರಿಗೆ ಎದುರಾಗಬಹುದಾದ ಸಾಧ್ಯತೆಗಳಿವೆ. ಈ ಕತೆಯಲ್ಲಿ ವರ್ತಮಾನದ ಶಶಿಯ ಜೀವನದೊಂದಿಗೆ ಭೂತ ಕಾಲದ ಬಾಲ್ಯದ ನೆನಪುಗಳು ಪರ್ಯಾಯವಾಗಿ ನೆನಪಾಗುವ ರೀತಿಯ ಸಂಯೋಜನೆ ಸದಾಶಿವರ ಸಂವಿಧಾನ ಕುಶಲತೆಗೆ ಸಾಕ್ಷಿ. ಗಿರಡ್ಡಿಯವರು ಹೇಳಿರುವಂತೆ "ಕತೆಗಾರರು ಚಂದ್ರೂ–ಶಶಿಯರ ಮಾತುಕತೆಗಳ ನಡುವೆ ಶಶಿಯ ಯೋಚನಾ ತರಂಗಗಳ ನಡುವೆ ಹಳೆಯ ನೆನಪುಗಳನ್ನು ಹಮ್ಮಿಕೊಂಡಿರುವ ಯೋಜನೆ ತುಂಬ ಸಮರ್ಥವಾಗಿದೆ. ಈ ರೀತಿ ಕಥೆಯಲ್ಲಿ ಬಾಹ್ಯ ಘಟನೆಗಳು ಗೌಣವಾಗಿ ಒಳಗೊಳಗೇ ಆರಂಭವಾಗಿ, ತೊಡಕು ತೊಡಕಾಗುತ್ತ ಹೋಗಿ, ಕೊನೆಗೆ ಯಾವ ನಿಲುವಿಗೂ ಬಾರದೆ ಇಲ್ಲಿಯ ಯೋಚನಾತರಂಗ ಮುಗಿಯುತ್ತದೆ. ಇಂಥ ಸಣ್ಣ ಕಥೆಗಳಲ್ಲಿ ಬರವಣಿಗೆಯ ಧಾಟಿ, ಧ್ವನಿ ತುಂಬ ಮಹತ್ವ ಪಡೆಯುತ್ತವೆ."

'ಉಳಿಯುವುದು ನೆನಪು ಮಾತ್ರ' ಕತೆಯಲ್ಲಿನ ಕಾವೇರಿಯ ಮನಸ್ಸಿನ ನೋವು, ನಲಿವುಗಳು ಮತ್ತೊಂದು ರೀತಿಯವು. ತಾನಾಗಿಯೇ ಕುಪ್ಪುಸಕ್ಕೆ ಕೈಹಾಕುವ ಧೈರ್ಯವಿಲ್ಲದ ಗಂಡ ಶಂಕರಯ್ಯ, ಕಾವೇರಿಯೇ ಬತ್ತಲೆಯಾದ ಎದೆಯನ್ನು ಅವನೆದೆಗೆ ಒತ್ತಿದರೂ ಹಾವಿನಷ್ಟು ತಣ್ಣಗಿರುವ ಪ್ರವೃತ್ತಿಯವನಾದ್ದರಿಂದ, ನಿತ್ಯ ಜೀವನವಲ್ಲಿ ಇಷ್ಟೆ ತನಗೆ ಎಂದು ಗೆರೆ ಹಾಕಿಕೊಂಡು ಓಡಾಡುತ್ತಿದ್ದರೂ ದೇಹದ ಬಯಕೆ ಅಂತರಿಕ್ಷಕ್ಕೆ ಕಾಲು ಹಾಕುತ್ತಿತ್ತಾದ್ದರಿಂದ ಆಕೆ, ಅಕಸ್ಮಾತ್ತಾಗಿ ಮನೆಗೆ ಬಂದ ರಂಗರಾಯರಿಗೆ ತನ್ನನ್ನು ಒಪ್ಪಿಸಿಕೊಳ್ಳುತ್ತಾಳೆ. ಈ ನೆನಪು ಸದಾ ಹಸಿಯಾಗಿ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತು ಬಿಡುತ್ತದೆ. ರಂಗರಾಯರ ಮಗ ರಮೇಶ ಮನೆಗೆ ಬಂದಾಗ ಅದು ಮರುಕಳಿಸಿ ಮನುಷ್ಯನ ಜೀವನದಲ್ಲಿ ಉಳಿಯುವುದು ನೆನಪು ಮಾತ್ರ ಎಂಬ ಸತ್ಯವನ್ನು ಸ್ಥಿರಪಡಿಸುತ್ತದೆ. ಈ ಕತೆಯಲ್ಲಿ ರಮೇಶ ಬಂದಾಗ ಅವನ ಮಾತುಗಳಲ್ಲಿ, ನಡವಳಿಕೆಯಲ್ಲಿ, ಒದಗುವ ಸನ್ನಿವೇಶಗಳಲ್ಲಿ ಮತ್ತೆ ಮತ್ತೆ ಕಾವೇರಿಯ

ಹಿಂದಿನ ಅನುಭವಕ್ಕೆ ಅನ್ವಯವಾಗುವ ವಿವರಗಳೇ ಘಟಿಸುವಂತಹ ಹೊಸ ರೀತಿಯ ಸಂಯೋಜನೆ, ಭೂತ ವರ್ತಮಾನಗಳ ನಡುವೆ ಹೊಯ್ದಾಡಿ ಕತೆ ಗಟ್ಟಿ ಮುಟ್ಟಾಗುವಂತೆ ಮಾಡಿದೆ. ಈ ಸಂಯೋಜನ 'ಕತ್ತಲೆಯ ನೆರಳು' ಕತೆಯಲ್ಲಿಗಿಂತ ಇಲ್ಲಿ ಸಮರ್ಥವಾಗಿ ಬಂದಿದೆ.

'ಅರವತ್ತು' ಕತೆಯ ಅರವತ್ತು ವಯಸ್ಸಿನ ಶೇಷಪ್ಪಯ್ಯ ಅನುಭವದ ಘಟ್ಟಿಯಾಗಿ ಕಾಣಿಸಿಕೊಂಡು, ಆ ವಯಸ್ಸಿಗೆ ಬದುಕನ್ನು ನೆಚ್ಚಿದ ಒಬ್ಬ ವ್ಯಕ್ತಿಯ ಭಾವತರಂಗಗಳು, ದುಡಿದು ಮಾಡಿಟ್ಟ ಅಡಿಕೆಯ ತೋಟ ಹಾಗೂ ತನ್ನ ಮಕ್ಕಳು ಮೊಮ್ಮಕ್ಕಳನ್ನು ಕುರಿತ ವ್ಯಾಮೋಹ, ಅವರ ಭವಿಷ್ಯದ ಬಗೆಗಿನ ಕಾಳಜಿ, ಜೀವನದ ಪರಿಮಿತಗಳು, ನೈತಿಕ ಪ್ರಜ್ಞೆಯ ತುಯ್ತ ಇತ್ಯಾದಿ ಎಲ್ಲ ಮೌಲ್ಯಗಳ ಮೂರ್ತರೂಪನಾಗಿ ಚಿತ್ರಿತವಾಗಿರುವ ರೀತಿ ತುಂಬ ಪರಿಣಾಮಕಾರಿಯಾದುದು. ಆತನ ಒಟ್ಟು ವ್ಯಕ್ತಿತ್ವದ ಚಿತ್ರಣ ಸಮಗ್ರವಾಗಿ ನಿರೂಪಿತವಾಗಿರುವುದೇ ಈ ಕತೆಯ ಸಾಫಲ್ಯವಾಗಿದೆ. ಆತನ ಜೀವನದ ಪಕ್ವತೆಯಿಂದಾಗಿ, ಕತೆಯಲ್ಲಿನ ಕೆಲವು ಹೇಳಿಕೆಗಳೂ ಕೂಡ ಅರ್ಥವಂತಿಕೆಯನ್ನು ಗಳಿಸಿಕೊಂಡುಬಿಡುತ್ತವೆ. ಬದುಕಿನಲ್ಲಿ ಬದಲಾವಣೆ ಬಂದಾಗ ಅದಕ್ಕೆ ಹೊಂದಿಕೊಳ್ಳಲೇಬೇಕೆಂಬ ಇಲ್ಲಿನ ನಿಷ್ಠುರ ಸತ್ಯವೂ ಕೂಡ ಹೇಳಿಕೆಯಾಗಿಯೇ ಉಳಿಯುವುದಿಲ್ಲ ಎನ್ನುವುದನ್ನು ಗಮನಿಸಬೇಕು.

ಹೀಗೆ ಎಲ್ಲ ಕತೆಗಳ ಮುಖ್ಯ ಸಮಸ್ಯೆಯೂ ಯಾವುದೋ ಒಂದು ಪರಿಸರಕ್ಕೆ ಸಿಲುಕಿದ ವಿಶಿಷ್ಟ ಮನಸ್ಸಿನ ವಿಶ್ಲೇಷಣೆಯೆ ಆಗಿರುವುದರಿಂದ, ಧಾಟಿ ಒಂದೇ ಆಗಿ ಕಾಣಿಸಿದರೂ ಆ ಸಮಸ್ಯೆಯ ಮುಖ ಪ್ರತಿಯೊಂದು ಕತೆಯಲ್ಲೂ ಭಿನ್ನರೀತಿಯದಾಗಿದೆ. ಗಿರಡ್ಡಿಯವರು ಹೇಳುವಂತೆ ಇಲ್ಲಿನ ನಾಯಕ ಪಾತ್ರಗಳೆಲ್ಲ ಅಂತರ್ಮುಖಿಗಳಾದ ಸ್ವಗತ ಭಾಷಣಕಾರರೇ ಆದರೂ, ಅವರ ನೋವು ಜೀವಂತವಾಗುವುದರಿಂದ ಆ ಭಾಷಣಗಳೂ ಕೂಡ ಸದಾಶಿವರ ಸಂವಿಧಾನಕೌಶಲ್ಯದಿಂದ ಕತೆಗಳಾಗುತ್ತವೆ ಎನ್ನುವುದು ಗಮನಿಸಬೇಕಾದ ಸಂಗತಿ. (ಇದಕ್ಕೆ ಅಪವಾದಗಳಿಲ್ಲವೆಂದೇನೂ ಈ ಮಾತಿನ ಅರ್ಥವಲ್ಲ.) "ಹೇಳಬೇಕಾದ್ದನ್ನು ಹೇಳುವುದರಲ್ಲಿ" ತಂತ್ರ ಯಶಸ್ವಿಯಾದಾಗ ಸದಾಶಿವ ಅವರು ಬರೇ Shadow – boxing ಮಾಡುತ್ತಿದ್ದಾರೆ ಎನ್ನುವ ಅನುಮಾನ ಉಳಿಯುತ್ತದೆ." ಎನ್ನುವ ಡಿ. ಎ. ಶಂಕರ್ ಅವರಿಗೂ ಕೂಡ ಇದೇ ಉತ್ತರವಾಗುತ್ತದೆ. ಇನ್ನೂ ತಂತ್ರ ಯಶಸ್ವಿಯಾಗದಿರುವ ವಿಫಲ ಕತೆಗಳ ಮಟ್ಟಿಗೆ (ಉದಾಹರಣೆಗೆ 'ಸ್ನೇಹಿತ') ಈ ಅಭಿಪ್ರಾಯ ಅನ್ವಯವಾಗುತ್ತದೆ.

"ನಮ್ಮ ಸಮಸ್ಯೆಯ ಒಟ್ಟು ನಿಲುವೇನು ಎಂದು ಶೋಧನೆಯಲ್ಲಿ ತೊಡಗಿರುವ ಈ ಪಾತ್ರಗಳು ಕೊನೆಗೂ ಯಾವ ಮಟ್ಟಿಗೂ ಹತ್ತದೆ ಯಾವುದೋ ಒಂದು ಕ್ಷಣದಲ್ಲಿ ಸುಮ್ಮನಾಗಿ ಬಿಡುತ್ತವೆ" ಎನ್ನುವುದು ಗಿರಡ್ಡಿಯವರ ಮತ್ತೊಂದು

ಆಕ್ಷೇಪ. ಪಾತ್ರಗಳು ಕೊನೆಯಲ್ಲಿ ಒಂದು ಮಟ್ಟಿಗೆ ಪತ್ತೆಯಾಗಬೇಕೆಂಬ ನಿಯಮವೇನೂ ಇಲ್ಲ. ಹಾಗೆ ಮಾಡಿದರೆ ಇಲ್ಲಿ ಸಮಂಜಸವೂ ಆಗುವುದಿಲ್ಲ. ವಿಕ್ಷಿಪ್ತ ಮನಸ್ಸುಗಳ ಸಂವೇದನೆಯ ಪದರುಗಳನ್ನು ಅವು ಇರುವ ಸ್ಥಿತಿಯಲ್ಲಿ ಕಲಾತ್ಮಕವಾಗಿ ನಮ್ಮ ಮುಂದಿಡುವುದಷ್ಟೇ ಸದಾಶಿವರ ಕತೆಗಾರಿಕೆಯ ಗುಟ್ಟಾಗಿದೆ. ಈ ವಿಶ್ಲೇಷಣೆಯೇ ನಮ್ಮ ಮುಂದೆ ಅನೇಕ ಸತ್ಯದ ಬಾಗಿಲುಗಳನ್ನು ತೆರೆಯುವುದರಲ್ಲಿ ಸಂದೇಹವಿಲ್ಲ. ಇಲ್ಲೇ ಸದಾಶಿವರು ಗೆಲ್ಲುತ್ತಾರೆ ಎಂದು ನನಗನ್ನಿಸುತ್ತದೆ. ಅವರು ಒಂದು ಪೂರ್ವ ನಿರ್ಣಯವನ್ನು ಇಟ್ಟುಕೊಂಡು ಅದಕ್ಕೆ ಹೊಂದುವಂತೆ ಅನುಭವಗಳನ್ನು ಹೆಣೆಯುತ್ತ ಹೋಗುವುದಿಲ್ಲ. ಇಂಥ ರೀತಿ ತನ್ನ ವ್ಯಾಖ್ಯಾನಕ್ಕೆ ಜಗತ್ತನ್ನು ಹೊಂದಿಸಿ ತೋರಿಸುವ ಅಪ್ರಬುದ್ಧ ರೀತಿಯಾಗುತ್ತದೆ. ಅನುಭವಗಳನ್ನು ಕೇವಲ ಶೋಧಿಸುತ್ತ ಹೋಗುವ. ದೊರೆತ ಸತ್ಯವನ್ನು (ಅದು ನಮ್ಮ ಸಾಮಾಜಿಕ ಕಟ್ಟುಪಾಡುಗಳನ್ನು ಅಣಕಿಸುವಂಥದಾಗಿದ್ದರೂ) ಒಪ್ಪಿಕೊಳ್ಳುತ್ತ ಹೋಗುವ ಪ್ರಾಮಾಣಿಕ ದೃಷ್ಟಿ ಅವರದು. ಇದು ಸನ್ನಿವೇಶಗಳ ವಿನ್ಯಾಸಕ್ರಮದಲ್ಲೇ ತಿಳಿಯುತ್ತದೆ. ಇಂಥವರ ಕತೆಗಳಲ್ಲಿ ಪರೀಕ್ಷಿತವಾಗುವ ಸತ್ಯ ಕೂಡ ತರ್ಕಬದ್ಧವಾದ ಮಾತುಗಳಲ್ಲಿ ಒಂದು ತತ್ವರೂಪದಲ್ಲಿ ಹೇಳುವಷ್ಟು ಒಡ್ಡಾದದ್ದಲ್ಲ. ಗಿರಡ್ಡಿಯವರನ್ನು ಗಲಿಬಿಲಿಗೊಳಿಸಿದ ಅಂಶ ಇದೇ ಎನ್ನಿಸುತ್ತದೆ. ಈ ಪಾತ್ರಗಳ ನಡವಳಿಕೆಗಳ ಅರ್ಥವೇನು ಎಂದು ಹುಡುಕುವುದು ಏಕೆ? ಮನುಷ್ಯನ ನಡವಳಿಕೆಗಳು ಹೀಗಿವೆ ಎನ್ನುವುದೇ ಅವುಗಳ ಅರ್ಥ. ಇದರ ಆಚೆಗೆ ಅರ್ಥ ಹುಡುಕಹೋದರೆ ಹರಿಯುವ ನದಿಯ ಅರ್ಥ ಏನು? ಹಾರುವ ಹಕ್ಕಿಯ ಅರ್ಥ ಏನು? ಎಂದು ಹುಡುಕಹೊರಟಂತಾಗುತ್ತದೆ. ಅದರೆ, "ಈ ಪಾತ್ರಗಳು ತಾವೇನು ಮಾಡುತ್ತಿದ್ದೇವೆಂದು ತಿಳಿದುಕೊಂಡು ಅದರ ವಿಷಯದಲ್ಲಿ ಜಾಗರೂಕವಾಗಿವೆ" ಎನ್ನುವ ಅವರ ಮಾತು ನಿಜ. ಆಯ್ದುಕೊಂಡಿರುವ ನಾಯಕರು ಬಹುಮಟ್ಟಿಗೆ ಪ್ರಬುದ್ಧರೇ ಆಗಿರುವರಾಗಿ ಇದು ಸಹಜವಾಗಿಯೇ ಇದೆ ಮತ್ತು ಕತೆಗಾರರ ಪ್ರಾಮಾಣಿಕತೆಯೂ ಆಗಿದೆ. ಇಲ್ಲಿ ಮತ್ತೊಂದು ಮಾತನ್ನೂ ಹೇಳಿಬಿಡಬೇಕು. ಈ ಬಗೆಯ ವಸ್ತುಗಳ ನಿರೂಪಣೆಯಾದಾಗ, ಗಿರಡ್ಡಿಯವರು ಹೇಳುವಂತೆ "ಬರವಣಿಗೆಯ ಹಲವು ರೀತಿ ವೈವಿಧ್ಯಗಳನ್ನು ಒಳಗೊಳ್ಳುವ ಹರವಾಗಲಿ, ಆಳವಾಗಲಿ ಇಲ್ಲಿ ಕಾಣುವುದಿಲ್ಲ" ವಾದರೂ ಪ್ರತಿ ಕತೆಗಾರನಿಂದಲೂ ಇದನ್ನು ನಿರೀಕ್ಷಿಸುವುದು ಅಷ್ಟು ಸರಿಯೆನಿಸುವುದಿಲ್ಲ; ಇದು ಬೇಕೆನ್ನುವುದು ನಿಜವಾದರೂ, ಸದಾಶಿವರ ಬರವಣಿಗೆಯ ರೀತಿ ಇದಿಲ್ಲದೆಯೂ ಕೂಡ ಮತ್ತೊಂದು ವೈಶಿಷ್ಟ್ಯವನ್ನು ಪಡೆದುಕೊಂಡಿದೆಯೆಂದು ಗಣನೆಗೆ ತಂದುಕೊಂಡರೆ ಈ ಸಂದೇಹ ಮುಗುಚಿಕೊಳ್ಳುತ್ತದೆ.

ಒಟ್ಟಾರೆ ಸದಾಶಿವರ ಕತೆಗಳಲ್ಲಿ, ಕಂಡುಬರುವ ಪ್ರಮುಖ ಅಂಶವೆಂದರೆ. ಮನಸ್ಸು ತನ್ನ ಸೂಕ್ಷ್ಮತೆಯಿಂದಾಗಿ ಪರಿಸ್ಥಿತಿಗೆ ಬಗ್ಗಿ, ಬಂದದ್ದನ್ನು ತಿಳಿದೂ ಕೂಡ

ಅಸಹಾಯಕತೆಯಿಂದಾಗಿ ಒಪ್ಪಿಕೊಂಡು ಅದಕ್ಕೆ ಒಗ್ಗಿಕೊಳ್ಳಬೇಕಾದ ಅವಶ್ಯಕತೆಯ ಅರಿವನ್ನುಂಟುಮಾಡುವುದು ಈ ಅನಿವಾರ್ಯ ಸತ್ಯ ಅವರ ಕತೆಗಳನ್ನು ಆಳವಾಗಿ ಪರಿಶೀಲಿಸಿದಾಗ ತಿಳಿಯದೆ ಇರುವುದಿಲ್ಲ. ಪ್ರಮುಖ ಕತೆಗಾರನಿಗೆ ಈ ಬಗೆಯ ಒಂದು ದೃಷ್ಟಿಕೋನ, ನಿಲುವು ಸಾಮಾನ್ಯವಾಗಿ ಇರುತ್ತದೆ; ಇದೇ ಅವನ ವಿಶಿಷ್ಟತೆಯೂ ಆಗಿರುತ್ತದೆ.

ಗಿರಡ್ಡಿಯವರೇ ಹೇಳಿರುವಂತೆ, "ಅನುಭವದ ಸ್ವರೂಪವನ್ನು ಎಷ್ಟು ರೀತಿಯಿಂದ ಬಿಡಿಸಿ ಬಿಡಿಸಿ ತೋರಿಸಿದರೂ ತೀರದ ಕುತೂಹಲವನ್ನು ಸದಾಶಿವರ ಎಲ್ಲ ಕತೆಗಳಲ್ಲೂ ಕಾಣುತ್ತೇವೆ." ಈ ಕಾರಣದಿಂದಲೂ ಕೂಡ ಅವರ ಕತೆಗಳು ತಮ್ಮ ಸ್ವಂತಿಕೆಯನ್ನು ಕಾಯ್ದುಕೊಂಡಿವೆ ಎನಿಸುತ್ತದೆ.

ಇಷ್ಟಾದರೂ ಗಿರಡ್ಡಿಯವರಿಗೆ, "ಸದಾಶಿವರು ಅಭಿವ್ಯಕ್ತಿ ಕೊಡಬೇಕೆನ್ನುವ ಅನುಭವಗಳಿಗೆ ಇನ್ನೂ ವಜನು ಸಾಲದು ಎನಿಸಿ"ರುವುದು ವಿಸ್ಮಯವನ್ನುಂಟು ಮಾಡುತ್ತದೆ. ಮನೋವಿಶ್ಲೇಷಣೆಯೇ ಪ್ರಮುಖವಾಗಿರುವ ಸದಾಶಿವರ ಕತೆಗಳಲ್ಲಿ ಮನಸ್ಸಿನಾಳದಲ್ಲಿ ಹುದುಗಿಕೊಂಡಿರುವ ಅವ್ಯಕ್ತ ಆಕಾಂಕ್ಷೆಗಳು, ರಾಗದ್ವೇಷಗಳು ಅವುಗಳ ಸಮಗ್ರ ವಿವರಗಳ ಸಹಿತ ಮೂಡಿ ಕಲಾತ್ಮಕವಾಗಿ ಕಾಣಿಸಿಕೊಳ್ಳುತ್ತವೆ. ಅವಕ್ಕೆ ಹಿನ್ನೆಲೆ ಗುರುತರವಾದ ಅನುಭವವೇ ಆಗಿದೆ ಎನ್ನುವುದು ಎಂಥವರಿಗಾದರೂ ತಿಳಿದೀತು. ಮತ್ತೂ ಆಶ್ಚರ್ಯವೆಂದರೆ ಗಿರಡ್ಡಿಯವರು ಸದಾಶಿವರ ಕತೆಗಳಲ್ಲಿನ ಕೊರತೆಗಳೆಂದು ಭಾವಿಸುವ, "ಭಾವ ಅನಿರ್ವಚನೀಯವಾಗಿರಬೇಕು, ಗಟ್ಟಿಮುಟ್ಟಾಗಿರಬೇಕು, ಬದುಕಿನ ಆಳವಾದ ರಹಸ್ಯವನ್ನು ಅನುಭವಕ್ಕೆ ಮುಟ್ಟಿಸುವಂತಿರಬೇಕು" ಎನ್ನುವ ಅಂಶಗಳೇ ಸದಾಶಿವರ ಕತೆಗಳ ಗುಣಗಳಾಗಿರುವುದು. ಅವರು ಹೀಗೆ ಭ್ರಮಿಸಿರಲು ಕಾರಣ ಬಹುಶಃ ಈ ಕತೆಗಳಲ್ಲಿ ಅಮೂರ್ತತೆಯಾಗಲಿ, ಸಾಂಕೇತಿಕತೆಯಾಗಲಿ, ಸಾಂದ್ರ ಬರವಣಿಗೆಯಾಗಲಿ ಇಲ್ಲದಿರುವುದೇ ಇರಬೇಕು. ಶಂಕರ್ ಅವರಿಗೆ ಸಹ ಸದಾಶಿವರ ಬರವಣಿಗೆಯ ರೀತಿಯಲ್ಲೇ ಕೆಲವೊಂದು ಮಿತಿಗಳಿದ್ದುವು ಎಂದೆನಿಸಿದೆ. ಆದರೆ ಸದಾಶಿವರು ಇದಾವುದಕ್ಕೂ ಸಿಕ್ಕದೆ ಮನಸ್ಸಿನಾಳದಲ್ಲಿ ಹುದುಗಿದ ಸೂಕ್ಷ್ಮ ಸತ್ಯಗಳನ್ನು ನಮಗೆ ಗೋಚರಿಸಿಕೊಳ್ಳುವ ಸ್ವರೂಪಕ್ಕೆ ಹೊಂದುವ ನವುರಾದ ಶೈಲಿಯಲ್ಲೇ, ಸಂವೇದನೆಗಳನ್ನು ಕಟ್ಟಿಡುವ ವಿನ್ಯಾಸದಲ್ಲೇ ಮೂಡಿಸಿಕೊಡುತ್ತಾರೆ. ಘಟನೆಗಳು ಗೌಣವಾಗಿದ್ದೂ ಕಲಾತ್ಮಕವಾದ ಅನುಭವದ ಅಭಿವ್ಯಕ್ತಿಯಿಂದಾಗಿ ಅವು ಕತೆಗಳಾಗಿ ಉಳಿದುಕೊಳ್ಳುತ್ತವೆ. ಈ ಗುಣದಿಂದಲೇ ನನಗೆ ಅವರು ಪ್ರತ್ಯೇಕ ರೀತಿಯ ಕತೆಗಾರರಾಗಿ ಕಾಣುತ್ತಾರೆ. ಪ್ರತಿಯೊಬ್ಬ ಸಮರ್ಥ ಕತೆಗಾರನೂ ತನ್ನ ವಸ್ತುವಿಗೆ ತಕ್ಕ ಶೈಲಿಯನ್ನು, ತಂತ್ರವನ್ನು ತನ್ನದೇ ಆದ ರೀತಿಯಲ್ಲಿ ಕಂಡುಕೊಂಡು, ವಿವರಗಳನ್ನು ಅದಕ್ಕೆ ಅಧೀನಗೊಳಿಸುತ್ತಾನೆ.

ಆದರ ಮೂಲಕವೆ ಅವನ ಮೌಲ್ಯ ನಿರ್ಣಯವನ್ನು ಮಾಡಬೇಕು ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಇನ್ನು ಅವರ ಎರಡನೆಯ ಸಂಕಲನ ' ತುಣುಕುಗಳು ' ಕತೆಗಳನ್ನು ವಿಶ್ಲೇಷಿಸುತ್ತ, ಅವರ ನಿಲುವುಗಳು ಬದಲಾಗಿವೆಯೇ ಮತ್ತು ಅವರು ಯಾವುದಾದರೂ ರೀತಿಯಲ್ಲಿ ಬೆಳೆದಿದ್ದಾರೆಯೇ ಎಂದೂ ಆಯಾ ಸಂದರ್ಭದಲ್ಲೇ ನೋಡಬಹುದು.

ಮೊದಲ ಕತೆ 'ಸಹಜ ಹೊರದಾರಿ', ಯಾರೊಡನೆಯೂ ಸಂಬಂಧ ಬೆಳೆಸಿಕೊಳ್ಳಲಾಗದ, ಯಾರಿಂದಲೂ ಭಿನ್ನನಾಗಿ ಉಳಿಯಲಾಗದ, ಯಾವ ಪರಿಸ್ಥಿತಿಗೂ ಹೊಂದಿಕೊಳ್ಳಲಾಗದ ಅನಾಥ ಪ್ರಜ್ಞೆಯಿಂದ ಬಳಲುವ ವ್ಯಕ್ತಿಯ ಚಿತ್ರಣ. ಇದಕ್ಕೆ ಅವನೇ ಕಾರಣನಾದ್ದರಿಂದ ತನ್ನ ಕತೆಗೆ ತಾನೇ ನಾಯಕ, ತಾನೇ ಖಳನಾಯಕ ಎಂದು ಅವನೇ ಹೇಳಿಕೊಳ್ಳುತ್ತಾನೆ. ಈ ದೌರ್ಬಲ್ಯದಿಂದ ಅವನಿಗೆ ಸಹಜ ಹೊರದಾರಿ, ಶಂಕರ್ ಅವರು ಹೇಳುವ ಹಗಲುಗನಸಿನಿಂದಾಗಲಿ, ಅವನ ಜಗತ್ತನ್ನು ಕುರಿತ ಆಲೋಚನೆಗಳಿಂದಾಗಲಿ ಲಭಿಸುವುದಿಲ್ಲ. ಇರುವ ಒಂದೇ ಬಿಡುಗಡೆಯದಾರಿ, ನಿದ್ದೆ. ಯೋಚನೆಯಲ್ಲೇ ಉದ್ಭವಿಸಿದ ಬೇಸರವನ್ನು ಯೋಚನೆಯಿಂದಲೇ ಬಗೆಹರಿಸಿಕೊಳ್ಳಲು ಪ್ರಯತ್ನಿಸುವ ನಾಯಕನ ಪೇಚಾಟ ಅವನ ಸೋಲೂ ಹೌದು, ದುರಂತವೂ ಹೌದು. ಇದು ಅವನೊಬ್ಬನ ದೌರ್ಬಲ್ಯವಾಗಿ, ಸಾರ್ವತ್ರಿಕತೆಯನ್ನು ಪಡೆದುಕೊಳ್ಳುವುದಿಲ್ಲವಾಗಿ ಅವನಿಗೆ ಆ ಕರ್ಮ ತಪ್ಪಿದ್ದಲ್ಲ. ಅವನ ಸೋಲಿಗೆ ನಾವು ಮರುಕಪಡಬೇಕಾದ ಅವಶ್ಯಕತೆಯೂ ಇಲ್ಲ. ಅವನ ವಿಚಿತ್ರ ಸ್ಥಿತಿ ಎಲ್ಲ ವಿವರಗಳೊಂದಿಗೆ ಮೈತಾಳಿದ್ದರೂ ಕೂಡ, ಕತೆ ಬರಿಯ ವರದಿಯಾಗಿ ಕಾಣಿಸಿಕೊಂಡು ಪರಿಣಾಮ ಬೀರುವುದರಲ್ಲಿ ಸೋಲುತ್ತದೆ.

'ಕಾರಣ' ಮೂವರು ವ್ಯಕ್ತಿಗಳ ವಿಭಿನ್ನ ಮನಸ್ಸುಗಳ ತಾಕಲಾಟದ ಯಶಸ್ವೀ ನಿರೂಪಣೆ. ಇಲ್ಲಿ, ನಾರಾಯಣ–ತನ್ನ ಮತ್ತು ಹೆಂಡತಿ ಸರೋಜಳ ಸಂಬಂಧಕ್ಕಿಂತ ವಿಶ್ವನಾಥನೊಡನೆ ಇದ್ದ ಸಂಬಂಧ ಸ್ನೇಹಗಳ ಆಳ ಹೆಚ್ಚೆಂದು ತಿಳಿದದ್ದು; ಸರೋಜ–ತನ್ನ ಗಂಡನನ್ನು ಸಂಪೂರ್ಣ ವಶಪಡಿಸಿಕೊಳ್ಳಬೇಕೆನ್ನುವ ಮೋಹಿನೀ ಮನಸ್ಸಿದ್ದರೂ ತಕ್ಕರೀತಿಯಲ್ಲಿ ಪ್ರಯತ್ನಿಸದೇ ಇದ್ದದ್ದು; ವಿಶ್ವನಾಥ–ಅವರ ನಡುವಿನ ಗೊಂದಲಕ್ಕೆ ತಾನು ಕಾರಣನೆಂದು ತಿಳಿದೂ ಕೂಡ ತನ್ನ ಸ್ನೇಹದ ಕೃತಕತೆಯನ್ನು ಪ್ರಕಟಿಸದೆ ಇದ್ದದ್ದು, ಮೂವರದೂ ತಪ್ಪಾಗಿ ಆ ಮೂಲಕ ಅವರು ಪರಸ್ಪರ ಘರ್ಷಣೆಗೆ ಒಳಗಾಗಲು 'ಕಾರಣ' ವಾಗುತ್ತದೆ. ಈ ರೀತಿಯ ಪರಸ್ಪರ ವ್ಯಕ್ತಿಗಳ ನಡುವಿನ ಮೋಹ, ಮತ್ಸರ, ಕೋಪ ಇತ್ಯಾದಿ ಮನುಷ್ಯನ ಮೂಲಭೂತ ಗುಣಗಳನ್ನು ಅವುಗಳ ಕಾರಣದಿಂದಾದ ಮನಸ್ಸಿನ ಸಣ್ಣತನವನ್ನು ಸೂಕ್ಷ್ಮ ಅಂಶಗಳ ಮೂಲಕ ಚಿತ್ರಿಸಿರುವುದನ್ನು ನೋಡಿದರೆ ಸದಾಶಿವರ ಮನುಷ್ಯನ

ಸ್ವಭಾವಗಳ ಆಳ ಅಭ್ಯಾಸದ, ನಿಶಿತ ಪರಿಶೀಲನೆಯ ಆರೋಗ್ಯಕರ ಪ್ರವೃತ್ತಿ ಮನವರಿಕೆಯಾಗುತ್ತದೆ. (ಇದನ್ನು ಅವರ ಎಲ್ಲ ಕತೆಗಳಲ್ಲಿಯೂ ಕಾಣಬಹುದು). ವಿಶೇಷವೆಂದರೆ ಮನುಷ್ಯ ಇಂತಹ ಸ್ಥಿತಿಗಳಿಗೆ ಪಕ್ಕಾದಾಗ ಎಂತಹ ಬಾಲಿಶನಾಗಿ ವರ್ತಿಸುತ್ತಾನೆ ಎನ್ನುವುದು. ಸರೋಜ ಗಂಡನನ್ನು ತಾತ್ಸಾರಭಾವನೆಯಿಂದ ಕಾಣುವುದು, ನಾರಾಯಣ ತನ್ನ ತಪ್ಪು ತಿದ್ದಿಕೊಳ್ಳದೆ ಗಜಿಬಿಜಿಗೆ ಕಾರಣ ರೇಡಿಯೋ ಎನ್ನುವಂತೆ ಅದನ್ನು ಮಾರಲು ಬಯಸುವುದು. ವಿಶ್ವನೊಂದಿಗೆ ಚಿಕ್ಕಂದಿನಲ್ಲಿ ಬಟ್ಟೆ ಕಳಚಿ ಹಾಸಿಗೆಯಲ್ಲಿ ಒಟ್ಟಿಗೆ ಮಲಗಿದ್ದನ್ನು ಹೇಳುವ ಮೂಲಕ ಸರೋಜಳಿಗೆ shock ಕೊಡಲು ಪ್ರಯತ್ನಿಸುವುದು. ಅವಳ ಸಾಹಿತ್ಯಾಭ್ಯಾಸ ಚಲನಚಿತ್ರಗಳ ಅಭಿರುಚಿಯ ಬಗ್ಗೆ ಕೆಣಕುವುದರ ಮೂಲಕ ಅವಳ ಭಾವಪರತೆಯನ್ನು ಪ್ರಶ್ನಿಸುವುದು–ಇಂತಹ ಕೆಲವು ಸ್ಥಿತಿಗಳಾಗಿವೆ. ಇಂತಹ ಸೂಕ್ಷ್ಮ ವಿಷಯಗಳು ಒಬ್ಬ ಒಳ್ಳೆಯ ಕತೆಗಾರನ ಕಣ್ಣಿಗೆ ಮಾತ್ರ ಬೀಳಲು ಸಾಧ್ಯ. ಕೊನೆಯಲ್ಲಿ, ಈ ಗೊಂದಲಕ್ಕೆ ಏಕಮೇವ ಪರಿಹಾರವಾದ್ದರಿಂದ ವಿಶ್ವನಾಥ ಆ ಊರು ಬಿಡುತ್ತಾನೆ. ಅವನು ರಂಗದಿಂದ ಮರೆಯಾದಮೇಲೆ ದಂಪತಿಗಳು ಸನ್ನಿಹಿತರಾಗುತ್ತಾರೆ. 'ಸರೋಜ ಹಾಸಿಗೆಯ ಕೊಳೆಬಟ್ಟೆಯನ್ನು ಬದಲು ಮಾಡಿ ಹೊಸ ಬೆಡ್‌ಶೀಟ್ ಹಾಕಿ ದಿಂಬಿಗೆ ಕವರನ್ನು ತೊಡಿಸುತ್ತಾಳೆ' ಎಂಬ ಕೊನೆಯವಾಕ್ಯ ಇದನ್ನು ಸಂಕೇತಿಸುತ್ತದೆ. ವಿಶ್ವನಾಥ, ತಾನು ಮುಂಬಯಿಗೆ ತೆರಳುವುದಾಗಿ ತಿಳಿಸಿ ಗೇಟು ದಾಟಿ ಸರೋಜಳ ಕಣ್ಣಿನಲ್ಲಿ ನೀರು ತುಂಬಿದಾಗ ಕತೆ ಹೆಚ್ಚು ಮಾನವೀಯ ವಾಗುತ್ತದೆ.

ಈ ಕತೆ ಸದಾಶಿವರ ಬಹುಪಾಲಿನ ಕತೆಗಳಂತೆ ಒಬ್ಬ ವ್ಯಕ್ತಿಯ ಸಮಸ್ಯೆಯಾಗಿರದೆ ಸಂಕೀರ್ಣವಾದ ಹಲವು ವ್ಯಕ್ತಿಗಳ ನಡುವೆ ಸಂಭವಿಸಿ, ಸಾರ್ವತ್ರಿಕ ಅಂಶಗಳನ್ನು ಹೊಂದಿರುವುದು ಅವರ ಬೆಳವಣಿಗೆಯನ್ನು ತೋರಿಸುತ್ತದೆ. ಅಲ್ಲದೆ ಇಲ್ಲಿನ ಘಟನೆಗಳು ವಸ್ತುವಿಗೆ ಪೂರಕವಾಗಿ ಬಂದು ಮುಗಿದಂತೆಲ್ಲಾ ಅದನ್ನು ಹೊಮ್ಮಿಕೊಂಡು ಒಂದು ಸ್ವರೂಪವನ್ನು ಪಡೆದುಕೊಂಡು ಪರಿಣಾಮವನ್ನು ಸಮಗ್ರವಾಗಿ ಬೀರುವುದರಿಂದ 'ಕಾರಣ' ಸಂಕಲನದ ಯಶಸ್ವೀ ಕತೆಗಳಲ್ಲಿ ಒಂದಾಗಿದೆ.

ಈ ಕತೆಯ ಹೊತ್ತಿಗಾಗಲೇ ಸದಾಶಿವರ ಭಾಷೆ ಹಿಂದಿನ ಕತೆಗಳಿಗಿಂತ ಹೆಚ್ಚಿನ ಕಸುವನ್ನು ಗಳಿಸಿಕೊಳ್ಳುತ್ತಿರುವುದನ್ನು ನೋಡಬಹುದು. ಈ ಸಂಕಲನದ ಕತೆಗಳಲ್ಲಿ ಪದಗಳ ಜೋಡಣೆ, ವಾಕ್ಯಗಳ ಸಂಯೋಜನೆ, ಭಾವನೆಗೆ ತಕ್ಕಂತೆ ಅವು ಓಡುವುದನ್ನು ಥಟ್ಟನೆ ನಿಂತುಬಿಡುವುದನ್ನು ಮುರಿದುಕೊಳ್ಳುವುದನ್ನು ಗಮನಿಸಬಹುದು. ಉದಾಹರಣೆಗೆ ಈ ಕಥೆಯಲ್ಲಿ ಸರೋಜಳ ಮೇಲಿನ ಅಸಹನೆಯಿಂದಾಗಿ

ನಾಯಕ ಊಹಿಸಿಕೊಳ್ಳುವ ರೀತಿಯನ್ನು ನೋಡಬಹುದು: "ಸರೋಜಾ ಎಂದು ಕಿರುಚಿ, ಹುಚ್ಚುಹುಚ್ಚಾಗಿ ನಕ್ಕು ಕೇಕೆಹಾಕಿ, ಅವಳ ಕೆನ್ನೆಗೆರಡು ಬಿಗಿದು, ಕಣ್ಣೀರು ಕಪೋಲಗಳಲ್ಲಿಳಿದಾಗ ಹೆ ಹೆ ಹೆ...ತಟಕ್ಕನೆ ರೇಡಿಯೊ ನಿಂತು ಮೂಕವಾಯಿತು" ಹೀಗೆ ಭಾಷೆಯ ಮೂಲಕ ಭಾವಾಭಿನಯವನ್ನು ತೋರಿಸುವ ರೀತಿ ಮನೋಜ್ಞವಾಗಿದೆ. ಹೆಣ್ಣು ಗಂಡುಗಳ ನಡುವೆ ಅವ್ಯಕ್ತವಾಗಿಯೇ ಕಾಡಬಹುದಾದ ಕಾಮದ ಆಕರ್ಷಣೆಯ ಕಲ್ಪನೆಯ ಜೊತೆಗೇ ಅನಾಥ ಪ್ರಜ್ಞೆಯ ನಾಯಕನ ಅಹಂಕಾರ ಮತ್ತು ಅದರ ಸೋಲನ್ನೂ, ಒಬ್ಬರಿಗೆ ಮನಃಪೂರ್ವಕವಾಗಿ ಅಧೀನವಾಗಬೇಕೆಂಬ ಸ್ತ್ರೀ ಸಹಜ ಆಕಾಂಕ್ಷೆಯನ್ನೂ ಒಟ್ಟಿಗೆ ವಾಚ್ಯವಾಗದಂತೆ ನಿರೂಪಿಸಿರುವುದನ್ನು 'ತುಣುಕುಗಳು' ಕತೆಯಲ್ಲಿ ಕಾಣಬಹುದು. ಇಲ್ಲಿ ಯಾವುದೇ ನಿರ್ಣಾಯಕ ತೀರ್ಪನ್ನು ಕೊಡದೆ ಪಾತ್ರಗಳ ಸಂವೇದನೆಯ ವಿವರಗಳನ್ನು ಅವುಗಳ ಸಹಜ ರೂಪದಲ್ಲೇ ಮಂಡಿಸುತ್ತ ಅವುಗಳ ಅಂತರಂಗದಲ್ಲೇ ನಿಜದ ಸ್ವರೂಪವನ್ನು ಧ್ವನಿಸುವ ಜಾಣ್ಮೆ ಇದ್ದರೂ, ಇದು ಒಂದು ಆಕರ್ಷಕ ಪ್ರಬಂಧವಾಗಿದೆಯೇ ಹೊರತು ಕಥೆಯಾಗಿಲ್ಲ. ಏಕೆಂದರೆ ವಿವರಗಳ ವಿನ್ಯಾಸ ಕಥೆಯ ಒಂದು ಚೌಕಟ್ಟಿಗೆ ಒಳಗಾಗಿಲ್ಲ.

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವ್ಯಕ್ತಿಗಳ ನಡುವಿನ ಸಂಬಂಧ ತುಂಬ ಸಮೀಪವಾದುದು. ದಂಪತಿಗಳ ನಡುವಣ ಸಂಬಂಧವಂತೂ ಮತ್ತಷ್ಟು ಸನ್ನಿಹಿತವಾದುದೆಂಬುದನ್ನು 'ಹೊರತು' ಕತೆ ಮಂಡಿಸುತ್ತದೆ. ಗೋವಿಂದ ತನ್ನ ಹೆಂಡತಿ ಶಾರದೆಯನ್ನು ಮಾನಸಿಕ ರೋಗದ ಸ್ಥಿತಿಗೆ ತಂದು, ಯಾಂತ್ರಿಕವಾಗಿ ಅವಳ ಮೇಲ್ವಿಚಾರಣೆಯನ್ನು ಮಾಡುತ್ತ, ಗಂಡುತನದಿಂದ ಬೀಗುತ್ತಾನೆಯಾದರೂ, ಒಮ್ಮೆ ಕುಡಿದು ಬಂದಾಗ ಬಾವನ ಕಾಗದ ಒಳಗಿನ ಮನಸ್ಸನ್ನು ಚುಚ್ಚಿ ಹೆಂಡತಿಯನ್ನು ಕುರಿತ ಸೌಹಾರ್ದತೆಯತ್ತ ಹೊರಳಿಸುತ್ತದೆ. ಹೆಂಡತಿಯಿಂದ ಗಂಡ ಹೊರತಾಗುವುದು—ಅಸಹಾಯಕ ಸ್ಥಿತಿಯ ಬೆನ್ನುಮೇಲಾದ ಜಿರಳೆಯನ್ನು ತಿರುವಿದರೆ ಮತ್ತೆ ಹಾಸಿಗೆ ಸೇರಬಹುದೆಂದು ಹುಳವಿಗೆ ಗ್ರಾಸವಾಗಿ ಬಿಟ್ಟುಬಿಡುವಷ್ಟು—ಸುಲಭವಾಗುವುದಿಲ್ಲ. ತನಗೆ ಹೆಂಡತಿಯ ಮೇಲೆ ಎಷ್ಟು ಅಧಿಕಾರವಿದ್ದರೂ, ತಾನು ಆಕೆಗೆ ಗಂಡನಾದಂತೆಯೇ ಆಕೆಯೂ ತನಗೆ ಹೆಂಡತಿ ಎನ್ನುವುದನ್ನು ಮರೆಯುವಂತಿಲ್ಲ. ಯಾವುದೋ ಒಂದು ಕ್ಷಣದಲ್ಲಿ ತನ್ನ ಜವಾಬ್ದಾರಿಯ ಅರಿವಾದಾಗ ಅವನು ಭಾವವಶನಾಗಿ ಬಿಕ್ಕಿ ಬಿಕ್ಕಿ ಅಳುತ್ತಾನೆ. ಇಲ್ಲಿನ ಈ ಭಾವವಶತೆ ಸಹ ತುಂಬ ಅರ್ಥಪೂರ್ಣವಾಗಿ ಬಂದಿದೆ ಎನ್ನುವುದು ಗಮನಾರ್ಹ. ವರ್ತಮಾನದ ಘಟನೆಯೊಂದರಿಂದ ಆರಂಭಿಸಿ ಅದರೊಡನೆ ಹಿಂದಿನ ಘಟನೆಯ ಸ್ವಲ್ಪ ವಿವರ ಕೊಟ್ಟು ಮತ್ತೆ ವರ್ತಮಾನಕ್ಕೆ ಬಂದು ಮತ್ತೆ ಹಿಂದಿನ ಘಟನೆಗೆ ಮರಳಿ—ಹೀಗೆ ಓಡಾಡುವುದರ ಮೂಲಕ ವಿವರಗಳನ್ನು ಹದವಾಗಿ ಬೆಸೆಯುವ ಸದಾಶಿವರ

ಮೊದಲ ಸಂಕಲನದ ಕಥನಕ್ರಮ ಎರಡನೆಯದರಲ್ಲೂ ಕೂಡ ಕೆಲವು ಕತೆಗಳಲ್ಲಿ ಚೆನ್ನಾಗಿ ಪ್ರಯೋಗವಾಗಿದೆ. 'ಹೊರತು' ಕತೆಯಲ್ಲೂ ಈ ತಂತ್ರವಿದ್ದು ಭಾಷೆ ಆಕರ್ಷಕವಾಗಿದ್ದರೂ ಸಹ ಸಣ್ಣ ಅಂಶವನ್ನೇ ಹಿಂಜಿರುವುದರಿಂದ ಕತೆ ಸರಳೀಕೃತ ವಾಗಿದೆ. ಅಂದರೆ ನಿರೂಪಣೆ ಹಾಗೂ ತಂತ್ರಗಳ ಸಾಂದ್ರತೆ ಕಥಾವಸ್ತುವಿಗೆ ಹೊರ ಲಾಗದ ಹೊರೆಯಾಗುವುದರಿಂದ ಕತೆ ಮನಸ್ಸಿಗೆ ಅಷ್ಟಾಗಿ ರುಚಿಸುವುದಿಲ್ಲ.

'ಭೇಟಿ' ಕತೆಯಲ್ಲಿ ಸದಾಶಿವರ ಭಾಷೆ ಮತ್ತಷ್ಟು ಚುರುಕಾಗಿದೆ. ವಸ್ತು ಅದಕ್ಕೆ ಸಹಾಯಕವಾಗಿದೆ. ರಾವ್‌ಗೆ ಮದುವೆಯಾಗಿ ಎರಡು ಮಕ್ಕಳಾಗಿದ್ದರೂ, ಪ್ರಮೀಳಾಗೆ ಮದುವೆಯಾಗಿ ಎಂಟು ವರ್ಷಗಳು ಸಂದಿದ್ದರೂ, ಇಬ್ಬರೂ ನಾಗರಿಕ ಬದುಕಿನ ಸಭ್ಯ ರೀತಿಯ ವ್ಯಕ್ತಿಗಳಾದ್ದರಿಂದಲೂ ಬಾಲ್ಯದ ಒಳನಾಡಿಗಳಾದ್ದರಿಂದಲೂ ಮತ್ತೆ ಬಹುಕಾಲದ ನಂತರ ಭೇಟಿಯಾದಾಗ ಅವರ ಆತ್ಮೀಯತೆ ಮರುಕಳಿಸುತ್ತದೆ. ಕಾಮಾಕ್ಷಿ ಹೋಟಲಿನ ಮಾದಕ ವಾತಾವರಣದಲ್ಲಿ ಯೌವನದ ನೆನಪುಗಳನ್ನು ಅವರು ಕೆದಕುವುದರ ಮೂಲಕ ತಾತ್ಕಾಲಿಕ ಸಮಾಧಾನದಲ್ಲೇ ತೃಪ್ತಿಯನ್ನು ಪಡೆಯುತ್ತಾರೆ. ಅವರ 'ಭೇಟಿ' ಸೆಕೆಯಲ್ಲಿ ಒಮ್ಮೆ ಬೀಸಿದ ತಂಗಾಳಿಯಾಗಿ ಪರಿಣಮಿಸುತ್ತದೆ; ನಯ ಗಾರಿಕೆಯಿಂದ ಮನಸೆಳೆಯುತ್ತದೆಯಾದರೂ ಘಟನೆಯೊಂದನ್ನು ಡೈರಿಯಲ್ಲಿ ಸೊಗ ಸಾಗಿ ಭಟ್ಟಿ ಇಳಿಸಿದಂತೆ ಸಡಿಲವಾಗಿ ಕಟ್ಟಲಾಗಿದೆಯಾಗಿ 'ಹೊರತು' ಕತೆಯಂತೆಯೇ, ಗಂಭೀರ ಪರಿಣಾಮ ಬೀರುವುದರಲ್ಲಿ ವಿಫಲವಾಗುತ್ತದೆ.

ಮುಂದಿನ 'ಹ್ಯಾಂಗೋವರ್', 'ಪುಟ್ಟಿ', 'ಸೋಮುವಿನ ಪ್ರಣಯ ಪ್ರಸಂಗ' (ಹಿಂದಿನ 'ಕಾರಣ') ಕತೆಗಳು ಸದಾಶಿವರ ಎಲ್ಲ ಪ್ರಮುಖ ಲಕ್ಷಣಗಳನ್ನು ಒಳಗೊಂಡ ಪ್ರಾತಿನಿಧಿಕವಾದ ಯಶಸ್ವೀ ಕತೆಗಳಾಗಿವೆ. ವಿಶೇಷವಾಗಿ ಅವರು ನಿರೂಪಿಸ ಹೊರ ಡುವ ಮನೋವಿಶ್ಲೇಷಣೆಯೇ ಈ ಕತೆಗಳ ವಸ್ತುವಾಗಿದ್ದರೂ ('ಪುಟ್ಟಿ' ಹೊರತು) ಇತರ ಕೆಲವು ಕತೆಗಳಂತೆ ಅಷ್ಟಕ್ಕೇ ತಟಸ್ಥವಾಗದೆ ಅವರ ವಿಶಿಷ್ಟ ಕಥನ ಕ್ರಮ ದಿಂದಾಗಿ, ಭಾಷೆಯ ಕಸುವಿನಿಂದಾಗಿ, ಘಟನೆಗಳ ದುಡಿತದಿಂದಾಗಿ, ಕಲಾತ್ಮಕ ಗೆಲು ವನ್ನು ಪಡೆದುಕೊಳ್ಳುತ್ತವೆಯಾದ್ದರಿಂದ ಶ್ರೇಷ್ಠ ಕತೆಗಳಾಗಿವೆ ಮತ್ತು ಅವರ ಬೆಳವ ಣಿಗೆಯ ಗುರುತಾಗಿವೆ.

'ಹಾಂಗೋವರ್'ನ ಸೋಮು ಅಪ್ಪನ ಸಂಬಂಧವನ್ನು ಮಾನಸಿಕವಾಗಿ ಕಡಿದುಕೊಳ್ಳಲಾರದೆ ಹಣವನ್ನು ಕಳಿಸಿಬಿಟ್ಟಿದ್ದರೂ ತನ್ನತನ ಇದನ್ನು ಒಪ್ಪಿರುವು ದಿಲ್ಲ. ಅವನ ಸ್ವಭಾವದಲ್ಲಿ ಪ್ರಮುಖ ಅಂಶ ಸ್ವಂತಿಕೆಯ ಬಯಕೆ. ಆದ್ದರಿಂದ ತಾನಿನ್ನೂ ಅಪ್ಪನಿಗೆ ಹಣ ಕಳಿಸಿಲ್ಲ, ಕಳಿಸುವುದಿಲ್ಲ ಎನ್ನುವಂತೆ ಕಿಟ್ಟುವಿನ ಬಳಿ ಅಪ್ಪನ ಮೇಲೆ ಮಾತಿನ ರೊಚ್ಚು ತೋರಿಸುತ್ತಾನೆ. ಮನುಷ್ಯನ ಮೂಲಭೂತವಾದ

ಆದರೆ ವಿಚಿತ್ರವಾದ 'ಅಹಂ' ಸ್ವಭಾವವನ್ನು ಕತೆಗಾರರು ಸಮರ್ಥವಾಗಿ ಮಾತು ಮತ್ತು ಘಟನೆಗಳ ಮೂಲಕ ಪ್ರತಿಪಾದಿಸಿದ್ದಾರೆ.

ಹೊಸ ಬಟ್ಟೆ ಕೊಂಡು, ಗುಂಡುಪಾಕಿ ಎಂಜಾಯ್ ಮಾಡುವುದರ ಮೂಲಕ ತಾನು ತಂದೆಗೆ ಸೋತ ವಿಷಯ ಮರೆಯಲು ಪ್ರಯತ್ನಿಸುವ ಸೋಮು ತಾತ್ಕಾಲಿಕವಾಗಿ ಯಶಸ್ವಿಯಾದರೂ ಅಮಲಿಳಿದ ಮೇಲೆ, ಮಾರನೆಯ ದಿನ ಕಿಟ್ಟುವಿಗೆ ಸತ್ಯ ಸಂಗತಿಯನ್ನು ತಿಳಿಸಿಬಿಡುತ್ತಾನೆ. ಕೊನೆಗೂ ಕೂಡ ಹಣ ಕಳಿಸಿದ್ದು ತಪ್ಪೊ ಅಲ್ಲವೊ ತೀರ್ಮಾನಿಸಲು ಅವನಿಗೆ ಸಾಧ್ಯವಾಗುವುದಿಲ್ಲ. ಇದು ಪರಸ್ಪರ ಸಂಬಂಧಗಳ ಜಟಿಲತೆಯನ್ನು ಶಕ್ತಿಯುತವಾಗಿ ಧ್ವನಿಸುತ್ತದೆ.

ಆರಂಭದಿಂದಲೂ ಸೋಮುವಿನ ಮಾತು, ರೀತಿಗಳು ಕುತೂಹಲವನ್ನು ಉಳಿಸಿಕೊಂಡು, ಕ್ರಮೇಣ ನಿಜಸ್ಥಿತಿಗೆ ಒಯ್ಯುತ್ತವೆ. ಕೊನೆಯಲ್ಲಿ ಸೋಮು, ತಾನು ಹಿಂದಿನ ದಿವವೇ ಅಪ್ಪನಿಗೆ ಮನಿ ಆರ್ಡರ್ ಮಾಡಿಬಿಟ್ಟ ವಿಷಯ ತಿಳಿಸಿದಾಗ ಮಡಿಲಲ್ಲಿ ಮೆತ್ತಗೆ ಬಾಂಬ್ ಹಾಕಿದಂತಾಗಿ ಆವರೆಗೆ ನಿರ್ಲಿಪ್ತ ಸ್ಥಿತಿಯಲ್ಲಿದ್ದ ಕಿಟ್ಟುವಿನೊಡನೆ ನಾವೂ ಬೆರಗಾಗುತ್ತೇವೆ. ಇಲ್ಲಿನ ಈ ಕಥನ ಕ್ರಮದಿಂದ ಮತ್ತು ಸಂಯಮದ ಕಥಾ ನಿರ್ವಹಣೆಯಿಂದ ಕತೆ ಉತ್ತಮವಾಗಿದೆ.

ಈ ಕತೆಯಲ್ಲಿ ಸದಾಶಿವರ ಭಾಷೆ ಮತ್ತಷ್ಟು ಲವಲವಿಕೆಯನ್ನು ಗಳಿಸಿಕೊಂಡಿದೆ. ಈ ಕತೆಯನ್ನು ಕುರಿತ ಡಿ. ಎ. ಶಂಕರ್ ಅವರ ವಿಮರ್ಶೆ ಸಮಂಜಸವಾಗಿದೆ. "ವ್ಯಕ್ತಿ ಸಂಬಂಧಗಳ ಸಂಕೀರ್ಣ ಪ್ರಪಂಚದಲ್ಲಿ ಸೋಲು ಗೆಲುವುಗಳೆರಡೂ ತರುವುದು ಸೋವು ಮಾತ್ರ. ಅಪ್ಪನನ್ನು ಬಿಟ್ಟಾಗ ಒಂದು ಥರ, ಕಟ್ಟಿಕೊಂಡಾಗ ಇನ್ನೊಂದು ಥರ, ಮಾನಸಿಕ ತೊಳಲಾಟಕ್ಕೆ ಸಿಕ್ಕು ಒದ್ದಾಡುವ ಹ್ಯಾಂಗೋವರ್‌ನ ಸೋಮು ನೇರ ನಾಟಕದಿಂದಲೆ ಅನ್ನುವಂತೆ ಜೀವಂತ ಬಂದ ಪಾತ್ರ. ವ್ಯಂಗ್ಯವನ್ನಾಶ್ರಯಿಸಿಯೂ ಲಘುವಾಗದ, ಕ್ರೂರವಾಗದ ಪಾಪ ಪ್ರಜ್ಞೆಯನ್ನು ಪರಿಶೋಧಿಸುವ ಇಲ್ಲಿನ ಬರವಣಿಗೆಯ ರೀತಿ ತುಂಬ ಮೆಚ್ಚುವಂಥದು."

'ಸೋಮುವಿನ ಪ್ರಣಯ ಪ್ರಸಂಗ' ಹ್ಯಾಂಗೋವರ್‌ನ ಮುಂದುವರಿದ ಕತೆಯಂತೆ ಅನಿಸುತ್ತದೆ. ಈ ಕತೆಯಲ್ಲಿ ಅದೇ ಪಾತ್ರಗಳು ಭಿನ್ನ ಸನ್ನಿವೇಶದಲ್ಲಿ ಭೆಟ್ಟಿಯಾಗಿವೆ. ಅಲ್ಲಿ ಸೋಮು ಕಿಟ್ಟುವಿಗೆ ಆಕಸ್ಮಾತ್ ಮಹಾತ್ಮ ಗಾಂಧಿ ರಸ್ತೆಯಲ್ಲಿ ಸಂಧಿಸಿರುತ್ತಾನೆ. ಇಲ್ಲಿ ಅವನು ನೇರ ಕಿಟ್ಟುವಿನ ಮನೆಗೇ ಬರುತ್ತಾನೆ. ವ್ಯತ್ಯಾಸವೆಂದರೆ ಹ್ಯಾಂಗೋವರ್‌ನಲ್ಲಿ ಬಲವಂತದ ಸಂತೋಷವನ್ನು ತಂದುಕೊಳ್ಳಲು ಹೆಣಗಾಡುವ ಸೋಮು ಇಲ್ಲಿ ಉದ್ದಕ್ಕೂ ಉತ್ಸಾಹದ ಬುಗ್ಗೆಯಾಗಿದ್ದಾನೆ. ಅಲ್ಲಿ ಎರಡು ಶಕ್ತಿಪೂರ್ಣವಾದ (ಮಾನಸಿಕ ಮತ್ತು ನೈತಿಕ) ಆಲೋಚನೆಗಳ ದ್ವಂದ್ವಕ್ಕೆ

ಸಿಕ್ಕಿ ಒದ್ದಾಡಿ ಸೋತವನು ಇಲ್ಲಿ ತನ್ನನ್ನು ತಾನು ಅರ್ಥೈಸಿಕೊಳ್ಳುತ್ತ ಕೊನೆಗೆ ಗೆದ್ದು ಕೊಂಡು ಸ್ವಂತಿಕೆಯನ್ನು ಸ್ಥಾಪಿಸಿಕೊಳ್ಳುತ್ತಾನೆ; ಅಲ್ಲಿನ ಬದುಕೆ ಇಲ್ಲಿ ಈಡೇರುತ್ತದೆ. ಇಲ್ಲಿ ನಿರ್ಣಯ ತೆಗೆದುಕೊಳ್ಳಲು ಸಮರ್ಥನಾದದ್ದೇ ಅವನ ಬೆಳವಣಿಗೆ. ಹೀಗಾಗಿ ಅಲ್ಲಿಗಿಂತ ಅವನ ಹೋರಾಟ ಇಲ್ಲಿ ಅರ್ಥವತ್ತಾಗುತ್ತದೆ (ಹೊಯ್ದಾಟದ ನಾಟಕೀಯತೆ ಪಾತ್ರ 'ಹ್ಯಾಂಗೋವರ್' ನಲ್ಲೇ ಸಮರ್ಥವಾಗಿ ಬಂದಿದೆ). ಮಾತಿನ ಮೂಲಕವೇ ಅವನ ನೈತಿಕ ಮಟ್ಟ ಪಕ್ವವಾಗಿ ಕಾವೇರಿಯ ಗರ್ಭಕ್ಕಿಂತ ಕಾವೇರಿಯೇ ಮುಖ್ಯ ಎಂಬ ನಿಲುವಿಗೆ ಮುಟ್ಟುವ ಬೆಳವಣಿಗೆ ಕತೆಯಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಸಂಭವಿಸುವ ರೀತಿ ಸಹಜವಾಗಿದೆ,

ಸೋಮು ಯಾವುದೋ ಒಂದು ಘನಕಾರ್ಯ ಸಾಧಿಸಿದವನಂತೆ ಖುಷಿ ಪಡುತ್ತಾ ಹೋಗುವುದು, ಅವನ ಉತ್ಸಾಹಕ್ಕೆ ನೀರೆರಚಲು ಇಷ್ಟವಾಗದೆ ತಟಸ್ಥ ಭಾವದ ಕಿಟ್ಟು ಗೋಣು ಹಾಕುತ್ತಾ ಹೋಗುವುದು – ಇವೆರಡರ ಸಮಾನಾಂತರ ನಿರ್ವಹಣೆ, ಆಡುಮಾತಿಗೆ ತೀರ ಹತ್ತಿರವಾದ ಸಂಭಾಷಣೆ. ಸೋಮುವಿನ ಪಾತ್ರದ ಜೀವಂತಿಕೆ, ಕಿಟ್ಟು ಅಲ್ಲಲ್ಲಿ ಸೋಮುವನ್ನು ಕೆಣಕುತ್ತ ನಗೆ ತರಿಸುವುದು ಇವು ಕತೆಯ ಗೆಲುವಿನ ಕೆಲವು ಕಾರಣಗಳು.

'ಪುಟ್ಟಿ' ಬಹಳ ಕಾಲ ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲಬಲ್ಲ ಕತೆ, ಸದಾಶಿವರ ಪ್ರಮುಖ ಸಿದ್ಧಿ, ಅವರ ಯಶಸ್ವಿನ ಒಂದು ಮೈಲಿಗಲ್ಲು. ಥಟ್ಟನೆ ಈ ಕತೆಯಲ್ಲಿ ವಸ್ತು ಅನೇಕ ಜೀವಂತ ಪಾತ್ರಗಳ ವೈವಿಧ್ಯದಿಂದ ಹರವನ್ನು ಪಡೆದುಕೊಳ್ಳುತ್ತದೆ. ಈ ವ್ಯಾಪ್ತಿ ಈವರೆಗೆ ಅವರ ಯಾವ ಕತೆಯಲ್ಲೂ ಕಂಡುಬಂದಿರಲಿಲ್ಲ. ಅಲ್ಲದೆ ಇಲ್ಲಿ ಎಲ್ಲ ಘಟನೆಗಳಿಗೂ ಪಾತ್ರಗಳ ವ್ಯಕ್ತಿತ್ವ ಗಾಢವಾಗಿ ಬೆಸೆದುಕೊಂಡಿರುವುದರಿಂದ ಪಾತ್ರಗಳ ಏಳುಬೀಳುಗಳು ಅರ್ಥವಂತಿಕೆಯನ್ನು ಸಾಧಿಸಿಕೊಳ್ಳುತ್ತವೆ. ವಾಕ್ಯಗಳು ಕೊಂಡಿಗೆ ಕೊಂಡಿಯಂತೆ ಹೆಣೆದುಕೊಳ್ಳುತ್ತಾ ಸಾಗಿ ಕುತೂಹಲವನ್ನು ಉಳಿಸಿಕೊಳ್ಳುತ್ತ ಒಂದೇ ಉಸಿರಿನಲ್ಲಿ ಘಟಿಸುವ ಇಲ್ಲಿನ ಬರವಣಿಗೆಯ ರೀತಿ ಮೆಚ್ಚುವಂಥದು. ಜೊತೆಗೆ ಈವರೆಗೆ ಗಂಭೀರವಾಗಿಯಷ್ಟೇ ಯೋಚಿಸುತ್ತಿದ್ದ ಕತೆಗಾರರು ಇಲ್ಲಿ ವಿನೋದ ಪ್ರಜ್ಞೆಯತ್ತ ಹೊರಳಿರುವುದೂ ಕೂಡ ಅವರ ಬೆಳವಣಿಗೆಯಾಗಿದೆ :

ಮಜಭೂತಾದ ಪುಟ್ಟಿ ಮನಸ್ಸು ಮಾಡಿದರೆ ಬಸವನನ್ನು ಎಡಗೈಯಲ್ಲಿ ಎತ್ತಿ ಒಗೆದು ಬಿಡಬಹುದು ; ದುಂಡ ದುಂಡಗಿನ ಹೆಣ್ಣು ಪುಟ್ಟಿ, ಬಡಕಲು ಬಸವನಲ್ಲಿ ತೃಪ್ತಿ ಕಾಣದೆ ಕೊಬ್ಬಿದ ಗೂಳಿಯಂಥ ಮಾಲಿಂಗನ ಜತೆ ಮಲಗಿದರೆ ತಪ್ಪೇನು ಇಲ್ಲ ಎಂದು ಒಂದೊಂದು ಸಾರಿ ಯಾರಿಗಾದರೂ ಅನ್ನಿಸೀತು ಎನ್ನುವ ಕತೆಗಾರರ ಮಾತುಗಳು,

'ಪುಟ್ಟಿಯನ್ನು ಬಿಟ್ಟಾದರೂ ಬಿಟ್ಟು ಬಿಡೋ' ಎಂದು ಅಜ್ಜಿ ಸಲಹೆ ಮಾಡಿದಾಗ ಬಸವ 'ಕುಂಯಾ ಕುಂಯ್' ಎನ್ನುತ್ತಾನೆಯೇ ಹೊರತು ಹೆಂಡತಿ ಬಿಡುವ ಮಾತನ್ನ ಎತ್ತದಿರುವುದು,

ಹೊಳೆ ಅಂಗಡಿಯ ಕೆಲವರು ಪುಟ್ಟಿ ಸುಲಭದವಳೆಂದು ತಿಳಿದು ಸಂತೆಯ ರಾತ್ರಿ ಎದೆಗೆ ಕೈ ಹಾಕಲು ಹೋಗಿ ತಪರಾಕಿ ತಿಂದದ್ದು

—ಮುಂತಾದುವು ಅಂತಹ ಪ್ರಜ್ಞೆಯ ಮೂಲಕ ಬಂದಂಥವು. ಇಲ್ಲಿಯ ಇಡಿ ಅಜ್ಜಿ ಪಾತ್ರವೇ ಆಕೆಯ ಸಿಡಿಮಿಡಿಯ ಮಾತುಗಳ ಮೂಲಕ ಹಾಸ್ಯದ ಚುರುಕು ಮುಟ್ಟಿಸುತ್ತ touching ಆಗಿ ಬಂದಿದೆ.

ಕತೆಯಲ್ಲಿ ಪುಟ್ಟಿ, ಬಸವ, ಮಾಲಿಂಗರ ಸಂಪಾದಿಯಾದ ಕಾವೇರಿ, ಗಣೇಶರಾಯರು ಮತ್ತು ಹೊಳೆ ಅಂಗಡಿಯ ಕಂಟ್ರ್ಯಾಕ್ಟರ್ ತಿಮ್ಮಯ್ಯ – ಇವರಿಗೆ ಸಂಬಂಧಪಟ್ಟ ವಿಚಾರವನ್ನು ಕೊಡುವುದರಿಂದ ಕತೆಗಾರರು ಮೇಲು ವರ್ಗದ ಮತ್ತು ಕೆಳ ವರ್ಗದ ಜನರ ಭಿನ್ನತೆಯನ್ನು ಗೆರೆ ಎಳೆದು ತೋರಿಸಿದ್ದಾರೆ. ಅನೈತಿಕತೆಯೇ ಕಾರಣವಾಗಿ ಮೇಲುವರ್ಗದ ತಿಮ್ಮಯ್ಯ ಮತ್ತು ಗಣೇಶರಾಯರ ಹೆಂಡತಿ ಕಾವೇರಿಯರ ಅಕ್ರಮ ಸಂಬಂಧ ಬಹಿರಂಗವಾಗದಿದ್ದರೂ ಅದನ್ನು ಕುರಿತು ಊರಿನ ಜನ ಓರೆಯಾಗಿ ಮಾತಾಡುತ್ತಾರೆ. ಅದೇ ಕಾರಣವಾಗಿದ್ದರೂ ಕೆಳವರ್ಗದ ಜಾತಿಯ ಮಾಲಿಂಗ ಮತ್ತು ಪುಟ್ಟಿ ಇಬ್ಬರ ಸಂಬಂಧ ಬಹಿರಂಗ ಕೋಲಾಹಲವಾಗಿದ್ದರೂ ಆ ಬಗ್ಗೆ ಜನ ಚಕಾರವೆತ್ತುವುದಿಲ್ಲ. ಅವರು ಒಂದು ರೀತಿ ಅವಜ್ಞೆಗೆ ಒಳಗಾದವರು. ಅರ್ಥಾತ್ ತಮ್ಮ ಅಸ್ತಿತ್ವವನ್ನು ತಾವೇ ಮರೆತವರು. ಈ ಕಾರಣದಿಂದಲೇ ಬೀದಿಗೆ ಮಾತು ಬಂದರೂ ಮಾಸವಾಗಿರುತ್ತ ಮೂವರು ಬದುಕುತ್ತಿರುತ್ತಾರೆ. ಕೊನೆಯಲ್ಲಿ ಬಸವನ ಸಾವನ್ನು ಕತೆಗಾರರು ಗೂಢವಾಗಿಸಿಬಿಟ್ಟರೂ ಪುಟ್ಟಿ ಮಾಲಿಂಗರೇ ಅವನ ಸಾವಿಗೆ ಕಾರಣವೆಂಬ ಧ್ವನಿಯಿದೆ. ತನ್ನ ಹೆಂಡತಿ ಪುಟ್ಟಿ ಮತ್ತು ಮಾಲಿಂಗರ ಸಂಬಂಧವನ್ನು ಬಗೆಹರಿಸುವುದರಲ್ಲಿ ಸಮಾಜ ತಟಸ್ಥವಾಗಿದೆ, ತನಗೆ ಅದು ಸಹಿಸಲಸಾಧ್ಯವಾಗಿದೆ. ಈ ಘರ್ಷಣೆಗೆ ಕೊನೆಯಿಲ್ಲವೆನಿಸಿದ ದಿನ ಅನಿವಾರ್ಯವಾಗಿ ಬಸವ ನೇಣು ಹಾಕಿಕೊಳ್ಳುತ್ತಾನೆ. ಪುಟ್ಟಿ ಮಾಲಿಂಗರ ದಾರಿ ಸುಗಮವಾಗುತ್ತದೆ. ಪುಟ್ಟಿಯ ಗಟ್ಟಿತನದ ಗೆಲುವು, ಬಸವ ಸೋತರೂ ಸತ್ತು ಸಾಧಿಸಿದ ಗೆಲುವು ಒಟ್ಟಿಗೇ ಈ ಕತೆಯ irony ಯನ್ನು ನಿರೂಪಿಸುತ್ತವೆ. ಇಂತಹ ಸಂಕೀರ್ಣ ವಸ್ತುವನ್ನು ಗುರಿ ಹಾಗೂ ಪರಿಣಾಮಗಳೆರಡರ ಏಕಾಗ್ರತೆಯಿಂದ ನಿರ್ವಹಿಸಿರುವುದು ಸಾಮಾನ್ಯ ಕತೆಗಾರನಿಗೆ ಸಾಧ್ಯವಾಗುವಂತಹುದಲ್ಲ. ಇಂತಹ ಶ್ರೇಷ್ಠ ಕತೆಯನ್ನು ತಮ್ಮ ವಿಮರ್ಶೆಯಲ್ಲಿ ಶಂಕರ್ ಅವರು, "ಸದಾಶಿವ ಅವರು ಸ್ವಗತವನ್ನು ಬಿಟ್ಟು ಸಂವಾದದ ಕಡೆ ಹೊರಳಿದ್ದಾರೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತವೆ" ಎಂದಷ್ಟೇ ಹೇಳಿ, ಆಳವಾಗಿ ಗಮನಿಸದಿರುವುದು ಸರಿಯೆನಿಸುವುದಿಲ್ಲ.

ಈ ಕತೆಯಲ್ಲಿ ಸದಾಶಿವರು ನೇರ ಭಾಗವಹಿಸದೇ ಇದ್ದರೂ ಘಟನೆಗಳೆಲ್ಲಾ ಅವರ ನೋಟದಲ್ಲೇ ಮುಂದುವರಿದು ಅವರ ವ್ಯಾಖ್ಯಾನದೊಂದಿಗೆ ಕಸುವು ತುಂಬಿಕೊಳ್ಳುವ, ನಿದಾನಗತಿಯಲ್ಲಿ ಮೂರ್ತಗೊಳ್ಳುವ ತಂತ್ರಗಾರಿಕೆ ಚೆನ್ನಾಗಿದೆ.

'ತುಣುಕುಗಳು' ಸಂಕಲನದಲ್ಲಿನ ಕೊನೆಯ ನಾಲ್ಕು ತುಣುಕುಗಳು – 'ಕಾಮ ಸೂತ್ರ', 'ಅಜ್ಜಿ ಹೇಳಿದ್ದು', 'ಕುಡಿ', 'ಖುಷಿ' ಎಂಬ ಹೆಸರಿನವು ಹೆಸರಿಗೆ ತಕ್ಕಂತೆ ಕತೆಯ ಬಿಡಿ ಭಾಗಗಳ ರೀತಿಯಲ್ಲಿವೆ. ಆದರೆ ಒಂದು ವಸ್ತು ಕುರಿತೇ ವರ್ತಿಸುತ್ತವೆ. ಇವು ಗದ್ಯಮಯ ಕಾವ್ಯದಿಂದ ಕೂಡಿದ್ದು ಚುರುಕುಮುಟ್ಟಿಸುತ್ತ ಧ್ವನಿ ಪೂರ್ಣವಾಗಿದ್ದು ಅರ್ಥವಿಸ್ತಾರದತ್ತ ಹಾಯುತ್ತಾ ಎ. ಕೆ. ರಾಮಾನುಜನ್‌ರ ಕಾವ್ಯವನ್ನು ನೆನಪಿಗೆ ತರುತ್ತವೆ. ಆದರೆ ಇವನ್ನು ಕತಾ ಸಂಕಲನದಲ್ಲಿ ಸೇರಿಸಬೇಕಾದ ಅವಶ್ಯಕತೆ ಕಂಡು ಬರುವುದಿಲ್ಲ. ಏಕೆಂದರೆ ಇವು ಈಗಿನ ಸ್ವರೂಪದಲ್ಲಿ ಕತೆಗಳಾಗಿಲ್ಲ, ಆಗಲು ಸಾಧ್ಯವೂ ಇಲ್ಲ.

ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿನ 1973 ರ 'ನಂ ಕೌಲಿ ಕಂಡ್ರಾ' ಕತೆಯಿಂದ ಹೆಚ್ಚಿನದೇನನ್ನಾದರೂ ನಿರೀಕ್ಷಿಸಿದ್ದರೆ ಅದು ಸುಳ್ಳಾಗುತ್ತದೆ. ಇಲ್ಲಿ ಇಡೀ ಕತೆಯನ್ನು ಸಾಂಕೇತಿಕವಾಗಿ ಪ್ರತಿಪಾದಿಸಲು ಸದಾಶಿವರು ತೊಡಗಿರುವುದು ಮೊದಲ ಬಾರಿ. ಈ ಕತೆ ಹೊಸ ಹಾದಿಯನ್ನೇನೂ ತುಳಿದಿಲ್ಲವಷ್ಟೇ ಅಲ್ಲದೆ ಅವರು ತಂದಿರುವ ಪ್ರತಿಮಾ ವಿಧಾನ ಹಳೆಯದಾಗಿದೆ, ಯಶಸ್ಸನ್ನೂ ಪಡೆದಿಲ್ಲ.

ಕೌಲಿಯ ತುಡುಗುತನದ ಮೂಲಕ ನಾಗಿಯ ಹಡಬೆತನವನ್ನು ಧ್ವನಿಸಲು ಕತೆಗಾರರು ಪ್ರಯತ್ನಿಸಿದ್ದಾರೆ. ಆದರೆ, ಇಲ್ಲಿ ನಾಗಿಯ ಜೀವನದ ಕೆಲವೇ ಘಟನೆಗಳನ್ನು ಮೂಕ ಪ್ರಾಣಿಯೊಂದರ ಸಾವಿನೊಂದಿಗೆ ಸಮನ್ವಯಗೊಳಿಸಲು ಸಾಧ್ಯವಾಗಿಲ್ಲ. ನಾಗಿಯ ಹಡಬೆತನಕ್ಕೆ ಕೌಲಿಯ ತುಡುಗುತನ ಸಂಕೇತವಾಗಬಹುದಾಗಿದ್ದ ಸಾಧ್ಯತೆಯನ್ನು – ನಾಗಿಯೇ ಕೌಲಿಯನ್ನು ಹುಡುಕುವ ಪ್ರಸಂಗ, ಕೌಲಿ ತನ್ನ ನಾಲಗೆಯ ಚಪಲಕ್ಕೆ ಬಲಿಯಾಗುವುದು ಸ್ಪಷ್ಟವಿದ್ದರೂ ನಾಗಿಯ ಹಡಬೆತನದ ಕಾರಣ ಅಸ್ಪಷ್ಟತೆಯಿಂದ ಕೂಡಿರುವುದು, ಕೌಲಿಯ ಸಾವಿನ ಅರ್ಥ ಏನೆಂದು ತಿಳಿಯದೇ ಉಳಿಯುವುದು – ಇವೆಲ್ಲಾ ತಪ್ಪಿಸಿದೆ. ಹೀಗೆ ಕತೆಯಲ್ಲಿ ಕೌಲಿ ಹಾಗೂ ನಾಗಿಯರ ನಡುವಿನ ಪ್ರತಿಮಾ ವಿಧಾನ ಸಾವಯುವ ಸಂಬಂಧದಿಂದ ಬೆರೆತುಕೊಳ್ಳುವುದಿಲ್ಲ. ಸಾಂಕೇತಿಕ ನಿರೂಪಣೆಯಲ್ಲಿ ತೀವ್ರತೆಯೇ ಇಲ್ಲವಾಗಿ, ಕತೆಯ ಕ್ರಿಯೆ ಗಾಳಿಗುದ್ದಾಟವಾಗಿ ಕತೆ ಹಗುರವಾಗಿಯೇ ನಿಂತುಬಿಡುತ್ತದೆ. ಪ್ರತಿಮಾ ವಿಧಾನದ ವೈಫಲ್ಯದಿಂದಾಗಿ ಕತೆಯ ಕೊನೆಯ ಸುಮಾರಿನಲ್ಲಿ ಬರುವ,

'ಅರೆ ಎಲ್ಲಿ ಬಂದ್ಬಿಟ್ಚೆ' ಎಂದು (ಕರಿಯ) ತಲೆ ಎತ್ತಿದ. ಇನ್ನು ಸ್ವಲ್ಪ ಹೊತ್ತಿಗೆ ಸಂಜೆಯಾಗುತ್ತದೆ. ದೂರದಲ್ಲಿ ಏನೋ ಚಲಿಸಿದಂತಾಯಿತು. ಸಂಜೆಗಪ್ಪಿನಲ್ಲಿ ಅದು

ಕೌಲಿ ಎಂದುಕೊಂಡ. ಎರಡು ಹೆಜ್ಜೆ ಇಟ್ಟಾಗ ಮನಸ್ಸು ಥರ ಆಯ್ತು......ನಾಗೀನಾ ಎಂದು ಕೊಂಡ. ಹತ್ತಿರ ಬಂದಾಗ ಅದು ಫಣಿಯಪ್ಪ.

ಈ ಸಮರ್ಥ ಸಾಲುಗಳೂ ಸಪ್ಪೆಯಾಗಿಬಿಡುತ್ತವೆ. ಸದಾಶಿವರು ಮೊದಲ ಬಾರಿಗೆ ಬಳಸಿಕೊಂಡಿರುವ ದೇಸಿ ಭಾಷೆಯ ಚೆಲುವು ಈ ಕತೆಯಲ್ಲಿ ಆಕರ್ಷಕವಾಗಿದೆ.

ಸದಾಶಿವರ ಕತೆಗಳಲ್ಲಿನ ಏಕಸೂತ್ರತೆ, ಪ್ರಮಾಣ ಬದ್ಧತೆ, ನೇರ ನಿರೂಪಣಾ ವಿಧಾನ, ಭಾಷಾ ಪ್ರಭುತ್ವ, ಕುಶಲ ಸಂಯೋಜನೆಗಳೆಲ್ಲ ಒಬ್ಬ ಶ್ರೇಷ್ಠ ದರ್ಜೆಯ ಕತೆಗಾರನಿಗೆ ಮಾತ್ರ ಸಾಧ್ಯ. ಇವರ ಕತೆಗಳಲ್ಲಿ ಚಿತ್ತಾಲರ ಕತೆಗಳ ಸಾಂದ್ರತೆ, ಸಾಂಕೇತಿಕ ನಿರೂಪಣೆ, ಅಪೂರ್ವ ಕೇಂದ್ರ ಪ್ರಜ್ಞೆಗಳಾಗಲೀ, ಅನಂತಮೂರ್ತಿಯವರ ಕತೆಗಳಲ್ಲಿನ ಆಳವಾದ ಜಿಜ್ಞಾಸೆಯಾಗಲೀ, ಕೆ. ಸದಾಶಿವರ ಕತೆಗಳಲ್ಲಿನ ವೈವಿಧ್ಯತೆ ಯಾಗಲಿ ಇಲ್ಲವಾದರೂ ಅವರದೇ ಆದ, ಮನಸ್ಸಿನ ಮೂಲಭೂತ ಪದರುಗಳಿಗೆ ಕತಾತ್ಮಕವಾಗಿ ಬೆಳಕು ಚೆಲ್ಲುವುದರಲ್ಲಿನ ಒಲವು, ಆ ಮೂಲಕವೇ ನಮ್ಮನ್ನು ನಮಗೆ ಗಹನತೆಯೊಂದಿಗೆ ಪರಿಚಯಿಸಿಕೊಟ್ಟು ಬೆಚ್ಚಿಸುವ ನಿಲುವು ಮೆಚ್ಚಿಸುವಂಥದು. ಇಂತಹ ಒಂದು ನಿಲುವು ಒಳ್ಳೆಯ ಕತೆಗಾರನಿಗೆ ಅವಶ್ಯಕ. ಸದಾಶಿವರ ಈ ರೀತಿಯ ನಿಲುವೇ ಅವರ ಪ್ರಮುಖ ವೈಶಿಷ್ಟ್ಯವಾಗಿದೆ. ಅವರು ಈ ನಿಲುವಿನಲ್ಲೇ ಏಳೆಂಟು ಯಶಸ್ವೀ ಕತೆಗಳನ್ನು ಕೊಟ್ಟಿರುವುದನ್ನು ಮರೆಯುವಂತಿಲ್ಲ. 'ಪುಟ್ಟಿ' ಯಲ್ಲಿ ಭಿನ್ನ ರೀತಿಯ ಪ್ರಜ್ಞೆಯನ್ನು ತೋರಿಸಿರುವುದು ಭರವಸೆಯನ್ನು ಹುಟ್ಟಿಸುತ್ತದೆ. 'ನಂ ಕೌಲಿ ಕಂಡ್ರಾ' ದೇಸಿಯ ಪ್ರಯೋಗವುಳ್ಳ ಮತ್ತೊಂದು ರೀತಿಯ ಕತೆ. ಹೀಗೆ ಕತಾ ವಸ್ತುವಿಗಾಗಿ ವೈವಿಧ್ಯತೆಯತ್ತ ಕೈಚಾಚುತ್ತಿರುವುದು ಒಳ್ಳೆಯ ವಿಚಾರ. ಈ ಹಿನ್ನೆಲೆಯಲ್ಲಿ ಕತೆಗಾರಿಕೆಯ ಅನೇಕ ಒಳ್ಳೆಯ ಲಕ್ಷಣಗಳನ್ನು ಹೊಂದಿರುವ ಸದಾಶಿವ ರಿಂದ ಸಮರ್ಥ ಕತೆಗಳನ್ನು ನಾವು ನಿರೀಕ್ಷಿಸಬಹುದು.

ಗ್ರಂಥಋಣ

1. ಸಣ್ಣ ಕತೆಯ ಹೊಸ ಒಲವುಗಳು : ಗಿರಡ್ಡಿ ಗೋವಿಂದ ರಾಜ
2. ಪ್ರಜಾವಾಣಿಯ (29-7-1973) 'ತುಣುಕುಗಳು' : ಡಿ. ಎ. ಶಂಕರ್

ಈಡಿಪಸ್ ಕಾಂಪ್ಲೆಕ್ಸ್: ಒಂದು ಸರಳ ವಿವರಣೆ

ಎಂ. ಬಸವಣ್ಣ

ತಮ್ಮ ಕ್ರಾಂತಿಕಾರೀ ಸಿದ್ಧಾಂತಗಳ ಮೂಲಕ ಆಧುನಿಕ ಮಾನವನ ಇತಿಹಾಸದ ಗತಿಯನ್ನೇ ಬದಲಾಯಿಸಿದ ಮೂವರು ಪ್ರಕಾಂಡ ಪ್ರತಿಭಾವಂತರಲ್ಲಿ ಸಿಗ್ಮಂಡ್ ಫ್ರಾಯ್ಡ್ ಒಬ್ಬ, ಇನ್ನಿಬ್ಬರು ಕಾರ್ಲ್‌ಮಾರ್ಕ್ಸ್ ಮತ್ತು ಆಲ್ಬರ್ಟ್ ಐನ್‌ಸ್ಟೀನ್ ಎಂಬುದು ಬಲ್ಲವರ ಮತ. ಸಿಗ್ಮಂಡ್ ಫ್ರಾಯ್ಡ್ ಇಂದು ಜಗತ್ಪ್ರಸಿದ್ಧನಾಗಿರುವುದು ಅವನು ಪ್ರತಿಪಾದಿಸಿದ ಲೈಂಗಿಕ ಸಿದ್ಧಾಂತಗಳಿಂದಾಗಿ. ಅವುಗಳಲ್ಲೆಲ್ಲಾ ಕುತೂಹಲ ಕಾರಿಯಾಗಿದ್ದು ಬಹಳ ವಾದವಿವಾದಗಳಿಗೆಡೆಮಾಡಿಕೊಟ್ಟಿರುವುದು ಅವನ ಈಡಿಪಸ್ ಕಾಂಪ್ಲೆಕ್ಸ್ (Oedipus Complex) ಸಿದ್ಧಾಂತ. ಈಡಿಪಸ್ ಕಾಂಪ್ಲೆಕ್ಸ್ ಎಂಬ ಹೆಸರನ್ನು ಕೇಳಿರುವವರು ಬಹಳ ಮಂದಿಯಾದರೂ ಅದನ್ನು ನಿಷ್ಕೃಷ್ಟವಾಗಿ ಅರ್ಥಮಾಡಿಕೊಂಡಿರುವವರು ವಿರಳ. ನಿಜವಾಗಿಯೂ ಅದೊಂದು ಕ್ಲಿಷ್ಟಕರವಾದ ಸಿದ್ಧಾಂತ. ಅದರ ಒಂದು ಸ್ಥೂಲ ಪರಿಚಯ ಈ ಲೇಖನದ ಉದ್ದೇಶ.

ಫ್ರಾಯ್ಡ್‌ನ ಲೈಂಗಿಕ ಸಿದ್ಧಾಂತಗಳನ್ನು ಪರಿಶೀಲಿಸುವಾಗ ನಾವು ಎರಡು ವಿಚಾರಗಳನ್ನು ಗಮನಿಸಬೇಕು. ಮೊದಲನೆಯದಾಗಿ ಅವನು "ಲೈಂಗಿಕ" ಎಂಬ ಮಾತನ್ನು ಅದರ ವಿಶಾಲವಾದ ಅರ್ಥದಲ್ಲಿ ಉಪಯೋಗಿಸಿದ್ದಾನೆ ಎಂಬುದು. ಫ್ರಾಯ್ಡ್‌ನ ಪ್ರಕಾರ ಯಾವ್ಯಾವ ಪ್ರಚೋದನೆಗಳು ಸುಖಾನುಭವವನ್ನುಂಟು ಮಾಡುವವೋ ಅವೆಲ್ಲವೂ ಲೈಂಗಿಕವೇ. ಅದಕ್ಕಾಗಿಯೇ ಅವನು ಲೈಂಗಿಕ (Sexual) ಎಂಬ ಪದಕ್ಕೆ ಬದಲು ಮನೋಲೈಂಗಿಕ (Psychosexual) ಎಂಬ ಪದವನ್ನು ಬಳಸಿದ್ದಾನೆ. ಎರಡನೆಯದಾಗಿ ಲೈಂಗಿಕ ಅನುಭವಗಳು, ಮೇಲಿನ ಅರ್ಥದಲ್ಲಿ, ಶೈಶವದಲ್ಲೇ ಜರುಗುತ್ತವೆ ಎಂಬುದು. ಇದನ್ನು ಫ್ರಾಯ್ಡ್ ಶೈಶವಾತ್ಮಕ ಲೈಂಗಿಕತೆ (Infantile Sexuality) ಎಂದು ಕರೆದಿದ್ದಾನೆ.

ಲೈಂಗಿಕತೆ ವ್ಯಕ್ತಿಯಲ್ಲಿ ವಿವಿಧ ಹಂತಗಳಲ್ಲಿ ಬೆಳೆಯುತ್ತದೆಂಬುದು ಫ್ರಾಯ್ಡ್‌ನ ಅಭಿಪ್ರಾಯ. ಈ ಹಂತಗಳನ್ನು ಅವನು ಮನೋಲೈಂಗಿಕ ಅವಸ್ಥೆ (Psychosexual Stages)ಗಳೆಂದು ಕರೆದಿದ್ದಾನೆ. ಒಂದೊಂದು ಅವಸ್ಥೆಯಲ್ಲಿಯೂ ಲೈಂಗಿಕ ಶಕ್ತಿ (Libido–ಕಾಮ) ಒಂದೊಂದು ನಿರ್ದಿಷ್ಟ ವಲಯದಲ್ಲಿ ಕೇಂದ್ರೀಕರಿಸಲ್ಪಟ್ಟಿದ್ದು. ಅದರ ಪ್ರಚೋದನೆಯಾದಾಗ ವ್ಯಕ್ತಿಗೆ ಸುಖಾನುಭವವಾಗುತ್ತದೆ.

ಮೊದಲಿಗೆ ಲೈಂಗಿಕ ಶಕ್ತಿ ಕೇಂದ್ರೀಕೃತವಾಗುವುದು ಮೌಖಿಕ ವಲಯದಲ್ಲಿ; ಬಾಯಿಯ ಸುತ್ತಮುತ್ತ. ಆದುದರಿಂದ ಒಂದು ಮತ್ತು ಎರಡನೇ ವರ್ಷಗಳಲ್ಲಿ ಮಕ್ಕಳಿಗೆ ಬಾಯಿ, ತುಟಿ, ಹಲ್ಲು, ನಾಲಗೆ ಮುಂತಾದ ಅಂಗಗಳ ಪ್ರಚೋದನೆ ಹಿತಕರವಾಗಿರುತ್ತದೆ. ಈ ಕಾಲದಲ್ಲಿ ಎದೆ ಚೀಪುವುದು, ಬೆರಳು ಚೀಪುವುದು, ಏನಾದರೂ ಕಡಿಯುವುದು, ಮುಂತಾದ ಕ್ರಿಯೆಗಳಿಂದ ಮಗು ಪಡೆಯುವ ಅನುಭವ ಮೂಲತಃ ಲೈಂಗಿಕವೇ ಎನ್ನುವುದು ಫ್ರಾಯ್ಡ್‌ನ ಅಭಿಮತ. ಹೀಗೆ, ಲೈಂಗಿಕ ಭಾವನೆಗಳ ವಿಕಾಸದಲ್ಲಿ ಮೌಖಿಕಾವಸ್ಥೆ (Oral Stage) ಮೊದಲನೆಯದು. ಸುಮಾರು ಎರಡು ಅಥವಾ ಮೂರನೇ ವರ್ಷದಲ್ಲಿ ಲೈಂಗಿಕ ಶಕ್ತಿ ಗುದದ್ವಾರದ ಸುತ್ತಮುತ್ತ ಕೇಂದ್ರೀಕೃತವಾಗಿದ್ದು, ಆಗ ಈ ವಲಯದ ಪ್ರಚೋದನೆ ಮಗುವಿಗೆ ಹಿತಕರವಾಗಿರುತ್ತದೆ. ಇದು ಗುದಾವಸ್ಥೆ (Anal Stage). ಮೂರನೆಯದು ಶಿಶ್ನಾವಸ್ಥೆ (Phallic Stage). ಇದು ಸುಮಾರು ನಾಲ್ಕರಿಂದ ಆರು ವರ್ಷಗಳೊಳಗೆ ಜರುಗುತ್ತದೆ. ಈ ಕಾಲದಲ್ಲಿ ಜನನೇಂದ್ರಿಯಗಳ ಸ್ಪರ್ಶ ಮತ್ತು ಪ್ರಚೋದನೆ ಮಕ್ಕಳಿಗೆ ಸುಖಾನುಭವವನ್ನುಂಟುಮಾಡುತ್ತದೆ.

ಸಾಮಾನ್ಯವಾಗಿ ಶಿಶ್ನಾವಸ್ಥೆಯನ್ನು ಹಾಯ್ದು ಹೋಗುವಾಗ ಪ್ರತಿಯೊಂದು ಮಗುವೂ ಒಂದು ವಿಶಿಷ್ಟವಾದ ಭಾವ ಸಂಕೀರ್ಣವನ್ನನುಭವಿಸುತ್ತದೆ. ಈ ಭಾವ ಸಂಕೀರ್ಣವೇ ಈಡಿಪಸ್ ಕಾಂಪ್ಲೆಕ್ಸ್. ಅಂದರೆ ಪ್ರತಿಯೊಂದು ಮಗುವೂ ನಾಲ್ಕರಿಂದ ಆರು ವರ್ಷ ವಯಸ್ಸಿನಲ್ಲಿ ತನ್ನ ಮಾತಾಪಿತರೊಡನೆ ಒಂದು ನಿರ್ದಿಷ್ಟ ಮನೋಭಾವವನ್ನು ಹೊಂದಿರುತ್ತದೆ. ಗಂಡುಮಗು ತನ್ನ ತಾಯಿಯನ್ನು ಅಪಾರವಾಗಿ ಪ್ರೀತಿಸುತ್ತಾ ಅಷ್ಟೇ ತೀವ್ರವಾಗಿ ತಂದೆಯನ್ನು ದ್ವೇಷಿಸುತ್ತದೆ; ಹೆಣ್ಣು ಮಗು ತನ್ನ ತಂದೆಯನ್ನು ಅತಿಯಾಗಿ ಪ್ರೀತಿಸುತ್ತಾ ಅದೇ ಪ್ರಮಾಣದಲ್ಲಿ ತಾಯಿಯನ್ನು ದ್ವೇಷಿಸುತ್ತದೆ. ಈ ಭಾವ ಸಂಕುಲವೇ ಈಡಿಪಸ್ ಕಾಂಪ್ಲೆಕ್ಸ್. ಇದು ಒಂದು ವಿಧವಾದ ಮಾನಸಿಕ ತುಮುಲ, ಸಂಘರ್ಷ (Conflict) ಒಂದು ಆತಂಕಭರಿತ ಆಂತರಿಕ ಮನಃಸ್ಥಿತಿ; ಭಾವ ಸಂಕೀರ್ಣ.

ಈ ಮನೋಭಾವಕ್ಕೆ ಆ ಹೆಸರು ಬರಲು ಕಾರಣವಿದೆ. ಈಡಿಪಸ್ ಎನ್ನುವುದು ಗ್ರೀಕ್ ಪುರಾಣಗಳಲ್ಲಿ ಬರುವ ಒಬ್ಬ ದುರಂತ ಕಥಾನಾಯಕನ ಹೆಸರು. ಅವನನ್ನು ಕುರಿತು ಸೊಫೊಕ್ಲೀಸ್ ರಚಿಸಿರುವ ನಾಟಕ ಜಗತ್ಪ್ರಸಿದ್ಧವಾಗಿದೆ. ಈಡಿಪಸ್ ಕಥೆ ಹೀಗಿದೆ: ಲೇಯಸ್ (Laius) ಎಂಬುವವನು ಥೀಬ್ಸ್ (Thebes) ದೇಶದ ದೊರೆ. ಅವನ ರಾಣಿ ಜೊಕಾಸ್ಟ (Jocasta). ಇವರಿಬ್ಬರ ಮಗು ಈಡಿಪಸ್. ಈಡಿಪಸ್‌ನ ಜನನ ಅವನ ತಂದೆ ತಾಯಿಗಳಿಗೆ ಅನಿಷ್ಟಕಾರಕವೆಂದು ಅಶರೀರವಾಣಿ ಭವಿಷ್ಯ ನುಡಿಯಿತು. ಇದರಿಂದ ಕನಲಿದ ದೊರೆ ಮಗುವನ್ನು ಕಾಡಿಗೆ ಕೊಂಡೊಯ್ದು ಕೊಂದುಬಿಡುವಂತೆ ಆಜ್ಞಾಪಿಸಿದ. ಈ ಕಾರ್ಯಕ್ಕಾಗಿ ನಿಯಮಗೊಂಡ ವ್ಯಕ್ತಿ

ಹಸುಳೆ ಮಗುವನ್ನು ಕೊಲ್ಲಲಾರದೆ, ಅದನ್ನು ಕಾಡಿನಲ್ಲಿ ಬಿಟ್ಟುಬಂದ. ಹೀಗೆ ಬಿಡಲ್ಪಟ್ಟ ಮಗು ಬೇರೊಬ್ಬ ರಾಜನಿಗೆ ಸಿಕ್ಕಿ, ಅವನು ಮತ್ತು ಅವನ ರಾಣಿ ಮಗುವನ್ನು ತಮ್ಮ ಮಗನಂತೆ ಪೋಷಿಸಿ ಬೆಳೆಸಿದರು. ಈಡಿಪಸ್ ಒಬ್ಬ ಶೂರ ರಾಜಕುಮಾರನಾದ. ಹೀಗಿರುವಾಗ ಒಂದು ದಿನ ಅವನಿಗೆ ತಾನು ತಂದೆಯನ್ನು ಕೊಂದು ತಾಯಿಯನ್ನು ಕಾಮಿಸುವಂತಾಗುತ್ತದೆಂದು ಅಶರೀರವಾಣಿಯಿಂದ ತಿಳಿದು ಬರುತ್ತದೆ. ತನ್ನ ಸಾಕು ತಂದೆ ತಾಯಿಯರನ್ನು ಸ್ವಂತ ತಂದೆ ತಾಯಿಗಳೆಂದೇ ನಂಬಿದ್ದ ಈಡಿಪಸ್ ರಾಜಕುಮಾರ ಈ ಪಾಪ ಕರ್ಮದಿಂದ ಪಾರಾಗಲು ಮನೆ ಬಿಟ್ಟು ಹೋಗುತ್ತಾನೆ. ಆದರೆ ವಿಧಿ ಬರಹವನ್ನು ತಪ್ಪಿಸುವರಾರು! ಒಂದು ಸಾರಿ ಈಡಿಪಸ್ ಎಲ್ಲೋ ಹೋಗುತ್ತಿರುವಾಗ ತನ್ನ ಹಾದಿಗೆ ಅಡ್ಡ ಬಂದ ಲೇಯುಸ್‌ನನ್ನು ತನ್ನ ತಂದೆಯೆಂದರಿಯದೆ ಕೊಲ್ಲುತ್ತಾನೆ. ಅನಂತರ ಥೀಬ್ಸ್ ದೇಶಕ್ಕೆ ಮಾರಕವಾಗಿದ್ದ ಸ್ಫಿಂಕ್ಸ್ (Sphinx)ನ ಸಮಸ್ಯೆಗಳಿಗೆಲ್ಲಾ ಸಮರ್ಪಕವಾದ ಉತ್ತರವಿತ್ತು ಆ ದೇಶದ ಜನತೆಯನ್ನು ಶಾಪವಿಮುಕ್ತಗೊಳಿಸುತ್ತಾನೆ. ತಮ್ಮ ದೊರೆ ಲೇಯುಸ್ ದರೋಡೆಕಾರರ ಕೈಯಲ್ಲಿ ಸತ್ತನೆಂದು ತಿಳಿದಿದ್ದ ಜನ ಈಡಿಪಸ್‌ನನ್ನೇ ತಮ್ಮ ರಾಜನೆಂದು ಆಯ್ಕೆ ಮಾಡುತ್ತಾರೆ. ಹೀಗೆ ರಾಜನಾದ ಈಡಿಪಸ್ಸಿಗೆ ಜೊಕಾಸ್ಟ ಅನಿವಾರ್ಯವಾಗಿ ರಾಣಿಯಾಗುತ್ತಾಳೆ. ಅವನಿಂದ ಮಕ್ಕಳನ್ನೂ ಪಡೆಯುತ್ತಾಳೆ. ಒಂದು ದಿನ ಈಡಿಪಸ್‌ನಿಗೆ ನಿಜಸ್ಥಿತಿ ತಿಳಿಯುತ್ತದೆ. ಪಶ್ಚಾತ್ತಾಪದಿಂದ ಅವನು ತನ್ನ ಕಣ್ಣುಗಳನ್ನೇ ಕಿತ್ತು ಹಾಕಿ, ತನ್ನ ರಾಜ್ಯವನ್ನು ಬಿಟ್ಟು ದೂರ ಹೋಗಿ, ಪಡಬಾರದ ಕಷ್ಟಗಳನ್ನನುಭವಿಸಿ, ದುರ್ಮರಣಕ್ಕೀಡಾಗುತ್ತಾನೆ. ಇದಿಷ್ಟು ಈಡಿಪಸ್ ಕಥೆ. ಇಲ್ಲಿ ಫ್ರಾಯ್ಡ್ ಗಣನೆಗೆ ತೆಗೆದುಕೊಂಡ ವಿಷಯ, ಈಡಿಪಸ್ ತಂದೆಯನ್ನು ಕೊಂದು ತಾಯಿಯನ್ನು ಕಾಮಿಸಿದನೆಂಬುದು. ತಂದೆಯನ್ನು ದ್ವೇಷಿಸಿ ತಾಯಿಯನ್ನು ಪ್ರೀತಿಸುವ ಮಗುವಿನ ಮನಃಸ್ಥಿತಿಯನ್ನು ವಿವರಿಸುವಲ್ಲಿ ಫ್ರಾಯ್ಡನಿಗೆ ಈಡಿಪಸ್ ಎಂಬ ಹೆಸರು ಒಂದು ಒಳ್ಳೆಯ ಸಂಕೇತವಾಗಿ ಕಂಡುಬಂದು, ಅದನ್ನು ಹಾಗೆಯೇ ಉಪಯೋಗಿಸಿಕೊಂಡಿದ್ದಾನೆ. ಹೆಣ್ಣು ಹಾಗೂ ಗಂಡುಮಕ್ಕಳುಗಳಲ್ಲಿ ಈ ಮನಃಸ್ಥಿತಿಯ ಅಭಿವ್ಯಕ್ತಿ ಬೇರೆ ಬೇರೆ ರೀತಿಯಲ್ಲಿ ಜರುಗುವುದರಿಂದ ಹೆಣ್ಣಿನ ಭಾವನೆಗಳಿಗೆ ಬೇರೆ ಹೆಸರು ಕೊಡಬೇಕೆಂಬ ಸೂಚನೆಗಳು ಬಂದರೂ, ಅದನ್ನು ನಿರಾಕರಿಸಿ ಇಬ್ಬರ ಭಾವನೆಗಳಿಗೂ ಫ್ರಾಯ್ಡ್ ಇದೇ ಹೆಸರನ್ನು ಉಳಿಸಿಕೊಂಡಿದ್ದಾನೆ.

ಒಂದು ರೀತಿಯಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಫ್ರಾಯ್ಡನ ಇತರ ಸಿದ್ಧಾಂತಗಳಿಗೆಲ್ಲಾ ಅಡಿಗಲ್ಲು. ಮಗು ಈ ಅವಸ್ಥೆಯಲ್ಲಿರುವಾಗ ಅನುಭವಿಸುವ ಭಾವಸಂಕೀರ್ಣಗಳಿಂದ ಹೇಗೆ ಬಿಡುಗಡೆ ಹೊಂದುತ್ತದೆ, ತನ್ನ ಸಮಸ್ಯೆಗಳಿಗೆ ಎಂತಹ ಪರಿಹಾರಗಳನ್ನು ಕಂಡುಕೊಳ್ಳುತ್ತದೆ ಎನ್ನುವುದು ಅದರ ವ್ಯಕ್ತಿತ್ವದ ವಿಕಾಸದ ಮೇಲೆ

ಅತೀವ ಪ್ರಭಾವ ಬೀರುತ್ತವೆ. ಈಡಿಪಸ್ ಭಾವ ಸಂಕೋಲೆಯಿಂದ ಬಿಡುಗಡೆ ಹೊಂದುವಲ್ಲಿ ಕೃತಕೃತ್ಯರಾದರೆ ಮಾತ್ರ ಮಕ್ಕಳಲ್ಲಿ ಸ್ವಸ್ಥ ವ್ಯಕ್ತಿತ್ವದ ವಿಕಾಸ ಸಾಧ್ಯ; ಇಲ್ಲವಾದರೆ ವ್ಯಕ್ತಿತ್ವದ ಬೆಳವಣಿಗೆ ಕುಂಠಿತಗೊಂಡು ಮಕ್ಕಳು ಹಲವಾರು ಮನೋವಿಕಾರಗಳಿಗೊಳಗಾಗಬಹುದು. ಆದುದರಿಂದ, ವ್ಯಕ್ತಿತ್ವದ ರಚನೆ ಮತ್ತು ಕಾರ್ಯವಿಧಾನವನ್ನು ಅರಿಯಬೇಕಾದರೆ, ಈಡಿಪಸ್ ಕಾಂಪ್ಲೆಕ್ಸ್‌ನ ಅನುಸಂಧಾನ ಅನಿವಾರ್ಯವೆನ್ನುತ್ತಾನೆ ಫ್ರಾಯ್ಡ್.

ಈಡಿಪಸ್ ಕಾಂಪ್ಲೆಕ್ಸ್‌ನ ಉಗಮ

ನವಜಾತ ಮಾನವ ಶಿಶು ಪೂರ್ಣ ಪರಾವಲಂಬಿ. ಅದು ಸಾಮಾನ್ಯವಾಗಿ ತನ್ನ ಉಳಿವಿಗಾಗಿ ತಾಯಿಯನ್ನು ಅವಲಂಬಿಸಿರುತ್ತದೆ. ಈ ಕಾಲದಲ್ಲಿ ಮಗುವಿಗಾಗುವ ಶಾರೀರಿಕ ಹಾಗು ಮಾನಸಿಕ ಅನುಭವಗಳೆಲ್ಲವೂ ಕೊಂಚ ಹೆಚ್ಚು ಕಡಿಮೆ ತಾಯಿಯ ಮೂಲಕವೇ ಜರುಗುತ್ತವೆ. ಮಗುವಿಗಾಗುವ ಪ್ರಥಮಾನುಭವಗಳು ಪ್ರಭಾವಯುತವಾಗಿದ್ದು, ಅವೆಲ್ಲಾ ತಾಯಿಯ ಮೂಲಕವೇ ನಡೆಯುತ್ತವೆಂಬುದು ಗಮನಿಸಬೇಕಾದ ವಿಷಯ. ಹಾಲು ಕುಡಿಯುವಾಗ ಎದೆ ಚೀಪುವುದು ಮಗುವಿಗೆ ಸಂತೋಷದಾಯಕವಾದ ಅನುಭವ. ಜತೆಗೆ ತಾಯಿ ಮಗುವನ್ನು ನಯವಾಗಿ ಎತ್ತಿಕೊಳ್ಳುತ್ತಾಳೆ; ಮೃದುವಾಗಿ ತಟ್ಟುತ್ತಾಳೆ; ಅಪ್ಪಿ ಮುದ್ದಾಡುತ್ತಾಳೆ. ಇವೆಲ್ಲಾ ಮಗುವಿಗೆ ಹಿತಕರವಾಗಿರುತ್ತವೆ; ಸುಖಕರವಾಗಿರುತ್ತವೆ. ಫ್ರಾಯ್ಡ್‌ನ ಪ್ರಕಾರ ಇವೆಲ್ಲಾ ಲೈಂಗಿಕ ಅನುಭವಗಳೇ. ಹಾಗೆ ನೋಡಿದರೆ ಎಲ್ಲಾ ಸುಖಾನುಭವಗಳೂ ಲೈಂಗಿಕವೇ. ಸುಖಾನುಭವಗಳಿಗೆಲ್ಲಾ ಹಿನ್ನೆಲೆಯಲ್ಲಿರುವ ಒಂದು ಸಾಮಾನ್ಯ ಘಟಕ ಕಾಮವೆನ್ನುತ್ತಾನೆ ಫ್ರಾಯ್ಡ್. ಆದುದರಿಂದ ಕಾಮಕ್ಕಿರುವ ಅರ್ಥವ್ಯಾಪ್ತಿ ವಿಶಾಲವಾದುದು; ಸಂಭೋಗ ಕ್ರಿಯೆಯೂ ಸೇರಿದಂತೆ ವ್ಯಕ್ತಿಯಲ್ಲಿ ಸುಖೋದ್ದೀಪನಗೊಳಿಸುವ ಎಲ್ಲಾ ಕ್ರಿಯೆಗಳೂ ಇದರಡಿಯಲ್ಲಿ ಬರುತ್ತವೆ. ಅಂದಮೇಲೆ ಅಪ್ಪಿ ಮುದ್ದಾಡಿದಾಗ, ಮೈಸವರಿದಾಗ, ಹಾಲೂಡಿದಾಗ ಆಗುವ ಅನುಭವಗಳಲ್ಲೆಲ್ಲಾ ಕಾಮದ ಸೋಂಕು ಇರುತ್ತದೆ. ಹೀಗೆ ಮಗುವಿಗಾಗುವ ಪ್ರಥಮ ಸುಖಾನುಭವಗಳು ತಾಯಿಯ ಮೂಲಕ ನಡೆಯುವುದರಿಂದ ಮಗು ತಾಯಿಗೆ ಅಂಟಿಕೊಂಡಿರುತ್ತದೆ. ತನ್ನ ಸಕಲ ಸುಖಕ್ಕೂ ಕಾರಣಳಾದ ತಾಯಿಯನ್ನು ಪ್ರೀತಿಸುತ್ತಿರುತ್ತದೆ. ಆದರೆ ಬೆಳೆಯುತ್ತಾ ಮೂರನೇ ವರ್ಷಕ್ಕೆ ಕಾಲಿಟ್ಟು ಶಿಶ್ನಾವಸ್ಥೆಗೆ ಬಂದಾಗ ಮಕ್ಕಳ ಮನಸ್ಸಿನಲ್ಲಿ ತಂದೆ ತಾಯಿಯರನ್ನು ಕುರಿತು ಇರುವ ಭಾವನೆಗಳಲ್ಲಿ ತೀವ್ರ ಬದಲಾವಣೆ ಕಂಡು ಬರುತ್ತದೆ. ಇದೇ ಈಡಿಪಸ್ ಕಾಂಪ್ಲೆಕ್ಸಿಗೆ ಅಂಕುರಾರ್ಪಣ. ಹೆಣ್ಣು ಗಂಡುಗಳಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಹುಟ್ಟುವ ಬಗೆ, ಬೆಳೆಯುವ ರೀತಿ, ಪರಿಹಾರವಾಗುವ ವಿಧಾನ ಮತ್ತು ಉಂಟು ಮಾಡುವ ಅನುಭವಗಳಲ್ಲಿ ವ್ಯತ್ಯಾಸವಿರುವುದರಿಂದ ಅದನ್ನು ಬೇರೆ ಬೇರೆಯಾಗಿಯೇ ಪರಿಶೀಲಿಸಬೇಕಾಗುತ್ತದೆ.

ಗಂಡುಮಕ್ಕಳಲ್ಲಿ ಈಡಿಪಸ್ ಕಾಂಪ್ಲೆಕ್ಸ್

ಶಿಶ್ನಾವಸ್ಥೆಗೆ ಬರುವವರೆಗೆ ಹೆಣ್ಣು ಗಂಡುಗಳಲ್ಲಿ ತಾಯಿ ತಂದೆಯರನ್ನು ಕುರಿತಾಗಿ ಇರುವ ಭಾವನೆಗಳಲ್ಲಿ ಅಷ್ಟಾಗಿ ವ್ಯತ್ಯಾಸವೇನೂ ಇರುವುದಿಲ್ಲ. ಪೂರ್ಣವಾಗಿ ಅವರು ಒಂದೇ ಲೈಂಗಿಕ ವರ್ಗಕ್ಕೆ ಸೇರಿದವರಂತೆ ವರ್ತಿಸುತ್ತಿರುತ್ತಾರೆ. ಅವರಲ್ಲಿ ತಮ್ಮ ತಮ್ಮ ವರ್ಗಕ್ಕೆ ಸಂಬಂಧಿಸಿದ ವಿಶಿಷ್ಟ ಲೈಂಗಿಕ ಗುಣಗಳು ಬೆಳೆಯಲು ಬಹಳ ಕಾಲ ಹಿಡಿಯುತ್ತದೆ. ಹಾಗೆ ಬೆಳೆಯಬೇಕಾದ ಗುಣಗಳಿಗೆ ಅಂಕುರಾರ್ಪಣವಾಗುವುದು ಕೂಡ ಈಡಿಪಸ್ ಕಾಂಪ್ಲೆಕ್ಸ್ ಜರುಗುವ ಕಾಲದಲ್ಲಿಯೇ.

ಮಕ್ಕಳು ಶಿಶ್ನಾವಸ್ಥೆಗೆ ಬಂದಾಗ ಅವರ ಲೈಂಗಿಕ ಶಕ್ತಿ (ಲಿಬಿಡೊ) ಜನನಾಂಗಗಳಲ್ಲಿ ಕೇಂದ್ರೀಕೃತವಾಗಿರುತ್ತದೆ ಎನ್ನುವ ವಿಚಾರ ಈಗಾಗಲೇ ಬಂದಿದೆ. ಈ ಕಾಲದಲ್ಲಿ ಗಂಡುಮಗುವಿನ ಗಮನ ತನ್ನ ಜನನಾಂಗಗಳೆಡೆಗೆ ಹರಿಯುತ್ತದೆ. ಅದಕ್ಕೆ ಏನಾದರೂ ತಗುಲಿದರೆ ಅವನಿಗೆ ಹಿತಕರವಾದ ಅನುಭವವಾಗುತ್ತದೆ. ಎಷ್ಟೋ ವೇಳೆ ಅವನು ಅದನ್ನು ಮುಟ್ಟಿಕೊಳ್ಳುತ್ತಿರುವುದನ್ನು ಯಾರು ಬೇಕಾದರೂ ಗಮನಿಸಿರಬಹುದು. ಈ ಅನುಭವಕೂಡ ಮೊದಲಾಗುವುದು ತಾಯಿಯ ಮೂಲಕವೇ. ಮಗುವಿಗೆ ಸ್ನಾನಮಾಡಿಸುವಾಗ, ಮೈಯೊರಸುವಾಗ, ಬಟ್ಟೆ ತೊಡಿಸುವಾಗ ತಾಯಿ ಆಕಸ್ಮಿಕವಾಗಿಯಾದರೂ ಅವನ ಜನನಾಂಗವನ್ನು ಸ್ಪರ್ಶಿಸುವುದು ಅನಿವಾರ್ಯ. ಹೀಗಾದಾಗ ಅವನಿಗೆ ಹಿತಕರವಾದ ಅನುಭವವಾಗುತ್ತದೆ. ಅಂದಮೇಲೆ ತನ್ನ ಸಕಲ ಸುಖಗಳಿಗೂ ಕಾರಣಳಾದ ತಾಯಿ ಅವನ ಪ್ರೀತಿಯ ವಸ್ತುವಾಗುವುದು ಸ್ವಾಭಾವಿಕ. ಆದುದರಿಂದ ಸಹಜವಾಗಿ ಅವನು ಅವಳೆಡೆಗೆ ಆಕರ್ಷಿತನಾಗುತ್ತಾನೆ. ಅವಳಲ್ಲಿ ಅವನಿಗೆ ಅಪಾರವಾದ ಪ್ರೇಮ ಬೆಳೆದು ಬರುತ್ತದೆ. ಹೀಗಿರುವಾಗ ಅವನು ತನ್ನ ಪ್ರೀತಿಯ ವಸ್ತುವಾದ ತಾಯಿ ತಂದೆಯೆಡೆಗೆ ಆಕರ್ಷಿತಳಾಗುವುದನ್ನು ಸಹಿಸಲಾರ. ಅವನಿಗೆ ತಂದೆ, ತನಗೂ ತಾಯಿಗೂ ನಡುವೆ ಬರುವ ಒಂದು ಅನಾವಶ್ಯಕ ಅಡಚಣೆಯಾಗಿ ಕಂಡುಬರುತ್ತಾನೆ. ಸಹಜವಾಗಿ ಅವನಿಗೆ ತಂದೆಯ ಮೇಲೆ ಅಸೂಯೆಯುಂಟಾಗುತ್ತದೆ. ಅದೇ ದ್ವೇಷವಾಗಿ ಪರಿಣಮಿಸುತ್ತದೆ. ಆದರೆ ತಂದೆ ಹಿರಿಯ, ಯಜಮಾನ, ಶಕ್ತಿವಂತ; ಅವನು ತನ್ನನ್ನು ಶಿಕ್ಷಿಸಬಹುದು ಎನ್ನುವ ಭಾವನೆಗಳೂ ಮಗುವಿಗುಂಟಾಗುತ್ತವೆ. ಇವೆಲ್ಲಾ ಅವನಲ್ಲಿ ಒಂದು ವಿಧವಾದ ಭಾವಸಂಕೀರ್ಣವನ್ನುಂಟುಮಾಡುತ್ತವೆ. ಇದೇ ಗಂಡು ಮಗುವಿನ ಈಡಿಪಸ್ ಕಾಂಪ್ಲೆಕ್ಸ್. ಇದೊಂದು ಆತಂಕಭರಿತ ಮನಃಸ್ಥಿತಿ ಎಂಬುದು ನಿರ್ವಿವಾದ. ಇದು ಹಾಗೆಯೇ ಉಳಿದು ಬಂದರೆ ಸ್ವಸ್ಥ ವ್ಯಕ್ತಿತ್ವದ ವಿಕಾಸ ಸಾಧ್ಯವಿಲ್ಲ. ಈ ಮನಃಸ್ಥಿತಿ ಅಳಿಯಬೇಕು; ಅಳಿಯುತ್ತದೆ. ಹಾಗಾಗುವುದು ಸ್ವಾಭಾವಿಕ ಜೈವಿಕ ವ್ಯಾಪಾರ. ಈಡಿಪಸ್ ಕಾಂಪ್ಲೆಕ್ಸ್ ವ್ಯಕ್ತಿಯ ಬೆಳವಣಿಗೆಯಲ್ಲಿ ಒಂದು ಅವಸ್ಥೆ. ಹಲವು ಹಂತಗಳನ್ನು ದಾಟಿ ಅವನು ಈ ಅವಸ್ಥೆಗೆ ಹೇಗೆ ಬಂದನೋ ಹಾಗೆಯೇ ಇಲ್ಲಿಂದ

ಮುಂದಿನ ಅವಸ್ಥೆಗೆ ಹೋಗುವುದು ಸಹಜ. ಬೆಳೆಯುವ ಮಕ್ಕಳಲ್ಲಿ ಹಾಲು - ಹಲ್ಲುಗಳು ಬಿದ್ದು ಬೇರೆ ಹಲ್ಲುಗಳು ಹೇಗೆ ಹುಟ್ಟುವುವೋ ಹಾಗೆಯೇ ಈಡಿಪಸ್ ಅವಸ್ಥೆ ಅಳಿದು ಮುಂದಿನ ಅವಸ್ಥೆಗೆ ಮಗು ದಾಟಿ ಹೋಗುತ್ತದೆ. ಅದು ಜೈವಿಕ ನಿಯಮ.

ಗಂಡು ಮಗುವಿನಲ್ಲಿ ಈಡಿಪಸ್ ಕಾಂಪ್ಲೆಕ್ಸಿನ ಅಳಿವಿಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಮುಖ್ಯವಾದುದು ಶಿಶ್ನಲೋಪಭಯ (Castration fear). ತಾಯಿಯನ್ನು ಪ್ರೀತಿಸುತ್ತಾ ತಂದೆಯ ಮೇಲೆ ದ್ವೇಷಾಸೂಯೆಗಳನ್ನು ಹೊಂದಿರುವ ಗಂಡು ಮಗುವಿಗೆ ಒಂದು ದಿನ ಹೆಣ್ಣು ಮಕ್ಕಳಲ್ಲಿ, ಅದರಲ್ಲೂ ತನ್ನ ಅಕ್ಕ ತಂಗಿಯರಲ್ಲಿ ತನಗಿರುವಂತಹ, ಹೊರಚಾಚಿರುವ ಜನನಾಂಗವಿಲ್ಲದಿರುವುದು ಕಂಡುಬರುತ್ತದೆ. ಇದು ಅವನ ಕುತೂಹಲವನ್ನು ಕೆರಳಿಸುವುದರ ಜತೆಗೆ ಕಳವಳವನ್ನೂ ಉಂಟು ಮಾಡುತ್ತದೆ. ಅವನ ಆಲೋಚನೆಯ ಪ್ರಕಾರ ಅವನ ಸಹೋದರಿಯರಲ್ಲೂ ಅವನಿಗಿರುವಂತಹದೇ ಅಂಗವಿದ್ದಿರಬೇಕು ; ತನ್ನಂತೆ ಅವಳು ಕೂಡ ತಾಯಿಯನ್ನು ಪ್ರೀತಿಸಿ ತಂದೆಯನ್ನು ದ್ವೇಷಿಸಿದಾಗ, ತಂದೆ ಅವಳನ್ನು ಶಿಕ್ಷಿಸಿರಬೇಕು ; ಅವಳಿಗಾದ ಶಿಕ್ಷೆಯ ಪರಿಣಾಮದಿಂದಲೇ ಅವಳ ಶಿಶ್ನಲೋಪವಾಗಿರಬಹುದು ; ತಾನೂ ಅಂತಹ ಭಾವನೆಗಳನ್ನು ಪೋಷಿಸಿಕೊಂಡು ಹೋದರೆ ತನಗೂ ಅದೇ ಶಿಕ್ಷೆ ಕಾದಿರಿಸಿದುದೇ. ಇದು ಅವನ ಆಲೋಚನಾಸರಣಿ. ಈ ಭಾವಪುಂಜವನ್ನು ಫ್ರಾಯ್ಡ್ ಶಿಶ್ನಲೋಪ ಸಂಕೀರ್ಣ (Castration Complex) ಎಂದು ಕರೆದಿದ್ದಾನೆ. ಹಲವು ವೇಳೆ ಮಗು ತನ್ನ ಗುಪ್ತಾಂಗಗಳನ್ನು ಮುಟ್ಟಿದಾಗ ಅವನ ತಾಯಿ ತಂದೆಗೆ ಹೇಳಿ ಅದನ್ನು ಕತ್ತರಿಸಿ ಹಾಕಿಸುವೆನೆಂದು ಬೆದರಿಸುತ್ತಾಳೆ. ಈ ಬೆದರಿಕೆ ಅವನ ಶಿಶ್ನಲೋಪಭಯಕ್ಕೆ ಪೂರಕವಾಗುತ್ತದೆ. ಮಗುವಿಗೆ ತನ್ನ ಜನನಾಂಗಗಳು ಸುಖಾನುಭವದ ಸಾಧನಗಳಾಗಿದ್ದು ಅವನ ದೃಷ್ಟಿಯಲ್ಲಿ ಅವು ಅಮೂಲ್ಯವಾಗಿರುತ್ತವೆ. ತನ್ನ ಅಮೂಲ್ಯವಾದ ಅಂಗವನ್ನು ಕಳೆದುಕೊಳ್ಳುವೆನೆಂಬ ಭಯ ಅವನ ಈಡಿಪಸ್ ಭಾವನೆಗಳನ್ನು ನುಚ್ಚು ನೂರು ಮಾಡುತ್ತದೆ. ಹೀಗೆ ಈ ಈಡಿಪಸ್ ಕಾಂಪ್ಲೆಕ್ಸ್ ದಮನಗೊಳ್ಳುತ್ತದೆ; ಅದರಿಂದ ಮಗುವಿನ ಬಿಡುಗಡೆಯಾಗುತ್ತದೆ. ಈಡಿಪಸ್ ಕಾಮನೆಗಳಿಗೆ ತಾಯಿಯಿಂದ ಉತ್ತೇಜನ, ಪ್ರೋತ್ಸಾಹ ಹಾಗೂ ಸಹಕಾರಗಳು ದೊರೆಯದಿರುವುದೂ ಕೂಡ ಅವುಗಳ ಅಳಿವಿಗೆ ಸಹಾಯಕವಾಗುತ್ತದೆ. ಇವೆಲ್ಲಕ್ಕಿಂತ ಮಗುವಿನಲ್ಲಿ ನಡೆಯುತ್ತಿರುವ ಸ್ವಾಭಾವಿಕ ಜೀವವಿಕಾಸ, ಬೆಳವಣಿಗೆ, ಅವನನ್ನು ಈ ಅಸಹಜ ಭಾವನೆಗಳನ್ನು ಮೆಟ್ಟಿ ನಿಂತು ಮುನ್ನಡೆಯುವಂತೆ ಮಾಡುತ್ತದೆ.

ಮಗುವಿನಲ್ಲಿ ಈಡಿಪಸ್ ಕಾಮನೆಗಳು ಅಳಿಯುತ್ತಿದ್ದಂತೆಯೇ ಅವನಿಗೆ ತಂದೆ ತಾಯಿಗಳಲ್ಲಿ ತಾದಾತ್ಮ್ಯಭಾವನೆ (Identification)ಗಳು ಹುಟ್ಟಿಕೊಳ್ಳುತ್ತವೆ. ಅವನು ತಂದೆಯನ್ನೋ, ತಾಯಿಯನ್ನೋ, ತನ್ನ ವ್ಯಕ್ತಿತ್ವದ ರಚನೆಗೆ ಮಾದರಿ

(Model)ಯಾಗಿ ಇಟ್ಟುಕೊಳ್ಳುತ್ತಾನೆ. ಅವನು ಯಾರನ್ನು ತನ್ನ ಮಾದರಿಯಾಗಿ ಆರಿಸಿಕೊಳ್ಳುತ್ತಾನೆಂಬುದು ಅವನ ಲೈಂಗಿಕ ಪ್ರಕೃತಿಯನ್ನು ಅವಲಂಬಿಸಿರುತ್ತದೆ. ಅವನಲ್ಲಿ ಪುರುಷ ಲಕ್ಷಣಗಳು ಅಧಿಕವಾಗಿದ್ದರೆ ತಂದೆಯಲ್ಲೂ, ಸ್ತ್ರೀ ಲಕ್ಷಣಗಳ ಕೈ ಮೇಲಾಗಿದ್ದರೆ ತಾಯಿಯಲ್ಲೂ ತಾದಾತ್ಮ್ಯ ಹೊಂದುತ್ತಾನೆ. ಫ್ರಾಯ್ಡ್‌ನ ಪ್ರಕಾರ ಪ್ರತಿಯೊಂದು ಮಗುವಿನಲ್ಲೂ ಪುಂಸ್ತ್ರೀ ಗುಣಗಳೆರಡೂ ಇದ್ದು, ಅವುಗಳ ಪ್ರಮಾಣ ದಲ್ಲಿ ಮಾತ್ರ ವ್ಯತ್ಯಾಸವಿರುತ್ತದೆ. ಆ ವ್ಯತ್ಯಾಸ ಅವನು ಯಾರಂತಾಗುತ್ತಾನೆಂಬು ದನ್ನು ನಿರ್ಧರಿಸುತ್ತದೆ. ಸ್ವಾಭಾವಿಕವಾಗಿ ಗಂಡು ಮಕ್ಕಳು ತಂದೆಯಂತಾಗಬೇಕಾಗಿ ದ್ದರೂ, ತಂದೆ ತಾಯಿಗಳಿಬ್ಬರಲ್ಲೂ ತಾದಾತ್ಮ್ಯ ಹೊಂದುವುದೇ ಸಾಮಾನ್ಯವೆನ್ನು ತ್ತಾನೆ ಫ್ರಾಯ್ಡ್. ತಂದೆಯಲ್ಲಿ ತಾದಾತ್ಮ್ಯ ಹೊಂದುವುದರ ಮೂಲಕ, ತಾನೂ ತಂದೆಯ ಹಾಗೆಯೇ ಇದ್ದೇನೆ, ತಂದೆಯನ್ನು ಪ್ರೀತಿಸುವ ತಾಯಿ ತನ್ನನ್ನೂ ಪ್ರೀತಿಸುತ್ತಾಳೆ, ತಂದೆಯಂತೆಯೇ ತಾನೂ ಕೂಡ ತಾಯಿಯನ್ನು ಪ್ರೀತಿಸಬಲ್ಲೆ ಎಂದುಕೊಳ್ಳುತ್ತಾನೆ. ತಾಯಿಯಲ್ಲಿ ತಾದಾತ್ಮ್ಯ ಹೊಂದುವುದರ ಮೂಲಕ, ತನಗೆ ಪ್ರಿಯವಾದ ತಾಯಿ ತಾನೇ ಆಗಿರುವುದರಿಂದ ಅವಳು ತನ್ನವಳೇ ಎನ್ನುವ ಭಾವನೆ ಬೆಳೆದು ಬರುತ್ತದೆ. ಇದರ ಜತೆಯಲ್ಲಿಯೇ ತಾಯಿಯ ಮೇಲಣ ಪ್ರೇಮದಲ್ಲಿನ ಲೈಂಗಿಕ ಸೋಂಕು ಅಳಿದು ಅದರ ಸ್ಥಳದಲ್ಲಿ ಒಲವು (Affection) ಮೂಡಿ ಬರುತ್ತದೆ. ಇದನ್ನು ಲೈಂಗಿಕ ಪ್ರವೃತ್ತಿಯ ಉದಾತ್ತೀಕರಣ (Sublimation) ವೆಂದಿದ್ದಾನೆ ಫ್ರಾಯ್ಡ್.

ಗಂಡುಮಕ್ಕಳಲ್ಲಿ ಈಡಿಪಸ್ ಕಾಂಪ್ಲೆಕ್ಸ್‌ನ ಅಳಿವಿನೊಡನೆಯೇ ನಡೆಯುವ ಇನ್ನೊಂದು ಬಹುಮುಖ್ಯ ಪರಿವರ್ತನೆ ಆದರ್ಶಾಹಂನ (Super-ego) ಉಗಮ. ಆದರ್ಶಾಹಂ ವ್ಯಕ್ತಿತ್ವದ ನೈತಿಕ ಘಟಕ. ಮಗುವಿನ ಪ್ರಕಾರ ತಂದೆ ಶಕ್ತಿವಂತ: ಅಧಿಕಾರ ಸ್ಥಾನದಲ್ಲಿರುವವನು ; ತಪ್ಪು ಮಾಡಿದವರನ್ನು ಶಿಕ್ಷಿಸಬಲ್ಲ. ತಂದೆಯಲ್ಲಿ ತಾದಾತ್ಮ್ಯ ಹೊಂದುವುದರ ಮೂಲಕ ಮಗುವಿನಲ್ಲಿ ತಂದೆಯ ಶಿಕ್ಷಾಧಿಕಾರ ಅಂತಃಕ್ಷೇಪಗೊಳ್ಳುತ್ತದೆ (Introjected). ಈಗ ಮಗುವಿಗೆ ತನ್ನ ಸರಿ ತಪ್ಪು ಗಳನ್ನು ಅರಿತು, ತಪ್ಪಿಗೆ ಶಿಕ್ಷೆ ವಿಧಿಸಿಕೊಳ್ಳುವ ಅಧಿಕಾರ ಅಂತರ್ಗತವಾಗುತ್ತದೆ. ಇದು ನೈತಿಕತೆಗೆ ಬೀಜಾಂಕುರ. ಇದೇ ಮುಂದೆ ಬೆಳೆದು ವ್ಯಕ್ತಿತ್ವದ ಪ್ರಭಾವ ಪೂರ್ಣ ಘಟಕ, ಆದರ್ಶಾಹಂ, ಆಗುತ್ತದೆ. ಹೀಗೆ ಆದರ್ಶಾಹಂ ಅಂತರೀಕೃತ ತಂದೆಯ ಅಧಿಕಾರ (Internalized parental authority). ಅದು ಬೆಳೆ ದಂತೆಲ್ಲಾ ವ್ಯಕ್ತಿಯ ಅಹಂನ (Ego) ಕಾರ್ಯಕಲಾಪಗಳನ್ನು ವೀಕ್ಷಿಸಿ, ವಿಮರ್ಶಿಸಿ, ನಿಯಂತ್ರಿಸುತ್ತದೆ; ಅದು ತಪ್ಪು ಮಾಡದಂತೆ ನೋಡಿಕೊಳ್ಳುವ ಅಧಿಕಾರವನ್ನು ಪಡೆಯುತ್ತದೆ. ಫ್ರಾಯ್ಡ್‌ನ ಪ್ರಕಾರ ಈಡಿಪಸ್ ಕಾಂಪ್ಲೆಕ್ಸ್ ತೆರವು ಮಾಡಿದ ಜಾಗದಲ್ಲಿ ಉದ್ಭವಿಸುವ ಉತ್ತರಾಧಿಕಾರಿ ಆದರ್ಶಾಹಂ.

ಇದು ಈಡಿಪಸ್ ಕಾಂಪ್ಲೆಕ್ಸ್ ಗಂಡು ಮಕ್ಕಳಲ್ಲಿ ಕೊನೆಗೊಳ್ಳುವ ವಿಧಾನ. ಅಂದರೆ ಈಡಿಪಸ್ ಕಾಂಪ್ಲೆಕ್ಸ್ ಶಿಶ್ನಲೋಪ ಭಯಕ್ಕೊಳಗಾಗಿ ನುಚ್ಚುನೂರಾಗುತ್ತದೆ. ಅದರೊಡನಿದ್ದ ಕಾಮುಕ ಭಾವನೆಗಳು ಅಳಿದು, ಲೈಂಗಿಕ ಅಂಶಗಳು ನಾಶವಾಗಿ, ಅದರಲ್ಲಿ ಅಡಕವಾಗಿದ್ದ ಶಕ್ತಿ ಉದಾತ್ತೀಕರಣಕ್ಕೊಳಗಾಗಿ ಅಹಂನಲ್ಲಿ ಉಳಿದು, ಆದರ್ಶಾಹಂನ ಉಗಮಕ್ಕೆ ಬೀಜಾಂಕುರವಾಗುತ್ತದೆ. ಪೂರ್ಣ ಸ್ವಸ್ಥ ವ್ಯಕ್ತಿಯಲ್ಲಿ ಈಡಿಪಸ್ ಕಾಂಪ್ಲೆಕ್ಸ್‌ನ ಅಂಶ ಕೊಂಚವೂ ಇರುವುದಿಲ್ಲ. ಅದರ ಸ್ಥಾನವನ್ನು ಸಂಪೂರ್ಣವಾಗಿ ಅದರ ಉತ್ತರಾಧಿಕಾರಿಯಾದ ಆದರ್ಶಾಹಂ ಆಕ್ರಮಿಸುತ್ತದೆ. ಈಗ ಮಗುವಿನ ಶಿಶ್ನಾವಸ್ಥೆ ಮುಗಿದು ಸುಪ್ತಾವಸ್ಥೆಗೆ (Latency Period) ಕಾಲಿಡುತ್ತದೆ. ಈ ಅವಸ್ಥೆಯಲ್ಲಿ ಲೈಂಗಿಕತೆ ಸುಪ್ತವಾಗಿರುತ್ತದೆ. ಸುಮಾರು ಐದರಿಂದ ಹನ್ನೊಂದು ವರ್ಷಗಳು ಇದರ ಅವಧಿ. ಈ ಕಾಲದಲ್ಲಿ ಮಕ್ಕಳು ಲೈಂಗಿಕವಾಗಿ ನಿರಾಸಕ್ತರಾಗಿರುತ್ತಾರೆ. ಸುಪ್ತಾವಸ್ಥೆ ಮುಗಿದು ಅವರು ಜನನೇಂದ್ರಿಯಾವಸ್ಥೆಗೆ (Genital Stage) ಕಾಲಿಟ್ಟಾಗ, ಅವರಲ್ಲಿ ಸಹಜ ಲೈಂಗಿಕಾಭಿಲಾಷೆಗಳು ಮರುಕಳಿಸುತ್ತವೆ. ಆಗ ಹೆಣ್ಣು ಗಂಡುಗಳ ನಡುವೆ ಪರಸ್ಪರ ಆಕರ್ಷಣೆ ಹುಟ್ಟುತ್ತದೆ. ಹೀಗಾಗುವುದು ಸಹಜ ದೈವಿಕನಿಯಮ. ಆದರೆ ಯಾವ ವ್ಯಕ್ತಿಯಲ್ಲೂ ಈಡಿಪಸ್ ಕಾಂಪ್ಲೆಕ್ಸ್ ಸಂಪೂರ್ಣವಾಗಿ ನಾಶವಾಗುವುದು ಅಪರೂಪ. ಅದರ ಯಾವುದಾದರೂ ಒಂದು ತುಣುಕು ಒಂದಲ್ಲ ಒಂದು ಬಗೆಯಲ್ಲಿ ಉಳಿದು ವ್ಯಕ್ತಿತ್ವದ ರಚನೆ ಮತ್ತು ಕಾರ್ಯವಿಧಾನಗಳ ಮೇಲೆ ಪ್ರಭಾವ ಬೀರುತ್ತದೆ. ವ್ಯಕ್ತಿತ್ವದ ಮೇಲೆ ಈಡಿಪಸ್ ಕಾಂಪ್ಲೆಕ್ಸಿನ ಪ್ರಭಾವಗಳನ್ನು ಅರಿಯುವುದಕ್ಕೆ ಮೊದಲು ಅದು ಹೆಣ್ಣು ಮಕ್ಕಳಲ್ಲಿ ಹೇಗೆ ಜರುಗುತ್ತದೆಂಬುದನ್ನು ನೋಡೋಣ.

ಹೆಣ್ಣು ಮಕ್ಕಳಲ್ಲಿ ಈಡಿಪಸ್ ಕಾಂಪ್ಲೆಕ್ಸ್

ಲೈಂಗಿಕ ಬೆಳವಣಿಗೆಯಲ್ಲಿ ಹೆಣ್ಣು ಗಂಡುಗಳ ನಡುವೆ ವ್ಯತ್ಯಾಸವಿರುವುದರಿಂದ, ಶಿಶ್ನಾವಸ್ಥೆಯಲ್ಲಿ ಹೆಣ್ಣುಮಕ್ಕಳು ಅನುಭವಿಸುವ ಭಾವತುಮುಲಕ್ಕೆ ಬೇರೊಂದು ಹೆಸರು ಕೊಡಬೇಕೆಂಬುದು ಹಲವರ ಸೂಚನೆಯಾಗಿತ್ತು. ಫ್ರಾಯ್ಡನ ಅನುಯಾಯಿಯಾಗಿದ್ದ ಯೂಂಗ್ (Jung) ಇದಕ್ಕೆ ಎಲೆಕ್ಟ್ರಾಕಾಂಪ್ಲೆಕ್ಸ್ (Electra Complex) ಎಂಬ ಹೆಸರನ್ನೂ ಸೂಚಿಸಿದ್ದ. ಎಲೆಕ್ಟ್ರ ಅಗಮೆಮ್ನನ್ ಎಂಬ ಗ್ರೀಕ್ ವೀರನ ಮಗಳು. ಅವಳ ತಾಯಿ ಕ್ಲೈಟಮ್ನೆಸ್ಟ್ರ ಗಂಡ ಅಗಮೆಮ್ನನ್‌ನನ್ನು ಕೊಲೆಗೈಯುತ್ತಾಳೆ. ತಂದೆಯನ್ನು ಪ್ರೀತಿಸಿದ್ದ ಎಲೆಕ್ಟ್ರ ತನ್ನ ತಾಯಿಯ ಕೊಲೆಗೆ ಸಹಾಯಕಳಾಗುತ್ತಾಳೆ. ಆದುದರಿಂದ ತಂದೆಯನ್ನು ಪ್ರೀತಿಸಿ, ತಾಯಿಯನ್ನು ದ್ವೇಷಿಸುವ ಹೆಣ್ಣುಮಕ್ಕಳ ಮನಃಸ್ಥಿತಿಗೆ ಎಲೆಕ್ಟ್ರಾಕಾಂಪ್ಲೆಕ್ಸ್ ಎಂಬ ಹೆಸರು ಸಮಂಜಸವಾದುದೇ. ಆದರೆ ಫ್ರಾಯ್ಡ್ ಅದನ್ನು ಒಪ್ಪದೆ ಹೆಣ್ಣಿನ ಭಾವಸಂಕೀರ್ಣಕ್ಕೂ ಕೂಡ ಈಡಿಪಸ್‌ಕಾಂಪ್ಲೆಕ್ಸ್ ಎಂಬ ಹೆಸರನ್ನೇ ಉಳಿಸಿಕೊಂಡಿ

ದ್ದಾನೆ. ಹೆಣ್ಣಿನ ಲೈಂಗಿಕ ಜೀವನವನ್ನು ಕುರಿತು ಬರೆಯುವಲ್ಲಿ ಫ್ರಾಯ್ಡನ ಅಭಿಪ್ರಾಯಗಳು ಅಷ್ಟು ಸ್ಪಷ್ಟವಾಗಿಲ್ಲ. ಅದರ ವಿಷಯದಲ್ಲಿ ಫ್ರಾಯ್ಡನ ಅನುಯಾಯಿಗಳಲ್ಲಿ ಕೂಡ ಒಮ್ಮತವಿಲ್ಲ. ಅದೇನೇ ಇರಲಿ, ಹೆಣ್ಣು ಮಕ್ಕಳ ಈಡಿಪಸ್ ಭಾವನೆಗಳು ಗಂಡಿನದಕ್ಕಿಂತ ವಿಭಿನ್ನವಾದುವೆಂಬುದನ್ನು ಮಾತ್ರ ಅಲ್ಲಗಳೆಯಲು ಸಾಧ್ಯವಿಲ್ಲ. ಅವುಗಳ ಅಭಿವ್ಯಕ್ತಿ ಮತ್ತು ಪ್ರಭಾವಗಳಲ್ಲಿ ವ್ಯತ್ಯಾಸ ಸ್ಪಷ್ಟವಾಗಿ ಕಂಡುಬರುತ್ತದೆ.

ಆರಂಭದಲ್ಲಿ ಗಂಡು ಮಗುವಿನಂತೆ ಹೆಣ್ಣು ಮಗು ಕೂಡ ತನ್ನ ಉಳಿವಿಗಾಗಿ ತಾಯಿಯನ್ನವಲಂಬಿಸಿರುತ್ತದೆ. ಸಹಜವಾಗಿ ಅವಳ ವಾತ್ಸಲ್ಯ ಕೂಡ ತಾಯಿಯೆಡೆಗೇ ಇರುತ್ತದೆ. ಹೀಗೇ ಬೆಳೆಯುತ್ತಾ ಅವಳು ಶಿಶ್ನಾವಸ್ಥೆಗೆ ಕಾಲಿಟ್ಟಾಗ ಅವಳಿಗೆ ತನ್ನ ಸೋದರರಿಗಿರುವಂತೆ ತನ್ನಲ್ಲಿ ಹೊರಚಾಚಿರುವ ಜನನಾಂಗವಿಲ್ಲದಿರುವುದರ ಅರಿವಾಗುತ್ತದೆ. ತನಗೆ ತಿಳಿದಿರುವಂತೆ ಗಂಡು ಮಕ್ಕಳಿಗಿರುವ, ತನ್ನಲ್ಲಿಲ್ಲದ, ತನಗೆ ಬೇಕೆನಿಸುವ ಪುರುಷ ಜನನಾಂಗವನ್ನು ಕುರಿತು ಅವಳ ಮನಸ್ಸಿನಲ್ಲಿ ಹಲವು ಭಾವತರಂಗಗಳೇಳುತ್ತವೆ. ಈ ಭಾವಪುಂಜಕ್ಕೆ ಫ್ರಾಯ್ಡ್ ಶಿಶ್ನಮಾತ್ಸರ್ಯ (Penis envy) ಎಂದು ಹೆಸರಿಸಿದ್ದಾನೆ. ಇದು ಗಂಡು ಮಕ್ಕಳ ಶಿಶ್ನಲೋಪಭಯಕ್ಕೆ ಸರಿಸಮಾನವಾದ ಭಾವನೆ. ಹೆಣ್ಣು ಮಗುವಿಗೆ ತನ್ನಲ್ಲಿ ಶಿಶ್ನವಿಲ್ಲದುದರ ಅರಿವಾದಾಗ ಮೊದಮೊದಲು ಅವಳು ಅದನ್ನು ನಂಬುವುದೇ ಇಲ್ಲ. ಅದು ತನ್ನಲ್ಲಿ ಗುಪ್ತವಾಗಿ ಇದ್ದೇ ಇದೆ ಎಂದುಕೊಳ್ಳುತ್ತಾಳೆ. ಅವಳಲ್ಲಿರುವ ಶಿಶ್ನದ ಆಕಾರವನ್ನೇ ಹೊಂದಿರುವ ಭಗಾಂಕುರ (Clitoris) ವೇ ಅವಳು ಹಾಗೆಂದುಕೊಳ್ಳಲು ಕಾರಣ. ಅದೇ ಬೆಳೆದು ಮುಂದೆ ದೊಡ್ಡದಾಗುತ್ತದೆಂಬುದು ಅವಳ ಅನಿಸಿಕೆ. ಅದು ಹಾಗಾಗದುದರಿಂದ ಅವಳಲ್ಲಿ ತಾನು ಇತರರಿಗಿಂತ ಕೀಳು ಎನ್ನುವ ನೈಚ್ಯಭಾವನೆಯೊಂದು ಹುಟ್ಟಿಕೊಳ್ಳುತ್ತದೆ. ಈಗ ಅವಳಿಗೆ ತನ್ನ ಈ ಪರಿಸ್ಥಿತಿಗೆ ತಾಯಿಯೇ ಕಾರಣವೆನಿಸಿ ಅವಳ ವಿಚಾರವಾಗಿ ದ್ವೇಷ ಬೆಳೆಯುತ್ತದೆ. ಅನಂತರ ಅವಳಿಗೆ ತನ್ನ ಭಗಾಂಕುರದ ಮೇಲಿದ್ದ ಆಸಕ್ತಿ ಕಡಿಮೆಯಾಗಿ, ತನ್ಮೂಲಕ ಅವಳಲ್ಲಿದ್ದ ಪುರುಷತ್ವದ ಭಾವನೆಗಳ ತೀವ್ರತೆ ಇಳಿಮುಖವಾಗುತ್ತದೆ. ಜತೆಯಲ್ಲೇ ಹೆಣ್ತನ ಹೆಚ್ಚಲು ಆರಂಭವಾಗುತ್ತದೆ. ಈಗ ಅವಳಿಗೆ ಶಿಶ್ನವಿಲ್ಲದಿದ್ದರೆ ಹೋಗಲಿ, ಅದಕ್ಕೆ ಬದಲು ಸಾಂಕೇತಿಕವಾಗಿ ತನಗೆ ಒಂದು ಮಗುವಾದರೂ ಆಗಲಿ ಎನಿಸುತ್ತದೆ. ಈ ಕಾರ್ಯಸಿದ್ಧಿಗಾಗಿ ಅವಳು ತನ್ನ ತಂದೆಯೆಡೆಗೆ ಒಲಿಯುತ್ತಾಳೆ. ಇದು ಹೆಣ್ಣಿನ ಈಡಿಪಸ್ ಕಾಂಪ್ಲೆಕ್ಸ್‌ನ ಸಂಕ್ಷಿಪ್ತರೂಪ. ಗಂಡಿನ ಈಡಿಪಸ್ ಕಾಂಪ್ಲೆಕ್ಸ್ ಶಿಶ್ನಲೋಪಭಯದಿಂದ ಕೊನೆಗೊಂಡರೆ ಹೆಣ್ಣಿನಲ್ಲಿ ಅದು ಈಡಿಪಸ್ ಕಾಂಪ್ಲೆಕ್ಸಿನ ಉಗಮಕ್ಕೆ ಕಾರಣವಾಗುತ್ತದೆಂಬುದು ಇಲ್ಲಿ ನಾವು ಗಮನಿಸಬೇಕಾದ ವಿಷಯ. ಹೆಣ್ಣು ಗಂಡುಗಳ ಈಡಿಪಸ್ ಕಾಂಪ್ಲೆಕ್ಸ್ ನಡುವಿರುವ ಒಂದು ಮುಖ್ಯ ವ್ಯತ್ಯಾಸ ಇದು.

ಹೆಣ್ಣಿನಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಕೊನೆಗೊಳ್ಳುವ ವಿಧಾನ ಕೂಡ ಗಂಡಿನದಕ್ಕಿಂತ ವಿಭಿನ್ನ. ಗಂಡಿನಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಶಿಶ್ನಲೋಪಭಯದಿಂದ ಬಂಡೆಗೆ ತಗುಲಿದ ಹಡಗಿನಂತೆ ನುಚ್ಚುನೂರಾಗುತ್ತದೆ. ಹೆಣ್ಣಿನಲ್ಲಿ ಹೀಗಾಗುವುದಿಲ್ಲ. ಹೆಣ್ಣು ತನ್ನ ಈಡಿಪಸ್‌ಭಾವನೆಗಳನ್ನು ದಮನ ಮಾಡಬಹುದು; ನಿಧಾನವಾಗಿ ಅದರ ತೀವ್ರತೆ ಇಳಿಮುಖವಾಗಿ ಕೊನೆಯಲ್ಲಿ ಅದು ನಶಿಸಿ ಹೋಗಬಹುದು; ಅಥವಾ ಅದು ಹಾಗೆಯೇ ಉಳಿದುಬಿಡಲೂ ಸಾಧ್ಯ. ಗಂಡಿನಲ್ಲಿ ಜರುಗಿದಂತೆ ಹೆಣ್ಣುಕೂಡ ಈಡಿಪಸ್ ಭಾವನೆಗಳ ಅಸಹಜತೆಯನ್ನು ಅರಿಯಬಹುದು. ಅವಳ ಈಡಿಪಸ್ ಭಾವನೆಗಳ ಬೆಳವಣಿಗೆಗೆ ತಂದೆ ತಾಯಿಗಳ ಪ್ರೋತ್ಸಾಹ ದೊರಕುವುದಿಲ್ಲ. ಕೊನೆಗೆ ಅವಳಿಗೆ ತಾನು ತಂದೆಯನ್ನು ಪಡೆದುಕೊಳ್ಳಲಾರೆ ಎನ್ನುವ ವಾಸ್ತವಿಕತೆಯ ಅರಿವಾಗುತ್ತದೆ. ಮಾನಸಿಕ ಬೆಳವಣಿಗೆ ಮುಂದುವರೆದಂತೆ ಅದು ತನ್ನಷ್ಟಕ್ಕೆ ತಾನೇ ಜರುಗುತ್ತದೆ. ಅದು ಜೈವಿಕ ನಿಯಮ.

ಗಂಡಿನಂತೆ ಹೆಣ್ಣಿನಲ್ಲಿಯೂ ತಾದಾತ್ಮ್ಯಕ್ರಿಯೆ ಈಡಿಪಸ್ ಭಾವನೆಗಳ ನಿರ್ಗಮನಕ್ಕಿರುವ ಇನ್ನೊಂದು ಕಾರಣ. ಹೆಣ್ಣು ಕೂಡ ತಂದೆಯಲ್ಲೋ ಅಥವಾ ತಾಯಿಯಲ್ಲೋ ತಾದಾತ್ಮ್ಯ ಹೊಂದುತ್ತಾಳೆ. ಅವಳು ಯಾರಲ್ಲಿ ತಾದಾತ್ಮ್ಯ ಹೊಂದುತ್ತಾಳೆಂಬುದು ಕೂಡಾ ಅವಳ ಪುಂ ಸ್ತ್ರೀ ಗುಣಗಳ ಪ್ರಮಾಣವನ್ನವಲಂಬಿಸಿರುತ್ತದೆ. ಗಂಡಿನಂತೆ ಹೆಣ್ಣಿನಲ್ಲಿಯೂ ಸ್ತ್ರೀಪುರುಷ ಗುಣಗಳೆರಡೂ ಇರುತ್ತವೆ. ಅವಳಲ್ಲಿ ಸ್ತ್ರೀ ಗುಣಗಳು ತೀವ್ರವಾಗಿದ್ದರೆ ತಾಯಿಯಲ್ಲಿ ತಾದಾತ್ಮ್ಯ ಹೊಂದುತ್ತಾಳೆ. ಪುರುಷ ಗುಣಗಳು ಅಧಿಕವಾಗಿದ್ದರೆ ತಂದೆಯಲ್ಲಿ ತಾದಾತ್ಮ್ಯ ಹೊಂದಿ ಕೊಂಚ ಗಂಡುಬೀರಿ ಎನಿಸಿಕೊಳ್ಳುತ್ತಾಳೆ. ಆದರೆ ತಂದೆ ತಾಯಿಗಳಿಬ್ಬರಲ್ಲೂ ಕೊಂಚ ಕೊಂಚ ತಾದಾತ್ಮ್ಯ ಹೊಂದುವುದೇ ಸಾಮಾನ್ಯವಾಗಿ ಕಂಡುಬರುವ ವಿಷಯ. ತಾಯಿಯಲ್ಲಿ ತಾದಾತ್ಮ್ಯ ಹೊಂದುವುದರ ಮೂಲಕ, ತಾಯಿಯನ್ನು ಪ್ರೀತಿಸುವ, ತಂದೆ ತನ್ನನ್ನೂ ಪ್ರೀತಿಸುತ್ತಾನೆ ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳುತ್ತಾಳೆ. ಅಂದರೆ ತಂದೆಯನ್ನು, ನೇರವಾಗಿಯಲ್ಲದಿದ್ದರೂ, ಪರೋಕ್ಷವಾಗಿ ಪಡೆದುಕೊಳ್ಳುತ್ತಾಳೆ. ತಂದೆಯಲ್ಲಿ ತಾದಾತ್ಮ್ಯ ಹೊಂದುವುದರ ಮೂಲಕ ತನ್ನಲ್ಲಿಲ್ಲದ ಪುರುಷ ಜನನೇಂದ್ರಿಯವನ್ನು ಪರೋಕ್ಷವಾಗಿ ಹೊಂದಿರುವಂತೆ ಭಾವಿಸಿಕೊಳ್ಳುತ್ತಾಳೆ. ಈ ತಾದಾತ್ಮ್ಯಗಳ ಪ್ರಮಾಣ ಮತ್ತು ತೀವ್ರತೆಗಳು ಹೆಣ್ಣುಮಕ್ಕಳ ವ್ಯಕ್ತಿತ್ವ ವಿಕಾಸದ ಗತಿಯನ್ನು ನಿರ್ಧರಿಸುತ್ತವೆಂಬುದು ಫ್ರಾಯ್ಡನ ಅಭಿಮತ.

ಹೆಣ್ಣಿನಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಅಳಿಯದೇ ಹಾಗೆಯೇ ಉಳಿದುಬಿಡಬಹುದೆಂಬುದು ಗಮನಿಸಬೇಕಾದ ಒಂದು ಮುಖ್ಯ ವಿಷಯ. ಹೆಣ್ಣಿನಲ್ಲಿ ಅದು ಅಳಿಯದಿರುವುದೇ ಸಾಮಾನ್ಯವೆನ್ನುತ್ತಾನೆ ಫ್ರಾಯ್ಡ್. ಅಂದರೆ ಅವಳ ತಂದೆಯ ಮೇಲಣ ಪ್ರೇಮ ಹಾಗೆಯೇ ಉಳಿದಿದ್ದು, ಕೊನೆಗೆ ಅದು ಅವಳು ವರಿಸುವ

ಗಂಡನೆಡೆಗೆ ವರ್ಗಾಯಿಸಲ್ಪಡುತ್ತದೆ. ಈಡಿಪಸ್ ಕಾಂಪ್ಲೆಕ್ಸ್ ಅಳಿಯದಿದ್ದರೆ ಅದರ ಉತ್ತರಾಧಿಕಾರಿಯಾದ ಆದರ್ಶಾಹಂ ಪರಿಪೂರ್ಣವಾಗಿ ಬೆಳೆಯುವುದು ಕಷ್ಟ. ಈ ಕಾರಣದಿಂದಾಗಿ ಹೆಣ್ಣಿನ ನೈತಿಕ ಭಾವನೆಗಳು ಗಂಡಸಿನಷ್ಟು ನಿಷ್ಠುರವಾಗಿರುವುದಿಲ್ಲವೆಂದಿದ್ದಾನೆ ಫ್ರಾಯ್ಡ್. ಈಡಿಪಸ್ ಕಾಂಪ್ಲೆಕ್ಸಿನ ಉಗಮಕ್ಕೆ ಕಾರಣವಾದ ಶಿಶ್ನಮಾತ್ಸರ್ಯ ಕೂಡ ಹಾಗೆಯೇ ಉಳಿದು ಅದೇ ಸ್ತ್ರೀ ಸಹಜವಾದ ಅಸೂಯೆಗೂ ಹಿನ್ನೆಲೆಯಾಗುತ್ತದೆ. ಈ ಅಸೂಯೆಗೆ ನಿಜವಾದ ಕಾರಣ ತಾನು ಗಂಡಸಲ್ಲವೆಂಬ ಮೂಲ ಭಾವನೆ ಎಂಬುದು ಫ್ರಾಯ್ಡನ ಅಭಿಮತ.

ವ್ಯಕ್ತಿತ್ವ ವಿಕಾಸದಲ್ಲಿ ಈಡಿಪಸ್ ಕಾಂಪ್ಲೆಕ್ಸಿನ ಪಾತ್ರ

ಈಡಿಪಸ್ ಭಾವನೆಗಳು ಸ್ವಾಭಾವಿಕವಾಗಿ ನಶಿಸಿ ಸ್ವಸ್ಥ ವ್ಯಕ್ತಿತ್ವದ ವಿಕಾಸಕ್ಕೆ ದಾರಿಮಾಡಿಕೊಟ್ಟರೂ, ಎಲ್ಲರಲ್ಲೂ ಅವು ಸಂಪೂರ್ಣವಾಗಿ ಅಳಿದು ಹೋಗುತ್ತವೆ ಎಂದು ಹೇಳಲುಬರುವುದಿಲ್ಲ. ಹೆಣ್ಣು ಗಂಡುಗಳೆರಡರಲ್ಲೂ ಈಡಿಪಸ್ ಕಾಂಪ್ಲೆಕ್ಸಿನ ಒಂದಲ್ಲ ಒಂದು ಅಂಶ ಉಳಿದು ವ್ಯಕ್ತಿತ್ವದಮೇಲೆ ಪ್ರಭಾವ ಬೀರುತ್ತದೆ. ಅದರ ಅವಶೇಷಗಳು ಹೆಚ್ಚಿದಷ್ಟೂ ಅದರ ಪ್ರಭಾವ ತೀವ್ರವಾಗಿ ವ್ಯಕ್ತಿತ್ವದ ಬೆಳವಣಿಗೆ ಕುಂಠಿತವಾಗುತ್ತದೆ; ಒಮ್ಮೆಮ್ಮೆ ವ್ಯಕ್ತಿ ಅಪಸಾಮಾನ್ಯ (Abnormal) ನಾಗಬಹುದು ಕೂಡ.

ಫ್ರಾಯ್ಡನ ಪ್ರಕಾರ, ಎಲ್ಲಾ ಮನೋವಿಕಾರಗಳಿಗೂ ಈಡಿಪಸ್ ಕಾಂಪ್ಲೆಕ್ಸ್ ಒಂದಲ್ಲ ಒಂದು ವಿಧದಲ್ಲಿ ಮೂಲ ಕಾರಣವಾಗಿರುತ್ತದೆ. ಮುಖ್ಯವಾಗಿ ಕೆಲವು ಲೈಂಗಿಕ ವಿಪರ್ಯಾಸಗಳಿಗೆ (sexual perversions) ಇದು ಕೇಂದ್ರಬಿಂದು. ತಾಯಿಯಲ್ಲಿ ಅತಿಯಾಗಿ ತಾದಾತ್ಮ್ಯ ಹೊಂದಿ, ಬೇರೆ ಯಾವ ಹೆಣ್ಣಿನೊಡನೆಯೂ ನೈಜವಾದ ಲೈಂಗಿಕ ಸಂಪರ್ಕ ಹೊಂದಲಾರದ ಅನೇಕ ಗಂಡಸರು ಸಲಿಂಗ ಕಾಮಿ (Homosexual) ಗಳಾಗುವುದು ಇದಕ್ಕೊಂದು ನಿದರ್ಶನ. ಲೈಂಗಿಕ ಶಕ್ತಿ ಈಡಿಪಸ್ ಅವಸ್ಥೆಯಲ್ಲಿ ಕೇಂದ್ರೀಕೃತವಾಗಿ ವ್ಯಕ್ತಿತ್ವದ ವಿಕಾಸ ಕುಂಠಿತಗೊಳ್ಳುವುದು ಹಿಸ್ಟೀರಿಯ ರೋಗಕ್ಕಿರುವ ಒಂದು ಮುಖ್ಯ ಕಾರಣವೆಂದಿದ್ದಾನೆ ಫ್ರಾಯ್ಡ್. ಇದೆಲ್ಲಾ ಮನೋರೋಗಿಗಳಿಗೆ ಸಂಬಂಧಿಸಿದ ವಿಚಾರ. ಆದರೆ ಸಾಮಾನ್ಯರಲ್ಲಿ ಈಡಿಪಸ್ ಕಾಮನೆಗಳು ಹೇಗೆ ಅಭಿವ್ಯಕ್ತಿಗೊಳಗಾಗುತ್ತವೆಂಬುದು ಇನ್ನೂ ಸ್ವಾರಸ್ಯಕರವಾಗಿರುತ್ತದೆ.

ಗಂಡು ಮಕ್ಕಳಲ್ಲಿ ತಾವು ಗಂಡಸರೆಂಬ ಮತ್ತು ಹೆಣ್ಣು ಮಕ್ಕಳಲ್ಲಿ ತಾವು ಹೆಂಗಸರೆಂಬ ಭಾವನೆಗಳು ಬೆಳೆದು ಬರುವುದಕ್ಕೆ ಈಡಿಪಸ್ ಕಾಂಪ್ಲೆಕ್ಸ್ ಮುಖ್ಯ ಕಾರಣ. ಗಂಡು ತಂದೆಯಲ್ಲಿ ತಾದಾತ್ಮ್ಯ ಹೊಂದಿ ಪುರುಷತ್ವದ ಭಾವನೆಗಳನ್ನು ಬೆಳೆಸಿಕೊಳ್ಳುತ್ತಾನೆ. ಆದರೆ ಅದು ಅತಿಯಾದಾಗ ಅವನಲ್ಲಿ "ನಾನು ಗಂಡಸು"

ಎನ್ನುವ ಗರ್ವ ಹುಟ್ಟಿಕೊಳ್ಳುತ್ತದೆ. ಇದರ ಜತೆಯಲ್ಲೇ ಅವನಲ್ಲಿ ಹೆಣ್ಣನ್ನು ಕುರಿತಾದ ಒಂದು ಕೀಳು ಭಾವನೆಯೂ ಬೆಳೆಯಬಹುದು. ಅವನ ದೃಷ್ಟಿಯಲ್ಲಿ ಹೆಣ್ಣು ಶಿಶ್ನಲೋಪಕ್ಕೊಳಗಾಗಿರುವವಳು; ಅವಳಲ್ಲಿ ಒಂದು ಊನವಿದೆ; ಅವಳೊಬ್ಬ ಅಂಗವಿಹೀನೆ; ತಾನು ಅದಕ್ಕೆ ಹೊರತಾಗಿರುವೆನೆಂಬ ಭಾವನೆ ಅವನಲ್ಲಿ ಬಲವಾಗಿ ಬೇರೂರುತ್ತದೆ. ಅವನೊಬ್ಬ ವಿಜಯಿ. ಅದರಿಂದಾಗಿ ಅವಳನ್ನು ಕಂಡರೆ ಅವನಿಗೆ ತಾತ್ಸಾರ; ಒಂದು ಬಗೆಯ ಹೀನಾಯ. ಹೀಗೆ ಹೆಣ್ಣಿನ ಬಗ್ಗೆ ಗಂಡಸಿಗಿರುವ ತಾತ್ಸಾರ ಭಾವನೆಗಳಿಗೆಲ್ಲಾ ಮೂಲ ಕಾರಣ ಈಡಿಪಸ್ ಕಾಂಪ್ಲೆಕ್ಸ್.

ಹೆಣ್ಣಿನಮೇಲೆ ಈಡಿಪಸ್ ಕಾಂಪ್ಲೆಕ್ಸ್‌ನ ಪ್ರಭಾವ ಮೂರು ವಿಧವಾಗಿ ಜರುಗುತ್ತದೆ. ಮೊದಲನೆಯದಾಗಿ, ಅವಳಲ್ಲಿ ತನಗೆ ಶಿಶ್ನಲೋಪವಾಗಿದೆ ಎಂಬ ನಂಬಿಕೆ ಬಲವಾಗಿ, ಅವಳ ಲೈಂಗಿಕ ಶಕ್ತಿಯೇ ನಾಶವಾಗಿಬಿಡಬಹುದು. ಇದೊಂದು ತೆರನಾದ ಮನೋವಿಕಾರವಾಗಿ ಪರಿಣಮಿಸಬಹುದು. ಎರಡನೆಯದಾಗಿ, ಅವಳು ತನಗೇನೂ ಆಗಿಲ್ಲ, ತಾನೂ ಇತರ ಗಂಡಸರಂತೆಯೇ ಎಂದು ತಿಳಿದು, ಗಂಡುಬೀರಿಯಾಗಬಹುದು. ಇದೊಂದು ತೆರನಾದ ಆತ್ಮರಕ್ಷಣಾ ತಂತ್ರ. ಗಂಡಸರಂತೆ ಬಟ್ಟೆಬರೆ ಧರಿಸಿ ಅವರಂತೆಯೇ ವರ್ತಿಸುವ ಹೆಣ್ಣುಮಕ್ಕಳು ಇದಕ್ಕೊಂದು ನಿದರ್ಶನ. ಈ ವರ್ತನೆ ಅವರು ತಮಗೆ ಶಿಶ್ನಲೋಪವಾಗಿಲ್ಲವೆಂದು ಹೇಳಿಕೊಳ್ಳುವುದರ ಪರೋಕ್ಷ ಅಭಿವ್ಯಕ್ತಿ. ಮೂರನೆಯದು, ಎಲ್ಲರಂತೆ ತಾವೂ ಹೆಣ್ಣೆಂದು ಭಾವಿಸಿ ಸಹಜ ಸ್ತ್ರೀ ಗುಣಗಳನ್ನು ಬೆಳೆಸಿಕೊಳ್ಳುವುದು. ಹೆಣ್ಣಿನಲ್ಲಿ ಸ್ವಾಭಾವಿಕ ಸ್ತ್ರೀ ಲಕ್ಷಣಗಳು ಬೆಳೆದು ಬರುವುದಕ್ಕೆ ಫ್ರಾಯ್ಡ್ ಕೊಡುವ ವಿವರಣೆ ಸ್ವಾರಸ್ಯಕರವಾಗಿದೆ. ಹೆಣ್ಣಿಗೆ ಶಿಶ್ನಲೋಪವಾಗಿದೆ. ಅದನ್ನು ಅವಳು ಒಪ್ಪಿಕೊಳ್ಳುತ್ತಾಳೆ. ಆದರೆ ಈ ನಷ್ಟಕ್ಕೊಂದು ಪರಿಹಾರ ಬೇಕು. ಸಾಂಕೇತಿಕವಾಗಿ ಈ ಪರಿಹಾರ ಒಂದು ಮಗುವನ್ನು ಪಡೆಯುವ ಬಯಕೆಯಾಗಿ ಪರಿಣಮಿಸುತ್ತದೆ. ಇದರಿಂದ ಅವಳಲ್ಲಿ ಮಗು ಬೇಕು, ತಾಯಿಯಾಗಬೇಕು, ಹೆಣ್ಣಾಗಬೇಕು ಎನ್ನುವ ಭಾವನೆಗಳು ಹುಟ್ಟಿಕೊಳ್ಳುತ್ತವೆ.

ಕೆಲವು ವೇಳೆ ಶಿಶ್ನಲೋಪವಾಗಿದೆ ಎಂದು ನಂಬಿದ ಹೆಣ್ಣು ತಾನು ಗಂಡಸಿಗಿಂತ ಕೀಳು ಎನ್ನುವ ಭಾವನೆಯನ್ನು ಬೆಳೆಸಿಕೊಳ್ಳಬಹುದು. ಹೆಂಗಸರಲ್ಲಿ ಸಾಮಾನ್ಯವೆನಿಸಿಕೊಳ್ಳುವ Inferiority Complex ಉದಿಸುವುದು ಹೀಗೆಯೇ. ಕೆಲ ಹೆಂಗಸರಲ್ಲಿ ಶಿಶ್ನ ಮಾತ್ಸರಪ್ರಭಾವ ತೀವ್ರವಾಗಿ ಅವರ ವರ್ತನೆಯ ಮೇಲೆಲ್ಲಾ ಅದರ ಛಾಯೆ ಕಂಡುಬರಬಹುದು. ಇದೇ ಸ್ತ್ರೀಸಹಜವೆನ್ನಲಾಗುವ ಮಾತ್ಸರ ಎಂಬ ಮಾತು ಈಗಾಗಲೇ ಬಂದಿದೆ.

ಹೆಣ್ಣು ಗಂಡುಗಳು ತಮ್ಮ ಜೀವನಸಂಗಾತಿಗಳನ್ನು ಆಯ್ದುಕೊಳ್ಳುವಾಗ ಈಡಿಪಸ್ ಕಾಂಪ್ಲೆಕ್ಸ್ ತನ್ನ ಪ್ರಭಾವ ಬೀರುವುದು ಕಂಡುಬಂದಿದೆ. ಗಂಡಸರಲ್ಲಿ

ಈಡಿಪಸ್ ಭಾವನೆಗಳು ಅಳಿಯದೆ ಉಳಿದು ಬಂದರೆ ಅವು ಅವನ ವೈವಾಹಿಕ ಜೀವನದ ಮೇಲೆ ಪ್ರಭಾವ ಬೀರುತ್ತವೆ. ತಾಯಿಯನ್ನು ಅತಿಯಾಗಿ ಪ್ರೀತಿಸುವ ಗಂಡಸು ಬೇರೊಂದು ಹೆಣ್ಣನ್ನು ಮದುವೆಯಾಗಲಾರ. ಆದರೂ ಅವನ ವೈವಾಹಿಕ ಜೀವನ ಸುಖಮಯವಾಗಿರುವುದಿಲ್ಲ. ಎಷ್ಟೋ ಜನ ಗಂಡಸರು ವಿವಾಹವಾಗುವಾಗ ತಾಯಿಯ ಹೋಲಿಕೆಯಿರುವ ಹೆಣ್ಣುಗಳನ್ನು ಆಯ್ಕೆ ಮಾಡಿರುವುದು ಕಂಡು ಬಂದಿದೆ. ಹಾಗೆಯೇ ವಯಸ್ಸಿನಲ್ಲಿ ತನಗಿಂತ ಹಿರಿಯಳನ್ನು ವರಿಸುವ ಗಂಡು ಈಡಿಪಸ್ ಕ್ಲಾಂಪ್ಲೆಕ್ಸಿನ ಪ್ರಭಾವದಡಿಯಲ್ಲಿರುತ್ತಾನೆ. ಅಷ್ಟೇಕೆ, ವಿವಾಹವಾದ ನಂತರ ಕೂಡ ತಾಯಿಗೆ ವಿಧೇಯನಾಗಿ ಹೆಂಡತಿಯನ್ನು ಕಡೆಗಣಿಸುವ ಗಂಡಸಿನ ವರ್ತನೆಗೆ ಕಾರಣ ಈಡಿಪಸ್ ಕಾಂಪ್ಲೆಕ್ಸ್ ಎಂಬುದು ತಿಳಿದುಬಂದಿದೆ. ವಿಂಚ್ ಎಂಬ ವಿವಾಹತಜ್ಞ ತಾಯಿಯರೆಡೆಗೆ ಅತಿಯಾಗಿ ಆಕರ್ಷಿತರಾದ ಗಂಡಸರ ವೈವಾಹಿಕ ಜೀವನ ತೃಪ್ತಿಕರವಾಗಿರಲಿಕ್ಕಿಲ್ಲವೆಂಬ ವಾದಕ್ಕೆ ಸಂಶೋಧನಾಸಾಕ್ಷ್ಯಗಳನ್ನೊದಗಿಸಿದ್ದಾನೆ. ಆದರೆ ತಂದೆಯರೆಡೆಗೆ ಆಕರ್ಷಿತರಾದ ಹೆಣ್ಣು ಮಕ್ಕಳ ಜೀವನದಲ್ಲಿ ಇಂತಹ ಸಮಸ್ಯೆಗಳೇನೂ ಇದ್ದಂತೆ ಕಂಡುಬಂದಿಲ್ಲ. ಇದಕ್ಕೆ ಸಾಂಸ್ಕೃತಿಕ ಹಿನ್ನೆಲೆಯೇ ಕಾರಣವೆಂದಿದ್ದಾನೆ ವಿಂಚ್. ಗಂಡಸು ತಾಯಿಯ ಮೇಲೆ ಅವಲಂಬಿಯಾಗಿರುವುದನ್ನು ಸಮಾಜ ಒಪ್ಪುವುದಿಲ್ಲ. ಅವನು ಅವಳಿಂದ ಬಿಡುಗಡೆ ಹೊಂದಲೇಬೇಕು. ಈ ಬಿಡುಗಡೆ ಕೆಲವು ಆದಿಮ ಜನಾಂಗಗಳಲ್ಲಿ ಶಾಸ್ತ್ರೋಕ್ತವಾಗಿ ನಡೆಯುವುದು ಕಂಡುಬಂದಿದೆ. ಆದರೆ ಹೆಣ್ಣಿಗೆ ತಂದೆಯೆಡೆಗೆ ಆಕರ್ಷಿತಳಾಗಿರಬಾರದೆಂಬ ನಿಯಮವೇನೂ ಇಲ್ಲ. ಅವಳು ತಂದೆಯ ಮೇಲೆ ಅವಲಂಬಿಯಾಗಿದ್ದು, ಅನಂತರ ಈ ಅವಲಂಬನೆಯನ್ನು ಸುಲಭವಾಗಿ ತನ್ನ ಕೈಹಿಡಿಯುವ ಗಂಡನೆಡೆಗೆ ವರ್ಗಾಯಿಸಬಹುದು.

ನಮ್ಮ ಸಮಾಜದಲ್ಲಿ ಕೆಲವು ವ್ಯಕ್ತಿಗಳು ಯಾವುದೇ ವಿಧವಾದ ಅಧಿಕಾರವನ್ನು ಸಹಿಸದಿರುವುದನ್ನು ನಾವೆಲ್ಲಾ ಕಂಡಿದ್ದೇವೆ. ಈ ಜನ ಒಳ್ಳೆಯದಿರಲಿ, ಕೆಟ್ಟದಿರಲಿ, ಅಧಿಕಾರವೆಂದರೆ ಸಾಕು, ಸಿಟ್ಟಿಗೇಳುತ್ತಾರೆ. ವಿನಾಕಾರಣ ಅಧಿಕಾರದಲ್ಲಿರುವವರನ್ನು ಕಟುವಾಗಿ ಟೀಕಿಸುತ್ತಾರೆ. ಯಾರ ಅಧಿಕಾರವನ್ನೂ ಅವರು ಒಪ್ಪಿಕೊಳ್ಳುವುದಿಲ್ಲ. ಇಂತಹ ವರ್ತನೆಯ ಹಿನ್ನೆಲೆಯಲ್ಲಿ ಕೂಡ ಈಡಿಪಸ್ ಕಾಂಪ್ಲೆಕ್ಸಿನ ಪ್ರಭಾವವಿದೆ ಎಂಬುದು ಕೆಲವು ಸಂಶೋಧನೆಗಳಿಂದ ತಿಳಿದುಬಂದಿದೆ.

ವ್ಯಕ್ತಿಯ ನೈತಿಕ ಬೆಳವಣಿಗೆ ಈಡಿಪಸ್ ಕಾಂಪ್ಲೆಕ್ಸಿನ ಅಳಿವನ್ನವಲಂಬಿಸಿದೆ ಎನ್ನುವ ವಿಷಯ ಈಗಾಗಲೇ ಬಂದಿದೆ. ಆದರ್ಶಾಹಂ ಈಡಿಪಸ್ ಕಾಂಪ್ಲೆಕ್ಸಿನ ಉತ್ತರಾಧಿಕಾರಿ. ಗಂಡುಮಗು ತಂದೆಯಂತಾಗಿ, ತಂದೆಯ ಶಿಕ್ಷಿಸುವ ಅಧಿಕಾರವನ್ನು ತಾನೂ ಪಡೆದುಕೊಳ್ಳುತ್ತಾನೆ. ಹೀಗಾಗುವುದು ತಂದೆಯಲ್ಲಿ ಮಗು ತಾದಾತ್ಮ್ಯ ಹೊಂದಿದಾಗ. ತಂದೆಯಲ್ಲಿ ತಾದಾತ್ಮ್ಯ ಹೊಂದಬೇಕಾದರೆ ಈಡಿಪಸ್

ಕಾಂಪ್ಲೆಕ್ಸ್ ಅಳಿಯಬೇಕು. ಆದರೆ ಹೆಣ್ಣು ಮಕ್ಕಳಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಅಳಿಯದಿರುವುದೇ ಹೆಚ್ಚು. ಇದರಿಂದಾಗಿ ಅವಳಲ್ಲಿ ಆದರ್ಶಾಹಂ ಅಷ್ಟಾಗಿ ಪ್ರೌಢವಾಗಿರುವುದಿಲ್ಲ. ಹೆಣ್ಣು ನೀತಿನಿಯಮಗಳ ವಿಚಾರದಲ್ಲಿ ನಿಷ್ಠುರವಾದಿ ಯಾಗಿರುವುದು ಸುಲಭವಲ್ಲ. ಅವಳು ಸಾಮಾನ್ಯವಾಗಿ ಮೃದು. ದಯೆ ಮತ್ತು ಕ್ಷಮೆ ಅವಳ ಮುಖ್ಯಗುಣಗಳು. ಅವಳಲ್ಲಿ ಒಬ್ಬ ನ್ಯಾಯಾಧೀಶನಿಗಿರಬೇಕಾದಂತಹ ನಿರ್ದಾಕ್ಷಿಣ್ಯ, ನಿಷ್ಠುರತೆ, ಮುಂತಾದ ಗುಣಗಳು ಬೆಳೆದು ಬರುವುದು ಕಷ್ಟವೆಂಬುದು ಫ್ರಾಯ್ಡನ ಅಭಿಪ್ರಾಯ.

ಈಡಿಪಸ್ ಕಾಂಪ್ಲೆಕ್ಸ್ ಸಂಭವಿಸುವುದು ಮಕ್ಕಳು ಶಿಶ್ನಾವಸ್ಥೆಯಲ್ಲಿರುವಾಗ. ಇಲ್ಲಿಂದ ಮುಂದೆ ಅವರು ಸುಪ್ತಾವಸ್ಥೆಗೆ ಕಾಲಿಡುತ್ತಾರೆ. ಸುಪ್ತಾವಸ್ಥೆಯಲ್ಲಿರುವಾಗ ಮಗು ಒಂದು ತೆರನಾದ ಅಲೈಂಗಿಕ (asexual) ಜೀವನ ನಡೆಸುತ್ತದೆ. ಈ ಅವಸ್ಥೆಯಲ್ಲಿರುವಾಗ ಮಗು ತುಂಬಾ ಸಭ್ಯ; ವಿನಯಶೀಲ; ನೀತಿವಂತ; ಶುಚಿ ಭೂರ್ತ. ಒಟ್ಟಿನಲ್ಲಿ ಅದು "ಬಹಳ, ಬಹಳ ಒಳ್ಳೆಯ" ಮಗು. ಅದು ಅಷ್ಟೊಂದು ಒಳ್ಳೆಯದಾಗಿರುವುದು ಅದರಲ್ಲಿ ಉಳಿದಿರುವ "ಬಹಳ, ಬಹಳ ಕೆಟ್ಟ" ಈಡಿಪಸ್ ಕಾಮನೆಗಳಿಂದಾಗಿ ಎಂಬುದು ಕೆಲವು ಮನೋವಿಜ್ಞಾನಿಗಳ ಅಭಿಪ್ರಾಯ. ಆದರೆ ಇತ್ತೀಚಿನ ಕಾಲದಲ್ಲಿ, ಸುಪ್ತಾವಸ್ಥೆಯಲ್ಲಿರುವಾಗ. ಮಕ್ಕಳು ತೋರುವ ವಿನಯಸಂಪನ್ನತೆಯಲ್ಲಿ ಕೊಂಚ ಬದಲಾವಣೆಗಳು ಕಂಡುಬರುತ್ತಿವೆ. ಸಮಾಜದಲ್ಲಿ ಲೈಂಗಿಕತೆಯನ್ನು ಕುರಿತಾದ ಅಭಿಪ್ರಾಯಗಳಲ್ಲಿ ಬಿಗುವು ಸಡಿಲಾಗುತ್ತಿರುವುದೇ ಇದಕ್ಕೆ ಕಾರಣವೆನ್ನುತ್ತಾರೆ ಸಮಾಜ ವಿಜ್ಞಾನಿಗಳು.

ಈಡಿಪಸ್ ಕಾಂಪ್ಲೆಕ್ಸ್‌ನ ಅಸ್ತಿತ್ವಕ್ಕಿರುವ ಆಧಾರಗಳು

ಈಡಿಪಸ್ ಕಾಂಪ್ಲೆಕ್ಸ್ ಎಂಬ ಒಂದು ಮನಃಸ್ಥಿತಿ ನಿಜವಾಗಿ ಸಂಭವಿಸುವುದೇ ಅಥವಾ ಇದು ಫ್ರಾಯ್ಡನ ಸ್ವಕಪೋಲ ಕಲ್ಪನೆಯೋ ಎನ್ನುವ ವಿವಾದ ಮನೋವಿಜ್ಞಾನಿಗಳಲ್ಲಿ ಇನ್ನೂ ನಡೆಯುತ್ತಿದೆ. ಆದರೆ ಫ್ರಾಯ್ಡ್ ಒಬ್ಬ ಮಹಾ ಪ್ರಾಜ್ಞ ಹಾಗೂ ಉನ್ನತಮಟ್ಟದ ವಿಜ್ಞಾನಿ ಎಂಬುದನ್ನು ನಾವು ಮರೆಯಬಾರದು. ಅವನ ಸಾರಸ್ವತ ಜೀವನದಲ್ಲಿ ಸಾಕಷ್ಟು ವಸ್ತುನಿಷ್ಠ ಪುರಾವೆಗಳಿಲ್ಲದ ಯಾವುದೇ ಸಿದ್ಧಾಂತ ವನ್ನು ಅವನು ಪ್ರತಿಪಾದಿಸಿಲ್ಲ. ಅಂತೆಯೇ ಈಡಿಪಸ್ ಕಾಂಪ್ಲೆಕ್ಸಿನ ಅಸ್ತಿತ್ವಕ್ಕೂ ಹಲವು ಬಗೆಯ ವೈಜ್ಞಾನಿಕ ಆಧಾರಗಳನ್ನು ಅವನು ಒದಗಿಸಿದ್ದಾನೆ.

ಫ್ರಾಯ್ಡ್ ಎಲ್ಲರೂ ಬಲ್ಲಂತೆ ಮೂಲತಃ ಒಬ್ಬ ಮನೋ ಚಿಕಿತ್ಸಕ. ಅವನ ಬಳಿಗೆ ಚಿಕಿತ್ಸೆಗಾಗಿ ಬಂದವರನ್ನು ಅವನು ಮನೋವಿಶ್ಲೇಷಣೆ ಎಂಬ ಒಂದು ವಿಶಿಷ್ಟ ಚಿಕಿತ್ಸಾವಿಧಾನಕ್ಕೆ ಒಳಪಡಿಸುತ್ತಿದ್ದ. ಮನೋವಿಶ್ಲೇಷಣೆಗೊಳಗಾದ ವ್ಯಕ್ತಿಗಳು ತಮ್ಮ ಜೀವನದಲ್ಲಿ ಸಂಭವಿಸಿದ್ದ, ಆದರೆ ಕೆಲವು ಕಾರಣಗಳಿಗಾಗಿ ದಮನಗೊಳಿಸಲ್ಪ

ಟ್ಟಿದ್ದ, ಹಲವಾರು ಮಹತ್ವಪೂರ್ಣ ಅನುಭವಗಳನ್ನು ನೆನಪಿಗೆ ತಂದುಕೊಳ್ಳುವುದು ವಾಡಿಕೆ. ಹೀಗೆ ನೆನಪಿಗೆ ಬಂದ ವಿಷಯಗಳಲ್ಲಿ ಈಡಿಪಸ್ ಭಾವನೆಗಳು ಮುಖ್ಯ ವಾದುವು. ಮೊದಮೊದಲು, ಫ್ರಾಯ್ಡ್ ನ ರೋಗಿಗಳು ಈಡಿಪಸ್ ಕಾಮನೆಗಳನ್ನು ಅವನಿಗೆ ಹೇಳಿದಾಗ, ಅವನು ಇವೆಲ್ಲಾ ರೋಗಿಗಳ ಭ್ರಾಂತಿ ಎಂದೇ ಭಾವಿಸಿದ್ದ. ಆದರೆ ಅವನ ರೋಗಿಗಳೆಲ್ಲಾ ಈ ವಿಷಯವನ್ನು ತಪ್ಪದೆ ನಿವೇದಿಸಿದಾಗ ಅವುಗಳ ವಿಚಾರವಾಗಿ ಆಳವಾಗಿ ಆಲೋಚಿಸಬೇಕಾಯ್ತು. ಫ್ರಾಯ್ಡ್ ದೀರ್ಘವಾಗಿ ಅಭ್ಯಾಸ ಮಾಡಿದ ಕೆಲವು ರೋಗಿಗಳ ಜೀವನ ವೃತ್ತಗಳನ್ನು ಅವಲೋಕಿಸಿದವರಿಗೆ, ಈಡಿಪಸ್ ಕಾಂಪ್ಲೆಕ್ಸಿನ ಅಭಿವ್ಯಕ್ತಿ ಮತ್ತು ವ್ಯಕ್ತಿಯ ಮಾನಸಿಕ ಜೀವನದಲ್ಲಿ ಅದರ ಪಾತ್ರ, ಮುಂತಾದ ವಿಷಯಗಳು ಮನದಟ್ಟಾಗುವುದರಲ್ಲಿ ಸಂಶಯವಿಲ್ಲ. ಉದಾಹರಣೆಗೆ ಫ್ರಾಯ್ಡ್ ಪ್ರಕಟಿಸಿರುವ ಕೆಲವು ರೋಗಿಗಳ ಜೀವನ ಚರಿತ್ರೆಗಳಲ್ಲಿ (The case of Rat man and the wolf man) ಅದರಲ್ಲೂ ಮುಖ್ಯವಾಗಿ ಒಬ್ಬ ಐದು ವರ್ಷದ ಬಾಲಕನ (Little hans) ವೃತ್ತಾಂತದಲ್ಲಿ ಈಡಿಪಸ್ ಕಾಂಪ್ಲೆಕ್ಸಿಗಿರುವ ವೈಜ್ಞಾನಿಕ ಹಿನ್ನೆಲೆ ಸ್ಪಷ್ಟವಾಗಿ ಕಂಡು ಬರುತ್ತದೆ. ಇದೇ ತೆರನಾದ ಚೈಕಿತ್ಸಿಕ ಆಧಾರಗಳನ್ನು (Clinical evidence) ಇತರ ಮನೋವಿಶ್ಲೇಷಕರೂ ವಿಪುಲವಾಗಿ ಒದಗಿಸಿದ್ದಾರೆ.

ಇತ್ತೀಚಿಗೆ ಪಾಲಿನ್ ಸಿಯರ್ಸ್ ಮತ್ತು ಅವರ ಸಹೋದ್ಯೋಗಿಗಳು ನಡೆಸಿದ ಪ್ರಯೋಗ ಈಡಿಪಸ್ ಕಾಂಪ್ಲೆಕ್ಸಿನ ಅಸ್ತಿತ್ವಕ್ಕೆ ಪ್ರಬಲ ಸಮರ್ಥನೆಗಳನ್ನೊದಗಿಸಿದೆ. ಈ ಸಂಶೋಧಕರು ಮೂರರಿಂದ ಐದು ವರ್ಷ ವಯಸ್ಸಿನ ನೂರಾರು ಮಕ್ಕಳಿಗೆ ತಂದೆ, ತಾಯಿ, ಒಬ್ಬ ಹುಡುಗ, ಒಬ್ಬಳು ಹುಡುಗಿ ಮತ್ತು ಒಂದು ಮಗು ಇವರ ಒಂದೊಂದು ಬೊಂಬೆಗಳನ್ನು ಕೊಟ್ಟು, ಮಕ್ಕಳನ್ನು "ತಂದೆ-ತಾಯಿ-ಮನೆ ಆಟ" ಆಡುವಂತೆ ನಿರ್ದೇಶಿಸಿ, ಅವರು ಆಡುವಾಗಿನ ಅವರ ವರ್ತನೆಗಳನ್ನು ಕೂಲಂಕಷವಾಗಿ ಪರಿಶೀಲಿಸಿದರು, ಆಟದ ಸಂದರ್ಭದಲ್ಲಿ ಸಾಮಾನ್ಯವಾಗಿ ಗಂಡುಮಕ್ಕಳು ತಂದೆಯ ಬೊಂಬೆಯನ್ನೂ, ಹೆಣ್ಣುಮಕ್ಕಳು ತಾಯಿಯ ಬೊಂಬೆಯನ್ನೂ ತಮ್ಮ ದ್ವೇಷಾ ಸೂಯೆಗಳ ಅಭಿವ್ಯಕ್ತಿಗೆ ಗುರಿಯಾಗಿ ಉಪಯೋಗಿಸಿಕೊಂಡದ್ದು ಸ್ಪಷ್ಟವಾಗಿ ಕಂಡು ಬಂತು. ಈ ಪ್ರಯೋಗ ಮತ್ತು ಅದರ ಫಲಿತಾಂಶಗಳು ಈಡಿಪಸ್ ಭಾವನೆಗಳ ಸತ್ಯಾಸತ್ಯತೆಯನ್ನು ನಿರ್ಧರಿಸುವಲ್ಲಿ ಒಂದು ಪ್ರಮುಖ ಮೈಲಿಗಲ್ಲೆಂದು ಪರಿಗಣಿಸಲ್ಪಟ್ಟಿವೆ.

ಕೆಲವು ವೇಳೆ ಈಡಿಪಸ್ ಭಾವನೆಗಳು ಉದಾತ್ತೀಕರಣ (Sublimation) ಕ್ಕೊಳಗಾಗುತ್ತವೆ. ಅಂದರೆ ಲೈಂಗಿಕಶಕ್ತಿ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಉದಾತ್ತಕ್ರಿಯೆಗಳ ಉಪಯೋಗಕ್ಕೊಳಗಾಗುತ್ತದೆ. ಕಲೆ, ಸಾಹಿತ್ಯ ಮತ್ತು ಸಂಗೀತ ಸೃಷ್ಟಿ, ಉದಾತ್ತೀಕರಣಕ್ಕೆ ಒಳ್ಳೆಯ ನಿದರ್ಶನಗಳು. ಈ ಸೃಜನಾತ್ಮಕ ಕ್ರಿಯೆಗಳನ್ನು

ಕೂಲಂಕಷವಾಗಿ ವಿಶ್ಲೇಷಿಸಿದರೆ, ಕೆಲವುವೇಳೆ, ಅವುಗಳ ನಿರ್ಮಾಣದ ಹಿನ್ನೆಲೆಯಲ್ಲಿ ಈಡಿಪಸ್ ಕಾಮನೆಗಳ ಪರೋಕ್ಷ ಅಭಿವ್ಯಕ್ತಿ ಇರುವುದು ಕಂಡುಬರುತ್ತದೆನ್ನುತ್ತಾನೆ ಫ್ರಾಯ್ಡ್. ಇದಕ್ಕೆ ಅವನು ಹಲವಾರು ಉದಾಹರಣೆಗಳನ್ನು ಕೊಟ್ಟಿದ್ದಾನೆ. ಗ್ರೀಕರ ಪುರಾಣದೇವತೆ ಜ್ಯೂಸ್ (Zeus) ತನ್ನ ತಂದೆಯನ್ನು ನಿರ್ವೀರ್ಯಗೊಳಿಸಿ ತಾನು ಅವನ ಸ್ಥಾನವನ್ನಾಕ್ರಮಿಸಿದ ಕಥೆ ಅವುಗಳಲ್ಲೊಂದು. ಸೊಫೊಕ್ಲೀಸನ "ಈಡಿಪಸ್ ರೆಕ್ಸ್" ನಾಟಕದ ಕಥಾವಸ್ತು ನಮಗೆ ತಿಳಿದೇ ಇದೆ. ಶೇಕ್ಸ್‌ಪಿಯರನ "ಹ್ಯಾಮ್ಲೆಟ್" ನಾಟಕ ಇನ್ನೊಂದು ಉತ್ತಮ ನಿದರ್ಶನ. ಹ್ಯಾಮ್ಲೆಟ್ ತನ್ನ ತಂದೆಯ ಸಾವಿಗೆ ಸಕಾಲದಲ್ಲಿ ಸೇಡು ತೀರಿಸಿಕೊಳ್ಳಲಾಗದುದಕ್ಕೆ ಅವನ ಈಡಿಪಸ್ ಭಾವನೆಗಳೇ ಕಾರಣವಿರಬೇಕೆನ್ನುತ್ತಾನೆ ಫ್ರಾಯ್ಡ್. ಅಂದರೆ ಹ್ಯಾಮ್ಲೆಟ್‌ಗೆ ತಂದೆಯ ಮೇಲಣ ದ್ವೇಷ ಹಾಗೂ ತಾಯಿಯ ಮೇಲಣ ಪ್ರೀತಿ ಸುಪ್ತವಾಗಿ ಇದ್ದಿರಲೇಬೇಕು. ವಿಶ್ವದ ಜನಪದ ಸಾಹಿತ್ಯದಲ್ಲಿ ತಾಯಿಯನ್ನು ಬಯಸಿದ ಮಗ, ತಂದೆಯನ್ನು ಬಯಸಿದ ಮಗಳು ಇವರನ್ನು ಕುರಿತಾದ ಕಥೆಗಳು ಪ್ರಚಲಿತವಿರುವುದು ಎಲ್ಲರಿಗೂ ತಿಳಿದ ವಿಷಯ. ಅಂದಮೇಲೆ ಈ ಸಾಹಿತ್ಯ ಪ್ರತಿಮೆಗಳನ್ನು ನಿರ್ಮಿಸಿದವರ, ಮತ್ತು ಅವುಗಳಲ್ಲಿ ಅಮಿತವಾದ ಆಸಕ್ತಿ ಹೊಂದಿರುವ ಜನರ ಮನಸ್ಸಿನ ಒಳಪದರಗಳಲ್ಲಿ ಈಡಿಪಸ್ ಕಾಂಪ್ಲೆಕ್ಸಿನ ಅಂಶಗಳು ಸುಪ್ತವಾಗಿ ಉಳಿದಿರಲೇಬೇಕು.

ಖ್ಯಾತ ಚಿತ್ರಕಾರ ಲಿಯೊನಾರ್ಡೊ ಡಾವಿನ್ಸಿಯ ಚಿತ್ರಗಳ ಹಿನ್ನೆಲೆಯಲ್ಲಿ ಈಡಿಪಸ್ ಕಾಂಪ್ಲೆಕ್ಸಿನ ಪ್ರಭಾವವಿರುವುದನ್ನು ಫ್ರಾಯ್ಡ್ ತೋರಿಸಿಕೊಟ್ಟಿದ್ದಾನೆ. ಮುಖ್ಯವಾಗಿ ಡಾವಿನ್ಸಿ ರಚಿಸಿದ ಸ್ತ್ರೀ ಚಿತ್ರಗಳು— Mona Lisa, Madonna and child with St. Anne— ಅವನ ತಾಯಿಯ ಮೇಲಣ ಅತೀವ ಪ್ರೇಮದ ಅಭಿವ್ಯಕ್ತಿಯನ್ನು ಸ್ಪಷ್ಟೀಕರಿಸುತ್ತವೆ.

ಇವೆಲ್ಲಕಿಂತ ಮಿಗಿಲಾಗಿ, ನಮ್ಮ ಆಚಾರ ವ್ಯವಹಾರಗಳಲ್ಲಿ ಮಾತುಕಥೆಗಳಲ್ಲಿ, ಒಂದೊಂದು ವೇಳೆ ನಾವು ಉಪಯೋಗಿಸುವ ಬೈಗುಳುಗಳಲ್ಲಿ ಕೂಡ, ನಮಗರಿಯದಂತೆ ಈಡಿಪಸ್ ಅಂಶಗಳು ಹೊರಬೀಳುತ್ತವೆಂದರೆ ಆಶ್ಚರ್ಯವಾಗಬಹುದು. ಉದಾಹರಣೆಗೆ "ಭೂಮಿ ತಾಯಿ" ಎಂಬ ಪ್ರತಿಮೆಯನ್ನು ನೋಡೋಣ. ಒಂದು ದೇಶದ ದೊರೆಯನ್ನು ನಾವು ಭೂಪತಿ ಎಂದು ಕರೆಯುತ್ತೇವೆ. ಅವನು ಭೂಮಿಯ ಪತಿ, ಒಡೆಯ, ಗಂಡ. ಅವನ ನಂತರ ಅವನ ಮಗ ತಂದೆಯ ಸ್ಥಾನಕ್ಕೆ ಬಂದು ಇನ್ನೊಬ್ಬ ಭೂಪತಿಯಾಗುತ್ತಾನೆ. ಭೂಮಿಯೊಬ್ಬಳೆ; ಪತಿಗಳು ಬದಲಾಯಿಸುತ್ತಾರೆ. ಹೀಗೆ "ಭೂಮಿ ತಾಯಿ" ತಂದೆಯಿಂದ ಮಗನಿಗೆ ವರ್ಗಾಯಿಸಲ್ಪಡುತ್ತಾಳೆ. ಈ ವಿಚಾರವನ್ನು ಕುರಿತು ವ್ಯವಹರಿಸುವಾಗ ನಮಗೆ ಅದರ ಹಿನ್ನೆಲೆಯಲ್ಲಿರುವ ಈಡಿಪಸ್ ಸಂಕೇತ ಗಮನಕ್ಕೆ ಬರುವುದೇ ಇಲ್ಲ. ಇನ್ನು ಕನ್ನಡ ಜನರಲ್ಲಿ ಬಳಕೆಯಲ್ಲಿರುವ ಒಂದೆರಡು ಬೈಗುಳುಗಳನ್ನು ಗಮನಿಸಿ. ಗಂಡು ಮಕ್ಕಳನ್ನು

ಬೈಯ್ಯುವಾಗ ನಾವೆಲ್ಲರೂ ಸುಲಭವಾಗಿ ಯಾವ ಅಳುಕೂ ಇಲ್ಲದೆ ತಾಯಿಗ್ಗಂಡ ಎಂಬ ಮಾತನ್ನು ಉಪಯೋಗಿಸಿಬಿಡುತ್ತೇವೆ. ಇಂದೂ ಕೂಡ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳನ್ನು ಬೈಯ್ಯುವಾಗ ನಿಮ್ಮಪ್ಪ ನಿನ್ನ......ಎಂಬ ಮಾತನ್ನು ಪ್ರಯೋಗಿಸುತ್ತಾರೆ. ಇವೆಲ್ಲಾ ಅಪ್ರಜ್ಞಾತ್ಮಕವಾಗಿ, ಅಪ್ರಯತ್ನಿಕವಾಗಿ ನಡೆದುಬಿಡುತ್ತವೆ. ಅಂದಮೇಲೆ ಈಡಿಪಸ್ ಭಾವನೆಗಳು ಜನಮನದಲ್ಲಿ ಹೇಗೆ ಬೇರೂರಿವೆ ಮತ್ತು ಅವು ವರ್ತನೆಯಮೇಲೆ ಹೇಗೆ ಪ್ರಭಾವ ಬೀರುತ್ತವೆ ಎಂಬುವನ್ನು ಗ್ರಹಿಸಲಸಾಧ್ಯವೇನಲ್ಲ.

ಫ್ರಾಯ್ಡ್ ವಿವರಿಸಿರುವಂತೆ ಈಡಿಪಸ್ ಕಾಂಪ್ಲೆಕ್ಸ್ ಇದ್ದಿರಬಹುದಾದರೂ, ಅದು ಎಲ್ಲಾ ಕಾಲದಲ್ಲೂ, ಎಲ್ಲಾ ಜನಾಂಗಗಳಲ್ಲೂ, ಎಲ್ಲಾ ಜನರ ಅನುಭವಕ್ಕೆ ಬರುವ ಒಂದು ಮನಃಸ್ಥಿತಿಯೇ ಎಂಬ ಪ್ರಶ್ನೆಯನ್ನು ಬಹಳಷ್ಟು ಜನ ಎತ್ತಿದ್ದಾರೆ. ಫ್ರಾಯ್ಡನೇನೋ ಇದೊಂದು ಸಾರ್ವಲೌಕಿಕ (Universal) ಘಟನೆ ಎಂಬುದನ್ನು ಒತ್ತಿ ಹೇಳಿದ್ದಾನೆ. ಆದರೂ ಅವನ ವಾದವನ್ನು ಸಂಪೂರ್ಣವಾಗಿ ಸ್ವೀಕರಿಸಲು ಅಥವಾ ಸಂಪೂರ್ಣವಾಗಿ ನಿರಾಕರಿಸಲು ಸಾಕಷ್ಟು ಸರ್ವಮಾನ್ಯ ವೈಜ್ಞಾನಿಕ ಆಧಾರಗಳು ಲಭ್ಯವಿಲ್ಲ. ಫ್ರಾಯ್ಡ್ ತನ್ನ ಬಳಿಗೆ ಚಿಕಿತ್ಸೆಗೆ ಬಂದವರೆಲ್ಲರೂ ಈಡಿಪಸ್ ಭಾವನೆಗಳನ್ನು ಸ್ಪಷ್ಟವಾಗಿ ತೋರ್ಪಡಿಸಿದರೆಂದಿದ್ದಾನೆ. ಅಮೆರಿಕಾ ಮತ್ತು ಯುರೋಪಿನ ಬಹಳಮಂದಿ ಮನೋವಿಶ್ಲೇಷಕರು ಕೂಡ ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅಲ್ಲಲ್ಲಿ ನಡೆದಿರುವ ಕೆಲವು ಆಧುನಿಕ ಸಂಶೋಧನೆಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸಿವೆ. ಆದುದರಿಂದ ಪಾಶ್ಚಾತ್ಯ ಸಮಾಜದಲ್ಲಿ ಈಡಿಪಸ್ ಕಾಂಪ್ಲೆಕ್ಸ್ ವ್ಯಾಪಕವಾಗಿ ಸಂಭವಿಸುತ್ತದೆ. ಎಂಬ ತೀರ್ಮಾನಕ್ಕೆ ಸಮಕಾಲೀನ ಮನೋವಿಜ್ಞಾನಿಗಳು ಬಂದಿದ್ದಾರೆ. ಹಾಗಾದರೆ, ಪ್ರಪಂಚದ ಬೇರೆ ಬೇರೆ ಸಮಾಜಗಳ ವಿಚಾರದಲ್ಲಿ ಹೇಗೆ ಎನ್ನುವ ಪ್ರಶ್ನೆ ಉದ್ಭವಿಸುವುದು ಸಹಜ. ಒಂದು ಪರಿಮಿತಿಯೊಳಗೆ, ಈ ಪ್ರಶ್ನೆಗೆ ಉತ್ತರವನ್ನು ನಾವು ಮಾನವ ಶಾಸ್ತ್ರಜ್ಞ (Anthropologists) ರಿಂದ ನಿರೀಕ್ಷಿಸಬಹುದು.

ವಿಶ್ವದ ಎಲ್ಲೆಡೆಗಳಲ್ಲೂ ಪ್ರತಿಸಮಾಜವೂ ಮಾತೃಗಮನ (Incest) ಮತ್ತು ಪಿತೃಹತ್ಯೆಗಳನ್ನು ಮಹಾಪಾತಕಗಳೆಂದು ಪರಿಗಣಿಸುತ್ತದೆ ; ಈ ಕ್ರಿಯೆಗಳನ್ನು ಬಹುನಿಷ್ಠುರವಾಗಿ ನಿಷೇಧಿಸುತ್ತದೆ. ಈ ಪಾಪಮಾಡಿದವರನ್ನು ಸಮಾಜ ಬಹಳ ಕಠಿಣವಾದ ಶಿಕ್ಷೆಗೆ ಗುರಿಪಡಿಸುತ್ತದೆ. ಸಮಾಜ ಹೀಗೆ ವರ್ತಿಸಲು ಕಾರಣವೇನು ? ಯಾವುದೇ ವ್ಯಕ್ತಿ ಇಂತಹ ಪಾಪಕಾರ್ಯಗಳಲ್ಲಿ ತೊಡಗಬಹುದೆಂಬ ಶಂಕೆಯೇ ಸಮಾಜ ಇಷ್ಟು ನಿಷ್ಠುರವಾಗಿ ವರ್ತಿಸಲು ಕಾರಣವೆನ್ನುತ್ತಾರೆ ಮಾನವಶಾಸ್ತ್ರಜ್ಞರು. ಸಮಾಜಕ್ಕೆ ಈ ಶಂಕೆಯಾದರೂ ಏಕೆ ಬರಬೇಕು ? ಪ್ರಾಯಶಃ ಮಾನವರಲ್ಲಿ ಈಡಿಪಸ್ ಕಾಮನೆಗಳು ಉಳಿದು ಬಂದಿರುವುದರಿಂದಲೇ ಇರಬೇಕು. ತೀವ್ರಾಭಿ

ಲಾಷೆಗಳನ್ನು ತಡೆಹಿಡಿಯಬೇಕಾದರೆ ತೀವ್ರಪ್ರಯತ್ನವೇ ಬೇಕು. ಆದಕ್ಕಾಗಿಯೇ ಇಂತಹ ಭಾವನೆಗಳನ್ನು ನಿಯಂತ್ರಿಸಲು ಸಮಾಜ ನಿಷ್ಠುರ ನಿಬಂಧನೆಗಳನ್ನು ನಿರ್ಮಿಸಿಕೊಂಡಿರಬೇಕು.

ಕೆಲವು ಆದಿಮ ಜನಾಂಗಗಳಲ್ಲಿ ಗಣಚಿಹ್ನೆ (Totem) ಹೊಂದಿರುತ್ತದೆ. ಅದನ್ನು ಕುರಿತು ಅವರಲ್ಲಿ ಹಲವಾರು ನಿಷೇಧಾತ್ಮಕ ನಿಬಂಧನೆಗಳಿರುತ್ತವೆ. ಈ ನಿಬಂಧನೆಗಳು ಅವರಲ್ಲಿರುವ ಅಪ್ರಜ್ಞಾತ್ಮಕ ಪಿತೃಹತ್ಯಾಭಿಲಾಷೆಗಳನ್ನು ಪ್ರತಿನಿಧಿಸುತ್ತವೆ ಎಂಬುದು ಫ್ರಾಯ್ಡನ ವಾದ. ವಿಶ್ವದ ವಿವಿಧ ಭಾಗಗಳಲ್ಲಿನ ಆದಿಮ ಜನಾಂಗಗಳನ್ನು ಅಭ್ಯಾಸ ಮಾಡಿರುವ ಮಾನವ ವಿಜ್ಞಾನಿಗಳು ಅವುಗಳಲ್ಲಿ ಈಡಿಪಸ್ ಕಾಮನೆಗಳು ಪ್ರಚಲಿತವಿರುವುದನ್ನು ಸಾದರಪಡಿಸಿದ್ದಾರೆ. ಮುರ್‌ಡಾಕ್ (Murdock) ಪರಿಶೀಲಿಸಿದ 250 ಆದಿಮ ಜನಾಂಗಗಳಲ್ಲಿ ಈಡಿಪಸ್ ಕಾಂಪ್ಲೆಕ್ಸಿಗೆ ಸಂಬಂಧಿಸಿದ ನಿಷೇಧಾತ್ಮಕ ನಿಯಮಗಳಿರುವುದು ಕಂಡು ಬಂದಿದೆ. ಫ್ರಾನ್ಸಿನ ಮಾನವ ವಿಜ್ಞಾನಿ ಕಾಂಡೊಮಿನಾಸ್ (Condominas), ಅಮೆರಿಕಾದ ಮನೋವಿಜ್ಞಾನಿ ಗಾರ್ಡ್ನರ್ ಲಿಂಡ್ಜೆ (Lindzey), ಮುಂತಾದವರು ಕೂಡ ತಮ್ಮ ಆದಿಮ ಜನಾಂಗ ಸಂಶೋಧನೆಗಳಲ್ಲಿ ಈಡಿಪಸ್ ಕಾಂಪ್ಲೆಕ್ಸ್‌ನ ವಿಶ್ವವ್ಯಾಪಕತೆಗೆ ಬಲವತ್ತರವಾದ ಪುರಾವೆಗಳನ್ನು ಒದಗಿಸಿದ್ದಾರೆ.

ಇಷ್ಟಾದರೂ ಈಡಿಪಸ್ ಕಾಂಪ್ಲೆಕ್ಸ್ ಸಂಪೂರ್ಣವಾಗಿ ಒಂದು ಸ್ವಾಭಾವಿಕ ಮತ್ತು ಸಾರ್ವಲೌಕಿಕ ಅನುಭವ ಎಂಬ ಮಾತನ್ನು ನಂಬುವುದು ಕಷ್ಟವೇ. ಕೆಲವು ಆಧುನಿಕ ಮನೋವಿಜ್ಞಾನಿಗಳು ಈಡಿಪಸ್ ಕಾಂಪ್ಲೆಕ್ಸಿನ ಸಂಭವನೀಯತೆ ಸಮಾಜದಲ್ಲಿ ಪ್ರಚಲಿತವಿರುವ ಮಕ್ಕಳನ್ನು ಬೆಳೆಸುವ ವಿಧಾನವನ್ನನುಸರಿಸಿರುತ್ತದೆ ಎನ್ನುತ್ತಾರೆ.

ಜನಸಾಮಾನ್ಯರ ದೃಷ್ಟಿಯಲ್ಲಿ ಈಡಿಪಸ್ ಕಾಂಪ್ಲೆಕ್ಸ್ ಒಂದು ಅಸಹಜ, ಅಶ್ಲೀಲ ಹಾಗೂ ವಿಕೃತ ಕಲ್ಪನೆ. ಜನರ ಈ ಅಭಿಪ್ರಾಯ ಸಹಜವಾದುದೇ. ನಮಗಾರಿಗೂ ತಂದೆ ತಾಯಿಯರನ್ನು ಕುರಿತು ಕಾಮಾಭಿಲಾಷೆಗಳಾಗಲೀ ದ್ವೇಷಾಸೂಯೆಗಳಾಗಲೀ ಇರುವಂತೆ ಅನಿಸುವುದಿಲ್ಲ. ಈಡಿಪಸ್ ಕಾಂಪ್ಲೆಕ್ಸ್ ಒಂದು ಕಟ್ಟು ಕಥೆಯಂತೆ ಕಾಣಿಸುತ್ತದೆ. ಅದು ಹಾಗೆ ಕಂಡು ಬರಲು ನಿಶ್ಚಿತ ಕಾರಣಗಳಿವೆ ಎನ್ನುತ್ತಾನೆ ಫ್ರಾಯ್ಡ್. ಮುಖ್ಯವಾಗಿ ಯಾವ ಮಕ್ಕಳಿಗೂ ಈಡಿಪಸ್ ಕಾಂಪ್ಲೆಕ್ಸಿನ ಪೂರ್ಣವಾದ ಅನುಭವವಾಗುವುದಿಲ್ಲ. ಅದು ಹೊರಬರುತ್ತಿದ್ದಂತೆಯೇ ದಮನ ಮಾಡಲ್ಪಡುತ್ತದೆ. ಅದಕ್ಕೆ ಸಂಬಂಧಿಸಿದ ಶಕ್ತಿಯು ಅಭಿವ್ಯಕ್ತಿಯಲ್ಲಿ ತೀವ್ರ ಮಾರ್ಪಾಟಾಗುತ್ತದೆ. ಸಮಾಜದ ಕಟ್ಟುಪಾಡುಗಳಿಗೊಳಗಾಗಿ ನಮ್ಮ ಲೈಂಗಿಕ ಭಾವನೆಗಳನ್ನು, ದ್ವೇಷಾಸೂಯೆಗಳನ್ನು, ನಮಗರಿಯದಂತೆ ನಮ್ಮ ಕುಟುಂಬದ ಹೊರಗಡೆಯ ವ್ಯಕ್ತಿಗಳೆಡೆಗೆ ಹರಿಯಬಿಡುತ್ತೇವೆ. ಆದುದರಿಂದ

ನಮಗೆ ಈಡಿಪಸ್ ಭಾವನೆಗಳು ಇದ್ದ ನೆನಪಾಗುವುದಿಲ್ಲ. ಸಾಲದುದಕ್ಕೆ ಈಡಿಪಸ್ ನೆನಪುಗಳು ಆತಂಕಭರಿತವಾಗಿದ್ದು, ಅವು ನೆನಪಿಗೆ ಬರುವ ಸಾಧ್ಯತೆಗಳು ಕಡಮೆ. ಅಷ್ಟೇ ಅಲ್ಲ, ಆ ನೆನಪು ಅಹಿತವಾಗಿದ್ದು, ಅದರೊಡನೆ ಜರುಗಿದ ಇತರ ಅನುಭವಗಳನ್ನೂ ನಾವು ಮರೆಯುತ್ತೇವೆ. ಈಡಿಪಸ್ ಕಾಮನೆಗಳನ್ನು ದಮನ ಮಾಡಿದ ಮನಸ್ಸು ಇತರರಲ್ಲಿ ಕೂಡ ಅದರ ಅಸ್ತಿತ್ವವನ್ನು ಗುರುತಿಸಲು ಅಸ್ಪದ ಕೊಡುವುದಿಲ್ಲ. ಈ ಕಾರಣಗಳಿಂದಾಗಿ ಈಡಿಪಸ್ ಕಾಂಪ್ಲೆಕ್ಸ್ ನಮಗೆ ಬಹಳ ಅಸಹಜವಾಗಿ ಕಂಡು ಬಂದು, ಅದರ ಅಸ್ತಿತ್ವವನ್ನೇ ಸಂಪೂರ್ಣವಾಗಿ ನಾವು ನಿರಾಕರಿಸುತ್ತೇವೆ. ಅದರ ನಿರಾಕರಣೆ, ನಮ್ಮ ಸ್ವಾಭಿಮಾನವನ್ನು ರಕ್ಷಿಸಿಕೊಳ್ಳಲು ನಾವು ಉಪಯೋಗಿಸುವ, ಒಂದು ಮಾನಸಿಕ ತಂತ್ರ ಎಂಬುದು ಫ್ರಾಯ್ಡನ ಅಭಿಪ್ರಾಯ.

ಯುಗಾದಿ ಬಂದಿತ್ತು*

ತೀ. ನಂ. ಶ್ರೀಕಂಠಯ್ಯ

1

ಕಾಲ ವೊಂದಿತ್ತು !
ಮಾವಿನ ಮರ ಕುಡಿಯೊಡೆಯುವ ಮೊದಲೆ
ಮಲ್ಲಿಗೆ ಪೂವೆ ಮುಗುಳೆತ್ತುವ ಮೊದಲೆ
ತೆಂಕಣೆಲರು ತಲೆಯಿಕ್ಕುವ ಮೊದಲೆ,
ಹೃದಯದಾಳದಲಿ ಹೊಸರಸವುಕ್ಕಿ
ತನಗೆ ತಾನೆ ಉತ್ಸಾಹವು ಸೊಕ್ಕಿ,
ವಸಂತನುದಯದ ಮುಂಬೆಳಕೋ ಎನೆ
ನಲವು ಹೊಮ್ಮುತಿತ್ತು,
ಬರುವ ಯುಗಾದಿಯ ಸುಸ್ವಾಗತವೆನೆ
ಹಾಡು ಚಿಮ್ಮುತಿತ್ತು !
ಅಂತಹ ಕಾಲ ವೊಂದಿತ್ತು !

2

ಕಾಲ ಸಂದಿತ್ತು !
ಎತ್ತ ನೋಡಿದರು ತಾರಿದ ಗಿಡ ಮರ
ಸುತ್ತ ಸುರಿದು ಕೆಳಗೊರಗಿದ ಹಣ್ಣೆಲೆ
ಶಿಶಿರ ಜಾರಲೊಮ್ಮೆಟ್ಟಿಗೆ ಗ್ರೀಷ್ಮವೆ
ಹಾರಿ ಬಂದಿತೆನೆ ಧರೆಯೆದೆ ಬೆಂದು
ಸುಯ್ಯುವ ಬಿಸುವಿನ ಗಾಳಿ,
ಕಾಮನ ದಹನದ ಕಿಚ್ಚು ಮಸಗಿತೆನೆ
ಕಣ್ಣನು ಚುಚ್ಚುವ ಧೂಳಿ !—

---

* ಈ ಪದ್ಯವನ್ನು ಒದಗಿಸಿದವರು ದಿವಂಗತರ ಮಗ ಶ್ರೀ ಟಿ. ಎಸ್. ನಾಗಭೂಷಣ ಅವರು

ತಾಳಲಾರದೆಯೆ ಕುಸಿಯಿತು ಮನಸು
ಅಡಗಿತ್ತೆಲ್ಲೋ ಹಾಡಿನ ಕನಸು,
ಉಲ್ಲಾಸದ ಕಳೆ ಕುಂದಿತ್ತು!
ಆಹಾ, ವಯಸು ಸಂದಿತ್ತು!

3

ನಸುಕು ಬಂದಿತ್ತು!
ಏನಿದು ಮೊನೆ ದನಿ! — ಗೋಡೆಯ ಭೇದಿಸಿ
ಮುಸುಕಿದ ನಿದ್ದೆಯ ಬಲೆಯನು ಛೇದಿಸಿ
ಅಂತಃಕರಣಕೆ ತೂರುತಿದೆ!
"ಕೂಹೂ ಕೂಹೂ ಕೂಹೂ ಕೂಹೂ"
ಏಳೇಳೆನ್ನುವ ಕೋಗಿಲೆಯುಲುಹು!
— ಒಂದೇ ಕ್ಷಣದಲಿ ಜಾಡ್ಯವ ಹರಿಸಿ
ವಸಂತ ಮೋಹನ ಮಂತ್ರವಿದೆನಿಸಿ
ಹೊಸ ಲೋಕವನೇ ತೋರುತಿದೆ! —
ನೋಡದೊ, ಮಾಮರವಿರುಳೊಳು ತಳಿತಿದೆ
ಬಳ್ಳಿಯೊಳೀಕಡೆ ಹೊಸನನೆ ಮೊಳೆತಿದೆ
ತಣ್ಣನೆ ನುಣ್ಣನೆ ಎಲರೈತರುತಿದೆ
ನನ್ನೆದೆಗೂ ತಂಪೂರುತಿದೆ!
ಬತ್ತಿದ ಬಾವಿಗೆ ಜಲ ಬಂದಂತೆ
ಭಾವ ದೇವಿ ಮುಂಗಡೆ ನಿಂದಂತೆ
ಏರಿದ ವಯಸಿನ ಹೊರೆಯಿಳಿದಂತೆ
ಕಟ್ಟಿದ ಕೊರಳಿನ ಬಿಗುಹಳಿದಂತೆ
ನಾಲಗೆ ತೊಡರದೆ ಹಾಡುತಿದೆ,
ಲೇಖನಿಯಾಡುತಿದೆ!
ಹೃದಯವು ರಸದಲಿ ಮಿಂದಿತ್ತು!
ಯುಗಾದಿ ನನಗೂ ಬಂದಿತ್ತು!

ಧಾರವಾಡ: ಆಕಾಶವಾಣಿ
16-3-53

ರಾಘವಾಂಕನ–ಆದಯ್ಯ*

ಬಿ. ಸಿ. ಜವಳಿ

ರಾಘವಾಂಕ ಮಹಾಕವಿಯ ಕಾವ್ಯಗಳಲ್ಲಿ "ಸೋಮನಾಥ ಚಾರಿತ್ರ"ವೂ ಒಂದು. ಈ ಕಾವ್ಯವು ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇದರಿಂದ ಪ್ರಕಟಗೊಂಡು ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ, ಅವರಿಂದ ಸಂಪಾದಿತವಾಗಿದೆ. ಪ್ರಸ್ತಾವನೆಯಲ್ಲಿ ಸಂಪಾದಕರು ದೀರ್ಘವಾಗಿ ಕವಿಯ ಗುರುಪರಂಪರೆ, ಜೀವನಚರಿತೆ, ಕಾಲವಿಚಾರ. ಕವಿಯ ಮತ (ಧರ್ಮ), ಕೃತಿಗಳು, ಮೊದಲಾದ ವಿಷಯಗಳನ್ನಲ್ಲದೆ 'ಸೋಮನಾಥ ಚಾರಿತ್ರ'ದ ಕಥಾಸಾರ, ಆದಯ್ಯನು ಜೀವಿಸಿದ್ದ ಕಾಲ ಆದಯ್ಯನ ಮತ ಹಾಗೂ ಕ್ರಾಂತಿ, ಮತ್ತು ಕೃತಿಯ ಕಾವ್ಯಸೌಂದರ್ಯ, ಪಾತ್ರಗಳು ಹಾಗೂ ವರ್ಣನೆಗಳು ಮೊದಲಾದ ವಿಷಯಗಳ ಮೇಲೆ ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಅವರು ಈ ಕಾವ್ಯದ ಬಗೆಗೆ ಬರೆಯುತ್ತಾ :

"ಸೋಮನಾಥ ಚಾರಿತ್ರ ಮಾನವೀಯತೆಯ ಮಡುವಾಗಿದೆ; ಔಚಿತ್ಯವನ್ನು ಮೀರಿ ಶೃಂಗಾರಾದಿ ರಸಗಳನ್ನು ಹರಿಸಬೇಕೆಂಬ ಹಟ ರಾಘವಾಂಕನಿಗಿಲ್ಲ; ರಾಘವಾಂಕನು ಕಥೆ ಹೇಳುವುದರಲ್ಲಿ ಮಾನವ ಹೃದಯಸ್ಪರ್ಶಿಯಾದ ಸನ್ನಿವೇಶಗಳನ್ನು ನಿರ್ಮಿಸುವಲ್ಲಿ, ಅನೌಚಿತ್ಯವನ್ನು ತ್ಯಜಿಸುವಲ್ಲಿ, ಸಂಪ್ರದಾಯದಿಂದ ದೂರ ಸರಿಯುವಲ್ಲಿ ಬಲ್ಲಿದನಾದ ಕವಿಯು; ಸನ್ನಿವೇಶ ನಿರ್ಮಾಣ, ಪಾತ್ರಗಳ ಸಹಜ ಸ್ವಭಾವ ನಿರೂಪಣೆ ಇವುಗಳಲ್ಲಿ ರಾಘವಾಂಕನದು ಎತ್ತಿದ ಕೈ; ಸೋಮನಾಥ ಚಾರಿತ್ರ ಸೊಗಸಿನ ಸುಗ್ಗಿ, ರಸದ ಮಡು, ಪುಣ್ಯದ ಆಗರ; ಕವಿ ಈ ಕಾವ್ಯವನ್ನು ಕಲಾಪೂರ್ಣವಾಗಿ ರಸವತ್ತಾಗುವಂತೆ ಹೇಳಿದ್ದಾನೆ .."[1] ಎಂದು ಕವಿಕೃತಿಯ ಬಗೆಗೆ ಸಪ್ರಮಾಣ ವಿವರಗಳನ್ನು ನೀಡಿ, ಸಹೃದಯನಿಗೆ ಸಲ್ಲಬಲ್ಲ ಉಚಿತ ವಿಮರ್ಶೆಯನ್ನು ಮಾಡಿ ಕಾವ್ಯದ ಬಗೆಗೆ ಆದರವುಂಟಾಗುವಂತೆ ಮಾಡಿದ್ದಾರೆ. ಅವರು ಮುಂದುವರಿದು

"ಆದಯ್ಯನು ಸೌರಾಷ್ಟ್ರ ಸೋಮನಾಥನನ್ನು ಕ್ರಿ.ಶ. 1100ರಲ್ಲಿ ಪ್ರತಿಷ್ಠಾಪನೆ ಮಾಡಿದನೆಂಬುದು ವಿದಿತವಾಗುತ್ತಿದೆ" ಎಂದಿದ್ದಾರೆ. ವಚನಕಾರನಾದ

---

* ವಚನಕಾರ ಸಿದ್ಧರಾಮನೂ ರಾಘವಾಂಕ ಕವಿಯು ಚಿತ್ರಿಸಿದ 'ಸಿದ್ಧರಾಮ ಚಾರಿತ್ರ'ದ ಸಿದ್ಧರಾಮನೂ ಒಂದೇ. ಅದರಂತೆಯೇ ವಚನಕಾರ ಆದಯ್ಯ ಮತ್ತು ರಾಘವಾಂಕ ಕವಿಯ 'ಸೋಮನಾಥ ಚಾರಿತ್ರ' ದ ಆದಯ್ಯ ಒಂದೇ ಆಗಿದ್ದಾರೆ

ಆದಯ್ಯ 'ಸೋಮನಾಥ ಚಾರಿತ್ರದ' ಆದಯ್ಯ ಇವರಿಬ್ಬರೂ ಒಂದೇ ಎಂಬ ಅಭಿಪ್ರಾಯವನ್ನು ನಿವೇದಿಸಿ, ಆದಯ್ಯನ ಧರ್ಮವನ್ನು ಕುರಿತು "ಆದಯ್ಯನು ಆರಂಭದಲ್ಲಿ ಶೈವನಾಗಿದ್ದು ಮುಂದೆ ವೀರಶೈವದ ಪ್ರಭಾವಕ್ಕೆ ಒಳಗಾದನೆಂದು ತಿಳಿಯಲು ಅವಕಾಶವಿದೆ" ಎಂದು ತಿಳಿಸುತ್ತ, "ಶುದ್ಧ ಶೈವದಿಂದ ವೀರಶೈವದಲ್ಲಿ ಈತನು ಸಹಜವಾಗಿಯೇ ಮುನ್ನಡಿಯಿಟ್ಟಿರುವಂತೆ ತೋರುವುದು; ಆದಯ್ಯನು ಬಸವಾದಿ ಪ್ರಮಥರ ವೀರಶೈವದ ಕ್ರಾಂತಿ ಕಾಲದಲ್ಲಿ ಜೀವಿಸಿದ್ದು ಅವರ ಪ್ರಭಾವಕ್ಕೆ ಒಳಗಾಗಿದ್ದನೆಂದು ಕಂಡುಬರುತ್ತದೆ; ಕಾರಣ ಆದಯ್ಯನು ಕ್ರಿ.ಶ. 1167 ರವರೆಗೆ ಜೀವಿಸಿರಬೇಕಾಗುತ್ತದೆ; ಆ ಹೊತ್ತಿಗೆ ಆತನ ವಯಸ್ಸು 87 ಆಗುತ್ತದೆ; ಇದು ತೀರ ಸ್ವಾಭಾವಿಕ...[2] ಎಂದು ಆದಯ್ಯನು ಜೀವಿಸಿದ ನಿಡಿಬಾಳಿನ ವಿವರವನ್ನು ಇತ್ತಿದ್ದಾರೆ. "ಅವನು ತನ್ನ ವಚನಗಳನ್ನು ಶಿವಶರಣರ ಕಾಲದ ತರುವಾಯವೇ ಬರೆದಿರಬೇಕೆಂದು ಊಹಿಸಬಹುದಾಗಿದೆ" ಎಂಬ ಅಭಿಪ್ರಾಯವೂ ಇದೆ.[3] ಆದಯ್ಯನ ಬಗೆಗೆ ಬರೆಯುತ್ತಾ ಶ್ರೀ ವೀ. ರು. ಕೊಪ್ಪಳ ಅವರು "ಆದಯ್ಯನು, ಸತ್ಯ, ನ್ಯಾಯ ನಿಷ್ಠುರಗಳನ್ನು ಎದುರಿಗಿಟ್ಟುಕೊಂಡು ಸಾಗಿದವನು; ಅಸತ್ಯ ಅನ್ಯಾಯಗಳ ವಿರುದ್ಧ ವೀರನಾಗಿ ಹೋರಾಡಿದವನು. ಸತ್ಯದ ನೆಲೆ ಬೆಲೆಗಳನ್ನು ಕಾಣಬಯಸುವ ಕಲಿಗೆ ಯಾವ ಗುಣಗಳು ಮೈಯುಂಡಿರಬೇಕಾಗುವುದೆಂಬುದನ್ನು ಅವನು ಬಹು ರಮ್ಯವಾಗಿ ಮನನಂಬುವಂತೆ ತಿಳಿಸಿದ್ದಾನೆ. ಆದಯ್ಯನು ಶೈವವು ವೀರಶೈವದಲ್ಲಿ ಮಾರ್ಪಡುವ ಸಂಧಿಕಾಲದಲ್ಲಿದ್ದವನು. ಆದ್ದರಿಂದ ಅವನ ವಚನಗಳಲ್ಲಿ ಶೈವ–ವೀರಶೈವಗಳ ಬಹು ಮನೋಹರವಾದ ವಿವರಣೆಯನ್ನು ಕಾಣುತ್ತೇವೆ". "ಆದಯ್ಯನು ಕಾವ್ಯಗಳಲ್ಲಿ ಪರವಸ್ತುವಿನ ಅಸ್ತಿತ್ವವನ್ನು ಪ್ರಸ್ಥಾಪಿಸುವ ಕಟುತರ ನಿಷ್ಠೆಯುಳ್ಳ ಕಲಿಯಾಗಿ ಕಾಣುತ್ತಿದ್ದರೆ ಅವನ ವಚನಗಳಲ್ಲಿ ಅವನು ಮಹಾನುಭಾವಿಯಾಗಿ, ಶ್ರೇಷ್ಠವಾದ ಪಂಡಿತನಾಗಿ ಕಂಗೊಳಿಸುತ್ತಾನೆ. ಇಂತೀ ಬಗೆಯಾಗಿ ಧರ್ಮನಿಷ್ಠೆ ಜಾಗೃತಿಗಳ ಪ್ರಸಾರಕನಾಗಿ, ಅಸತ್ಯ ಅನ್ಯಾಯಗಳ ಪ್ರತಿಭಟನೆಯ ಕಲಿಯಾಗಿ, ಅಧ್ಯಾತ್ಮಜೀವಿಯಾಗಿ, ಅನುಭವಸಂಪನ್ನನಾಗಿ, ಮೇಧಾವಿಯಾಗಿ, ವಿದ್ವಾಂಸನಾಗಿ ಕಂಗೊಳಿಸುತ್ತಾನೆ. ಅವನ ಚರಿತ್ರೆ ರೋಮಾಂಚಕವಾಗಿದ್ದಂತೆ ಸ್ಫೂರ್ತಿದಾಯಕವೂ ಆಗಿದೆ...[4] ಎಂದು ಆಡಿದ ಮಾತುಗಳು ಗಮನಾರ್ಹವೂ, ವಂದನಾರ್ಹವೂ ಆಗಿವೆ.

ರಾಘವಾಂಕ ಕವಿಯು ತನ್ನ ಈ ಕಾವ್ಯವನ್ನು 'ಸೋಮನಾಥ ಚಾರಿತ್ರ.ವೆಂದೇ ಕರೆದಿದ್ದಾನೆ[5] : ಆದರೆ ಕಾವ್ಯದಲ್ಲಿ ಉಕ್ತವಾಗಿರುವುದು ಆದಯ್ಯನ ಚರಿತ್ರೆ. ಇಲ್ಲಿ ಆದಯ್ಯನೆಂದರೆ ಸೋಮನಾಥ, ಸೋಮನಾಥನೆಂದರೆ ಆದಯ್ಯನೆಂಬ ಅಭೇದ ಭಾವನೆ ಕವಿಗೆ ಇದ್ದಂತಿದೆ; ಇಲ್ಲವೆ ಆದಯ್ಯನ ಮುಖಾಂತರ ಸೋಮನಾಥನ

ಮಹಿಮೆಯನ್ನು ಬಣ್ಣಿಸುವುದೇ ಕವಿಯ ಕಾವ್ಯದ ಉದ್ದೇಶವಾಗಿದ್ದರೆ ಆ ಉದ್ದೇಶವೂ ಫಲಿಸಿದೆಯೆಂದು ಹೇಳಬಹುದು.

2

ರಾಘವಾಂಕ ಕವಿಯ ಈ ಕಾವ್ಯಕ್ಕೆ ಹರಿಹರ ಮಹಾಕವಿಯ 'ಆದಯ್ಯನ ರಗಳೆ'ಯೇ ಆಕರವೆಂದು ಕಂಡುಬರುತ್ತಿದೆ. ಒಬ್ಬನೇ ವ್ಯಕ್ತಿಯ ಬಗೆಗೆ ಬರೆದ ಇಬ್ಬರ ಈ ಕಾವ್ಯಗಳಲ್ಲಿ ಸೂಕ್ಷ್ಮ ಅಂಶಗಳಲ್ಲಿ ವ್ಯತ್ಯಾಸವಿದ್ದರೂ ಸ್ಥೂಲವಾದ ಕಥಾವಸ್ತು, ಉದ್ದೇಶಗಳಲ್ಲಿ ವ್ಯತ್ಯಾಸಗಳಿದ್ದಂತೆ ಕಂಡುಬರುವುದಿಲ್ಲ. ಈ ಇಬ್ಬರು ಕವಿಗಳು ಆದಯ್ಯನನ್ನು ಕಂಡುಕೊಂಡ ರೀತಿಯನ್ನು ಅರಿತುಕೊಳ್ಳಲು ಸಂಕ್ಷಿಪ್ತವಾಗಿ ಹರಿಹರ ಕವಿಯ ಆದಯ್ಯನ ಚಿತ್ರವನ್ನು ಇಲ್ಲಿ ನಿರೂಪಿಸಬಹುದು.

ಹರಿಹರ ಕವಿಯು ಆದಯ್ಯನನ್ನು 'ಉರ್ವಿಗೆ ಗುರು ಆದಯ್ಯ'; 'ಅರುಹ ಕುಂಭಸ್ಥಳ ನಿರ್ಭೇದ್ಯಯ್ಯ'; 'ಶಿವನನುಗ'; 'ಲಿಂಗದೊಳಗೆ ಶಿವನಿರವಂ ಕಂಡವ'; 'ಸೋಮಯ್ಯನೆ ತನಗೆ ಗುರುವೆಂದು ಅರಿದವ'; 'ಶಂಕರನಾದ ಅಯ್ಯ'; 'ದುರಿತಕುಳಂಗಳ ನೆರೆವೊಯ್ದಯ್ಯ'; 'ಹಿಮ್ಮೆಟ್ಟದ ಕಲಿಭಲಿಸೌಮ್ಯಭಾಷಾಯುಕ್ತ'; 'ಸುಕುಮಾರ ಶಿರೋಮಣಿ'; 'ಲಿಂಗದ ಮಹಿಮಾಸಿಧಿ' 'ವಿಭೂತಿಯ ವೀರ'; 'ನಿತ್ಯಸಿಧಿ'; 'ಜೈನಕುಲಕುಮುದ ಮಾರ್ತಾಂಡ'; 'ಶಿವನಂ ಕಂಡವ'; 'ನಿಷ್ಠೆಯ ಸಿಧಿ'; 'ಶುಭಚರಿತ'—ಎಂದು ಮೊದಲಾಗಿ ಬಣ್ಣಿಸಿರುವುದಲ್ಲದೆ ಕವಿಯು, ಆದಯ್ಯನು ಸುರಕಾಮಿನಿಯನ್ನು ಕೈಲಾಸದಲ್ಲಿ ಮೋಹಿಸಿದ ಪರಿಣಾಮವಾಗಿ "ಧರೆಯೊಳು ಜನಿಸಿ ಕಾಮನನೇಳಿಪ ಸುಖಮಂ ಧರಿಸಿ ಬರ್ಪುದು" ಎಂಬ ಶಿವನ ಕೃಪಾಕಟಾಕ್ಷದ ಆಜ್ಞೆಯಿಂದ ಹುಟ್ಟಿದ 'ಅನಾದಿಯೆನಿಪ್ಪ ಗಣೇಶ' ನೆಂದು ತಿಳಿಸಿದ್ದಾನೆ. ಅವನು ಶಿವಭಕ್ತರ ಉದರದಲ್ಲಿ ಜನಿಸಿ, ಸಂಸಾರದ ಸವಿಗಾಣುತ ಬೆಳೆದು, ಗುರುಕರುಣವಾಗಿ, ತಂದೆಯಿಂದ ಗಣಿತ, ಲೆಕ್ಕ ಮೊದಲಾದ ಮನೆತನದ ವ್ಯವಹಾರ ಕುಶಲತೆಗಳನ್ನು ಅರಿತು ಬೆಳೆದು ದೊಡ್ಡವನಾಗುತ್ತಾನೆ. ತಂದೆ ಇನ್ನೂ ಆತನಿಗೆ ಲಗ್ನ ಮಾಡಿರಲಿಲ್ಲ. ತಂದೆಯು ಮಗನನ್ನು ಕರೆದು ವ್ಯಾಪಾರಕ್ಕೆ ಭಾಂಡಗಳನ್ನು ಕೊಂಡುಕೊಟ್ಟು 'ಪುಲಿಗೆರೆ' 'ಅಣಿಗೆರೆ'ಯಲ್ಲಿ ಸಂಚರಿಸಲು ತಿಳಿಸಿ ಯಾವಾಗಲೂ ಲಾಭವಾಗುವಂತೆ ವ್ಯವಹಾರ ಮಾಡಲು ತಿಳಿಸುತ್ತಾನೆ. ಅದಕ್ಕೆ ಆದಯ್ಯನು ತಂದೆಗೆ:

"ಮೊದಲೀಶನ ಸದ್ಭಕ್ತಿಯೆ ಲಾಭಂ:
ತದನಂತರವಿನ್ನುಂಟೇ ಲಾಭಂ?"

ಎಂದು ತಾನು ಶಿವಭಕ್ತಿಯ ಲಾಭಕ್ಕೆ ಹೆಚ್ಚಿಗೆ ಮಹತ್ವ ಕೊಟ್ಟುದನ್ನು ತಿಳಿಸಿ, ತಂದೆಯನ್ನು ಬೀಳ್ಕೊಂಡು ಪುಲಿಗೆರೆಗೆ ಬಂದು, ಅಲ್ಲಿಯ 'ಸುರಹೊನ್ನೆ ಬಸದಿಯ

ಪೂಜಾರಿ' ಪಾರ್ಶ್ವಪಂಡಿತನ ಮಗಳಾದ ಪದ್ಮಾವತಿಯ ಸೌಂದರ್ಯವನ್ನು, ಪುರವೀಥಿ ಪರೀಕ್ಷಣ ಕಾಲದಲ್ಲಿ ಕಂಡೊಡನೆ ಈರ್ವರೂ ಒಬ್ಬರೊಬ್ಬರನ್ನು ಮೋಹಿಸಿ, ಸೋಮನಾಥನ ಸ್ಮರಣೆಯಿಂದ "ಸರ್ವೇಂದ್ರಿಯ ಸಮಸುಖಿ ಸಾರ್ವಭೌಮರಾಗಿ", ತಾವಿಬ್ಬರೂ ಒಬ್ಬರಾದಂತೆ ಎರಡರಿಯದ ಅಭೇದ ಭಾವದಿಂದ ಕೆಲವು ವರುಷಗಳಿಯುತ್ತಾರೆ; ಒಂದು ದಿವಸ ಅವರು ಜಲಕ್ರೀಡೆಗೆ ಹೋದಾಗ 'ಓರ್ವ ಶಿವಭಕ್ತ ತಪೋಧನಮೂರ್ತಿ'ಗಳನ್ನು ಕಂಡು. ಅವರನ್ನು ಊಟಕ್ಕೆ ಬರಹೇಳುತ್ತಾರೆ. ಪದ್ಮಾವತಿಯು ಆ **ಗೊರವರಿಗೆ** ಮಾಡಿದ ಆಹಾರ ದ್ರವ್ಯಗಳನ್ನು ಅಂದೇ ಪಾರ್ಶ್ವಪಂಡಿತನು ತಾನು ಅಂದೇ ಆಮಂತ್ರಿಸಿದಜೈನಮುನಿಯರಿಗೆ.ಒತ್ತಾಯದಿಂದ ಪದ್ಮಾವತಿಯಿಂದ ತೆಗೆದುಕೊಂಡು ನೀಡಲು, ಆದಯ್ಯನು ಗೊರವರಿಗೆ ಫಲಾದಿಗಳನ್ನಿತ್ತು ತಣಿಸಿ ಕಳಿಸಿ, ತನಗಾದ ಅಪಮಾನಕ್ಕೆ ಊಟ ಮಾಡದಿರುತ್ತಾನೆ. ಆಗ ಮಾವನಾದ ಪಾರ್ಶ್ವಪಂಡಿತನು ಆದಯ್ಯನಿಗೆ "ತಾನರ್ಚಿಪ ಸೋಮನಾಥನಂ ಸುರಹೊನ್ನೆಯ ಬಸದಿಗೆ ತಂದಡಲ್ಲದೆ ಉಂಬನಲ್ಲ" ಎಂದು ಆಡಿದ ಕಟಕಿಗೆ, ಆದಯ್ಯನು ಮುನಿದು, "ಜಿನನಂ ಇಬ್ಭಾಗಂ ಮಾಡಿ, ಸೌರಾಷ್ಟ್ರಪತಿ ಸೋಮನಾಥನಂ ಬಿಜಯಂಗೈದಲ್ಲದೆ ಊಟವಿಲ್ಲೆಂದು" ಪ್ರತಿಜ್ಞೆ ಮಾಡಿ ಮೂವತ್ತು ದಿನಗಳಲ್ಲಿ ಸೋಮನಾಥನನ್ನು ಸುರಹೊನ್ನೆ ಬಸದಿಗೆ ತಂದು ಪ್ರಸ್ಥಾಪಿಸುತ್ತಾನೆ. ಹೀಗೆ ಮಾಡುವಾಗ ಒಂದು ಸಹಸ್ರ ಜೈನರನ್ನು ಯುದ್ಧದಲ್ಲಿ ಕೊಲ್ಲುತ್ತಾನೆ. ಹೀಗೆ ಹಲವಾರು ಜೈನರನ್ನು ಶಿವಭಕ್ತರನ್ನಾಗಿಸಿ ಪದ್ಮಾವತಿ ಸಹಿತ ಕೈಲಾಸಕ್ಕೆ ಹೋಗುತ್ತಾನೆ. ಇಲ್ಲಿ ಹರಿಹರ ಕವಿಯು ಆದಯ್ಯನ ಲೌಕಿಕ ಜೀವನ, ಭಕ್ತಿಯ ಜೀವನ, ಶಿವಭಕ್ತಿಗೆ ಹೋರಾಡಿದ ಛಲ, ಪವಾಡ ಹಾಗೂ ಕಲಿತನದ ಚಿತ್ರವನ್ನು ಮನಂಬುಗುವಂತೆ ಚಿತ್ರಿಸಿದ್ದಾನೆ.[6] ಇಲ್ಲಿ ಕವಿಯು ಆದಯ್ಯನು ಬಸವೇಶ್ವರನನ್ನು ಕಂಡುದಾಗಲೀ ಅವನು ವೀರಶೈವ ಧರ್ಮವನ್ನು ಅನುಸರಿಸಿದ್ದನೆಂದು ಸ್ಪಷ್ಟವಾಗಿ ಹೇಳಿದುದು ಕಂಡುಬರುವುದಿಲ್ಲ. ಆದರೆ ಅಲ್ಲಿ ಆದಯ್ಯನ ಉಗ್ರವಾದ ಸಮಯನಿಷ್ಠೆ, ಶಿವಭಕ್ತಿಯ ಪ್ರಸಾರ ಮೊದಲಾದವುಗಳ ಬಗೆಗೆ ಮಾತ್ರ ಉಲ್ಲೇಖವಾಗಿದೆ. ಅದೇ ರೀತಿ ಆದಯ್ಯನು ಪುಲಿಗೆರೆಗೆ ಬರುವ ಪೂರ್ವದಲ್ಲಿ ಲಗ್ನವಾಗಿದ್ದನೆಂಬ ಪ್ರಸ್ತಾಪವೂ ಇಲ್ಲ. ಇಲ್ಲಿ ಆದಯ್ಯನು ಬಸವಾದಿ ಶಿವಶರಣರ ಪ್ರಭಾವಕ್ಕೆ ಒಳಗಾಗಿ ವೀರಶೈವಕ್ಕೆ ಧರ್ಮಾಂತರ ಹೊಂದಿದ ಘಟನೆಯು ಕವಿಗೆ ತಿಳಿದಿರಲಿಲ್ಲವೆ? ಇಲ್ಲವೇ ತಿಳಿದರೂ ಆ ಘಟನೆಯು ಕವಿಯ ದೃಷ್ಟಿಯಲ್ಲಿ ಅಷ್ಟೊಂದು ಮಹತ್ವದ್ದೆಂದೆನಿಸಲಿಲ್ಲವೇ ? ಈ ಪ್ರಶ್ನೆಯನ್ನು ವಿಚಾರಿಸುವುದು ಈ ಲೇಖನದ ಮುಖ್ಯ ಗುರಿಯಾಗಿದೆ. ವಚನಕಾರ ಆದಯ್ಯನೂ ಹರಿಹರ ರಾಘವಾಂಕರ ಕಾವ್ಯಗಳ ಕಥಾನಾಯಕ ಆದಯ್ಯನೂ ಒಂದೇ ಎಂಬ ವಿಷಯದಲ್ಲಿ ಸಂದೇಹವಿಲ್ಲ. ವಚನಕಾರ ಆದಯ್ಯನು ಶುದ್ಧಶೈವ–ವೀರಶೈವಗಳ ಸಾಮ್ಯ ವೈಷಮ್ಯವನ್ನು ತಿಳಿಸುತ್ತಾ ವೀರಶೈವದ ಹಿರಿಮೆಯನ್ನು ವಚನಗಳಲ್ಲಿ ಕೊಂಡಾಡಿ

ದ್ದಾನೆ.[7] ನಮಗೆ ಇಂದು ಅತಿ ಮಹತ್ವದ ವಿಷಯವಾದ ಈ ಧರ್ಮಾಂತರದ ಘಟನೆಯನ್ನು ಕವಿಗಳು ಏಕೆ ತಿಳಿಸಿಲ್ಲ? ಕಾರಣಗಳನ್ನು ಹೀಗೆ ಊಹಿಸಬಹುದು. 1. ಆದಯ್ಯನು ಶೈವದಿಂದ ವೀರಶೈವಕ್ಕೆ ಧರ್ಮಾಂತರ ಹೊಂದಿದ ಘಟನೆಯು ಆದಯ್ಯನ ವೈಯಕ್ತಿಕ ಸಾಧನೆಯ ದೃಷ್ಟಿಯಿಂದ ಮಹತ್ವದ್ದೆನಿಸಿದರೂ ಸಾಮಾಜಿಕ ತಿಳುವಳಿಕೆಯ ದೃಷ್ಟಿಯಿಂದ ಮಹತ್ವದ್ದೆನಿಸಿರಲಾರದು ಎಂದು ಕವಿಗಳ ಭಾವನೆ ಇರಬೇಕು. ಈ ಕವಿಯು ಆದಯ್ಯನ ಸಾಮಾಜಿಕ ಕಾರ್ಯಗಳ ಕಡೆಗೆ ವಿಶೇಷ ಗಮನವಿತ್ತಿದ್ದಾನೆ. 2. ಕವಿಯು ಈ ಕಾವ್ಯವನ್ನು ಬರೆಯುವಾಗ ತನ್ನ ವೈಯಕ್ತಿಕ ಭಾವನೆಗಳನ್ನು ತನ್ನ ಕಥಾ ನಾಯಕನಿಗೂ ಆರೋಪಿಸುತ್ತಾನೆ. ಹೀಗಾಗಿ ಹರಿಹರ ರಾಘವಾಂಕರು ತಮ್ಮ ಗುಣಗಳನ್ನು ತಮ್ಮ ಕಥಾನಾಯಕರಿಗೂ ಆರೋಪಿಸುತ್ತಾರೆ. ಆದುದರಿಂದ ಹರಿಹರನ 'ಪುಷ್ಪರಗಳೆ' ಮತ್ತು 'ಬಸವರಾಜದೇವರ ರಗಳೆ'ಯಲ್ಲಿ ಬಸವಣ್ಣನು ಕೂಡಲಸಂಗಮೇಶನ ಪೂಜೆ ಮಾಡಿದ ಸನ್ನಿವೇಶ ವರ್ಣನೆ ಒಂದೇ ತೆರನಾಗಿದೆ. ರಾಘವಾಂಕನಂತೂ ತನ್ನನ್ನು :

> 'ಮನ ವಚನ ಕಾಯದೊಳಗೊಮ್ಮೆಯುಂ ಭಾಳಲೋಚನನಲ್ಲದೆ ಹೊಗಳದ' ಉದ್ಭಟಯ್ಯಾದಿಗಳ ಪದತಳಕ್ಕೆ ಬಲಗೊಂಡು ಕಾವ್ಯಾರಂಭ ಮಾಡುವುದಾಗಿ[8]ಯೂ

> 'ಎನಿತು ಸಿರಿ ಸಾರ್ವಡಂ ಮಾಣ್ಬಡಂ ಸಿತ್ಯತ್ವ
> ವನುವಪ್ಪಡಂ ಸಾವಡಂ ಮೆಚ್ಚಿ ಹಂಪೆಯರ
> ಸನ ಪೊಗಳ್ವ ನಾಲಗೆಯೊಳನ್ಯದೈವವ ಭವಿಗಳಂ ಕೀರ್ತಿಸಿದೆನಾದೊಡೆ
> ಮನಸಿಜಾರಿಯ ಭಕ್ತನಲ್ಲ...'

ಎಂದು ಕರೆದುಕೊಂಡಿದ್ದಾನೆ. ಹರಿಹರ ರಾಘವಾಂಕರು ಪ್ರಥಮತಃ ಉಗ್ರ ಶೈವ ಭಕ್ತರು. ಅವರು ಬಸವಾದಿ ಶಿವಶರಣರ ಶೈವ ಭಕ್ತಿಯನ್ನೂ ಅತಿಶಯವಾಗಿ ಮೆಚ್ಚಿಕೊಂಡರು. 3. ಹರಿಹರ ರಾಘವಾಂಕರು ಆದಯ್ಯ, ಬಸವೇಶ್ವರಾದಿ ಶಿವಶರಣರನ್ನು ಕುರಿತು ಕಾವ್ಯ ಬರೆದರೇ ವಿನಾ ಅವರ ಚರಿತ್ರೆಯನ್ನಲ್ಲ. ಅವರು ಬರೆದ ಶಿವಶರಣರ ಚರಿತ್ರೆಗಳು ಪ್ರಥಮತಃ ಕಾವ್ಯ; ನಂತರ ಚರಿತ್ರೆ. ಹೀಗಾಗಿ ಕೆಲವು ಅಂಶಗಳು ಅವರ ಕಾವ್ಯಗಳಲ್ಲಿ ಕಂಡುಬಾರದಿದ್ದರೆ ನಾವು ಅಚ್ಚರಿಪಡಬೇಕಾಗಿಲ್ಲ. ಈ ಹಿನ್ನೆಲೆಯಲ್ಲಿ ರಾಘವಾಂಕನು ಚಿತ್ರಿಸಿದ ಆದಯ್ಯನ ವ್ಯಕ್ತಿತ್ವವನ್ನು ಅರಿತುಕೊಂಡು, ಅವನು ರಾಘವಾಂಕನ ಅಭಿಪ್ರಾಯದಲ್ಲಿ ಶೈವನೇ ವೀರಶೈವನೇ ಎಂದು ತಿಳಿದು, ಅವನ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಕವಿಯು ತಿಳಿಸಬೇಕಾದ ಅಂಶಗಳು ಯಾವವು ಎಂಬುದನ್ನು ಇಲ್ಲಿ ಅವಲೋಕಿಸೋಣ.

3

‘ಸೋಮನಾಥ ಚಾರಿತ್ರ’ದಲ್ಲಿ ಕವಿಯು ತನ್ನ ಕಾಲದ ಜೀವನದ ಮೌಲ್ಯಗಳ ಹಿನ್ನೆಲೆಯಲ್ಲಿ ಆದಯ್ಯನನ್ನು ಚಿತ್ರಿಸಿದ್ದಾನೆ. ಆ ಮೌಲ್ಯಗಳಾವವೆಂದೊಡೆ (1) ಭವಿಭಕ್ತರೆಂದಿಲ್ಲ ಕೈಯಾನದದು (2) ತನ್ನಯುವತಿಗಲ್ಲಿಗೆ ಮನದೊಳೆಳಸದುದು ; (3) ಕಾಯದಿಚ್ಛೆಯುವಿಡಿಯದುದು (4) ಅನ್ಯನಿಂದೆಯನಾಡದಿಹುದು, ಪರದೈವಮಂ ಬಗೆಯದಿಹುದು ; (5) ಅರಿಷಡ್ವರ್ಗವನರಿಯದುದು ; (6) ಗುರುಭಕ್ತಿ, ನಿಷ್ಕಾಮಪರಿವಾಚಾರ, ನೀತಿ, ದಯೆ, ದಮೆ, ಶಾಂತಿ, ದಾಂತಿ ಚಾತುರ್ಯ, ಔದಾರ್ಯ, ಸತ್ಯ, ಏಕನಿಷ್ಠೆ, ಕಲಾಪ್ರೌಢಿಮೆ, ಸದ್ಗುಣ ಮೊದಲಾದವುಗಳನ್ನು ಬೆಳೆಸಿಕೊಳುವುದು, (7) ಪರಸತಿಯು ತಾಯ್ ಎಂದು ಅರಿವುದು ; ಭೂತಹಿತ, ಕರುಣ, ವಿದ್ಯಾ, ದಾನ, ಧರ್ಮತತ್ಪರತೆ, ಸದಾಚಾರ, ಅಭಿಮಾನ, ಶೌರ್ಯ, ಸೌಂದರ್ಯಸ್ವೀಕಾರ, ಭಕ್ತಿ ಮೊದಲಾದ ಗುಣಗಳನ್ನುಳಪಡಿಸಿಕೊಳ್ಳುವುದು ; (8) ಪುರುಷಾರ್ಥ ಸಾಧನೆಗೆ, ಖ್ಯಾತಿಗೆ, ಸಮಯಾಭಿಮಾನಕ್ಕೆ, ದೈವಸ್ಥಾಪನೆಗೆ ಛಲದಿಂದ ಹೋರಾಡುವುದು, (9) ಸದ್ಗುಣ ಸ್ವಾತಂತ್ರ್ಯವೃತ್ತಿ, ನನ್ನಿ, ಛಲಕ್ಕೆ ಹೋರಾಡುವುದು (10) ಪಾತಿವ್ರತ್ಯ, ದೇಹವನ್ನು ಸಾರ್ಥಕಪಡಿಸಿಕೊಳ್ಳುವುದು, ಕೊಟ್ಟ ಮಾತಿಂಗೆ ತಪ್ಪದಿಹುದು ಇತ್ಯಾದಿ ಎಂದು ಕವಿಯು ಸೋಮನಾಥ ಚಾರಿತ್ರದಲ್ಲಿ ತಿಳಿಸಿದ್ದಾನೆ[10].

4

ಪುಲಿಗೆರೆ ನಗರದಲ್ಲಿ ಜನರು ನೀತಿ, ಆಚಾರ, ಭಕ್ತಿಯನ್ನು ಬಿಟ್ಟು ನಡೆಯುತ್ತಿದ್ದರೆಂದೂ, ಕೇವಲ ಜೈನರೇ ವಾಸವಾಗಿದ್ದುದರಿಂದ ಶಿವಭಕ್ತಿಗೆ ಸೊನ್ನೆಯಾಗಿದೆಯೆಂದೂ, ನಾರದನು ಶಿವನಿಗೆ ವರದಿ ಮಾಡಿದುದರಿಂದ ಶಿವಭಕ್ತಿಪ್ರಸಾರಕ್ಕೆಂದು ಅಲ್ಲಿಗೆ ‘ಆದಿಗಣನಾಥನನ್ನು ಕರೆದು ‘ಹೋಗೆಲವೋ’ ಎಂದು ಆಜ್ಞೆ ಮಾಡುತ್ತಾನೆ. ಕಲಿಕಾಲದ ಉಗ್ರತ್ವವು ಅವನನ್ನು ತಾಗದೆಂದು ಹೇಳಿ, ‘ನಾನೊಲವಿಂ ಕಳಿಸುತಿರೆ ಚಿಂತೆ ನಿನಗೇಕೆ ? ಜಂಗಮಾಕಾರದಿಂ ನಿನ್ನಿಮಿತ್ತಂ ಬಂದು ಮಾತಾಡುವೆಂ’ ಎಂದು ಹೇಳಿ ಆದಯ್ಯನ ಕಾರ್ಯವನ್ನು ಯಶಸ್ವಿಯನ್ನಾಗಿ ಮಾಡುವುದಾಗಿ ಶಿವನು ಅಭಯ ಮೀಯುತ್ತಾನೆ. ಹೀಗೆ ಆರಂಭದಲ್ಲಿ ಆದಯ್ಯನು **ಶಿವಭಕ್ತಿ ಪ್ರಸಾರಕ್ಕೆಂದೇ** ಶಿವನಿಂದ ಕಳುಹಿಸಲ್ಪಟ್ಟ ‘ಆದಿಗಣನಾಥ’ನೆಂಬ ಭಾವನೆಯನ್ನು ಕವಿಯು ಇಲ್ಲಿ ನಿವೇದಿಸಿದ್ದಾನೆ[11]. ವೇದ, ಶಾಸ್ತ್ರ, ಪುರಾಣ, ಸಿರಿ ಸಂಪದ ಭಕ್ತಿ ಮತ್ತು ಮುಕ್ತಿಗೆ ತವರೆನಿಸಿಪ್ಪ, ಪುಣ್ಯಭೂಮಿಯೆನಿಪ್ಪ ಸೌರಾಷ್ಟ್ರದೇಶದಲ್ಲಿ ‘ಪಾರದತ್ತ’ ಮತ್ತು ‘ಪುಣ್ಯವತಿ’ಎಂಬ ಶ್ರೀಮಂತ ಸೆಟ್ಟರೂ (ವ್ಯಾಪಾರಿಗಳು) ಶಿವಭಕ್ತಿಸಂಪನ್ನರೂ ಆದವರ ಹೊಟ್ಟೆಯಲ್ಲಿ ಸುಕುಮಾರಶೇಖರನೂ. ಕುಸುಮಕೋದಂಡನೂ,

ಹುಟ್ಟಿದಾಗಲೇ ಶಿವದರ್ಶನ, ಶಿವಪ್ರಸಾದಕ್ಕಲ್ಲದೆ ಕಣ್, ಹಾಗೂ ಬಾಯ್ದೆರೆಯದ ಶಿಶುವೂ ಆಗಿ ಆದಯ್ಯನು ಜನಿಸುತ್ತಾನೆ. ಗುರುವಿನ (ಶಿವನ) ಆಜ್ಞೆಯಿಂದ ಶಿಶುವಿಗೆ ಲಿಂಗಪ್ರಸಾದವನ್ನಿತ್ತು, ಭಸಿತವನ್ನಿತ್ತು, 'ಆದಿಗಣನಾಥ'ನೆಂದು ಹೆಸರಿಡುತ್ತಾರೆ. ಸರ್ವಾಭರಣಸಮೇತನಾಗಿ ಆದಯ್ಯನು **ಕಲ್ಪಲತೆ**ಯಂತೆ, ಮುಗಿಲುಮುಸುಕದ ಚಂದ್ರಕಳೆಯಂತೆ, **ಹೊಗೆಮುಸುಕಿದ ಅಗ್ನಿಯಂತೆ. ಮಂಜು ಮುಸುಕಿದ ಗಗನಮಣಿ**ಯಂತೆ, ಜ್ಞಾನಮಯವಪ್ಪ ಬಾಲಕನು ಬಾಲಲೀಲೆಗಳನ್ನು ನಟಿಸುತ್ತಾ ಬೆಳೆಯುತ್ತಾನೆ. ಹನ್ನೆರಡು ವರ್ಷದೊಡನೆ ಯವ್ವನ ಪ್ರಾಪ್ತವಾಗುತ್ತದೆ. ಆಗ ತಂದೆ ತಾಯಿಗಳು 'ಆದಿಗಣನಾಥನಿಗೆ' ಸಮಗುಣ. ಸಮರೂಪು, ಸಮಶೀಲಯುತ ಕನ್ನೆಯನ್ನು ಲಗ್ನ ಮಾಡುತ್ತಾರೆ[12]. (1-92) ಮನೆಯೊಡೆತನವನ್ನೂ ಆದಯ್ಯನು ವಹಿಸಿಕೊಳ್ಳುತ್ತಾನೆ. ಕೆಲವು ದಿವಸಗಳ ನಂತರ ತಂದೆ ತಾಯ್ಗಳ ಅಪ್ಪಣೆ ಪಡೆದು **ತೆಂಕನಾಡಿಗೆ ವ್ಯಾಪಾರಕ್ಕೆಂದು** ಕೆಲವು ಪರಿವಾರದೊಡನೆ ಬಂದು, ಅನೇಕ ಊರುಗಳಲ್ಲಿ ವ್ಯಾಪಾರ ಮಾಡುತ್ತಾ ಕೊನೆಗೆ ಪುಲಿಗೆರೆಗೆ ಬರುತ್ತಾನೆ. ಆಗ ಅವನು ನಿರ್ಮಳಾಂಗ ಪ್ರತ್ಯಾರೂಢನೂ, ನಾತರುಣನೂ ಆಗಿರುತ್ತಾನೆ[13]. **ತಾನು ಹೋದಲ್ಲೆಲ್ಲ ಮರೆಯದೆ ಶಿವಪೂಜೆ ಮಾಡುತ್ತಾನೆ.** ಪುಲಿಗೆರೆಗೆ ಬಂದಾಗಲೂ ಪುರಹರನ, ಶಂಕರನ ಸುಖವನಿಟ್ಟ ಶಿವಪ್ರಸಾದ ಸಂತುಷ್ಟ ಹೃದಯನಾಗಿರುತ್ತಾನೆ. ಆದಯ್ಯನು ಮಹಾರಸಿಕ! ಒಂದು ರಾತ್ರಿ ಪುರಸೌಂದರ್ಯವನ್ನು ನೋಡಲು ತೋರಹಾರ, ಬಾಹುಪೂರ, ಮಾಣಿಕದ ಕರ್ಣಪೂರ, ಸೌರಭ್ಯ ಚಂದನೋದ್ವರ್ತನದಿಂದ ಅಲಂಕೃತನಾಗಿ, ಮನ್ಮಥನ ಆಯುಧದಂತಿರ್ದ ತನ್ನ ಮಿತ್ರರೊಡನೆ ಹೊರಟ ಆದಯ್ಯನು, ಪುಲಿಗೆರೆಯ ಸೂಳೆಗೇರಿಯಲ್ಲಿ ಹೋಗದೆ ಸೂಳೆಗೇರಿಯ ಸೊಬಗ ನೋಡುತ್ತ ಮುಂದೆ ಸಾಗುತ್ತಾನೆ[14]. ಬರಬರುತ್ತ ಸಖಿಯರ ನಡುವೆ **'ಕಾಮನ ಕೈಯ ಸರಳಿನಂತಿರ್ಪ. ಪದ್ಮಿನೀ ಜಾತಿಯ ಸ್ತ್ರೀ ಪದ್ಮಾವತಿ'**ಯು ಬಳಿಗೆ ಬಂದಾಗ ಆದಯ್ಯ ಮತ್ತು ಪದ್ಮಾವತಿಯರನ್ನು ಕಾಮನ ಬಾಣಗಳು ತಾಗಿದಾಗ, ಉಭಯರಲ್ಲಿ ಪ್ರಣಯ ತಲೆದೋರಿದಾಗ, ಅವರವರ ಗೆಳೆಯರು ಅವರನ್ನು ಸೆಜ್ಜೆವನೆಯಲ್ಲಿ ಕೂಡಿಸುತ್ತಾರೆ. ಇದುಗಳಿಗೆ, ಇದು ಜಾವ, ಇದು ಮಾಸ ಎಂಬುದನ್ನರಿಯದೆ ಪಂಚೇಂದ್ರಿಯದ ಮಹಾಸುಖವನ್ನು ಅನುಭವಿಸುತ್ತಾರೆ. ನಂತರ ಆದಯ್ಯನು ಅವಳ ಕುಲ, ಸಮಯಗಳನ್ನು ಕೇಳಿ, 'ಎಲೆವನೆ ನೀನಾರ ಮಗಳು ? ತಾಯ್ತಂದೆಗಳ ಹೆಸರಾವುದು ? ಅರ್ಚಿಸುವ ದೇವತೆಯಾವುದು : ಒಡಹುಟ್ಟಿದವರೆನಿಬರು ?' ಎಂದು ಮೊದಲಾಗಿ ಕೇಳುತ್ತಾನೆ[15]. ಪ್ರಣಯದ ಭರದಲ್ಲಿ ಸಾರಾಸಾರ ವಿವೇಚನೆಯ ಬುದ್ಧಿಯೇ ಮಂದವಾಗಿದೆ! ಈ ನವೀನ ತಾರುಣ್ಯ, ಪ್ರಣಯದ ಸನ್ನಿವೇಶದಲ್ಲಿ ತಾನು ಮದುವೆಯಾದವನೆಂಬುದನ್ನೇ ಮರೆಯುತ್ತಾನೆ! ಯವ್ವನವು ಏನನ್ನು ಮಾಡದು ? ಹರಹರ! ತನ್ನನ್ನೂ ಮರೆತ! ಮನೆಯನ್ನೂ ಮರೆತ! ಕಾಮಕೇಳಿಯಿಂದ ತೃಪ್ತಿಗೊಂಡನಂತರ ಮತ್ತೆ

ಭಕ್ತಿಯ ವಿಚಾರವು ತಲೆದೋರಿ, "ಎಲ್ಲಿಯವರೆಗೆ ಪರಸಮಯಿಯನ್ನು ಕೂಡಿ ದುರ್ವ್ಯಸನಿಯಾಗಿರುವೆನೋ ಅಲ್ಲಿಯವರೆಗೆ ತನಗೆ ಪರಮಭಕ್ತಿಯುಳ್ಳದು ; ಇದು ಪರವಾಕ್ಯ" ಎಂಬುದರ ಅರಿವು ಉಂಟಾಗುತ್ತಿದೆ. ಒಂದೆರಡು ದಿವಸಗಳಾದಮೇಲೆ ಊರಿಗೆ ಹೋಗುವುದಾಗಿ ಪದ್ಮಾವತಿಗೆ ತಿಳಿಸಿದಾಗ ಪದ್ಮಾವತಿಯು : "ಕೊಂದು ಹೋಗು ; ಅಲ್ಲದೊಡೆ ಕೊಂಡು ಹೋಗು ; ಇರಲಾರೆ" ಎಂದು ಉತ್ತರಿಸಿದುದಕ್ಕೆ **''ಮೃಡಭಕ್ತೆ''ಯಾಗೆಂದು** ತಿಳಿಸಿದಾಗ ಪದ್ಮಾವತಿಯು ಮರು ಮಾತನಾಡದೆ "ಹಸಾದ''ವೆನ್ನುತ್ತಾಳೆ. 'ಹೋಜೇಶ್ವರ' ದೇವಾಲಯದ ಆಚಾರ್ಯರಿಂದ ಅವಳಿಗೆ **ಶಿವದೀಕ್ಷೆ** ಕೊಡಿಸಿ ಅವಳನ್ನು ಶಿವಭಕ್ತಳನ್ನಾಗಿಸುತ್ತಾನೆ[16]. ಇದನ್ನರಿತ ಅವಳ ತಂದೆಯು ''ಜಿನಸಮಯವ ಕೊಂದು ಕುಲದಬೇರ್ಗೆ ಕುಡುಗೋಲಾದೆ" ಎಂದು ಬೈದು ನಾನಾ ಪರಿ ಅವಳಿಗೆ ಆಸೆ ಹಚ್ಚಿದರೂ ಪದ್ಮಾವತಿಯು 'ಸರ್ವಸ್ವವೆನಗೆನ್ನಿನಿಯನಲ್ಲದಿನ್ನಾರಿಲ್ಲ' ಎಂದು ನಿರ್ದಾಕ್ಷಿಣ್ಯವಾಗಿ ನುಡಿದುದಕ್ಕೆ ಮತ್ತೆ ಬೇರೆ ತನಗೆ ಮಕ್ಕಳಿಲ್ಲದುದರಿಂದ ಪಾರಿಸಶೆಟ್ಟಿ ಇರುಕಿನಲ್ಲಿ ಸಿಲುಕಿ, ಆದಯ್ಯನನ್ನು ಅಳಿಯನೆಂದೊಪ್ಪಿ ಮನೆಯಲ್ಲಿ ಮನೆಯ ಕೊಟ್ಟು ಇರಿಸಿಕೊಳ್ಳುತ್ತಾನೆ. ಆದಯ್ಯನು ಹೀಗೆ ಜೈನರಿಗೆ ಅಳಿಯನಾಗಿ, ಪದ್ಮಾವತಿಯನ್ನು ಲಿಂಗಭಕ್ತಳನ್ನಾಗಿ ಮಾಡಿಕೊಂಡು ಎಂಟು ತಿಂಗಳು ಸುಖವಾಗಿ ಅಲ್ಲಿ ಕಳೆಯುತ್ತಾನೆ.

ಒಂದು ದಿನ ಆದಯ್ಯನು ಜಲಕ್ರೀಡೆಗೆ ಹೋದಾಗ, ಜಲಕ್ರೀಡೆಯಾಡಿ, ತಾಂಬೂಲ ಸ್ವೀಕರಿಸಿ, ಕೊಳದ ತಡಿಯಲ್ಲಿ ಕುಳಿತಾಗ, ಐವರು ಮುಪ್ಪಿನ ಶಿವಭಕ್ತರು ಅಲ್ಲಿಗೆ ಬಂದಾಗ ಆದಯ್ಯನು, ಅವರನ್ನು ಕಂಡು, ಕುಳ್ಳಿರಿಸಿ ವಿಚಾರಿಸಿದಾಗ, ಐವರು 'ಸೇತುವಿಂ' (ರಾಮೇಶ್ವರ) ಹೊರಟು ದಾರಿಯಲ್ಲಿ ಅನ್ನ ನೀರು ಸಿಗದೆ, ಪುಲಿಗೆರೆಗೆ ಬಂದುದಾಗಿ ತಿಳಿಸುತ್ತಾರೆ ; ಪುಲಿಗೆರೆಯಲ್ಲಿಯೂ ಅವರಿಗೆ ನಿಂದೆಯ ಮಾತುಗಳೇ ದೊರೆತವೆಂದೂ ಅನ್ನ ನೀರು ದೊರೆಯಲಿಲ್ಲವೆಂದೂ ತಿಳಿಸಿ ನಿರಾಶೆಯಿಂದ ಅವನ ಬಳಿಗೆ ಬಂದುದಾಗಿ ತಿಳಿಸುತ್ತಾರೆ. ಶಿವಭಕ್ತರಿಗೆ ಈ ರೀತಿ ಅನ್ಯಾಯವಾಯಿತಲ್ಲಾ ಎಂಬುದೇ ಅವನ ಕಲಹಕ್ಕೆ, ಕೋಪಕ್ಕೆ ಬೀಜವಾಗಿ ಪರಿಣಮಿಸುತ್ತದೆ. ಮನೆಗೆ ಬಂದು ಹೆಂಡತಿಗೆ ಅಡಿಗೆ ಮಾಡಹೇಳಿದಾಗ ಅವಳು ತಯಾರಿಸಿದುದನ್ನು ಪಾರಿಸಶೆಟ್ಟಿ ಅದನ್ನು ಸವಣರ್ಗಿತ್ತುದು, ಅವನ ಕಲಹಕ್ಕೆ ಬೆಂಕಿ ಬಿದ್ದಂತಾಗಿ, ಹೆಂಡತಿಗೆ ಮುನಿದು, "ಪಾಪಿ ನಿಜವಾಸಮಂ ಬಿಟ್ಟು ಎಲ್ಲಿ ಹೋಗಿರ್ದೆ? ನೀಂ ಸತ್ತಿರ್ದ್ದೆಯೋ?" ಎಂದು ನಿಷ್ಠೂರವಾಗಿ ಬಯ್ದು, ಶೈವಮುನಿಗಳಿಗೆ ಅದ ಹಾನಿಗೆ ನೊಂದು, ಫಲಾದಿಗಳನ್ನಿತ್ತು ಸತ್ಕರಿಸಿ, ತನಗಾದ ಅಪಮಾನಕ್ಕೆ **"ಇನ್ನೇತರ ಊಟ ? ಇನ್ನೇತರ ಮೀಹ? ಇನ್ನೇಕೆ ಜೀವಿಸುವ ಕಕ್ಕುಲತೆ?"** ಎನ್ನುತ್ತಾನೆ. ಅದಕ್ಕೆ ಪಾರಿಸಪಂಡಿತನು 'ತನ್ನ ದೇವರನ್ನು ತಂದು ಸುರಹೊನ್ನೆ ಬಸದಿಯಲಿ ಸ್ಥಾಪಿಸಿ, ಜೈನಕುಲವ ಬನ್ನ

ಬಡಿಸದೆ ಉಣ್ಣಲಾರ' ಎಂದು ಆಡಿದ ಕಟಕಿ ಮಾತುಗಳೇ ಆದಯ್ಯನನ್ನು ಪಣ ತೊಡುವಂತೆ ಮಾಡುತ್ತವೆ.*

ತನ್ನ ಪ್ರತಿಜ್ಞೆಯಲ್ಲಿ : 1. ಹರನನ್ನು ತಂದು ಸ್ಥಾಪಿಸುವುದು ;
2. ಹರ ನಿಂದಕರನೊರಸುವುದು ;
3. ಹರಸಮಯವನುದ್ಧರಿಸುವುದು ;

ಅವನ ಮುಂದಿರ್ದ ಕಾರ್ಯಗಳಾದವು. **'ಹರನನ್ನು ತಾರದಿದ್ದರೆ ಹೀನ ನರಕಕ್ಕೆ ಹೋಗುವೆ';** ಎಂದು ಮಾವನೊಡನೆ ಮೂವತ್ತು ದಿನಗಳೊಳಗಾಗಿ "ಪುಲಿಗೆರೆಯ ಜಿನನೊಡಲನಿಬ್ಭಾಗಮಂ ಮಾಡುವೆಂ" ಎಂದು ಪ್ರತಿಜ್ಞೆಗೈಯುತ್ತಾನೆ. ಅದಕ್ಕಾಗಿ ಪುಲಿಗೆರೆಯಿಂದ ಸೌರಾಷ್ಟ್ರದ ಸೋಮನಾಥನವರೆಗೆ ಕಾಲ್ನಡಿಗೆಯಲ್ಲಿ ನಡೆದು, ಕ್ರೂರ ಮೃಗಗಳಿದ್ದ ಕಾನನದಲ್ಲಿ ನಡೆದು, ಶಬರರನ್ನು ಕಂಡು ಪ್ರಾಣಭಯವಿಲ್ಲದೆ ಮುಂದೆ ನಡೆಯುತ್ತಾನೆ.

5

ಆದಯ್ಯನು ಅತ್ಯಂತ ಘೋರವಾದ ಕಾನನದಲ್ಲಿ ಏಕಾಕಿಯಾಗಿ ಹಗಲಿರುಳೂ ನಡೆದು ಹೋಗುತ್ತಾನೆ. ಅಂಜಿಮರಳುವ ಹೇಡಿ ಅವನಲ್ಲ. ಶಿವನೇ ಆತನನ್ನು 'ಭಲಿ' ಎಂದೆನ್ನಬೇಕಾದರೆ ಅವನ ಛಲದ ಅರಿವು ನಮಗಾಗುತ್ತದೆ. ಆದಯ್ಯನ ಶಿವನಿಷ್ಠೆಯ ಪರೀಕ್ಷೆ ನಡೆಯುತ್ತಿದೆ. ಶಿವನು ಯತಿಯಾಗಿ ಒಂದು ತಪೋವನವನ್ನೇ ನಿರ್ಮಾಣ ಮಾಡುತ್ತಾನೆ. ಕೊಳ, ತಂಗಾಳಿ ಕಾಣಿಸುತ್ತಿವೆ. "ಈ ಮುನಿಯೇ ಮುನಿಯ ವೇಷದೀಶ್ವರನಾಗದಿರನೆಂದು" ಆದಯ್ಯನು ವಿಚಾರಿಸುತ್ತಾನೆ. ಅವರನ್ನು ಕಂಡಾಗ ಆದಯ್ಯನಿಗೆ ಶಿವನನ್ನು ಕಂಡಷ್ಟೇ ಸಂತಸವಾಗುತ್ತಿದೆ.

"ಇವರು ಶಿವನ ವಂಶಿಕರಾಗದಿರರು; ನೋಡುವೆನಿವರ ವಿವರವ" ಎಂದು ಮುನಿಗಳೊಡನೆ ಕುಳಿತ ಯತೀಶನನ್ನು ಕಂಡು ನಮಿಸುತ್ತಾನೆ. ನೀತಿ ಬಲಿದು, ಶಾಂತಿರೂಪಾಗಿ ಸದ್ಗುಣವ್ರಾತವೇ ಮುನಿಯಾಗಿ, ಮುಕ್ತಿಯೇ ಜಡೆಯಾಗಿ, ಭೂತದಯೆಯೇ ವಲ್ಕಲವಾಗಿ, ಪುಣ್ಯವೇ ಭಸಿತವಾಗಿ. ಶ್ರುತಿಯೇ ನುಡಿಯಾಗಿ, **ಸ್ವಾತಂತ್ರ್ಯವೃತ್ತಿಯೇ ಬೋಧೆಯಾಗಿ.** ಶಿವನೇ ಯತೀಶನಾದುದರಿಂದ"

---

* ಆದಯ್ಯನ ಗೃಹಸ್ಥ ಜೀವನವು ಅವನ ಭಕ್ತಿ, ಧಾರ್ಮಿಕ ಕಾರ್ಯ ಮತ್ತು ಮುಕ್ತಿಗೆ ಯಾವ ರೀತಿಯಿಂದಲೂ ಅಡ್ಡಿಯಾಗಿಲ್ಲವೆಂಬುದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬೇಕು. 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎಂಬುದು ಶರಣರ ಆದರ್ಶವೆಂಬುದನ್ನು ಆದಯ್ಯನ ಚರಿತ್ರೆಯೂ ಸಾರಿ ಹೇಳುತ್ತಿದೆ. ಈ ಕಥೆಯೂ ಶಿವಶರಣರ ತತ್ವಕ್ಕನುಗುಣವಾಗಿಯೇ ಇರುವುದನ್ನು ನಾವು ಮರೆಯುವಂತಿಲ್ಲ.

"ಆದಯ್ಯನು ಅವರನ್ನು ಶಿವನೆಂದೇ ಭಾವಿಸಿದ. "ಪರಾನಂದಮೂರ್ತಿ, ಶರಣು" ಎಂದನು. ಯತೀಶನು ಪ್ರತಿಯಾಗಿ "ನೀಗುರ್ಡಿ, ಆರಮಗ? ಆವದೇಶ? ಆವ ಕಾರಣ ಬಂದೇ?" ಎಂದಾಗ "ತೆಂಕಣನಾಡ ಪುಲಿಗೆರೆ, ಪರದರ ಮಗ, ದೇಶಾಂತ್ರ ವಶನಾಗಿ ಬಂದು ತಮ್ಮನ್ನು ಕಂಡೆ" ಎನ್ನುತ್ತಾನೆ. ಅದಕ್ಕೆ ಯತೀಶನು "ಈ ರೂಪ, ಈ ಸಂಪತ್ತು ಈ ಸೌಕುಮಾರ್ಯದವಗೇಕೆದೇಶಾಂತ್ರಿ? ಇದು ಹುಸಿ" ಎಂದಾಗ ಆದಯ್ಯನು "ಹುಸಿ ಇಲ್ಲ" ವೆಂದೆನ್ನಲು ಮುನೀಶನು ಅವನಿಗೆ ಉಣ್ಣಲು ಹೇಳುತ್ತಾನೆ. ಅದಕ್ಕೆ ಆದಯ್ಯನು :

"ಸೊಕ್ಕಿರ್ದ ಹುಲಿಗೆರೆಗೆ ಸೊಡ್ಡಳನಸೂಯಿದಲ್ಲದೆ ಇಕ್ಕೆನೆನ್ನೊಡಲೊಳಗೆ ಅನ್ನ ರಸವನು!" ಎಂದು ಮೂವತ್ತು ದಿವಸದೊಳಗಾಗಿ ಈ ಕಾರ್ಯಮಾಡುವುದಾಗಿ ಪ್ರತಿಜ್ಞೆಗೈದುದನ್ನು ತಿಳಿಸುತ್ತಾನೆ. ಅದಕ್ಕೆ ಯತೀಶನು "ಮೂವತ್ತು ದಿವಸ ಉಪವಾಸ, ಅಡವಿಯ ಮೃಗ, ಕ್ರೂರಜನರ ಭಯದಿಂದ ನೀನುಳಿಯುವುದೇ ಕಷ್ಟವಿರುವಾಗ ಕಾರ್ಯವೆಂತಾಗಬೇಕು? ಉಣ್ಣೇಳು" ಎಂದು ಅವನಿಗೆ ಭಯ ವುಂಟಾಗುವಂತೆ ಮರು ಮಾತನಾಡುತ್ತಾನೆ. ಅವರಿಬ್ಬರ ನಡುವಿನ ಈ ಸಂಭಾಷಣೆ ರಾಘವಾಂಕ ಕವಿಯ ತಾರ್ಕಿಕ ಬುದ್ಧಿಯನ್ನೂ ಸಂಭಾಷಣಾ ರಚನೆಯ ಜಾಣ್ಮೆಯನ್ನೂ ತೋರಿಸುವುದಲ್ಲದೆ ಒಳ್ಳೆಯ ಮನರಂಜಕವೂ ಆಗಿದೆ.

ಆದಯ್ಯ: "ಭವಾನಿಯರಸಂಗೆ ಕೆಡುವೊಡಲಂ ಬಿಟ್ಟೊಡೆ ಆಂ ಬದುಕೆನೇ?"

ಮುನಿ: "ಬರೆ ಸತ್ತು ಕಾಂಬ ಸರ್ಗಕಿದ್ದು ಕಾಣುತಿಹ ನರಕವೇ ಲೇಸು; ಪುಣ್ಯ ಜನ್ಮ ಪಡೆದು, ಅಳಿದರೆ ದೇಹವ ಪಡೆಯಬಹುದೇ? ಮರುಳು ಮೊದಲಾಗಿ ದೇಹವ ರಕ್ಷಿಸುವುದು".

ಆದಯ್ಯ: ಈ ದೇಹವು ಮಲದ ಬಗರಿಗೆ, ಮೂತ್ರದೊರತೆ, ಹೀನಜಲದಮಡು, ಅನಿತ್ಯದ ಮೊದಲನೆಲೆ, ಈ ಒಡಲ ಉತ್ತಮ ಸಮಯಕಿಕ್ಕುವುದು ಗೆಲುವು"

ಯತೀಶ: "ಮುನಿಗಳ ದೇಹವೇತರಿಂದಾದುದು? ಅವರು ದೇಹವ ರಕ್ಷಿಸಿ ಭೂತ ದಂಪೆಗೆಯ್ವರು; ಅವರೇಂ ಮರುಳರೇ? ಭೀತಿಯಿಲ್ಲದ ಪಾಪಿ!"

ಆದಯ್ಯ: **ಕೆಡುವೀ ದೇಹವುಳ್ಳಲ್ಲಿ ಪುಣ್ಯಮಂ ಪಡೆವುದೇ ಲೇಸು! ಇದು ಎನ್ನ ಸಿದ್ಧಾಂತ"**

ಮುನಿ: "ನಿನಗೆ ನಿನ್ನ ಮೇಲೆಯೆ ಕರುಣವಿಲ್ಲ, ಛಲಿ; ಪರರ ದೈವವ ಕೆಡಿಸದೆ ಉಣ್ಣೆನೆಂಬಾಗಲೀಪರಿಯಲೀ ಭಕ್ತನೆನಿಸಲು ಬಂದೆ?" ಎಂದಾಗ ಆದಯ್ಯನು ಸಿಟ್ಟಿಗೇಳುತ್ತಾನೆ.

ಆದಯ್ಯ: "ನೀನೆಂದ ಶಾಂತಿ, ಭೂತದಯೆ, ಸತ್ಯ, ಇವೆಲ್ಲವೂ ನಿರರ್ಥಕ! ಶಿವಭಕ್ತಿಯುಳ್ಳೊಡೆ ಚಾರವೇ ? ಇಂತಿದೇ ಘನವೆಂದು ಭಕ್ತನಾದೆ; ಕಾಲಾಂತಕನ ಸಾಮರ್ಥ್ಯವಹದೀಪ್ತಿ, ಲೌಕಿಕ ತಮಂಥಮಂ ಸಂಹರಿಪುದು"

ಯತೀಶ: "ಶಿವನ ನಿಜವೇಷವನು ಧರಿಸಿ, ಅರಿಷಡ್ವರ್ಗಗಳ ಕಳೆದುಕೊಂಡು, ಅಖಿಳ ಭೂತಂಗಳೊಳು ಪರಮಾಣು ನೋವ ಸೈರಿಸಲಾರದೆ, ಭುವನ ವಂದಿತರಪ್ಪ ಹಿರಿಯರೇಂ ಮರುಳರೇ ? ಅವರಿಂದ ನಿನಗಾವ ಬುದ್ಧಿ ಹಿರಿದು ?"

ಆದಯ್ಯ: **ಭುವನದೊಳು ಹುಟ್ಟುವಾಗೊಡನೆಹುಟ್ಟಿರ್ದ ದೇಹವಿಕಾರವಂ ಬಿಡುವೆನೆಂಬ ಸಾಮರ್ಥ್ಯವುಳ್ಳವರಿಲ್ಲ** [17] **ಮೋಕ್ಷಾದೊಡುತ್ತಮರೊಳಂತಲ್ಲ. ಶಿವಮಂತ್ರ, ಶಿವಲಿಂಗ, ಭಸಿತ ರುದ್ರಾಕ್ಷಿಯೆಂಬಿವು ನೆಲೆಸಿ ನಿಂದೆಡೆಯೊಳು ಕಾಮಾದಿಗಳು ನಿಲ್ಲವು. ಇದು ಶಿವವಾಕ್ಯ.** ಎನ್ನ ಮನವನೇಂ ತಟ್ಟಿ ನೋಡುವೆ ಯತೀಶ ?"

ಯತೀಶ: ನಿನ್ನ ಹಣೆಯೊಳು ಭಸಿತ, ಬಾಯೊಳು ಮಂತ್ರ, ತೊಡಿಗೆಯೊಳು ರುದ್ರಾಕ್ಷಿಗಳಿರಲ್ಕೆ ಪರರ ದೈವವನಳಿದು ಶಿವನ ನಿಲಿಸಿಹೆನೆಂಬ ಕೃತ್ಯವೇಕೆ ?"

ಆದಯ್ಯ: "**ಎನ್ನ ದೇಹಾಭಿಮಾನ ನಿಮಿತ್ತಂ ಮಾಡೆ ಎನ್ನಿಂದ ನರಕಿಗಳು ಬೇರಿಲ್ಲ; ಧರಣಿಯೊಳಗೆನ್ನ ಸಮಯಾಭಿಮಾನ ನಿಮಿತ್ತಂ ಮಾಡಿದೊಡೆ ದೋಷವೆನಗಿಲ್ಲ**"

ಈ ಸಂಭಾಷಣಾ ಪ್ರಸಂಗವು "ಸೋಮನಾಥ ಚಾರಿತ್ರದಲ್ಲಿಯೆ" ಒಂದು ಉತ್ತಮ ಸನ್ನಿವೇಶವೆನ್ನಬಹುದು. ಇಲ್ಲಿ ಇತರರು ಏನೇ ಅಂದರೂ "ಆದಯ್ಯನು ತನ್ನದೇ ಸಿದ್ಧಾಂತ" ವಿದ್ದಿತೆಂದು ಹೇಳಿದುದು ಕಂಡುಬರುತ್ತಿದೆ. ಇಲ್ಲಿ ಭಕ್ತಿಮಾರ್ಗ, ಸಂಸಾರಮಾರ್ಗಗಳ ಜೊತೆಗೆ ಕವಿಯು ಶೈವ - ವೀರಶೈವಗಳ ಹಿರಿಮೆಯನ್ನೇ ಚರ್ಚಿಸಿದ್ದಾನೆನ್ನಬಹುದು. ಇಲ್ಲಿಯ ಪ್ರಸಂಗದಲ್ಲಿ, ದೇಹದಲ್ಲಿ ಕಾಮಾದಿಗಳು ತೊಲಗಬೇಕಾದರೆ "ದೇಹದ ಮೇಲೆಯೇ ಲಿಂಗವಿರಬೇಕು; ಹಣೆಯಲ್ಲಿ ಭಸಿತ, ಕೊರಳೊಳು ರುದ್ರಾಕ್ಷಿ ಇರಬೇಕು" ಎಂಬ ಆದಯ್ಯನ ಸಿದ್ಧಾಂತವು ವೀರಶೈವ ಸಿದ್ಧಾಂತವೆಂದೇ ಗೋಚರಿಸುತ್ತದೆ. ಹೀಗೆ ಆದಯ್ಯನು ವೀರಶೈವ ಸಿದ್ಧಾಂತವನ್ನೇ ಪ್ರತಿಪಾದಿಸುತ್ತಿದ್ದರೂ ಶೈವರ "ಶಿವಲಿಂಗವನ್ನು ಸ್ಥಾಪಿಸುವ ಹವ್ಯಾಸವು ನಿನಗೇತಕೆ" ಎಂದು ಯತೀಶನು ಆದಯ್ಯನನ್ನು ಕೇಳಿದುದಕ್ಕೆ. ಆದಯ್ಯನು. ಕೊಡುವ ಉತ್ತರವೂ ಅತ್ಯಂತ ಮಹತ್ವದ್ದು. ಅವನು ಹಾಗೆ ಮಾಡುತ್ತಿದ್ದುದು "**ತನ್ನ ದೇಹಾಭಿಮಾನ ನಿಮಿತ್ತಕ್ಕೆ**" ಇರದೇ ತನ್ನ "**ಸಮಯಾಭಿಮಾನ ನಿಮಿತ್ತಂ**" ಮಾಡುವುದೇ ಪುಣ್ಯವೆಂದು ಭಾವಿಸುವಂತಿದೆ. ಈ ಕಾರಣದಿಂದ ತನ್ನ ದೇಹದ

ಮುಕ್ತಿಗೆ ಇಷ್ಟಲಿಂಗವಿದ್ದರೂ ಇತರ ಶೈವರ ಅಭಿಮಾನಕ್ಕೆ ಮಡಿಯುವುದೂ ಮಡಿಯುವುದೂ ಮೇಲಾದುದೆಂಬ ಕಾರಣದಿಂದ ಆದಯ್ಯನು ಪುಲಿಗೆರೆಯೊಳು ಸೋಮನಾಥನನ್ನು ಸ್ಥಾಪಿಸುವ ಕಾರ್ಯ ಕೈಗೊಳ್ಳುತ್ತಾನೆ. ರಾಘವಾಂಕ ಕವಿಯು ತನ್ನ 'ಸಿದ್ಧರಾಮ ಪುರಾಣ' ದಲ್ಲಿಯೂ ಅದೇ ಆದರ್ಶವನ್ನು ಇಟ್ಟುಕೊಂಡಿದ್ದನೆಂದು ಹೇಳುವುದರಿಂದ ಸಿದ್ಧರಾಮನೂ ಶೈವನೆಂಬ ಕಲ್ಪನೆ ಓದುಗರಿಗೆ ಬರುವಂತಿದೆ, ಬರುತ್ತಿದೆ. ಇದೇ ರೀತಿ ಭಕ್ತರಾದ ಆರಾಧ್ಯಪಂಥದ ಶೈವ ಕವಿಗಳೂ ಬಸವೇಶ್ವರನನ್ನು ಕುರಿತು ಕಾವ್ಯ ಬರೆಯುವಾಗ, ಬಸವೇಶ್ವರನನ್ನು ಭಕ್ತಿಯ ದೆಸೆಯಿಂದ ಮೆಚ್ಚಿಕೊಂಡರೂ, ಆರಾಧ್ಯರು ತಮ್ಮ ನಂಬುಗೆಗಳನ್ನು ಬಸವೇಶ್ವರನಲ್ಲಿಯೂ ಆರೋಪಿಸಿ ಬರೆದುದನ್ನು ಪಾಲ್ಕುರಿಗೆ ಸೋಮನಾಥಾಚಾರ್ಯರ ಬಸವ ಪುರಾಣದಲ್ಲಿಯೂ ತಮಿಳು 'ಪ್ರಭುಲಿಂಗಲೀಲೆ' ಯಲ್ಲಿಯೂ ಕಾಣುತ್ತೇವೆ. ಬಸವೇಶ್ವರಾದಿಗಳು ದೇವಾಲಯ ರಚನೆ ಎಷ್ಟೇ ಬೇಡವೆಂದರೂ ಜನತೆಯಲ್ಲಿ ಇನ್ನೂ, ಸಾಮಾಜಿಕ ಮೌಲ್ಯಗಳ ತಿಳುವಳಿಕೆಯಲ್ಲಿ ಹೆಚ್ಚು ಕಡಿಮೆಯಾಗಿರಲಿಲ್ಲ[18] "ಈಶ್ವರ ಪ್ರತಿಷ್ಠಾಪನೆ ಮಾಡಿದವನೇ ಈಶ್ವರನಕ್ಕುಮೆಂಬ" ಭಾವನೆ 12 ನೆಯ ಶತಮಾನದಲ್ಲಿ ಕೆಲವು ಶಿವಶರಣರಲ್ಲಿಯಾಗಲೀ ಇದ್ದಿರಬೇಕು. ಅದಕ್ಕಂತಲೇ ಆದಯ್ಯ, ಏಕಾಂತದ ರಾಮಯ್ಯ ಇವರ ಚರಿತ್ರೆ, ಮತ್ತು ಸಿದ್ಧರಾಮರುಗಳ ಚರಿತ್ರೆ ಜನತೆಯ ಮೇಲೆ ಅಪಾರ ಪ್ರಭಾವವನ್ನು ಬೀರಿರಬೇಕು. ರಾಘವಾಂಕನು ಈ ಆದರ್ಶಗಳನ್ನುಂಡು ನಿರ್ಮಾಣವಾದ ಕವಿಯಾದುದರಿಂದ ಈ ತತ್ವಕ್ಕೆ ಅತಿ ಮನ್ನಣೆ ಕೊಟ್ಟಂತಿದೆ. ಇದು ಅಲ್ಲದೆ ವೀರಶೈವರಲ್ಲದ ಬ್ರಾಹ್ಮಣರೂ ಬಸವೇಶ್ವರಾದಿಗಳನ್ನು ಮೆಚ್ಚಿಕೊಂಡಿದ್ದರೆಂಬ ಅಂಶವೂ ಗೋಚರಿಸುತ್ತದೆ. ಅಲ್ಲದೆ ಎಷ್ಟೋ ಶೈವ ಪರಂಪರೆಗಳು ವೀರಶೈವರಿಗೂ ಪೂಜ್ಯವಾದುದರಿಂದ ಅವು ಇಂದಿನ ವೀರಶೈವರಲ್ಲಿಯೂ ಪ್ರಚಲಿತವಿವೆ. ಈ ಕಾರಣದಿಂದಲೇ ವೀರಶೈವ ಕವಿಗಳೂ ತಮ್ಮ ಪರಂಪರೆಯಲ್ಲಿ ಶೈವಭಕ್ತರನ್ನೂ ಸೇರಿಸಿದ್ದಾರೆ. ವಾದ ಮಾಡಿದ ಆದಯ್ಯನನ್ನು ಸೋಲಿಸಲಾಗದೆ, ಶಿವನನ್ನೂ ಲಜ್ಜೆಗೆಡಿಸಿದ ಅವನ ಶೈವಾಭಿಮಾನವನ್ನು ಮೆಚ್ಚಿಕೊಂಡ ಶಿವನು, ಆದಯ್ಯನನ್ನು ಹೊಗಳಿದ ರೀತಿಯಿದು :

"ಮಾತಿನೊಳು, ನೀತಿಯೊಳು, ಬುದ್ಧಿಯೊಳು, ಸಿದ್ಧಿಯೊಳು,
ಚಾತುರ್ಯದೊಳು, ನಿದಾನ ವಿಚಾರದೊಳು, ಗುಣವ್ರಾತದೊಳು,
ನಿಷ್ಠೆಯೊಳು, ಜೀವದ ಪರಿಚ್ಛೇದದೊಳು, ವಿವರಮಂ ಕಾಣದೆ,
ಆತುರಿಸಿ ಕಾಡುವೆನ್ನಂಡಲೆಗೆ ಕಂಟಣಿಸದೀತನಲ್ಲದೆ ನಿಲುವವರಾರೆಂದು
ಹೊಗಳುತಿಪ ಭೂತೇಶನಂ ಲಜ್ಜೆಗೆಡಿಸಿತ್ತು ಮೆಚ್ಚು ಮುನಿನಿಕರದೋಲಗದ
ನಡುವೆ" (—46)

ಒಂದು ರೀತಿಯಲ್ಲಿ ಕವಿಯು ಆದಯ್ಯನ ವ್ಯಕ್ತಿತ್ವದ ಮುಖಗಳನ್ನೇ ಇಲ್ಲಿ ಚಿತ್ರಿಸಿದ್ದಾನೆಂದು ಹೇಳಬಹುದು.

5

ಆದಯ್ಯನದು ಏಕಾಗ್ರಚಿತ್ತ. ಜೈನರ ಅನಶನವ್ರತದಂತೆ ಆವನೂ ಉಪವಾಸವನ್ನು ಕೈಕೊಂಡ. ಭೂತ ಹಿಡಿದವನಂತೆ ಹಸಿವು ನೀರಡಿಕೆಯನ್ನು ತೊರೆದ ಆದಯ್ಯನು ಅತಿ ಧೀರ! ಶಿವನು ಅವನ ನಿಷ್ಠೆಯ ಪರೀಕ್ಷೆಗೆ ಹಸಿವು, ನೀರಳ್ಕೆ, ಉಬ್ಬಸ, ಕ್ರಮವನ್ನುಂಟುಮಾಡಿದರೆ, ತೋಳಿನಿಂದ ರಕ್ತಚಿಮ್ಮಿ, ಜೇಳ್ ಜಾತು. ಎದೆಯೊಳ್, ಅಗ್ನಿಜ್ವಾಲೆ ಅಧಿಕವಾಗಿ, ಪಾದಗಳು ಒಡೆದು, ರಕ್ತಸೋರಿ, ಬಾಯಿ ಒಳಹೊರಗೂ ಹುಣ್ಣಾಗಿ, ಉರಿಬಿಸಿಲಿನ ಉಗಿಹವೆ, ಕ್ಷುಧೆ ಆವರಿಸಿದರೂ, ಕಂಡು ಕೇಳುವವರಿಲ್ಲದಿದ್ದರೂ **'ಛಲಿಗಳರಸನೆನಿಪ ಆದಯ್ಯನು'** ಕಾರ್ಯಸಾಧನೆಗೆ ಮುಂದೆ ನಡೆಯುವುದನ್ನು ಬಿಡಲಿಲ್ಲ. "ವಾರಾಸಿ ಇಟ್ಟ ಎಸರಾದುದು"! ಜಲಬತ್ತಿ, ನೆಲ ಕರುಕಾಗೆ, ಮರಗಳೆಲ್ಲ ಎಲೆಗಳೆದು, ಬರಿದಾಗಿ, ಘನಘೋರವಾದ ಬಿಸಿಲುಂಟಾಗಿದೆ; ಸರ್ವಜೀವಿಗಳನ್ನು ಸುಡಲು ವಿಧಾತ್ರನುಂಟಾಗಿಸಿದ ದಳ್ಳುರಿಯಾಗಿದೆ ಬಿಸಿಲು! ಕಾಯ್ದ ನೆಲದ ಮೇಲೆ ಸಿಲೆ ಅರಳಾಗಿದೆ! "ಸೋಮೇಶ, ಸೊಡ್ಡಳ" ಎನ್ನುತ್ತ ಆದಯ್ಯನು ಕೈಯೂರಿ ನಡೆದು, ಚರ್ಮ ಸುಲಿದು, ಮೊಳಕಾಲೊಡೆದು, ನಡೆಯುಡುಗಿದರೂ 'ಹಾ' ಎಂದೆನಲಿಲ್ಲ! ಇಂತಹ **ನಿರ್ಮೋಹಿಯ** ಉಜ್ವಲ ಚಿತ್ರಣವಿಲ್ಲಿದೆ! ಹಾಗೂ ಹೀಗೂ ನಡೆದು, ಒಂದು ಆಲದ ಮರದ ನೆಳಲಿಗೆ ಹೋದರೆ ನೆಳಲೇ ಉರಿಯಾಗಿದೆ! ಇಂತಹ **'ಭಕ್ತವೀರ'**ನ ಚರಿತೆಯನ್ನು ಚಿತ್ರಿಸುವುದು ರಾಘವಾಂಕ ಕವಿಯ ಉದ್ದೇಶ. ತಾನು ಆಲದಮರದ ನೆರಳಿನ ಆಶ್ರಯಕ್ಕೆ ಹೋಗಿ ಕಳೆದ ದಿನಗಳನ್ನೆಣಿಸುತ್ತಾನೆ; ಇಪ್ಪತ್ತೆಂಟು ದಿನಗಳು ಉರುಳಿವೆ. ಮೈಹುಣ್ಣಾಗಿ ಬೆನ್ನೆಲುವು ಕಾಣುತಿದೆ. ಇನ್ನುಳಿದ ದಾರಿಯನ್ನು ನಡೆಯಲು, ಅಡಿಯಿಂದ ನಡೆಯಲಾರದೆ, ಕೈಯೂರಿ ನಡೆಯುವುದೂ ಆಗದೆ ಹೊರಳ್ದುರುಳುತ್ತ ನಡೆದಿದ್ದಾನೆ. ತನ್ನಿಂದ 'ಅಧಿಕ ಶೈವಕ್ಕೆ ಕುಂದಾಯ್ತಲಾ"* ಎಂದು ಚಿಂತಿಸಿ "ಸೋಮಯ್ಯ, ಸೋಮಯ್ಯ" ಎಂದು **ಬೀದಿಗರುವಾಗಿ, ಮೊಗವೋಟನಾಗಿ** ಹಲುಬಿ, "ಕರುಣಿಸಿ ಬಾರ, ಬಾರದೊಡೆ ಕೊಂದಾದೊಡಂ ಹೋಹುದು" ಎಂದು ಕೂಗುತ್ತಾನೆ. ಅನೇಕ ಅಪಮಾನಗಳಿಂದ ನೊಂದಿದ್ದಾನೆ: 1) ಗುರುದೇವರಾರೋಗಿಸದೆ ಹೋದುದು; 2) ಅರುಹನಿದಿ ಬರಿದು ಶಿವನ ನಿಲಿಸುವ ತವಕ; 3) ಪದುಮಾವತಿಯುಗಲ್ಕೆಯುಮ್ಮಳಗಳ ಚಿಂತೆಯಿಂದ ಬಳಲಿ, ಬೆಂಡಾಗಿ, ಶಿವನನ್ನು ಕುರಿತು:

> "ಎನ್ನ ಪ್ರಾಣ, ಅಭಿಮಾನ ನಿನ್ನದು ತಂದೆ: ಭಕ್ತರ ಬಂಧುವೆ, ಬಾಣ
> ಮಯೂರಕಾಳಿದಾಸರಿಗೆ ಒಲಿದೆ: ಎನ್ನನೇ ಕೊಲ್ಲೆ? ಓಹಿಲಉದ್ಭಟಹಲಾಯುಧ
> ಸಾಮವೇದಿ ಮಳೆಯರಾಜರಿಗೆ ಇಷ್ಟಾರ್ಥವ ದಯಪಾಲಿಸಿದೆ: ಎನ್ನಲ್ಲಿ
> ಪಕ್ಷಪಾತವೇಕೆ?" ಎಂದು ತನ್ನ "ನಿನ್ನಿಯ ಬನ್ನದುದಯಕ್ಕೆ ಬೆಂಡಾಗಿ".

''ಎನ್ನ ಪಾಪಿದೇಹದೊಳು ನಿರ್ಮಳ ಭಾಷೆಯುಂ, ಫಲಂ ಹೊಕ್ಕು ಕೆಟ್ಟುದು
ನಿನ್ನ ನಂಬಿದರುಂಬರು! ಜೀವಮಂ ಬೆಡುವುದರಿದಲ್ಲ! ಬಿಟ್ಟೆನಾದೊಡೆ ನುಡಿದ
ಭಾಷೆ ಸಲ್ಲದು! ಎನ್ನ ಮಡದಿಯಯ್ಯಂ ನಗುವ''—

ಎಂದು ಚಿಂತಿಸಿ ತನ್ನ ಜೀವನವು 'ನಗೆಗೆಡೆಯಾಯ್ತಲಾ' ಎಂದು ಭೀತಿಪಡುತ್ತಾನೆ. 'ಕಯ್ಯೂರಿ ನಡೆವೆ! ಎನ್ನ ಛಲವ ಬಿಡಲಾರೆ' ಎಂದು ದೃಢ ಮನಸ್ಕನಾಗಿ,

''ಕೊಟ್ಟವಧಿ ತೀರ್ದೊಡಂ, ಬಟ್ಟೆ ಹಿರಿದಾದೊಡಂ
ಹುಲಿಸಿಂಹ ಕರಡಿಯರೆಯಟ್ಟಿ ಘರ್ಜಿಸಿದೊಡಂ, ಭೂತವೇತಾಳ
ಶಾಕಿನಿಡಾಕಿನ ಗ್ರಹಕುಲಂ ಬಂದು ನಟ್ಟಿರುಳಂಜಿಸಿದೊಡಂ,
ಮಹಾ ರೌದ್ರ ದಟ್ಟಡವಿಯಂ ಹೋಹೆ! ಇಂದೆನ್ನ ಹರಣಮಂ ಬಿಟ್ಟು
ನಿಡ್ಡಂನಿನ್ನ ಮೇಲೆ! ಸೋಮೇಶ'' ಎಂದು ಆಯಾಸದಿಂದ ಮಲಗಿ,
''ಈ ದೇಹಮಂ ಮಣೆ ಮಾಡದೊಳಿಟ್ಟೊಡಂ ಸಾವು ಬಿಡದು'' ಎಂದು

ಕೆಡುವ, ಸಾವದೇಹವನ್ನು ಧರ್ಮಕ್ಕೆ ಸವೆಸುವುದೇ ಮೇಲೆಂಬ ತತ್ವಾಭಿಮಾನಿಯಾಗಿರುತ್ತಾನೆ. ನಂತರ ಅಲ್ಪದೂರ ಹೋದ ಆದಯ್ಯನನ್ನು ಶಿವನು ಎರಡನೆಯ ಬಾರಿ ಹಾಗೆಯೇ ಸಾಗುತ್ತಾನೆ. ''**ನಿಷ್ಠೆ ಸುಸ್ಥಿರವಾದೊಡೆ ಅಭವನಿದಿರಂ ಬಾರದಿರದು**" ಎಂಬ ಬಲವಾದ ನಂಬಿಗೆ ಆತನಿಗೆ. ಸೋಮೇಶನು ವೃದ್ಧ ಮಾಹೇಶ್ವರ ವೇಷದಿಂ ಬಂದು, ''ಅಂಬಲಿ ಅಲ್ಲಸೇರಿದ ಮೊಸರೋಗರ, ಶೀತ ಜಲವ ತಂದಿರುವೆ; ಊಟಕ್ಕೆ ನನಗೊಬ್ಬ ಭಕ್ತ ಬೇಕು" ಎಂದೊಡೆ "ಮತ್ತೊಬ್ಬನಂ ಕೊಳ್" ಎನ್ನುತ್ತಾನೆ. ಸೋಮನಾಥನನ್ನು ಕಂಡಲ್ಲದೆ ಉಣ್ಣೆನೆಂದು ತಿಳಿಸಿದಾಗ,ವೃದ್ಧ ತಾಪಸನು ಅಡ್ಡ ಬಂದು ಆದಯ್ಯನನ್ನು ಉಣ್ಣಲು ರಮಿಸಿ ಮನ ಒಲಿಸುತ್ತಾನೆ. ತನಗೆ ವೇಳೆ ಕಡಿಮೆಯಾಯಿತೆಂದು ತಿಳಿದು ಚಿಂತಿಸಿ, ತನ್ನ ಪಣಕ್ಕೆ ಭಂಗ ಬರುವುದೆಂದು ಚಿಂತಿಸುತ್ತಾನೆ. "ಬೆಂದ ಹುಣ್ಣಂ ಕಂಬಿಯುಲಿ ಕೀಸಲೇಕೆ?" ಎಂದು ತನ್ನ ಪ್ರತಿಜ್ಞೆಯನ್ನೇ ಪುನರುಚ್ಚರಿಸುತ್ತಾನೆ. ಈಗಾಗಲೇ ಇಪ್ಪತ್ತೆಂಟುದಿನಗಳು ಉರುಳಿದುದರಿಂದ ಸುಮ್ಮನೆ ಬಿಟ್ಟರೆ ಹತ್ತುಬಾರಿ ಊಟಕ್ಕೆ ಇಕ್ಕಿದಷ್ಟು ಉಪಕಾರವಾಯಿತೆನ್ನುತ್ತಾನೆ! ಆಗ ಶಿವನು ಉಳಿದ ಈ ಅಲ್ಪ ಅವಧಿಯಲ್ಲೆಂತು ಸೋಮೇಶ್ವರನ ತರುವೆ? ಊರಿಗೆ ಮರಳು, ಎಂದರೂ ವಿಚಲಿತನಾಗದ ಆದಯ್ಯನಿಗೆ ಶಿವನು ಪ್ರತ್ಯಕ್ಷವಾಗುತ್ತಾನೆ. ಆದಯ್ಯನು ಭಕ್ತಿಯಿಂದ ಮನವನ್ನು, ದೇಹವನ್ನು, ಶಿವನಡಿಗೆ ಮಾರುಗೊಡುತ್ತಾನೆ. 'ವರವಕೇಳೆನ್ನಲು' 'ಬೇರೆ ವರವುಂಟೇ?' ''ಸೊಕ್ಕಿರ್ದ ಹುಲಿಗೆರೆಯ ಸುರಹೊನ್ನೆ ಬಸದಿಯ ದಡಿಗಜಿನನಂ ಹೋಳ್ದು, ಸವಣರಂ ಹುಡಿಗಟ್ಟಿ, ನಂದಿಕೇಶನಮೇಲೆ ಮೂರ್ತಿಗೊಂಡಡೆ ವರಂ ಬಂದುದು" ಎನ್ನುತ್ತಾನೆ. ಸೋಮನಾಥನು ಚೈತ್ರ ಶುದ್ಧ ಚಾತುರ್ದಶಿಯ ಸೋಮವಾರ ಬರುವುದಾಗಿ ತಿಳಿಸಿ, ಆದಯ್ಯನನ್ನು ಹೊತ್ತು ತಂದು ಪುಲಿಗೆರೆಯ ಬಡಗಣ ತಟಾಕದೇರಿಯಮೇಲೆ ಬಿಡುತ್ತಾನೆ. 1) ತಾನು ಬಂದುದು ಸವಣರ್ಗೆ ಬಸದಿಯ ಕವವ ತೆರೆಯದಿರ್ದುದು

2) ಅಲ್ಲಿರ್ದ ಹೇಳವ ಮತ್ತು ಕುರುಡಂಗೆ ಕಾಲ್ಕಣ್ ಬರ್ಪುದು ಕುರುಹು ಎಂದು ತಿಳಿಸುತ್ತಾನೆ. 'ಶಿವನನ್ನು ಪುಲಿಗೆರೆಗೆ ತಂದ ನರರೂಪನಾದ ಆದಿಗಣನಾಥನು ಪರಮ ಕಾರಣಿಕ'ನಾಗಿ ಮೆರೆಯುತ್ತಾನೆ. ಆಗ ಶಿವನು ಮುಂದಾಗಬಹುದಾದ ಕಾಳಗದ ಸೂಚನೆಯನ್ನೀಯುತ್ತಾನೆ.

6

'**ಛಲಿ**'ಯಾದ ಆದಯ್ಯನು ಉತ್ತಮ '**ಕಲಿ**'ಯೂ ಅಹುದು; ಸಂಸಾರಿಗನೂ ಅಹುದು; ಪುಲಿಗೆರೆಗೆ ತಿರುಗಿ ಬಂದಾಗ ಅದು ಶಿವನುದಿಸುವ ತಾಣವೆಂದು ನಮಸ್ಕರಿಸುತ್ತಾನೆ. ಆದಯ್ಯನು ಬಂದುದನ್ನು ಕಂಡ ನಂಟರು, ನಲ್ಲರು ಪದ್ಮಾವತಿಗೆ ತಿಳಿಸುತ್ತಾರೆ. ಅವಳೂ ಸಖಿಯರೊಡನೆ "ಪರಸಮಯವಡಬಾನಳನನ್ನು" ಇದಿರುಗೊಳ್ಳುತ್ತಾಳೆ. ಪರಸಮಯಿಗಳು ಆದಯ್ಯನು ಹೋಗಿ ಹಾಗೆಯೇ ತಿರುಗಿ ಬಂದನೆಂದು ಕಟಕಿಯನಾಡುತ್ತಾರೆ; ಬಸದಿಯನ್ನು ಸಿಂಗರಿಸುತ್ತಾರೆ. ಮನೆಗೆ ಬಂದು ಪದ್ಮಾವತಿಯು ಗಂಡನನ್ನು ಸ್ನಾನಕ್ಕೆಬ್ಬಿಸಿದಾಗ "ಸೋಮನಾಥಮೂರ್ತಿಯಂ ಕಂಡಲ್ಲದೆ ಒಲ್ಲೆ" ಎನ್ನುತ್ತಾನೆ. ಸೋಮನಾಥನ ಬರವನ್ನೆ ಕಾಯ್ದು ಅಂದಿನಿರುಳು ಶುದ್ಧಾಂಗರಾಗಿ ಬಂದು ಮನೆಯ ಮಹಡಿಯ ಮೇಲೆ ನಿರೀಕ್ಷಿಸುತ್ತಾರೆ. ನಿರೀಕ್ಷಿಸುತ್ತಿರುವಾಗಲೇ ಸೋಮನಾಥನು ಬಂದ ವಿಮಾನದ ಗೋಚರವಾಗುತ್ತದೆ. ದಂಪತಿಗಳಿಬ್ಬರೂ ಅತಿ ಸಂತಸಪಡುತ್ತಾರೆ. ಇಬ್ಬರೂ "ಎರಡಿಲ್ಲದಚಲನಿಷ್ಠೆಯ ಭಕ್ತರು" ಸೋಮನಾಥನ ಬರವನ್ನು ಕಂಡು ನಲಿದು ಮನೆಗೆ ಮರಳಿದರು. ಸೋಮನಾಥನ ಆಗಮನದಿಂದ ಸುರಹೊನ್ನೆ ಬಸದಿಯಿಂದ ಮೊದಲ್ಗೊಂಡು ಅಲ್ಲಿಯ ಜಿನೇಶ್ವರ ಮೂರ್ತಿಗಳು ಭಗ್ನವಾಗುತ್ತವೆ. ಬಸದಿಯ ಕದವು ತೆರೆಯದಾಗುತ್ತದೆ. ಕದತೆರೆಯಲು ಮಾಡಿದ ಜೈನರ ಪ್ರಯತ್ನಗಳೆಲ್ಲ ವಿಫಲಗೊಂಡು, ಅರಸನ ಪಟ್ಟದಾನೆ ಸತ್ತುಹೋಗುತ್ತದೆ. ಆಗ ಜೈನರಿಗೆ ಸಂಶಯ ಉಂಟಾಗಿ ಆದಯ್ಯನೇ ಕದಮುಚ್ಚಿಕೊಂಡು ಒಳಗಿರಬೇಕೆಂದು ಊಹಿಸುತ್ತಾರೆ; ಅವನ ಮನೆಗೆ ನೋಡಲು ಕಳಿಸಿ ಒಳಗಿಲ್ಲವೆಂಬುದನ್ನೂ ಖಚಿತಪಡಿಸಿಕೊಳ್ಳುತ್ತಾರೆ. ಆದಯ್ಯನನ್ನು ಕಂಡ ಸವಣರು "ನೀನೇ ಕುಟಿಲವ ಮಾಡಿರುವೆ" ಎಂದು ಆರೋಪಿಸಿದಾಗ **ದಿಟವಲ್ಲದೆ ಭಕ್ತರಾಡರ್** ಎಂದು 'ಪರವಾದಿ ಕಂಠೀರವನಾದ' ಆದಯ್ಯನು ತಿಳಿಸುತ್ತಾನೆ."**ವೈರಿಗಳ ಸಮ್ಮುಖದಲ್ಲಿ ದಿನದಿನಕೆ ಶಿವಸಮಯವೂರ್ಜಿತವಪ್ಪಡೆ ಎನಗೆ ಕದವಂ ತೆರೆ**" ಎಂದು ಆದಯ್ಯನು ಪ್ರಾರ್ಥಿಸಿ ಕದವ ತೆಗೆದಾಗ, ಕದ ತೆರೆದು ಆದಯ್ಯನು ಒಳಗೆ ಹೋದೊಡನೆ ಮತ್ತೆ ಮುಚ್ಚುತ್ತದೆ. ಶಿವಪೂಜೆ, ಪ್ರಾರ್ಥನೆಯಾಗುತ್ತವೆ. ನಂದಿಯು ಉದ್ಭವಿಸುತ್ತಾನೆ. ಜೈನರು ಕದವ ತೆರೆಯಿಸಿ ನೋಡಿದಾಗ ಜಿನಮೂರ್ತಿಯೆಲ್ಲ ಒಡೆದುಬಿದ್ದುದು ಗೋಚರಿಸುತ್ತದೆ. "ಮೃಡ ಸಮಯಮಂ ಕೆಡಿಸಿ, ಭಕ್ತರಂ ಕೊಂದಲ್ಲದೆ ತಮ್ಮ ಸ್ಥಾನಮಾನ ಸರಿಯಾಗದೆಂದು" ಜೈನರು ಅರಸಂಗೆ

ತಿಳಿಸುತ್ತಾರೆ. ಅರಸನೂ ಅವರಲ್ಲಿ ಭಾಗಿಯಾಗುತ್ತಾನೆ. ಆದಯ್ಯನ ಪಕ್ಷದವರಿಗೂ ಅರಸನ ಕಡೆಯುವರಿಗೂ ಯುದ್ಧವಾಗಿ 'ಚಂದ್ರಾದಿತ್ಯ' ಅರಸನು ಅಡವಿಯನ್ನು ಸೇರುತ್ತಾನೆ. ಆದಯ್ಯನಿಗೆ ಗೆಲುವಾಗಿ ಜೈನರೆಲ್ಲ ಶಿವಭಕ್ತರಾಗುತ್ತಾರೆ. ಧರ್ಮ ಪ್ರಸಾರದ ನಿಮಿತ್ತ ಆದಯ್ಯನು ಸೌರಾಷ್ಟ್ರಕ್ಕೆ ತೆರಳದೆ ಪುಲಿಗೆರೆಯಲ್ಲಿಯೇ ಉಳಿದು ಪದ್ಮಾವತಿಯೊಡನೆ ಸೋಮನಾಥ ದೇವಾಲಯದ ಕಂಬದಲ್ಲಿಯೇ ಕಣ್ಮರೆಯಾಗುತ್ತಾನೆ.

ಹೀಗೆ ರಾಘವಾಂಕ ಕವಿಯು ಆದಯ್ಯನ ವ್ಯಕ್ತಿತ್ವದಲ್ಲಿ ತನ್ನ ಕಾಲದ ಜೀವನದ ಮೌಲ್ಯಗಳನ್ನು ತಿಳಿಯಪಡಿಸುತ್ತಾನೆ. ಆದಯ್ಯನ ಸನ್ನಿ ಛಲ, ಸಮಯಾಭಿಮಾನ, ಕರ್ತವ್ಯನಿಷ್ಠೆ, ಕಲಿತನ, ಉಗ್ರಭಕ್ತಿ, ತಾತ್ವಿಕ ಜ್ಞಾನ, ಲೌಕಿಕ ಜಾಣ್ಮೆ, ರಸಿಕತನ ಮೊದಲಾದವುಗಳನ್ನು ಓದುಗರ ಮನಸೆಳೆಯುವಂತೆ ಚಿತ್ರಿಸಿದ್ದಾನೆ. ಆದಯ್ಯನು ತಾನಾಗಿಯೇ ಕೆಣಕುವ ಸ್ವಭಾವದವನಲ್ಲ ; ಕೆಣಕಿದ ಮೇಲೆ ಅಪಮಾನ ತಾಳುವ ವ್ಯಕ್ತಿಯಲ್ಲ ; ತನ್ನ ಸ್ವಂತಕ್ಕೆ ನಿಂದೆ ಬಂದರೆ ತಾಳಬಲ್ಲ; ಆದರೆ ತನ್ನಿಂದ ಸಮಯಕ್ಕೆ ಪಳಿವುಂಟಾದರೆ ತಾಳಲಾರದವ. ಇಂತಹ ಸಾಮಾಜಿಕ, ಮತ್ತು ಸಮಯ ಪ್ರಜ್ಞೆ ಅವನಲ್ಲಿದೆ. ಧರ್ಮಕ್ಕಾಗಿ ಪ್ರಾಣಕೊಟ್ಟವರ ಚರಿತ್ರೆ ಇಂದಿಗಿಂತಲೂ ಹಿಂದಿನ ಕಾಲದಲ್ಲಿ ಅತ್ಯಂತ ಉಜ್ವಲವೂ, ಉದ್ಬೋಧಕಾರಿಯೂ ಆಗಿತ್ತು. ಅಂತಹವರ ಚರಿತ್ರೆಯಲ್ಲಿ ಭಾರತ ದೇಶದಲ್ಲಿ ಆದಯ್ಯನ ಚರಿತ್ರೆಯು ಎಂದೆಂದಿಗೂ ಬಾಳಿ ಬೆಳಗುತ್ತದೆ. ಅವನು ಹೆಣ್ಣಿಗಾಗಿ ಸತ್ತವನಲ್ಲ, ಮಣ್ಣಿಗಾಗಿ ಹೋರಾಡಿದವನಲ್ಲ ; ಸೋಮನಾಥನಿಗಾಗಿ ಹೋರಾಡಿದವನು. ಇಂತಹವನನ್ನು ಸ್ವಾರ್ಥಿ ಎಂದೆನ್ನಬಹುದೇ ? ಮಹಾಪುರುಷನೆನ್ನದೆ ಗತ್ಯಂತರವಿಲ್ಲ.

ಈ ಕಾವ್ಯದಲ್ಲಿ ರಾಘವಾಂಕ ಕವಿಯು, ಆದಯ್ಯನು ಲಿಂಗವಂತನಾಗಿಯೂ ಶಿವಲಿಂಗ ಪ್ರತಿಷ್ಠಾಪನೆ ಮಾಡಿದುದನ್ನು ತಿಳಿಸಿದ್ದಾನೆ. ಅವನು ವೀರಶೈವನಲ್ಲವೆಂಬ ಮಾತು ಅನ್ವಯಿಸದು. ಕಾವ್ಯದಿಂದಲೂ ಈ ಮಾತು ಸತ್ಯ. ವೀರಶೈವರಾದವರೂ ಸ್ಥಾವರಲಿಂಗ ಸ್ಥಾಪಿಸಿದರೆ ಪುಣ್ಯ ಹೆಚ್ಚುತ್ತದೆಂಬ ತಿಳಿವು ರಾಘವಾಂಕನದೆಂದು ಸ್ಪಷ್ಟವಿದೆ. ಇದೇ ತತ್ವವು ಅವನ ಸಿದ್ಧರಾಮಚಾರಿತ್ರಕ್ಕೂ ಅನ್ವಯಿಸುತ್ತದೆ.*

ಆಧಾರ ಟಿಪ್ಪಣಿಗಳು

1. ಸೋಮನಾಥ ಚಾರಿತ್ರ–ಪ್ರಸ್ತಾವನೆ ಪುಟ
2. ಸೋಮನಾಥ ಚಾರಿತ್ರ–ಪ್ರಸ್ತಾವನೆ ಪುಟ

* ಇಲ್ಲಿ ಲೇಖಕನು ಕರ್ನಾಟಕ ವಿಶ್ವವಿದ್ಯಾಲಯವು ಕ್ರಿ. ಶ. 1961 ರಲ್ಲಿ ಪ್ರಕಟಿಸಿದ ಗ್ರಂಥವನ್ನು ಬಳಸಿಕೊಂಡಿದ್ದಾನೆ

3. ವೀ. ರು. ಕೊಪ್ಪಳ, 'ಆದಯ್ಯನ ವಚನಗಳು' ಪ್ರಸ್ತಾವನೆ ಪುಟ. ಸಂ ; ಕಿ. ಚ. ಉತ್ತಂಗಿ (1957)

4. ವೀ. ರು. ಕೊಪ್ಪಳ, 'ಆದಯ್ಯನ ವಚನಗಳು' ಪ್ರಸ್ತಾವನೆ ಪುಟ.
ಸಂ : ಕಿ. ಚ. ಉತ್ತಂಗಿ (1957)

5. ಸೋಮನಾಥ ಚಾರಿತ್ರ

6. ಈ ಭಾಗವನ್ನು 'ಹರಿಹರನ ರಗಳೆಗಳು' ಭಾಗ 3 (1933).
ಸಂ : ಫ. ಗು. ಹಳಕಟ್ಟಿ ಇದನ್ನು ಆಧರಿಸಿ ಬರೆದುದಾಗಿದೆ.

7. 'ಆದಯ್ಯನ ವಚನಗಳು'-ಪುಟ. 45–48, ವಚನ 78, 77

8. ಸೋಮನಾಥ ಚಾರಿತ್ರ-11

9. ಹರಿಶ್ಚಂದ್ರ ಕಾವ್ಯಂ—32 ಸಂ : ಎನ್. ಬಸವಾರಾಧ್ಯ (1955)

10. ಸೋಮನಾಥ ಚಾರಿತ್ರ-9, 10, 38, 43, 57, 108-65, 113, 115 ; 30, 40, 72 ಮತ್ತು 77 ಇನ್ನಿತರ ಪದ್ಯಗಳು

11. ಸೋಮನಾಥ ಚಾರಿತ್ರ-47–50

12. ಕವಿಯು ಆತನ ಹೆಂಡತಿಯ ಹೆಸರನ್ನು ಹೇಳುವಷ್ಟು ಔದಾರ್ಯವನ್ನೂ ಇಲ್ಲಿ ತೋರಿಸಿಲ್ಲ. ಅಲ್ಲದೆ ಈ ಲಗ್ನದ ಆವಶ್ಯಕತೆ ಏನಿತ್ತೋ ತಿಳಿಯದಾಗದೆ ! ಬೇಗ ಮದುವೆ ಮಾಡುವ ಸಂಪ್ರದಾಯವನ್ನು ಇದು ಸೂಚಿಸಬಹುದು.

13. ಸೋಮನಾಥ ಚಾರಿತ್ರ—1–109

14. ರಾಘವಾಂಕನು ಇಲ್ಲಿ ಮಾಡಿದ ಸೂಳೆಗೇರಿಯ ವರ್ಣನೆ. ಅದು ಪುಲಿಗೆರೆಯದಾಗಿರದೆ ಹಂಪೆಯ ಸೂಳೆಗೇರಿಯದಾಗಿರಬೇಕೆಂದಿನಿಸುತ್ತದೆ.

15. ಮೊದಲೇ ವಿಚಾರಿಸಬೇಕಾದ ಈ ಅಂಶಗಳನ್ನು ಆದಯ್ಯನು ಪ್ರಣಯಾನಂತರ ವಿಚಾರಿಸಿದ್ದಾನೆ. "ಪ್ರೇಮಕ್ಕೆ ಕಣ್ಣಿಲ್ಲ"ವೆಂಬ ಆಂಗ್ಲೋಕ್ತಿಯನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

16. 'ಪದ್ಮಾವತಿ ದುರಿತಂ ನೀಗಿ, ಶೈವಕ್ಕೆ ತಲೆವಾಗಿ, ದುಸ್ತರ ದೈವಮಂ ತೊರೆದು, ಪೂರ್ವ ಗುಣಮುಂ ಮರೆದು ನಿರುತ ಲಿಂಗಾರ್ಚನಂಗೆಯ್ವುತೊಂದೆರಡು ದಿನವಿರೆ ಕೇಳ್ದನವ ರಯ್ಯನು"-60

17. ಹೋಲಿಸಿರಿ : ಬಸವಣ್ಣನವರ ವಚನ-'ಇಂದ್ರಿಯ ನಿಗ್ರಹ ಮಾಡಿದರೆ ಮುಂದೆ ಬಂದು ಕಾಡುವವುವು ಪಂಚೇಂದ್ರಿಯಂಗಳು'

18. 'ಹನ್ನೆರಡನೆಯ ಶತಮಾನದಲ್ಲಿ ಒಂದು ಶಾಸನದಲ್ಲಿ ಎಲ್ಲಾ ಸಂಪತ್ತುಗಳ್ಗೆ ಪುಣ್ಯಮೆ ಮೊದಲು : ಪುಣ್ಯಕ್ಕೆಲ್ಲ ವಿಶ್ವೇಶ್ವರ ಪ್ರತಿಷ್ಠೆಯೆ ಮೊತ್ತಮೊದಲು ಎಂದು ಉಕ್ತವಾಗಿದೆ. ಇದುವೇ ಆ ಕಾಲದಲ್ಲಿ ಇದ್ದನ್ನ ಪ್ರಚಲಿತ ಭಾವನೆಯಾಗಿತ್ತು.

19. ಕನ್ನಡನಾಡಿನಲ್ಲಿ ಎಷ್ಟೋ ದೇವಾಲಯುಗಳನ್ನು ಒಂದು ರಾತ್ರಿಯಲ್ಲಿಯೇ ಜಕ್ಕಣಾರ್ಯನು ಕಟ್ಟಿದನೆಂದೂ, ಅಲ್ಲಿ ಈಶ್ವರ ನಂದಿ ಇರುವುದಾಗಿ ಉತ್ತರ ಕರ್ಣಾಟಕದ ಹಳ್ಳಿಯ ಜನರಲ್ಲಿ ಪ್ರತೀತಿ ಇದೆ. ಅವು ಆದಯ್ಯನಂತೆ ಎಷ್ಟೋ ಅನ್ಯದೇವಾಲಯ, ಬಸದಿಗಳಲ್ಲಿ ಶಿವಮೂರ್ತಿ ಮತ್ತು ನಂದಿ ಸ್ಥಾಪನೆ ಮಾಡಿದುದಾಗಿವೆ. ಜನರು ಈ ಕಾರ್ಯವನ್ನು ಜಕ್ಕಣ್ಣಾರ್ಯರ ತಲೆಗೆ ಕಟ್ಟಿದ್ದಾರೆ. ಇಂತಹ ದೇವಾಲಯಗಳು ಇಂದಿಗೂ ಉತ್ತರ ಕರ್ಣಾಟಕದ ಹಳ್ಳಿ ಹಳ್ಳಿಯಲ್ಲಿ ನೋಡಲು ಸಿಗುತ್ತವೆ.

ನ್ಯಾಯ ಬೆಲೆ ಅಂಗಡಿಯ ಮುಂದೆ*

ಆಶಾ. ಬಿ. ಪಾಟೀಲ

ನಸುಕಿನ್ಯಾಗ ಎದ್ದು,
ಬಾಗಿಲಾ ತೆಗಿಯೂ ಮೊದಲ ಅಂಗಡೀ ಮುಂದ ನಿಂತಾಗ
ಮನಸ್ಸಿಗ ಒಂದs ಸಮಾಧಾನ
ಫರ್ಲಾಂಗಗಳುದ್ದ ಬೆಳೆಯೂ ಈ ಕ್ಯೂನ್ಯಾಗ
ನನ್ನ ನಂಬರ ಒಂದನೇ ಫರ್ಲಾಂಗದೊಳಗ ಇರ್ತದ.
ಅಂಗಡಿಯವ ತನ್ನ ಮರ್ಜೀಲೆ, "ಸಾಮಾನ ಬಂದsದ",
ಅಂದಾಗ,
ನಮ್ಮ ಕಿಸೆ ಖಾಲಿ ;
ಕೈಯ್ಯಾಗ ರೊಕ್ಕ ಬಂದಾಗ
"Quota ಬಂದಿಲ್ಲರೀ, ಇದ್ದಷ್ಟು ತೊಗ್ಕೋಂಡ್ಹೋಗರಿ" ಅಂದಾಗ
ಬೆಳೀತದ, ಹಿಗ್ಗತದ
ಉದ್ದುದ್ದಕ ಹೋಗತದ
ಕ್ಯೂsss...
ಅದss ತನ್ನ ಗುಣಧರ್ಮ ಅನ್ನೂ ಹಂಗ.
ಮುಂಜಾನೀಂದ ಸಂಜೀತನಕ
ಖಾಲಿ ಹೊಟ್ಟೀಲೆ ನಿಲ್ಲಲಿಕ್ಕ ಬೇಕು
ನಮ್ಮ ಸರತಿ ಕಾಯಕೋತ.
ಒಬ್ಬ ಅಂದ,
(ಏನೋ ಹೊಸಾ ಶೋಧ ಮಾಡಿದವರ್ಹಂಗ)
"ಕುಟುಂಬ ಯೋಜನಾ ಇಂಡಿಯಾದಾಗ ಸಫಲ ಯಾಕಾಗಿಲ್ಲಂತ
ನನಗೀಗ ತಿಳೀತು,
ಪ್ರತಿ ಧಾನ್ಯಕೂ ಸರಕಾರ ನಿಲ್ಲಿಸೂ ಕ್ಯೂನ್ಯಾಗ
ನಿಲ್ಲಾಗ ಮಕ್ಕಳ ಬ್ಯಾಡಾ ?"

---

* 1973–74 ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ಏರ್ಪಡಿಸಿದ ವಿದ್ಯಾರ್ಥಿ ಕವಿಗೋಷ್ಠಿಯಲ್ಲಿ ಮೊದಲ ಬಹುಮಾನ ಪಡೆದ ಕವಿತೆ

ನನಗೂ ಮಜಾ ಅನ್ನಿಸ್ತ,
ಕಾಲೇಜಿನ ನೆಪ ಹೇಳೂ ಮಂಗ
ಸಿನಿಮಾ ಥೇಟರ್ ಕ್ಯೂನಾಗ
ಮಗಳು, ಮಹಾತ್ಮಾ ಗಾಂಧಿ ರೋಡಿನ್ಯಾಗ
ನನ್ನ service ಎಲ್ಲಾ ಕ್ಯೂನಾಗ
ನಿಲ್ಲೂದರೊಳಗ ಕಳೀತದ.
ಈ ಹುಂಬ ಗುತಿಗೀ ರಾಜ್ಯದಾಗ,
ಅಂವ ಶಾಣ್ಯಾ,
ಕಾಳಾ ಬಜಾರದಾಗ ಮುಕ್ಕಾಟಲೆ ರೊಕ್ಕ ತೆಗಿಯಾಂವ.
ಇಲ್ಲಾಂದರ,
ಹೀಂಗs ನ್ಯಾಯ ಬೆಲೆ ಅಂಗಡೀಗ ಕೋಟಾ ಬರ್ತದ,
ಒಳಗೀಂದ ಹೊರಗ ಹೋಗ್ತದ,
ಸಿಲ್ಲಿಸಾವರಿಗ ಓಟು ಕೊಡೂ ಜನ ಇರೂತನಕ
ನಿಲ್ಲಾವರ ನಿಂದರತಾರು,
ಸಿಂತs ನಿಂದರತಾರು
ದಿನ – ತಿಂಗಳಗಟ್ಟಲೆ,
ವರ್ಷಗಟ್ಟಲೆ, ನ್ಯಾಯಾರ್ಥ,
ನಸುಕಿನ್ಯಾಗ ಎದ್ದು ಸಂಜೀ ತನಕ
ಚಿಂತಿಯಿಂದ ತಲೀ ಭಾರ ಮಾಡಕೋತ.

ಪರಮಾಣು ಶಕ್ತಿಯ ರಹಸ್ಯ

ಎಸ್. ಸುಂದರರಾಜನ್

ನಮ್ಮ ಸುತ್ತ ಇರುವ ವಿಧವಿಧದ ವಸ್ತುರಾಶಿಗಳೆಲ್ಲಾ, ಪ್ರಜ್ವಲಿಸುತ್ತಿರುವ ಗೋಳಗಳಿಂದ, ನಕ್ಷತ್ರಗಳಿಂದ ಹಿಡಿದು ಗ್ರಹಗಳು, ಭೂಮಿ, ಮರ, ಗಿಡ, ಪೆನ್ನು, ಈ ಲೇಖನ ಬರೆಯುತ್ತಿರುವ ಕಾಗದ ಇವೆಲ್ಲಾ ಕೇವಲ 103 ಧಾತುಗಳಿಂದ (elements) ನಿರ್ಮಿತವಾಗಿವೆ. ಈ ಎಲ್ಲಾ ಧಾತುಗಳೂ ಏತರಿಂದ ನಿರ್ಮಿತವಾಗಿವೆ? ಇವನ್ನು ಎಲ್ಲಿಯುವರೆಗೆ ವಿಭಾಗಿಸಬಹುದು? ಕೊನೆಯೇ ಇಲ್ಲದಂತೆ ವಿಭಾಗಿಸಬಹುದೇ? ಅಥವ ಇನ್ನು ವಿಭಾಗಿಸಲಾರದಂತಿರುವ ಕೊನೆಯ ಘಟಕವೇನಾದರೂ ಧಾತುಗಳಿಗೆ ಉಂಟೋ? ಈ ಮೇಲಿನ ಪ್ರಯಾನುಪ್ರಯವಾದ ಪ್ರಶ್ನೆಗಳು ಬಹಳ ಕಾಲದಿಂದಲೂ ಹಿಂದಿನ ವಿಜ್ಞಾನಿಗಳ ಮನಸ್ಸನ್ನು ಮುತ್ತಿದ್ದವು.

ದ್ರವ್ಯರಾಶಿಯ ನಿರಂತರತೆಯ ಬಗ್ಗೆ ಎರಡು ವಾದಗಳು ಪ್ರತಿಪಾದಿಸಲ್ಪಟ್ಟವು. ಈ ಎರಡೂ ಭಿನ್ನವಾದವು. ಅಥೆನ್ಸ್‌ನ ವಿಜ್ಞಾನಿಯಾದ ಅನೆಕ್ಸಗೋರಾಸ್ ಎಂಬುವನು ದ್ರವ್ಯರಾಶಿಯು ಚಿರಂತನವಾದುದೆಂದೂ, ಸಂಖ್ಯೆಗಳನ್ನು ವಿಭಾಗಿಸುವಂತೆ ಅವುಗಳನ್ನು ಅನಂತದ (infinity) ವರೆವಿಗೂ ವಿಭಾಗಿಸುತ್ತಲೇ ಇರಬಹುದೆಂದೂ ವಾದಿಸಿದನು. ಇವನನ್ನು ಅನೇಕರು ಬೆಂಬಲಿಸಿದರು, ಪ್ರಖ್ಯಾತ ಅರಿಸ್ಟಾಟಲ್ ಕೂಡ ಇವನನ್ನು ಬೆಂಬಲಿಸಿದನು. ಇದರ ವಿರುದ್ಧ ವಾದ ಮಂಡಿಸಿದವರು ಲ್ಯೂಸಿಪಸ್ ಮತ್ತು ಅವನ ಹಿಂಬಾಲಕ ಡೆಮಾಕ್ರಿಟಸ್. ಇವರು 2400 ವರ್ಷಗಳ ಹಿಂದೆ ಏಷ್ಯ ಮೈನರ್‌ನಲ್ಲಿ ವಾಸಿಸುತ್ತಿದ್ದರು. ಇವರು ದ್ರವ್ಯರಾಶಿಯು, ಅತಿ ಸೂಕ್ಷ್ಮ, ವಿಭಾಗಿಸಲಸಾಧ್ಯವಾದ ಮತ್ತು ಕಣ್ಣಿಗೆ ಕಾಣಿಸದ ವಸ್ತುಗಳಿಂದ ಮಾಡಲ್ಪಟ್ಟಿದೆಯೆಂದೂ ಇವುಗಳನ್ನು ಪರಮಾಣು (Atom) ಎಂದು ಕರೆಯಬಹುದೆಂದೂ ವಾದಿಸಿದರು.

ಆದರೆ, ಖಚಿತವಾಗಿ ದ್ರವ್ಯರಾಶಿಯ ಅಂತಿಮ ಘಟಕಗಳು ಪರಮಾಣುಗಳು ಎಂದು ಸಿದ್ಧಪಡಿಸಿದವನು ಜಾನ್‌ಡಾಲ್ಟನ್. ಇವನು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಒಂದೇ ಧಾತುವಿನ ಎಲ್ಲಾ ಪರಮಾಣುಗಳೂ ಒಂದೇ ರೀತಿ ಇರುವುವೆಂದೂ ಬೇರೆ ಬೇರೆ ಧಾತುಗಳ ಪರಮಾಣುಗಳು ಬೇರೆ ಬೇರೆ ರೀತಿ ಇರುವವೆಂದೂ ಸೂಚಿಸಿದನು.

ಪರಮಾಣುಗಳು ಅತ್ಯಂತ ಚಿಕ್ಕದಾದುವು. ಕೇವಲ 2 ಔನ್ಸ್ ತೂಗುವ ತಾಮ್ರದ ಚೂರಿನಲ್ಲಿ 602, 000, 000, 000, 000, 000, 000, 000 ಅಥವ 6.02×10^{23} ಪರಮಾಣುಗಳು ಇವೆ. ಈ ಸಂಖ್ಯೆಯ ಅಗಾಧತೆಯನ್ನು ಅರ್ಥ ಮಾಡಿಕೊಳ್ಳಲು ಒಂದು ಉದಾಹರಣೆಯನ್ನು ಪರಿಶೀಲಿಸೋಣ. ನಮ್ಮ ಹತ್ತಿರ 6.02×10^{23} ಬಟಾಣಿಕಾಳುಗಳಿವೆಯೆಂದುಕೊಳ್ಳಿ. ಅವು ಎಷ್ಟು ಸ್ಥಳ ವನ್ನು ಆಕ್ರಮಿಸುತ್ತವೆ? ಬಟಾಣಿಕಾಳುಗಳು ಸಾಧಾರಣ ಗಾತ್ರದವೆಂದುಕೊಂಡರೆ 100 ಅಥವಾ 10^2 ಬಟಾಣಿಕಾಳುಗಳು ಒಂದು ಘನ ಇಂಚನ್ನು ತುಂಬುತ್ತವೆ. ಒಂದು ರೆಫ್ರಿಜಿರೇಟರ್ ತುಂಬಲು ಎಷ್ಟು ಕಾಳುಗಳು ಬೇಕು? ಸುಮಾರು 10^6. ಒಂದು ಸಾಧಾರಣ ಆಕಾರದ ಮಳಿಗೆಯನ್ನು ತುಂಬಲು? ಸುಮಾರು 10^9. ಬೊಂಬಾಯಿಯಂತಹ ಒಂದು ದೊಡ್ಡ ಪಟ್ಟಣದಲ್ಲಿರುವ ಎಲ್ಲಾ ಮಳಿಗೆ ಗಳನ್ನೂ ತುಂಬಲು ಸುಮಾರು 10^{15}. ಭೂಮಿಯ ಮೇಲೆಲ್ಲಾ ಹತ್ತು ಅಡಿ ದಪ್ಪ ವಾಗಿ ತುಂಬಲು? ಸುಮಾರು 10^{22}. ಆದರೂ ನಮ್ಮ ಹತ್ತಿರ ಬಟಾಣಿ ಕಾಳುಗಳು ಉಳಿದೇ ಇವೆ. 6.02×10^{23}. ರಷ್ಟು ಬಟಾಣಿಕಾಳುಗಳನ್ನು ಸಂಪೂರ್ಣ ಉಪ ಯೋಗಿಸಬೇಕಾದರೆ, ಭೂಮಿಯಷ್ಟು ಗಾತ್ರದ ಅರವತ್ತು ಗ್ರಹಗಳ ಮೇಲೆಲ್ಲಾ 10 ಅಡಿ ದಪ್ಪದ ಬಟಾಣಿ ಕಾಳುಗಳ ಹೊದಿಕೆ ಹೊದಿಸಬೇಕು.

ಪರಮಾಣುಗಳನ್ನು ದ್ರವ್ಯರಾಶಿಯನ್ನು ಕಟ್ಟುವ ಅಥವ ವಿಶ್ವವನ್ನು ಕಟ್ಟುವ ಇಟ್ಟಿಗೆಗಳೆಂದು ಕರೆಯಬಹುದು. ಅಂದರೆ, ದ್ರವ್ಯರಾಶಿಯ ಅಂತಿಮ ಘಟ್ಟ ಪರ ಮಾಣುಗಳೆಂದಾಯಿತು. ವಿಖ್ಯಾತ ವಿಜ್ಞಾನಿಗಳಾದ ನ್ಯೂಟನ್ ಮತ್ತು ಡಾಲ್ಟನ್ ಸಹ ಹಾಗೇ ತಿಳಿದಿದ್ದರು.

ಆದರೆ, ಹತ್ತೊಂಭತ್ತನೆಯ ಶತಮಾನದ ಕೊನೆಯ ವರುಷಗಳಲ್ಲಿ ಪರಮಾಣು ಗಳೂ ಕೂಡ ಅತ್ಯಂತ ಸಣ್ಣ ಘಟಕಗಳಿಂದ ಕಟ್ಟಲ್ಪಟ್ಟಿವೆಯೆಂದು ವಿಜ್ಞಾನಿಗಳು ಯೋಚಿಸಲು ಆರಂಭಿಸಿದರು. ಇವತ್ತು, ನಮಗೆಲ್ಲಾ ಗೊತ್ತಿದೆ. ಪರಮಾಣುಗಳೇ ಅತ್ಯಂತ ಚಿಕ್ಕವಲ್ಲ ಅದಕ್ಕಿಂತ ಚಿಕ್ಕ ಘಟಕ (units) ಗಳಿ ವೆಯೆಂದು.

ಪರಮಾಣುವಿನ ರಚನೆ

ಪರಮಾಣುವು ಮುಖ್ಯವಾಗಿ ಮೂರು ಘಟಕಗಳಿಂದ ಮಾಡಲ್ಪಟ್ಟಿದೆ. ಅವು ಗಳೇ 1) ಎಲೆಕ್ಟ್ರಾನ್ (e) 2) ಪ್ರೋಟಾನ್ (p) ಮತ್ತು 3) ನ್ಯೂಟ್ರಾನ್‌ಗಳು. ವಿವಿಧ ಧಾತುಗಳ ಪರಮಾಣುಗಳು ವಿವಿಧ ರೀತಿಯವೆಂದು ಹಿಂದೆಯೇ ಹೇಳಿವೆ. ಆದರೆ, ಎಲ್ಲಾ ಪರಮಾಣುಗಳಲ್ಲೂ ಇವು ಮೂರು ಇದ್ದೇ ಇರಬೇಕು. 103 ಧಾತುಗಳ ಪರಮಾಣುಗಳು ಈ ಮೂರು ಮೂಲಭೂತ ವಸ್ತುಗಳನ್ನು ವಿವಿಧ ಪ್ರಮಾಣಗಳಲ್ಲಿ ಪಡೆದಿರುತ್ತವೆ. ಪ್ರೋಟಾನ್ ಎಂಬುದು ಧನ ವಿದ್ಯುತ್ತನ್ನು

ಹೊಂದಿದೆ (p⁺). ಎಲೆಕ್ಟ್ರಾನ್ ಎಂಬುದು ಋಣ ವಿದ್ಯುತ್ತನ್ನು ಹೊಂದಿದೆ (e⁻) ನ್ಯೂಟ್ರಾನ್ ಎಂಬುದು ಯಾವ ವಿದ್ಯುಧ್ರುವದ ಕಡೆಗೂ ಓಲುವುದಿಲ್ಲ. ಅಂದರೆ, ಅದು ಒಂದು ಋಣಧ್ರುವ ಮತ್ತು ಒಂದು ಧನ ಧ್ರುವವನ್ನು ಹೊಂದಿದೆ (n⁺⁻) ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳು ಒಂದೇ ಸಮನಾದ ದ್ರವ್ಯರಾಶಿಯನ್ನು ಹೊಂದಿವೆ. ಎಲೆಕ್ಟ್ರಾನ್‌ನಲ್ಲಿ ದ್ರವ್ಯರಾಶಿ ಹೆಚ್ಚು ಕಡಿಮೆ ಇಲ್ಲವೆಂದೇ ಹೇಳಬಹುದು. ಪ್ರೋಟಾನ್ ಅತ್ಯಂತ ಚಿಕ್ಕದಾದರೂ ಎಲೆಕ್ಟ್ರಾನ್‌ಗೆ ಹೋಲಿಸಿದರೆ, ಅದು ದೈತ್ಯ. ಅದು ಎಲೆಕ್ಟ್ರಾನ್‌ಗಿಂತ 2000 ದಷ್ಟು ಹೆಚ್ಚು ತೂಕ ಹೊಂದಿದೆ.

ಈ ಮೂಲಭೂತ ವಸ್ತುಗಳು ಪರಮಾಣುವಿನಲ್ಲಿ ಹೇಗೆ ವ್ಯವಸ್ಥೆಗೊಳಿಸಲ್ಪಟ್ಟಿವೆಯೆಂಬ ಅಂಶವನ್ನು ನಮಗೆ ಪರಿಚಯ ಮಾಡಿಕೊಟ್ಟವರು ಮುಖ್ಯವಾಗಿ ಇಂಗ್ಲೆಂಡಿನ ಭೌತಶಾಸ್ತ್ರಜ್ಞ ರುದರ್‌ಫೋರ್ಡ್ ಮತ್ತು ಡೆನ್ಮಾರ್ಕಿನ ನೀಲ್ಸ್‌ಬೋರ್. ಇವರು ನಿರ್ಮಿಸಿದ ಪರಮಾಣುವಿನ ಪ್ರತಿಕೃತಿಯು ಸರಿಯೆಂದು ಎಲ್ಲರಿಂದಲೂ ಒಪ್ಪಿಕೊಳ್ಳಲ್ಪಟ್ಟಿದೆ.

ಇದರ ಪ್ರಕಾರ ಪರಮಾಣುವಿನ ಮಧ್ಯಭಾಗದಲ್ಲಿ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳು ಸೇರಿ ಪರಮಾಣು ಬೀಜ (nucleus)ವನ್ನು ನಿರ್ಮಿಸಿವೆ. ಮತ್ತು ಇದರ ಸುತ್ತ ಎಲೆಕ್ಟ್ರಾನ್‌ಗಳು ನಿಖರವಾದ, ಖಚಿತವಾದ ವೃತ್ತಗಳಲ್ಲಿ ಸುತ್ತುತ್ತಿರುತ್ತವೆ. ಇವುಗಳ ವೃತ್ತ ದೀರ್ಘ ವೃತ್ತವಾಗಿರುತ್ತದೆ. ಪರಮಾಣುವಿನ ರಚನೆಯನ್ನು ಸೌರವ್ಯೂಹದ ರಚನೆಗೆ ಹೋಲಿಸಬಹುದು. ಸೌರವ್ಯೂಹದ ಸ್ಥಿರವಾದ ಮಧ್ಯದ ನಕ್ಷತ್ರ ಸೂರ್ಯನಿಗೆ ಬದಲಾಗಿ ಪರಮಾಣುವಿನಲ್ಲಿ ಪರಮಾಣು ಬೀಜವಿದೆ. ಗ್ರಹಗಳಿಗೆ ಬದಲಾಗಿ ಎಲೆಕ್ಟ್ರಾನ್‌ಗಳು ದೀರ್ಘವೃತ್ತದಲ್ಲಿ ಸುತ್ತುತ್ತಿವೆ. ಆದ್ದರಿಂದ ಪರಮಾಣುವನ್ನು ಸೂಕ್ಷ್ಮ ಸೌರವ್ಯೂಹ (miniature solar system) ಎನ್ನುತ್ತಾರೆ.


ಪರಮಾಣುಗಳಲ್ಲೆಲ್ಲಾ ಅತ್ಯಂತ ಹಗುರವಾದ ಜಲಜನಕದ ಪರಮಾಣುವನ್ನು ಪರಿಶೀಲಿಸೋಣ. ಇದರ ಕೇಂದ್ರ ಒಂದೇ ಪ್ರೋಟಾನ್‌ನಿಂದ ಮಾಡಲ್ಪಟ್ಟಿದೆ. ನ್ಯೂಟ್ರಾನ್ ಇಲ್ಲ, ಮತ್ತು ಇದರ ಸುತ್ತ ಒಂದೇ ಒಂದು ಎಲೆಕ್ಟ್ರಾನ್ ಸುತ್ತುತ್ತಿರುತ್ತದೆ. ಇದರ ನಂತರ ಬರುವ ಲೀಥಿಯಂ ಪರಮಾಣುವನ್ನು ಪರಿಶೀಲಿಸಿದರೆ, ಅದರಲ್ಲಿ 3 ಪ್ರೋಟಾನ್‌ಗಳು, 3 ನ್ಯೂಟ್ರಾನ್‌ಗಳು ಮತ್ತು 3 ಎಲೆಕ್ಟ್ರಾನ್‌ಗಳು ಇವೆ.

ಪರಮಾಣುವು ವಿದ್ಯುತ್ ತಟಸ್ಥ (electrically neutral)ವಾಗಿರುವುದರಿಂದ ಋಣ ವಿದ್ಯುತ್‌ವಾಹಿ ಎಲೆಕ್ಟ್ರಾನುಗಳು ಧನ ವಿದ್ಯುತ್‌ವಾಹಿ ಪ್ರೋಟಾನುಗಳ ಸಂಖ್ಯೆಗೆ ಸಮನಾಗಿರಬೇಕು.

ಒಂದು ಪರಮಾಣುವಿನಲ್ಲಿರುವ ಪ್ರೋಟಾನುಗಳ ಸಂಖ್ಯೆಯನ್ನು ಆ ಪರಮಾಣುವಿನ "ಪರಮಾಣು ಸಂಖ್ಯೆ" (atomic number) ಎನ್ನುತ್ತಾರೆ. ಉದಾಹರಣೆಗೆ ಜಲಜನಕ ಪರಮಾಣುವಿನಲ್ಲಿ ಒಂದೇ ಪ್ರೋಟಾನ್ ಇದೆ. ಆದ್ದರಿಂದ ಅದರ ಪರಮಾಣು ಸಂಖ್ಯೆ 1 ಹೀಲಿಯಂನಲ್ಲಿ 2 ಇವೆ. ಆದ್ದರಿಂದ ಅದರ ಸಂಖ್ಯೆ 2. ಲೀಥಿಯಂ ಪರಮಾಣುವಿನಲ್ಲಿ 3 ಪ್ರೋಟಾನ್‌ಗಳಿವೆ. ಆದ್ದರಿಂದ ಅದರ ಸಂಖ್ಯೆ 3. ಇಂಗಾಲದ ಪರಮಾಣುವಿನಲ್ಲಿ 6 ಪ್ರೋಟಾನ್‌ಗಳಿವೆ, ಆದ್ದರಿಂದ ಅದರ ಸಂಖ್ಯೆ 6 ಇತ್ಯಾದಿ. ಒಂದು ಪರಮಾಣುವಿನ ಕೇಂದ್ರದಲ್ಲಿರುವ ಪ್ರೋಟಾನ್ ಮತ್ತು ನ್ಯೂಟ್ರಾನ್‌ಗಳ ಸಂಖ್ಯೆಯನ್ನು ಸೇರಿಸಿ ಅದನ್ನು ಪರಮಾಣುವಿನ "ಪರಮಾಣು ತೂಕ" (atom c weight) ಎನ್ನುತ್ತಾರೆ. ಇದರ ಪ್ರಕಾರ ಜಲಜನಕದ ಪರಮಾಣುವಿನ ಪರಮಾಣು ತೂಕ 1. ಹೀಲಿಯಂನದು 4, ಏಕೆಂದರೆ ಅದರಲ್ಲಿ 2 ಪ್ರೋಟಾನ್ ಮತ್ತು 2 ನ್ಯೂಟ್ರಾನ್‌ಗಳಿವೆ. ಲೀಥಿಯಂನದು 8 (4 ಪ್ರೋಟಾನ್‌ಗಳು ಮತ್ತು 4 ನ್ಯೂಟ್ರಾನ್‌ಗಳು). ಇಂಗಾಲದ ಪರಮಾಣುವಿನದು 12 (6 ಪ್ರೋಟಾನ್‌ಗಳು ಮತ್ತು 6 ನ್ಯೂಟ್ರಾನ್‌ಗಳು).

103 ಧಾತುಗಳಲ್ಲಿ ಪ್ರತಿಯೊಂದೂ ಪ್ರತ್ಯೇಕ ಪರಮಾಣು ಸಂಖ್ಯೆಯನ್ನು ಹೊಂದಿದೆ. ಕೇಂದ್ರದಲ್ಲಿನ ಪ್ರೋಟಾನುಗಳ ಸಂಖ್ಯೆ ಬೇರೆಯಾದರೆ, ಆ ಧಾತುವೇ ಬೇರೆಯಾಗುತ್ತದೆ.

ಒಂದೇ ಧಾತುವಿನ ಪರಮಾಣುಗಳು ಯಾವಾಗಲೂ ನಿರ್ದಿಷ್ಟ ಸಂಖ್ಯೆಯ ಪ್ರೋಟಾನ್‌ಗಳನ್ನು ಹೊಂದಿರುತ್ತವೆ. ಆದರೆ, ಈ ನಿಖರತೆ ನ್ಯೂಟ್ರಾನ್‌ಗಳಿಗೆ ಇಲ್ಲ. ಅಂದರೆ, ಧಾತುವಿನ ಪರಮಾಣುಗಳು ಒಂದೇ ಸಂಖ್ಯೆಯ ಪ್ರೋಟಾನುಗಳನ್ನು ಹೊಂದಿದ್ದು ಅವುಗಳ ನ್ಯೂಟ್ರಾನ್ ಸಂಖ್ಯೆಯಲ್ಲಿ ವ್ಯತ್ಯಾಸವಿರಬಹುದು. ಉದಾಹರಣೆಗಾಗಿ ಕೆಳಗಿನ 3 ಪರಮಾಣುಗಳನ್ನು ಪರಿಶೀಲಿಸೋಣ (ಚಿತ್ರ 1).



ಚಿತ್ರ 1

ಈ 3 ಪರಮಾಣುಗಳಲ್ಲೂ ಪ್ರೋಟಾನ್ ಒಂದೇ ಇದೆ. ಅಲ್ಲಿಗೆ ಇವುಗಳೆಲ್ಲಾ ಜಲಜನಕದ ಪರಮಾಣುಗಳೇ ಆಗಿರಬೇಕು. ಆದರೆ, ಇವುಗಳಲ್ಲಿ ಒಂದೇ ಒಂದು ಜಲಜನಕದ ಹಾಗೆ ಕಾಣುತ್ತದೆ (I). IIನೆಯದರಲ್ಲಿ ಒಂದು ನ್ಯೂಟ್ರಾನ್ ಇದೆ.

ಅಂದರೆ, ಇದು ಸಾಧಾರಣ ಜಲಜನಕಕ್ಕಿಂತ 2ರಷ್ಟು ಹೆಚ್ಚು ತೂಕ ಇದೆ. IIIನೆಯದರಲ್ಲಿ 2 ಜಾಸ್ತಿ ನ್ಯೂಟ್ರಾನ್‌ಗಳು ಇವೆ, ಅಲ್ಲಿಗೆ ಅದು ಸಾಧಾರಣ ಜಲಜನಕಕ್ಕಿಂತ 3ರಷ್ಟು ಹೆಚ್ಚು ತೂಕ ಇದೆ. ಅಲ್ಲಿಗೆ ಇವುಗಳನ್ನು ಬೇರೆ ಮಾಡುವುದು ಹೇಗೆ? ಪರಮಾಣು ಶಾಸ್ತ್ರಜ್ಞರು ಇಂತಹವುಗಳನ್ನು ಸಮಸ್ಥಾನಿಗಳು ಎನ್ನುತ್ತಾರೆ. ಅಂದರೆ, ಒಂದು ಪರಮಾಣುವು ಸಾಧಾರಣ ಪರಮಾಣುವಿನಷ್ಟು ಪರಮಾಣು ಸಂಖ್ಯೆಯನ್ನು ಹೊಂದಿದ್ದರೂ ಅವರ ತೂಕ ಬೇರೆಯಾಗಿರುತ್ತದೆ.



ಚಿತ್ರ 2

ಕೇವಲ 103 ತರಹದ ಧಾತುಗಳಿದ್ದರೆ ಕಡೇ ಪಕ್ಷ ಅವರ ಎಂಟರಷ್ಟಾದರೂ ಸಮಸ್ಥಾನಿಗಳಿವೆ (Isotopes). ಕ್ಯಾಡ್ಮಿಯಂ ಎಂಬ ಒಂದೇ ಧಾತುವಿಗೆ 19 ಸಮಸ್ಥಾನಿಗಳಿವೆ. ಈ ಎಲ್ಲಾ ಹತ್ತೊಂಭತ್ತೂ ಒಂದೇ ಪರಮಾಣು ಸಂಖ್ಯೆ ಹೊಂದಿದ್ದರೂ ವಿವಿಧ ಪರಮಾಣು ತೂಕಗಳನ್ನು ಹೊಂದಿವೆ. ಒಂದು ಮೇಜಿನ ಮೇಲೆ ಮರದ ಚೂರುಗಳನ್ನು ಜೋಡಿಸಿ. ಇದನ್ನು ಅಲ್ಲಾಡಿಸಿ, ಜೋಡಣೆಯನ್ನು ಕೆಡಿಸಬೇಕಾದರೆ ಅದು ಸುಮಾರಾದ ಕೆಲಸವೇ ಆಗುತ್ತದೆ. ಮೇಜನ್ನು ಜೋರಾಗಿ ಅಲ್ಲಾಡಿಸಬೇಕಾಗುತ್ತದೆ.

ಆದರೆ, ಚಿತ್ರ 2ರಲ್ಲಿರುವಂತೆ ಜೋಡಿಸಿದಾಗ ಜೋಡಣೆ ಕೆಡಿಸಲು ಮೇಜನ್ನು ಅಲುಗಾಡಿಸಲೇಬೇಕಿಲ್ಲ. ದೂರದಿಂದ ನೆಲವನ್ನು ಜೋರಾಗಿ ಒದ್ದರೆ ಸಾಕು, ಮೇಲಿನ ಮರದ ಚೂರುಗಳು ಕೆಳಗೆ ಬೀಳುತ್ತವೆ. ಮೊದಲನೆಯದರಲ್ಲಿ ಜೋಡಣೆ ಬಹಳ 'ಸ್ಥಿರ' (Stable)ವಾದುದು ಎರಡನೆಯದರಲ್ಲಿ ಅದು ಅಸ್ಥಿರ (unstable).


ಕೆಲವು ಪರಮಾಣು ಬೀಜಗಳು ಮೊದಲನೆಯ ಜೋಡಣೆಯಂತೆ ಸ್ಥಿರವಾದುವು. ಇನ್ನು ಕೆಲವು ಪರಮಾಣುಗಳ ಕೇಂದ್ರಗಳು ಎರಡನೆಯ ಜೋಡಣೆಯಂತೆ ಅಸ್ಥಿರವಾದುವು. ಅಂದರೆ. ಕೇಂದ್ರದ ಭಾಗಗಳು ಹೊರಗೆ ಕಳಚಿಕೊಂಡು ಬರಲು ಸದಾ ಸಿದ್ಧವಾಗಿರುತ್ತದೆ. ಇಂತಹ ಅಸ್ಥಿರ ಕೇಂದ್ರಗಳನ್ನು ಹೊಂದಿರುವ ಧಾತುಗಳಿಗೆ "ವಿಕಿರಣ ಧಾತುಗಳೆನ್ನುತ್ತಾರೆ" (Radio active elements).

ಉದಾಹರಣೆಗೆ ರೇಡಿಯಂ ಎಂಬ ಧಾತುವನ್ನು ಪರಿಶೀಲಿಸೋಣ. ರೇಡಿಯಂ ನಮಗೆ ಗೊತ್ತಿರಬೇಕು. ಏಕೆಂದರೆ, ಅದನ್ನು ಕೆಲವು ಖಾಯಿಲೆಗಳನ್ನು ಗುಣಪಡಿಸಲು ಆಸ್ಪತ್ರೆಗಳಲ್ಲಿ ಬಳಸುತ್ತಾರೆ. ರೇಡಿಯಂ ಪರಮಾಣುವಿನ ಕೇಂದ್ರಗಳು

ಬಹಳ ಅಸ್ಥಿರವಾದುವು. ಆದುದರಿಂದ ಸಾಧಾರಣವಾಗಿ ಭಾಗಗಳು ಯಾವಾಗಲೂ ಹೊರಬರುತ್ತಿರುತ್ತವೆ.

ರೇಡಿಯಂ ಧಾತುವಿನ ಸಂಖ್ಯೆ 88. ಆದ್ದರಿಂದ, ಪ್ರತಿ ಪರಮಾಣುವಿನಲ್ಲೂ 88 ಪ್ರೋಟಾನುಗಳಿರಬೇಕು. ಅದರ ಜೊತೆಗೆ 138 ನ್ಯೂಟ್ರಾನ್‌ಗಳಿವೆ. ಅದರ ಪರಮಾಣು ತೂಕ 226. ಕೆಲವು ಬಾರಿ ರೇಡಿಯಂ ಪರಮಾಣು ಕೇಂದ್ರ ಈ ರೀತಿ ಒಡೆಯುವುದು.

ಈಗ ಕೇಂದ್ರದಲ್ಲಿ ಉಳಿಯುವುದು 86 ಪ್ರೋಟಾನುಗಳು ಮತ್ತು 136 ನ್ಯೂಟ್ರಾನುಗಳು ಮಾತ್ರ. ಇಲ್ಲಿ ಪರಮಾಣುತೂಕ ಮಾತ್ರವಲ್ಲದೆ ಪರಮಾಣು ಸಂಖ್ಯೆಯೂ ಬದಲಾಯಿಸುತ್ತದೆ. ಒಂದು ಸಂಪೂರ್ಣ ಬೇರೆ ಧಾತುವೇ ಆಗುತ್ತದೆ. ಅದರ ಸಂಖ್ಯೆ 86 ಅದರ ಹೆಸರು ರೆಡಾನ್ (Radon) ರೆಡಾನ್ ಕೂಡ ವಿಕಿರಣಯುಕ್ತವಾದುದು ಆದುದರಿಂದ ಅದೂ ಭಾಗಗಳನ್ನು ತಕ್ಷಣ ಕಳೆದುಕೊಳ್ಳುತ್ತದೆ. ಇದು ಪುನರಾವರ್ತನೆ ಹೊಂದಿ ಕೊನೆಗೆ ಪರಮಾಣು ಸಂಖ್ಯೆ 82 ತಲುಪಿದಾಗ ನಿಲ್ಲುತ್ತದೆ. ಅದು ಸೀಸ. ಸೀಸದ ಪರಮಾಣು ಕೇಂದ್ರ ಬಹಳ ಸ್ಥಿರವಾದುದು. ಆದ್ದರಿಂದ, ಅದರಿಂದ ಯಾವ ಭಾಗಗಳೂ ಹೊರಬೀಳುವುದಿಲ್ಲ.




ಚಿತ್ರ 3

ಒಂದು ಧಾತುವಿನ ಸಮಾನ ಸ್ಥಾನಿಗಳು ಒಂದೇ ಪರಮಾಣು ಸಂಖ್ಯೆ ಆದರೆ, ಬೇರೆ ಬೇರೆ ಪರಮಾಣು ತೂಕ ಹೊಂದಿರುತ್ತವೆಂದು ಮತ್ತೊಮ್ಮೆ ಗಮನಕ್ಕೆ ತಂದುಕೊಳ್ಳಿ. ಕೆಲವು ಸಮಾನಸ್ಥಾನಿಗಳು ಉಳಿದವುಗಳಿಗಿಂತ ಬಹಳ ಅಸ್ಥಿರವಾಗಿರುವುದರಿಂದ ಪರಮಾಣು ಶಾಸ್ತ್ರಜ್ಞರಿಗೆ ಆಸಕ್ತಿ ಇರುವುದು ವಿಕಿರಣಧಾತುವಿನಲ್ಲಲ್ಲ, ವಿಕಿರಣ ಸಮಾನಸ್ಥಾನಿಯಲ್ಲಿ (Radioisotopes).

ನೂರಾರು ತರಹದ ವಿಕಿರಣ ಸಮಾನಸ್ಥಾನಿಗಳಿದ್ದರೂ, ಅವುಗಳಿಂದ ಸಡಿಲವಾಗಿ ಹೊರಗೆ ಸಿಡಿಯುವ ಕಣಗಳು ಸಾಮಾನ್ಯವಾಗಿ ಈ ಕೆಳಗಿನ ಎರಡರಲ್ಲಿ ಒಂದು ತರಹ ಇರುತ್ತವೆ.

ಮೊದಲನೆಯದನ್ನು (ಅ) ಆಲ್ಫಕಣ (alpha particle) ಎನ್ನುತ್ತಾರೆ. ಇದು ಹೀಲಿಯಂನ ಕೇಂದ್ರದಂತೆಯೇ ಇದ್ದರೂ, ಅದರಿಂದ ಬೇರೆ. ಏಕೆಂದರೆ, ಇದು

ಒಂದು ದೊಡ್ಡ ಕೇಂದ್ರದ ಭಾಗ ಮಾತ್ರ. ಒಂದು ಕೇಂದ್ರದಿಂದ ಒಂದು ಆಲ್ಫ ಕಣ ಹೊರಬಂದರೆ, ಅದು ಎರಡು ಪ್ರೋಟಾನುಗಳನ್ನು ಕಳೆದುಕೊಳ್ಳುತ್ತದೆ. ಪರಮಾಣು ಸಂಖ್ಯೆ ಎರಡು ಕಡಿಮೆಯಾಗುತ್ತದೆ. ಮತ್ತು ಪರಮಾಣು ಬೇರೆ ಧಾತುವಾಗುತ್ತದೆ (ಉದಾ : ಒಂದು 94 ನೇ ಧಾತು ಆಲ್ಫ ಕಣ ಕಳೆದುಕೊಂಡರೆ 92 ಆಗುತ್ತದೆ). ಅದೂ ಅಲ್ಲದೆ, ಒಂದು ಆಲ್ಫ ಕಣ ಹೋದರೆ, ಪರಮಾಣುತೂಕ 4 ಕಡಿಮೆ ಆಗುತ್ತದೆ (2 ಪ್ರೋಟಾನುಗಳು + 2 ನ್ಯೂಟ್ರಾನುಗಳು)



ಚಿತ್ರ 4

ವಿಕಿರಣ ಪರಮಾಣುವಿನಿಂದ ಹೊರಬರುವ ಎರಡನೇ (ಆ) ಕಣಕ್ಕೆ ಬೀಟಾಕಣ (Beta Particle) ಎಂದು ಹೆಸರು. ಇದನ್ನು ತಕ್ಷಣ ನಾವು ಎಲೆಕ್ಟ್ರಾನ್ ಎಂದು ತಪ್ಪು ತಿಳಿಯಬಹುದು. ಏಕೆಂದರೆ, ಅದರಂತೆ ಇದೆ. ಆದರೆ, ಇದು ಸುತ್ತುತ್ತಿರುವ ಎಲೆಕ್ಟ್ರಾನ್ ಅಲ್ಲ, ಕೇಂದ್ರದಿಂದ ಹೊರಬಿದ್ದ ಎಲೆಕ್ಟ್ರಾನ್.

ಆದರೆ. ನಿಮಗೆ ಆಶ್ಚರ್ಯವಾಗಬಹುದು. ಕೇಂದ್ರದೊಳಗೆ ಎಲೆಕ್ಟ್ರಾನುಗಳು ಎಲ್ಲಿಂದ ಬಂದವು ಎಂದು ? ನಿಜ. ಕೇಂದ್ರದೊಳಗೆ ಎಲೆಕ್ಟ್ರಾನುಗಳಿಲ್ಲ. ಅಂದರೆ, ಇವು ಹೇಗೆ ಬಂದವು? ನ್ಯೂಟ್ರಾನುಗಳನ್ನು ಸ್ವಲ್ಪ ಜ್ಞಾಪಿಸಿಕೊಳ್ಳಿ. ಅದು ಹೀಗಿಲ್ಲವೆ (±) ? ಅಂದರೆ ಒಂದು ಋಣ ಚಿಹ್ನೆ ಮತ್ತು ಒಂದು ಧನ ಚಿಹ್ನೆ ಇದೆ ಅದಕ್ಕೆ. ವಿಕಿರಣ ಪರಮಾಣುವು ಬೀಟ ಕಣವನ್ನೆಸೆಯಲು, ತಯಾರಾದಾಗ, ಅದರ ಕೇಂದ್ರದ ನ್ಯೂಟ್ರಾನುಗಳು ಈ ರೀತಿ ಬದಲಾವಣೆ ಹೊಂದುತ್ತವೆ. ಅದರಲ್ಲಿನ ಋಣ ವಿದ್ಯುತ್‌ಭಾಗ ಆಚೆ ಬರುತ್ತದೆ. ಅಂದರೆ, ಒಂದಕ್ಕೊಂದು ಅಂಟಿಕೊಂಡಿರುವ + – ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳಂತೆ ಕಂಡುಬರುತ್ತವೆ. ಸ್ವಲ್ಪ ಹೊತ್ತಿನ ನಂತರ ಎಲೆಕ್ಟ್ರಾನ್ ಕೇಂದ್ರದಿಂದ ಹೊರಗೆ ಹಾರಿದಾಗ, ಮುಂಚೆ ಇದ್ದ ನ್ಯೂಟ್ರಾನು ಪ್ರೋಟಾನಾಗಿ ಪರಿವರ್ತಿತವಾಗುತ್ತವೆ.

ಹೆಚ್ಚಾದ ಒಂದು ಪ್ರೋಟಾನು, ಆ ಪರಮಾಣುವಿನ ಸಂಖ್ಯೆಯಲ್ಲಿ ಒಂದು ಹೆಚ್ಚು ಮಾಡುತ್ತದೆ. ಆದ್ದರಿಂದ ಒಂದು ಬೀಟ ಕಣ ಕಳೆದುಕೊಂಡ ಪರಮಾಣು ಹೆಚ್ಚು ಸಂಖ್ಯೆಯ ಪರಮಾಣುವಾಗಿ ಪರಿವರ್ತನೆ ಹೊಂದುತ್ತದೆ (37 ನೇ ಧಾತುವೊಂದು ಬೀಟಕಣ ಕಳೆದುಕೊಂಡರೆ, ಅದು 38 ನೇ ಧಾತುವಾಗುತ್ತದೆ).

ಅಂದರೆ, ಒಂದು ಪರಮಾಣುವಿನಲ್ಲಿ ಆಲ್ಫಕಣ ಹೋದರೆ, ಪರಮಾಣು ಸಂಖ್ಯೆ ಕಡಿಮೆ ಆಗುತ್ತದೆ. ಬೀಟಕಣ ಹೋದರೆ, ಪರಮಾಣು ಸಂಖ್ಯೆ ಹೆಚ್ಚುತ್ತದೆ ಎಂದಾಯಿತು.

ಇದಲ್ಲದೆ, 3ನೇ ತರಹದ ಕಿರಣಗಳೂ ಸಹ ಪರಮಾಣುವಿನಿಂದ ಹೊರಡುತ್ತವೆ. ಅವನ್ನು ಗಾಮಾ ಕಿರಣಗಳೆನ್ನುತ್ತಾರೆ. ಆದರೆ, ಅದು ಆಲ್ಫ ಮತ್ತು ಬೀಟಾ ಕಿರಣಗಳಂತೆ ಘನ ಪದಾರ್ಥಗಳಿಂದ ಮಾಡಲ್ಪಟ್ಟಿಲ್ಲ. ಅದು ಬೆಳಕಿನ ಕಿರಣ.


ವಿಕಿರಣವು, ಪರಮಾಣುತಜ್ಞರಿಗೆ ಪರಮಾಣುವು ಕೇವಲ ಒಂದು ಘನೀಭೂತ ಗೋಳವಲ್ಲವೆಂದೂ ಅದರೊಳಗೆ ಅನೇಕ ಪ್ರಯೋಗಗಳು ನಡೆಯಬಲ್ಲವೆಂದೂ ತೋರಿಸಿತು.

ಪರಮಾಣುವಿನ ವಿಷಯ ಹೆಚ್ಚು ಗೊತ್ತಾದಂತೆಲ್ಲಾ, ವಿಜ್ಞಾನಿಗಳು ಪರಮಾಣು ಬೀಜದ (nucleus) ಮೇಲೆ ಪ್ರಯೋಗ ನಡೆಸಲಾರಂಭಿಸಿದರು. ರೇಡಿಯಂ ಸತತವಾಗಿ ಎಸೆಯುವ ಆಲ್ಫಕಣಗಳನ್ನು ಒದಗಿಸುತ್ತಲೇ ಇರುತ್ತದೆ. ಇದರಿಂದ ಈ ಆಲ್ಫಕಣಗಳನ್ನು ಪ್ರಬಲವಾದ ವಿದ್ಯುದಯಸ್ಕಾಂತದ ಮೂಲಕ ತಮಗೆ ಬೇಕಾದ ದಾರಿಯಲ್ಲಿ ತಿರುಗಿಸಬಹುದೆಂದು ವಿಜ್ಞಾನಿಗಳು ಅರಿತರು. ಇಲ್ಲಿಂದ ಒಂದು ಗುರಿಯೆಡೆಗೆ ಈ ಆಲ್ಫ ಕಣಗಳ ಪ್ರವಾಹವನ್ನು ತಿರುಗಿಸುವುದು ಸಾಧ್ಯವಾಯಿತು. ಇದು ಬಹಳ ಅದ್ಭುತವಾದ, ಸೂಕ್ಷ್ಮ ಬುಲೆಟ್‌ಗಳಿಗೆ ಹಾದಿ ಮಾಡಿಕೊಟ್ಟಿತು. ಅವೆಂದರೆ, ಆಲ್ಫ ಬುಲೆಟ್‌ಗಳು. ವಿಜ್ಞಾನಿಗಳು ಈ ಕಣ್ಣಿಗೆ ಕಾಣಿಸದ ಬುಲೆಟ್‌ಗಳಿಂದ ಕಣ್ಣಿಗೆ ಕಾಣಿಸದ ಅಣು ಬೀಜಗಳಿಗೆ ಹೊಡೆಯತೊಡಗಿದರು. ಅನೇಕ ಪ್ರಯೋಗಗಳಿಂದ ಆಲ್ಫ ಬುಲೆಟ್‌ಗಳ ಜೊತೆಗೆ ಪ್ರೋಟಾನ್ ಬುಲೆಟ್‌ಗಳೂ, ಎಲೆಕ್ಟ್ರಾನ್ ಬುಲೆಟ್‌ಗಳೂ ಮತ್ತು ನ್ಯೂಟ್ರಾನ್ ಬುಲೆಟ್‌ಗಳೂ ಬಳಕೆಗೆ ಬಂದವು.

ಎಲ್ಲಕ್ಕಿಂತ ನ್ಯೂಟ್ರಾನ್ ಬುಲೆಟ್‌ಗಳು ಬಹಳ ಪರಿಣಾಮಕಾರಿಯಾದವು. ಅವು ದೊಡ್ಡವಾಗಿರುವುದಲ್ಲದೆ. ಹೆಚ್ಚು ಧನ ವಿದ್ಯುತ್‌ಅನ್ನು ಹೊಂದಿದ್ದ ಪ್ರೋಟಾನ್‌ನಂತೆ ಪರಮಾಣು ಬೀಜದಿಂದ ಹೊರತಳ್ಳಲ್ಪಡುತ್ತಿರಲಿಲ್ಲ. ಏಕೆಕೆವರೆ, ಅವುಗಳಲ್ಲಿ, ಧನ ವಿದ್ಯುತ್ ಇರಲಿಲ್ಲ.

ಯಾವಾಗ ಮಾನವ ಪರಮಾಣುಬೀಜದ ಕಡೆಗೆ ಬುಲೆಟ್‌ಗಳನ್ನು ಹೊಡೆಯಲು ಕಲಿತನೋ ಅಂದೇ ಒಂದು ಮಹತ್ ಸಂಶೋಧನೆಗೆ ಹಾದಿಯಾಯಿತು. ಅದುವರೆಗೂ, ಸೂರ್ಯ ಶಕ್ತಿಯನ್ನು ಬಿಟ್ಟರೆ, ಬೇರೆ ಚೈತನ್ಯವನ್ನು ಅರಿಯದಿದ್ದ ಮಾನವನಿಗೆ ಹೊಸ ಚೈತನ್ಯದ ಉಗಮ ಇನ್ನು ಸಿಕ್ಕುವಹಾಗಾಯಿತು. ಹಿಂದೆಂದೂ ಕೇಳದ್ದಿದ್ದಂತಹ ಮಾರಕ ಅಸ್ತ್ರಗಳಿಗೆ ಹಾದಿಯೂ ದೊರಕಿದಂತಾಯಿತು.

ಈ ದೊಡ್ಡ ಸಂಶೋಧನೆಯು ಮಹಾಯುದ್ಧಕ್ಕೆ ಸ್ವಲ್ಪ ಮುಂಚೆ ಆಯಿತು. ಅತ್ಯಂತ ಭಾರವಾದ ಯುರೇನಿಯಂ ಲೋಹ ಪರಮಾಣುವಿನ ಮೇಲೆ ಈ ನ್ಯೂಟ್ರಾನ್ ಬುಲೇಟ್‌ಗಳನ್ನೆಸೆದಾಗ ಒಂದು ವಿಚಿತ್ರ ಸಂಗತಿ ನಡೆಯಿತು. ಯುರೇನಿಯಂ ಪರಮಾಣುವನ್ನು ಗುಂಡೆಸೆದ ಮೇಲೆ ನೋಡಿದಾಗ, ಅದರೊಳಗೆ



ಚಿತ್ರ. 5

ಎರಡು ಹಗುರ ಧಾತುಗಳು ರೂಪಗೊಂಡಿರುವುದು ಕಾಣಿಸಿತು. ಪ್ರಯೋಗ ತಪ್ಪಾಗಿರಬಹುದೆಂದು ವಿಜ್ಞಾನಿಗಳು ಮತ್ತೊಮ್ಮೆ ಮಾಡಿದರು, ಆಗಲೂ ಹಾಗೆಯೇ ಆಯಿತು. ಇದು ವಿಚಿತ್ರವಾಗಿ ಕಂಡರೂ ಆಗಿದ್ದೇನೆಂದರೆ, ಅದರ ಅಣುಬೀಜ ಒಡೆದು, ಎರಡು ಬೇರೆ ಚೂರುಗಳಾಗಿದ್ದವು.

ಈ ಕ್ರಿಯೆಯು ಕೇವಲ ವಿಕಿರಣದ ಮೂಲಕ ಒಂದು ಭಾಗ ಹೊರಗೆ ಹೋಗುವುದಾಗಿರಲಿಲ್ಲ. ಇದು ನಿಜಕ್ಕೂ ಅಣುಬೀಜದ ವಿಭಜನೆ ಆಗಿತ್ತು (nuclear fission).

ಆದರೆ, ಪರಮಾಣು ಶಾಸ್ತ್ರಜ್ಞರಿಗೆ ಇನ್ನೂ ಹೆಚ್ಚಿನ ವಿಸ್ಮಯ ಕಾದಿತ್ತು. ಅವರು ತಮ್ಮ ಪ್ರಯೋಗದ ಫಲಿತಾಂಶಗಳನ್ನೂ ಹೆಚ್ಚು ಜಾಗ್ರತೆಯಿಂದ ಪರಿಶೀಲಿಸತೊಡಗಿದರು.

ಒಂದು ಯುರೇನಿಯಂ ವಿಭಜಿಸಿದಾಗ ಅದು ಯಾವಾಗಲೂ ಒಂದೇ ಸಮನಾದ ಎರಡು ಚೂರುಗಳಾಗಿ ವಿಭಾಗವಾಗುವುದಿಲ್ಲವೆಂದು ಅವರು ತಿಳಿದಿದ್ದರು; ಇದು ಆಶ್ಚರ್ಯವೇನಲ್ಲ. ಏಕೆಂದರೆ, ಒಂದು ಪಿಂಗಾಣಿ ತಟ್ಟೆಯನ್ನು ಎತ್ತಿಹಾಕಿದರೆ ಬರುವ ಚೂರುಗಳನ್ನು ಯಾವಾಗಲೂ ಸಮಾನವಾಗಿರಬೇಕಾಗಿಲ್ಲ. ಬಹಳ ಸಲ

ಯುರೇನಿಯಂ ಒಡೆದಾಗ, ಬೇರಿಯಂ ಮತ್ತು ಕ್ರಿಪ್ಟಾನ್ ಎಂಬ ಎರಡು ಧಾತುಗಳು ಸಮ ಸ್ಥಾನಿಗಳಾಗಿ ಒಡೆಯುವ ಹಾಗೆ ಕಂಡಿತು. ಇದು ಬಹಳ ಅಚ್ಚರಿ. ಏಕೆಂದರೆ, ಬೇರಿಯಂ ಸಮಾನ ಸ್ಥಾನಿಯ ಪರಮಾಣು ತೂಕ 140. ಕ್ರಿಪ್ಟಾನ್‌ನ ತೂಕ 90. ಅಂದರೆ, ಒಟ್ಟು 230 ಆದಂತಾಯಿತು. ಆದರೆ, ವೈಜ್ಞಾನಿಕರಿಗೆ ಗೊತ್ತಿದ್ದ ಪ್ರಕಾರ ಯುರೇನಿಯಂನ ಸಮಾನ ಸ್ಥಾನಿಗಳು ಎರಡೇ ಎರಡು. ಒಂದರ ತೂಕ 235. ಇನ್ನೊಂದು 238. ಅಂದಮೇಲೆ, ಉಳಿದ ತೂಕ ಯುರೇನಿಯಂ ವಿಭಜಿಸಿದಾಗ ಎಲ್ಲಿ ಹೋಯಿತು? ಇದು ಬಹಳ ಆಶ್ಚರ್ಯ. ಏಕೆಂದರೆ "law of conservation or mass" (ದ್ರವ್ಯರಾಶಿಯ ನಿರಂತರತೆಯ ನಿಯಮ)ನ ಪ್ರಕಾರ ದ್ರವ್ಯವು ಯಾವಾಗಲೂ ನಾಶಹೊಂದುವುದಿಲ್ಲ. ಒಂದು ಕ್ರಿಯೆಯಲ್ಲಿ ದ್ರವ್ಯವು ಭಾಗವಹಿಸಿದಾಗ ಕ್ರಿಯೆಯ ಕೊನೆಯಲ್ಲಿ ರೂಪ ಬದಲಾಯಿಸಿರಬಹುದೇ ಹೊರತು ಮೊದಲಿದ್ದಷ್ಟೇ ದ್ರವ್ಯರಾಶಿ ಇರಬೇಕು. ಒಂದು ಸೌದೆ ನಾವು ಉರಿಸಿದರೆ, ಅದು ಹೊಗೆ, ಬೂದಿ, ಇದ್ದಿಲು ಆಗುತ್ತದೆ. ಅಂದರೆ, ಇಲ್ಲಿ ಮುಂಚೆ ಇದ್ದ ಸೌದೆಯಲ್ಲಿದ್ದ ದ್ರವ್ಯರಾಶಿ ಹೊಗೆ, ಬೂದಿ, ಇದ್ದಿಲಿನ ರೂಪ ಹೊಂದಿದೆಯೇ ಹೊರತು ಅದು ನಾಶ ಹೊಂದಿಲ್ಲ. ಇವೆಲ್ಲದರ ಒಟ್ಟು ತೂಕ ಮುಂಚಿನ ತೂಕಕ್ಕೆ ಸಮನಾಗಿರುತ್ತದೆ.

ವಿಜ್ಞಾನಿಗಳಿಗೆ ಇದು ದಿಗ್ಭ್ರಮೆ ಹುಟ್ಟಿಸಿದರೂ ಕೊನೆಗೆ ಸಾಧ್ಯವಾಗ ಬಹುದಾದ ಆದರೆ, ಅತ್ಯಾಶ್ಚರ್ಯಕರ ಉತ್ತರ ಹೊಳೆಯಿತು. ಅದೆಂದರೆ, "ದ್ರವ್ಯರಾಶಿ ನೇರವಾಗಿ ಚೈತನ್ಯವಾಗಿ ಪರಿವರ್ತನೆ ಹೊಂದಿದೆ" ಎಂದು (Matter has changed into energy directly).

ಇದು ಹೊಸದಾಗಿ ಕಂಡರೂ, 50 ವರ್ಷಗಳ ಕೆಳಗೆ ಒಬ್ಬ ಮೇಧಾವಿ ಕೇವಲ ತನ್ನ ಮನಸ್ಸಿನ ಚಿಂತನೆಗಳ ಮೂಲಕ ಇದು ಸಾಧ್ಯವಾಗಬಹುದೆಂದು ಸಮೀಕರಣದ ಮೂಲಕ ಸಾಧಿಸಿದ್ದನು. ಆತನೇ ವಿಶ್ವದ ಎಲ್ಲ ಕಾಲಕ್ಕೂ ಶ್ರೇಷ್ಠ ವಿಜ್ಞಾನಿ ಡಾ॥ ಆಲ್ಬರ್ಟ್ ಐನ್‌ಸ್ಟೈನ್. ಅವನು ನ್ಯೂಟನ್ ಮತ್ತು ಡಾಲ್ಟನ್‌ರ ಪರಮಾಣು ವಿಭಜಿಸಲಸಾಧ್ಯ ಎಂಬ ವಾದವನ್ನು ನಿರಾಕರಿಸಿ, ಪರಮಾಣುವನ್ನು ವಿಭಜಿಸಬಹುದೆಂದೂ ಆದರೆ ವಿಭಜಿಸಿದಾಗ, ದ್ರವ್ಯರಾಶಿಯು ನಾಶಹೊಂದಿ ಅಪಾರ ಚೈತನ್ಯವಾಗಿ ಪರಿವರ್ತನೆಯಾಗುತ್ತದೆಂದೂ ತಿಳಿಸಿದ್ದನು. ಅದೂ ಅಲ್ಲದೆ, ಆತನು ತನ್ನ ಚಿತ್ರ ವಿಚಿತ್ರ ಗಣಿತ ಸಮೀಕರಣಗಳ ಮೂಲಕ, ಎಷ್ಟು ದ್ರವ್ಯರಾಶಿಯು ಎಷ್ಟು ಚೈತನ್ಯಕ್ಕೆ ಸಮನಾಗುತ್ತದೆಂದೂ ಲೆಕ್ಕಹಾಕಿದ್ದನು. ಅದೇ ಅವನ ವಿಶ್ವ ವಿಖ್ಯಾತ $E=mc^2$ ಸೂತ್ರ. ಇದರ ಪ್ರಕಾರ, E = ಚೈತನ್ಯ (energy), m = ದ್ರವ್ಯರಾಶಿ (matter), c = velocity of light (ಬೆಳಕಿನ ವೇಗ) ಅಂದರೆ,

ಚೈತನ್ಯ = ದ್ರವ್ಯರಾಶಿ × (ಬೆಳಕಿನ ವೇಗ)^2 ಎಂದಾಯಿತು.

ಅವನು ಹೇಳಿದ ಅಂಕಿಅಂಶಗಳು ದಂಗುಬಡಿಸುವಂತಹವು. ಅವನ ಪ್ರಕಾರ ಕೇವಲ ಒಂದು ಪೌಂಡ್ ವಸ್ತುವನ್ನು ನೇರವಾಗಿ, ಸಂಪೂರ್ಣವಾಗಿ ವಿದ್ಯುತ್ ಚೈತನ್ಯವಾಗಿ ನಾವು ಮಾರ್ಪಡಿಸಬಲ್ಲೆವಾದರೆ, ಅದು ಬಿಡುಗಡೆ ಮಾಡುವ ಚೈತನ್ಯದಿಂದ ಇಡೀ ಬೊಂಬಾಯಿ ನಗರದ ವಿದ್ಯುದ್ದೀಪಗಳನ್ನು $4\frac{1}{2}$ ವರ್ಷಗಳ ಕಾಲ ಬೆಳಗಿಸಬಹುದು.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಏನೆಂದರೆ, ನಿಮಗೆಲ್ಲರಿಗೂ ಗೊತ್ತಿರುವ ಹಾಗೆ ಸಮಾನ ಧ್ರುವಗಳು ವಿಕರ್ಷಿಸುತ್ತವೆ. ಮತ್ತು ವಿರುದ್ಧ ಧ್ರುವಗಳು ಆಕರ್ಷಿಸುತ್ತವೆ ಎಂದು. ಇದು ನಿಜವಾದರೆ, ಒಂದೇ ವಿದ್ಯುತ್ ಪ್ರವಾಹ ಹೊಂದಿರುವ ವಸ್ತುಗಳು ದೂರಹೋಗಬೇಕು. ಹಾಗಾದರೆ, ಧನವಿದ್ಯುತ್ ಇರುವ ಎಲ್ಲಾ ಪ್ರೋಟಾನ್‌ಗಳು ಅಣು ಬೀಜದೊಳಗೆ ಹೇಗೆ ಒಂದರೊಡನೊಂದು ಅಂಟಿಕೊಂಡಿರುತ್ತವೆ ? ಇದಕ್ಕೆ ಉತ್ತರವೇನೆಂದರೆ, ಅಣುಬೀಜವು ಒಂದು ವಿಧವಾದ "ಅಣು ಅಂಟನ್ನು" (atomic glue) ಹೊಂದಿರುತ್ತದೆ. ಇದು ಎಲ್ಲಾ ಪ್ರೋಟಾನ್‌ಗಳನ್ನು ಹಿಡಿದು ಒಂದಕ್ಕೊಂದು ಅಂಟಿಕೊಂಡಿರುವಂತೆ ಮಾಡುತ್ತದೆ. ಇದನ್ನು ಬಂಧನ ಚೈತನ್ಯ (binding energy) ಎನ್ನುತ್ತಾರೆ.

ವಿಚಿತ್ರವೇನೆಂದರೆ, ಬಂಧನ ಚೈತನ್ಯವು ಪರಮಾಣುವಿಗೆ ತೂಕವನ್ನೇನೂ ಕೊಡುವುದಿಲ್ಲ. ಇಲ್ಲಿ ನಡೆಯುವ ಸಂಗತಿ ಏನೆಂದರೆ ಪ್ರೋಟಾನ್‌ಗಳು ಮತ್ತು ನ್ಯೂಟ್ರಾನುಗಳು ಒಂದು ಅಣುಬೀಜವಾಗಲು ಹತ್ತಿರ ಬಂದಾಗ, ಅವುಗಳ ಒಟ್ಟು ತೂಕ ಸ್ವಲ್ಪ ಕಡಿಮೆಯಾಗುತ್ತದೆ. ಅವುಗಳ ದ್ರವ್ಯರಾಶಿಯಲ್ಲಿನ ಕೆಲಭಾಗ ಬಂಧನ ಚೈತನ್ಯವಾಗಿ ಮಾರ್ಪಾಡಾಗುತ್ತದೆ. ಆದರೆ, ಇದನ್ನು ತೂಕ ಮಾಡುವುದು ಸಾಧ್ಯವಿಲ್ಲ.

ತೂಕಮಾಡಲಸಾಧ್ಯವಾದರೂ ಬಂಧನ ಚೈತನ್ಯದ ಇರುವಿಕೆಯನ್ನು ಶಾಖದ ರೂಪದಲ್ಲಿ ಗೊತ್ತು ಹಚ್ಚಬಹುದು. ಇದರಿಂದಲೇ ಪರಮಾಣು ವಿಭಜನೆಯು (atomic fission) ಅತಿ ಮುಖ್ಯವಾದುದು. ಏಕೆಂದರೆ, ಅದು ದೊಡ್ಡ ಪ್ರಮಾಣ ದಲ್ಲಿ ಬಂಧನ ಚೈತನ್ಯವನ್ನು ಉತ್ಪಾದಿಸಬಲ್ಲುದು.

ಕೆಲವು ಪರಮಾಣುಗಳಲ್ಲಿನ ಪ್ರೋಟಾನ್ ಮತ್ತು ನ್ಯೂಟ್ರಾನುಗಳಿಗೆ ಉಳಿದವುಗಳಿಗಿಂತ ಹೆಚ್ಚಿನ ಬಂಧನ ಚೈತನ್ಯಬೇಕು.

ಯುರೇನಿಯಂ ಪರಮಾಣುಗಳಿಗೆ ಸ್ವಲ್ಪ ಬಂಧನ ಚೈತನ್ಯ ಸಾಕು. ಆದರೆ, ಅದು ವಿಭಜಿಸಿ ಎರಡಾದಾಗ ಆ ಚೂರುಗಳು ಸ್ಥಿರವಾಗಿರಲು ಮೊದಲಿಗಿಂತ ಹೆಚ್ಚು

ಅಂಟುಬೇಕು. ಇದನ್ನು ದೊರಕಿಸುವ ಒಂದೇ ಬಗೆಯೆಂದರೆ ಅವು ತಮ್ಮ ದ್ರವ್ಯರಾಶಿಯ ಸ್ವಲ್ಪ ಭಾಗವನ್ನು ಬಂಧನ ಚೈತನ್ಯವಾಗಿ ಮಾರ್ಪಡಿಸಿಕೊಳ್ಳುತ್ತವೆ. ಅದಕ್ಕೋಸ್ಕರವೇ ವಿಭಜಿಸುತ್ತಿರುವ ಯುರೇನಿಯಂ ಪರಮಾಣು ಪರಮಾವಧಿ ಶಾಖದಲ್ಲಿರುತ್ತದೆ.

ಆದರೆ, ಆ ವಿಭಜನೆಯಿಂದ ಮಾನವ ಇದುವರೆಗೂ ಕೇವಲ ಸ್ವಲ್ಪ ಶಕ್ತಿಯನ್ನು ಪಡೆಯಬಲ್ಲವನಾಗಿದ್ದಾನೆ. ಮೂಲದ ಯುರೇನಿಯಂ ಪರಮಾಣುವಿನ 235 ತೂಕದ ಮೂಲಮಾನದಲ್ಲಿ ಕೇವಲ 2 ಮಾನಗಳನ್ನು ಮಾತ್ರ ಚೈತನ್ಯವಾಗಿ ಮಾರ್ಪಡಿಸಬಲ್ಲವನಾಗಿದ್ದಾನೆ: ಆದರೆ, ಇದೇ ಮಹತ್ಕಾಂತ್ರಿಯನ್ನೆಸಗಿದೆ. ಪರಮಾಣು ವಿಭಜನೆಯಿಂದ ಚೈತನ್ಯ ಯಾವಾಗಲೂ ಬಿಡುಗಡೆಯಾಗುತ್ತಿದ್ದರೂ ಯುರೇನಿಯಂ ಪರಮಾಣು ವಿಭಜನೆ ಅಷ್ಟು ಲಾಭದಾಯಕವಾಗಿರಲಿಲ್ಲ. ಏಕೆಂದರೆ, ನ್ಯೂಟ್ರಾನ್ ಬುಲೆಟ್‌ಗಳನ್ನುಂಟು ಮಾಡಲು ಎಷ್ಟು ಶಕ್ತಿ ಬೇಕಾಗಿತ್ತೆಂದರೆ, ಅದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತಾಗುತ್ತಿತ್ತು.

ಆದರೆ, ಅದೃಷ್ಟವಶಾತ್ ಯುರೇನಿಯಂ ಪರಮಾಣುವಿನ ಪ್ರತಿಭವಿಜನೆಯೂ 2 ಅಥವಾ 3 ನ್ಯೂಟ್ರಾನುಗಳನ್ನು ಹೊರ ಚೆಲ್ಲುತ್ತದೆ. ಇವು ಹೊರಬರುವಾಗ ಉಂಟಾಗುವ ಸೂಕ್ಷ್ಮ ಆಸ್ಫೋಟನೆಯ ಪರಿಣಾಮವಾಗಿ ಆ ಹೆಚ್ಚಿನ ನ್ಯೂಟ್ರಾನುಗಳು ಎಲ್ಲಾ ದಿಕ್ಕಿನಲ್ಲೂ ಅತ್ಯಂತ ವೇಗದಲ್ಲಿ ಚಲಿಸುತ್ತದೆ. ಆಗ ಅವುಗಳಲ್ಲಿ ಪ್ರತಿಯೊಂದೂ ಸಾಮಾನ್ಯವಾಗಿ ಇನ್ನೊಂದು ಪರಮಾಣುವಿನ ಬೀಜಕ್ಕೆ ಡಿಕ್ಕಿ ಹೊಡೆಯುತ್ತವೆ. ಅದು ವಿಭಜಿಸಬಲ್ಲ ಯುರೇನಿಯಂ ಪರಮಾಣುವಾದರೆ ಆ ಎರಡನೇ ಪರಮಾಣುವೂ ಸಹ ನ್ಯೂಟ್ರಾನ್‌ನಿಂದ ಎರಡಾಗಿ ವಿಭಾಗಿಸಲ್ಪಡುತ್ತದೆ. ಅದು ಎರಡು ಅಥವಾ ಹೆಚ್ಚಿನ ಸಂಖ್ಯೆಯ ನ್ಯೂಟ್ರಾನ್‌ಗಳನ್ನು ಹೊರಚೆಲ್ಲುತ್ತದೆ. ಮತ್ತು ಇವುಗಳಲ್ಲಿ ಪ್ರತಿಯೊಂದೂ ಇನ್ನೊಂದು ಪರಮಾಣುವಿಗೆ ಡಿಕ್ಕಿ ಹೊಡೆಯುವ ಸಾಧ್ಯತೆ ಇದೆ. ಇದರಿಂದ ವಿಭಜನೆಯ ಸರಪಳಿ ನಿರಂತರವಾಗಿ ಮುಂದುವರಿಯುತ್ತದೆ. ಇದನ್ನು "ಸರಪಳಿಕ್ರಿಯೆ" (chain reaction) ಎನ್ನುತ್ತಾರೆ.

ಒಂದು ಉದಾಹರಣೆಯನ್ನು ತೆಗೆದುಕೊಂಡರೆ ಇದು ಚೆನ್ನಾಗಿ ಅರ್ಥವಾಗುತ್ತದೆ. ಖಾಲಿ ಸಿಗರೇಟಿನ ಪ್ಯಾಕನ್ನು ತೆಗೆದುಕೊಳ್ಳಿ. ಅವುಗಳನ್ನು ಒಂದರ ಮಗ್ಗುಲಲ್ಲಿ ಒಂದರಂತೆ ನಿಲ್ಲಿಸಿ–ಈಗ ಒಂದು ಕೊನೆಯಲ್ಲಿರುವ ಸಿಗರೇಟು ಪ್ಯಾಕನ್ನು ತಳ್ಳಿದರೆ, ಅದು 2 ನೆಯದನ್ನು, ಅದು 3 ನೆಯದನ್ನು — ಇದೇ ರೀತಿಯ ಕ್ರಿಯೆ ಕೊನೆಯವರೆಗೂ ಮುಂದುವರೆಯುತ್ತದೆ. ಇದಕ್ಕೆ "ಸರಪಳಿಕ್ರಿಯೆ" ಎಂದು ಹೆಸರು.

ಆದರೆ, ಊಹಿಸಿಕೊಂಡಷ್ಟು ಸುಲಭ ಅಲ್ಲ ಇದು. ನ್ಯೂಟ್ರಾನ್‌ಗಳ ಬುಲೆಟ್‌ಗಳು ತಗುಲಿದಾಗ ಯುರೇನಿಯುಂನ ಎಲ್ಲಾ ಪರಮಾಣುಗಳೂ ಒಂದೇ ರೀತಿಯ ಕ್ರಿಯೆ ತೋರಲಿಲ್ಲ.

ಯುರೇನಿಯುಂ ಪರಮಾಣುವಿಗೆ ಎರಡು ಸಮಸ್ಥಾನಿಗಳಿವೆ. ಈ ಎರಡರ ಅಣುಬೀಜದ ವರ್ತನೆ ಭಿನ್ನವಾಗಿದೆ. ವಿಜ್ಞಾನಿಗಳು ಧಾತುಗಳ ಬಗ್ಗೆ ಬರೆಯುವಾಗ, ಮಾತನಾಡುವಾಗ ಒಂದು ಬಗೆಯ ಶೀಘ್ರಲಿಪಿ (short hand) ಉಪಯೋಗಿಸುತ್ತಾರೆ. ಅಂದರೆ ಯುರೇನಿಯುಂ ಎನ್ನುವ ಬದಲು ಅದನ್ನು ಸಂಕ್ಷಿಪ್ತ ರೂಪದಲ್ಲಿ 'U' ಎಂದು ಉಪಯೋಗಿಸುತ್ತಾರೆ. ಯುರೇನಿಯುಂನ ಸಮಸ್ಥಾನಿಗಳೆರಡರಲ್ಲಿ ಒಂದರ ಪರಮಾಣು ತೂಕ 235, ಇನ್ನೊಂದು 238. ಆದ್ದರಿಂದ ಅವನ್ನು U–235 ಮತ್ತು U–238 ಎನ್ನುತ್ತಾರೆ.

ಒಂದು ಯುರೇನಿಯುಂ ಲೋಹದ ಚೂರಿನ ಕಡೆಗೆ ನ್ಯೂಟ್ರಾನ್‌ಗಳನ್ನು ಹೊಡೆದಾಗ, ಯಾವಾಗಲೂ U–235 ರ ಪರಮಾಣುಗಳೇ ಹೆಚ್ಚಾಗಿ ವಿಭಜಿಸುತ್ತವೆಂದು ಗೊತ್ತಾಯಿತು. U–238 ರ ಪರಮಾಣುಗಳು ವಿಭಜಿಸದೆ, ನ್ಯೂಟ್ರಾನುಗಳನ್ನು ಹೀರಿಕೊಂಡು ಬಿಟ್ಟವು.


ಆದುದರಿಂದ ವಿಜ್ಞಾನಿಗಳು U–235 ರ ಪರಮಾಣುಗಳನ್ನು ಯಾವುದಾದರೂ ವಿಧಾನದಿಂದ U–238 ರಿಂದ ಬೇರ್ಪಡಿಸಿದರೆ, ನಿರಂತರ ಕ್ರಿಯೆಯನ್ನು ಮಾಡಲು ಸಾಧ್ಯವಾಗುತ್ತದೆಂದು ಅಭಿಪ್ರಾಯಪಟ್ಟರು.

ನ್ಯೂಟ್ರಾನ್‌ಗಳು ಎಲ್ಲಾ ಕಡೆಯೂ ಹಾರಾಡುತ್ತಿರುವುದರಿಂದ ಇನ್ನೊಂದು ಸಮಸ್ಯೆ ಉದ್ಭವವಾಗುತ್ತದೆ. ಯುರೇನಿಯುಂ ತುಂಡಿನ ಒಂದು ಕೊನೆಯಲ್ಲಿರುವ ನ್ಯೂಟ್ರಾನುಗಳು ಸುತ್ತಲಿನ ಗಾಳಿಗೆ ಹಾರಿ ಹೋಗಲೇಬೇಕು. ಆದರೆ, ನಿರಂತರ ಕ್ರಿಯೆಯನ್ನುಂಟು ಮಾಡಲು ನ್ಯೂಟ್ರಾನುಗಳು ಒಂದು ಅಣುಬೀಜದಿಂದ ಇನ್ನೊಂದು ಅಣುಬೀಜದ ಕಡೆಗೆ ಧಾವಿಸುತ್ತಿರಬೇಕು. ಅವು ಆಚೆಗೆ ಹೋದರೆ, ಉಳಿದ ಪರಮಾಣುಗಳು ವಿಭಜಿಸಲ್ಪಡುವುದೇ ಇಲ್ಲ.

ಇದರಿಂದ ಪರಮಾಣು ವಿಜ್ಞಾನಿಗಳು ಶುದ್ಧ U – 235 ಲೋಹದ ತುಂಡು ಒಂದು ಗೊತ್ತಾದ ಗಾತ್ರದಲ್ಲಿರದೇ ಹೋದರೆ, ನಿರಂತರ ಕ್ರಿಯೆಯನ್ನುಂಟುಮಾಡಲು ಅಸಾಧ್ಯವೆಂದು ಮನಗಂಡರು. ಏಕೆಂದರೆ, ಬಹಳ ನ್ಯೂಟ್ರಾನುಗಳು ಗಾಳಿಗೆ ಜಾರಿಕೊಂಡು ಹೋಗಿ ಒಳಗಡೆ ಅಣುಗಳನ್ನು ವಿಭಜಿಸಲು ಬೇಕಾದಷ್ಟು ಉಳಿಯುವುದೇ ಇಲ್ಲ. ಇದು ನೂರಕ್ಕೆ ನೂರರಷ್ಟು ಸತ್ಯ. ಏಕೆಂದರೆ, ಯುರೇನಿಯುಂ

ಲೋಹದ ತೆಳ್ಳನೆಯ ಒಂದು ಪದರವು, ಅದು ಕ್ರಿಕೆಟ್ ಕ್ರೀಡಾಂಗಣದಷ್ಟು ಅಗಲವಾಗಿದ್ದರೂ ನಿರಂತರ ಕ್ರಿಯೆಯನ್ನುಂಟುಮಾಡಲು ಸಮರ್ಥವಾಗುವುದಿಲ್ಲ. ಏಕೆಂದರೆ, ನ್ಯೂಟ್ರಾನುಗಳು ಪದರದಿಂದ ಆಚೆಗೆ ಸುಲಭವಾಗಿ ಜಾರಿಹೋಗುತ್ತವೆ.

ಪ್ರಥಮ ಅಣುಬಾಂಬನ್ನು ತಯಾರಿಸುವಾಗ ವಿಜ್ಞಾನಿಗಳು ಈ ಎಲ್ಲಾ ಅಂಶಗಳನ್ನೂ ಮನಸ್ಸಿನಲ್ಲಿಟ್ಟುಕೊಂಡು ತಯಾರಿಸಿದರು. ಅವರು ತಯಾರಿಸಿದ ಬಾಂಬಿನ ಮೂಲಭೂತ ಅಂಶಗಳು ಹೀಗಿವೆ. (ಚಿತ್ರ. 6) ಇಲ್ಲಿರುವ ಎರಡು ತುಂಡುಗಳಲ್ಲಿ ಎರಡೂ U–235 ಲೋಹದವು. U–235 ಅಸ್ಥಿರ ಪರಮಾಣುಗಳನ್ನು ಹೊಂದಿಸಿರುವುದರಿಂದ ಸ್ವಲ್ಪ ಅಣುವಿಭಜನೆಯು ನಡೆಯುತ್ತಲೇ ಇದ್ದು ನ್ಯೂಟ್ರಾನುಗಳು




ಚಿತ್ರ. 6

ಹುಚ್ಚು ಹಿಡಿದಂತೆ ಅಲೆಯುತ್ತಲೇ ಇರುತ್ತವೆ. ಆದರೆ, ಈ ಎರಡು ಚೂರುಗಳು ಒಂದರಿಂದ ಇನ್ನೊಂದು ದೂರದಲ್ಲಿರುವವರೆಗೂ ಹೊರಬೀಳುವ ನ್ಯೂಟ್ರಾನುಗಳಲ್ಲಿ ಬಹುಭಾಗ ಹಾರಿಹೋಗುತ್ತದೆ. ಮತ್ತು ಇದರ ನಿರಂತರ ಕ್ರಿಯೆಯನ್ನು ನಡೆಯದಂತೆ ಮಾಡುತ್ತದೆ.

ಇದ್ದಕ್ಕಿದ್ದ ಹಾಗೆ ಒಂದು ಸನ್ನೆಯಂತಹ ವಸ್ತುವಿನ ಸಹಾಯದಿಂದ A ತುಂಡನ್ನು B ತುಂಡಿನೊಳಗಿರುವ ಹೊಂದಿಕೊಳ್ಳುವ ರಂಧ್ರಕ್ಕೆ ಹೊಡೆದರೆ ಒಂದು ಸೆಕೆಂಡಿನ ಅಂತರದೊಳಗೆ ನಿರಂತರ ಕ್ರಿಯೆಯನ್ನು ಉಂಟು ಮಾಡಬಲ್ಲ U–235 ತುಂಡು ನಿರ್ಮಾಣವಾಗುತ್ತದೆ ಮತ್ತು ಇದರಿಂದ ಉಂಟಾಗುವ ಆಸ್ಫೋಟನೆ ಜಗತ್ತನ್ನೇ ನಡುಗಿಸುತ್ತದೆ.

ಜಲಜನಕ ಬಾಂಬಿನ ರಹಸ್ಯ – ಪರಮಾಣು ಸಂಯೋಜನೆ

ಒಂದು U–235 ಪರಮಾಣು ವಿಭಜಿಸಿದಾಗ ಬರುವ ಎರಡು ಧಾತುಗಳು ಸ್ಥಿರವಾದುವು. ಅಂದರೆ, ಇವುಗಳಲ್ಲಿ ಕಣಗಳನ್ನು ಹಿಡಿದಿಡಲು



ಚಿತ್ರ. 7

ಮುಂಚಿನ ಪರಮಾಣುವಿನಲ್ಲಿದ್ದಕ್ಕಿಂತ ಹೆಚ್ಚು ಬಂಧನ ಚೈತನ್ಯ ಬೇಕು. ಇದು ದ್ರವ್ಯವನ್ನು ಚೈತನ್ಯವಾಗಿ ಮಾರ್ಪಡಿಸುವುದರಿಂದ ಬರುತ್ತದೆ.

ಮೊದಲನೇ ಅಣುಬಾಂಬು ತಯಾರಾಗುವುದಕ್ಕೆ ಎಷ್ಟೋ ಮುಂಚೆ ವಿಜ್ಞಾನಿಗಳು ವಿವಿಧ ಧಾತುಗಳಲ್ಲಿನ ಬಂಧನ ಚೈತನ್ಯದ ಪ್ರಮಾಣದ ಬಗ್ಗೆ ಸಂಶೋಧನೆ ನಡೆಸಿದ್ದರು. ಇದನ್ನು ಪ್ರತಿ ಸಂದರ್ಭದಲ್ಲೂ ಹಿಡಿದಿಡಬೇಕಾದ ಕಣಗಳ ಸಂಖ್ಯೆ ಜೊತೆ ಹೋಲಿಸಿದರೆ ಈ ಕೆಳಕಂಡ ಒಂದು ವಕ್ರ ರೇಖೆಯನ್ನು ಎಳೆಯಬಹುದು.

ಇಲ್ಲಿ ಧಾತುಗಳು ಎಡದಿಂದ ಬಲಕ್ಕೆ ಅವುಗಳ ಪರಮಾಣು ಸಂಖ್ಯೆಯ ಪ್ರಕಾರ ಜೋಡಿಸಲ್ಪಟ್ಟಿವೆ. ಇದು 1ರಿಂದ (ಜಲಜನಕ) ಪ್ರಾರಂಭವಾಗಿ 92ರಲ್ಲಿ (ಯುರೇನಿಯಂ) ಕೊನೆಗೊಳ್ಳುತ್ತದೆ. ಒಂದು ಧಾತುವು ಚಿತ್ರದ ತಳಕ್ಕೆ ಹತ್ತಿರ ಇದ್ದಷ್ಟೂ ಅದರ ಸ್ಥಿರತೆ ಹೆಚ್ಚುತ್ತದೆ. ಇಲ್ಲಿ ಕ್ಯಾಲ್ಸಿಯಂನಿಂದ ಹಿಡಿದು ಮಾಲಿಬ್ಡಿನಂವರೆಗಿನ ಧಾತುಗಳು ಎಲ್ಲಕ್ಕಿಂತ ಸ್ಥಿರವಾದುವು.


ಅಸ್ಥಿರ ಧಾತುಗಳು ಯಾವಾಗಲೂ ಸ್ಥಿರವಾಗಿರಲು ಪ್ರಯತ್ನಿಸುವುದರಿಂದ ನೀವು ಈ ಚಿತ್ರವನ್ನು ಮಧ್ಯೆ ಕಣಿವೆ ಇರುವ ಎರಡು ಬೆಟ್ಟಗಳಿಗೆ ಹೋಲಿಸಿ. ಆಗ ಯುರೇನಿಯಂನ ಪರಮಾಣು ಬಲಗಡೆ ಬೆಟ್ಟದ ಮೇಲಿರುವ ದೊಡ್ಡ ಬಂಡೆಯಂತಾಗುತ್ತದೆ. ಒಂದು ಸ್ವಲ್ಪ ಅವಕಾಶ ಸಿಕ್ಕಿದರೆ ಸಾಕು, ಅದು ಉರುಳಿ ಮಧ್ಯದಲ್ಲಿರುವ ಕ್ರಿಪ್ಟಾನ್ ಮತ್ತು ಬೇರಿಯಂ ಕಡೆಗೆ ಧಾವಿಸುತ್ತದೆ. ಇವು ಅತಿ ಸಣ್ಣ ಪರಮಾಣುಗಳಾದ್ದರಿಂದ ಅವುಗಳಂತಾಗಬೇಕಾದರೆ ಯುರೇನಿಯಂ ವಿಭಜಿಸಲೇಬೇಕು.

ಈಗ ಚಿತ್ರದ ಎಡಭಾಗವನ್ನು ಗಮನಿಸಿ. ಅತ್ಯಂತ ಹಗುರವಾದ ಧಾತು ಜಲಜನಕ ಇನ್ನೂ ಕಡಿದಾದ ಬೆಟ್ಟದ ಮೇಲೇರಿದೆ. ನಿಜಕ್ಕೂ ಇದು ಬಲಯುತವಾದ ಯುರೇನಿಯಂಗಿಂತ ಎತ್ತರದಲ್ಲಿರುವ ಪರಮಾಣುಗಳ ಗುಂಪಿನಂತೆ ಕಾಣುತ್ತದೆ. ಅಂದರೆ, ಇವು ಯುರೇನಿಯಂಗಿಂತ ಹೆಚ್ಚಿನ ಬಂಧನ ಚೈತನ್ಯವನ್ನು ಬಿಡುಗಡೆ ಮಾಡಬಲ್ಲವು ಎಂದರ್ಥ.

ಆದರೆ ಇಂತಹ ಒಂದು ಪರಮಾಣು ವಕ್ರರೇಖೆಯ ಮೇಲೆ ಜಾರಿ ಕೆಳಕ್ಕೆ ಬರಬೇಕಾದರೆ ಅದು ಇನ್ನೂ ಭಾರವಾದ ಧಾತುಗಳಾಗಿ ಪರಿವರ್ತನೆ ಹೊಂದಬೇಕು. ಇದು ನಿಜಕ್ಕೂ ವಿಭಜನೆಯಿಂದ ಅಸಾಧ್ಯ ; ಏಕೆಂದರೆ ವಿಭಜಿಸಿದಾಗ ಇನ್ನೂ ಹಗುರವಾದ ಧಾತುಗಳು ಉಂಟಾಗುತ್ತವೆ. ಅದರ ಬದಲು ಇದು ಸಾಧ್ಯವಾಗಬೇಕಾದರೆ, ಅಣುಗಳು ಹತ್ತಿರ ಬರಬೇಕು. ಇದನ್ನು "ಅಣು ಸಂಯೋಜನೆ" (atomic fusion) ಎನ್ನುತ್ತಾರೆ.

ಅಣು ವಿಭಜನೆ ನಡೆಸುವ ಮುಂಚೆಯೇ, ಅಣು ಸಂಯೋಜನೆಯು ಸಾಧ್ಯವೆಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದರು. ಕೆಲವರಂತೂ ನಮ್ಮ ಸೂರ್ಯನಿಂದ ಹೊರಬೀಳುವ ಅಪಾರ ಚೈತನ್ಯ ಈ ಕ್ರಿಯೆಯಿಂದಲೇ ಎಂದು ಅಭಿಪ್ರಾಯಪಟ್ಟಿದ್ದರು. ಇಂದಿಗೂ ಸೂರ್ಯನ ಮೇಲೆ ಜಲಜನಕದ ಪರಿಣಾಮಗಳು ಸೇರಿ ಹೀಲಿಯಂ ಪರಮಾಣುಗಳಾಗುತ್ತಲೇ ಇವೆ. ಆದುದರಿಂದುಂಟಾಗುವ ಶಾಖ ಎಷ್ಟು ಅಪಾರವಾದುದೆಂದರೆ, ಕೋಟ್ಯಂತರ ಮೈಲಿ ದೂರದಲ್ಲಿರುವ ಭೂಮಿಯ ಮೇಲಿರುವ ನಾವು ಅದನ್ನು ಕೆಲವು ಸಲ ತಡೆಯಲಾರೆವು. ಈ ಪರಮಾಣು ಒಲೆ ಮಾನವ ಹುಟ್ಟುವುದಕ್ಕಿಂತ ಬಹಳ ಮುಂಚಿನಿಂದ ಜ್ವಲಿಸುತ್ತಿದ್ದರೂ ಅದರ ಇಂಧನ ಇನ್ನೂ ಸ್ವಲ್ಪವೂ ಖರ್ಚಾಗಿಲ್ಲ. ಇದರಿಂದ ಸಂಯೋಜನೆಯಿಂದ ಎಷ್ಟು ಚೈತನ್ಯ ದೊರಕುವುದೆಂದು ನಾವು ಊಹಿಸಿಕೊಳ್ಳಬಹುದು.

ಪರಮಾಣು ಸಂಯೋಜನೆಯಲ್ಲಿನ ಕ್ರಿಯೆ ಬಹಳ ಸಂಕ್ಲಿಷ್ಟವಾದರೂ, ಅದನ್ನು ಕೆಳಕಂಡ ರೀತಿಯಲ್ಲಿ ವಿವರಿಸಬಹುದು.



ಚಿತ್ರ. 8

ಭಾರ ಜಲಜನಕದ (heavy H_2) ಎರಡು ಪರಮಾಣುಗಳು ಅತ್ಯಂತ ಹೆಚ್ಚಿನ ಒರತ್ತದಲ್ಲಿ ಹತ್ತಿರ ತರಲ್ಪಡುತ್ತವೆ. ಇದರ ಫಲಿತಾಂಶವಾಗಿ ಹೊಸ ಪರಮಾಣು

ಬೀಜ ಮತ್ತು ಒಂದು ನ್ಯೂಟ್ರಾನ್ ಉಂಟಾಗುತ್ತದೆ. ಹೊಸ ಪರಮಾಣು ಬೀಜ 2 ಪ್ರೋಟಾನ್ ಮತ್ತು 2 ನ್ಯೂಟ್ರಾನುಗಳನ್ನು ಹೊಂದಿದೆ. ಅದೇ ಹೀಲಿಯಂ.

ಹೀಲಿಯಂನಲ್ಲಿನ ಕಣಗಳು ಅಸ್ಥಿರವಾದ ಭಾರಜಲಜನಕದಲ್ಲಿದ್ದುದಕ್ಕಿಂತ ಹೆಚ್ಚಿನ ಬಂಧನ ಚೈತನ್ಯವನ್ನು ಅಪೇಕ್ಷಿಸುವುದರಿಂದ ಸ್ವಲ್ಪ ದ್ರವ್ಯರಾಶಿ ಕ್ರಿಯೆಯಲ್ಲಿ ಚೈತನ್ಯವಾಗಿ ಮಾರ್ಪಾಡಾಗುತ್ತದೆ. ಶಿಕ್ಷಣ ಅತ್ಯಧಿಕ ಶಾಖ ಉತ್ಪಾದಿತವಾಗುತ್ತವೆ. ಇದೇ ಜಲಜನಕ ಬಾಂಬಿನಲ್ಲಿನ ರಹಸ್ಯ.

ಯುರೇನಿಯಂ ವಿಭಜಿಸುವುದು ಕಷ್ಟವಾದರೆ, ಹಗುರ ಪರಮಾಣುಗಳನ್ನು ಒಂದುಗೂಡುವಂತೆ ಮಾಡುವುದು ಇನ್ನೂ ಕಷ್ಟಸಾಧ್ಯವಾಗಿತ್ತು.

ಜಲಜನಕದ ಪರಮಾಣುಗಳು ಸೇರುವುದಕ್ಕೆ ಮೊದಲು ಅವು ಅತ್ಯಂತ ಪರಮಾವಧಿ ಬಿಸಿಯಲ್ಲಿರಬೇಕು. ಅವುಗಳನ್ನು ಒಂದು ಕುಲಿಮೆಯಲ್ಲಿಟ್ಟು ಬಿಸಿ ಮಾಡಲಾಗುವುದಿಲ್ಲ. ಇದಕ್ಕೆ ಕೆಲವು ಮಿಲಿಯನ್ ಡಿಗ್ರಿಗಳಷ್ಟು ಖರತ್ವ ಬೇಕು. ಮತ್ತು ಇದುವರೆಗೆ ಭೂಮಿಯ ಮೇಲೆ ಒಂದು ಸೆಕೆಂಡಿನ ಅಂಶದೊಳಗೆ ಇಷ್ಟು ಖರತ್ವ ಬೇಕಾದರೆ, ಅದು ಅಣುಬಾಂಬು ಆಸ್ಫೋಟಿಸುವುದರ ಮೂಲಕ ಮಾತ್ರ ಸಾಧ್ಯ.



ಚಿತ್ರ. 9

ಜಲಜನಕದ 'ಬಾಂಬಿನ ನಿರ್ಮಾಣ ಅತ್ಯಂತ ರಹಸ್ಯ. ಇದುವರೆವಿಗೂ ಯಾರೂ ಇದರ ಚಿತ್ರವನ್ನು ಪತ್ರಿಕೆಯಲ್ಲಾಗಲೀ, ಪುಸ್ತಕದಲ್ಲಾಗಲೀ ಪ್ರಕಟಿಸಿಲ್ಲ. ಅದರ ಕಾರ್ಯ ಬಹುಶಃ ಈ ಕೆಳಕಂಡಂತೆ ನಡೆಯುತ್ತದೆ.

ಒಂದು ಟೊಳ್ಳಾದ ಪರಮಾಣು ಬಾಂಬಿನೊಳಗೆ ಭಾರ ಜಲಜನಕವನ್ನು ತುಂಬಿ A ತುಂಡನ್ನು B ತುಂಡಿನಲ್ಲಿ ಕಾಣುವ ರಂಧ್ರಕ್ಕೆ ಹೊಡೆದರೆ, ನಿರಂತರ ಕ್ರಿಯೆ ಆರಂಭವಾಗಿ ಅಣುಬಾಂಬು ಆಸ್ಫೋಟಿಸುವುದು. ಈ ಆಸ್ಫೋಟನೆಯಲ್ಲಿ ಉಂಟಾಗುವ ಶಾಖದಿಂದ ಭಾರಜಲಜನಕದ ಪರಮಾಣುಗಳು ಸೇರಿ ಹೀಲಿಯಂ ಆಗತೊಡಗುವುವು. ಇದರಿಂದ ಒಮ್ಮೆ ಶಾಖ ಬರಲು ತೊಡಗಿತೆಂದರೆ, ಸಂಯೋಜನೆ ಮುಂದುವರೆಯುತ್ತಲೇ ಇದ್ದು, ಅದು ನಿಲ್ಲಲು ಬಹಳ ಕಾಲ ಬೇಕಾಗುವುದು.

ಅಣು ವಿಭಜನೆಗಿಂತ ಸಂಯೋಜನೆ ಕಷ್ಟವಾದರೂ ಅದು ಮೊದಲಿನದಕ್ಕಿಂತ ಉತ್ತಮವಾದುದು. ಏಕೆಂದರೆ,

1. ಬರುವ ಬಂಧನ ಚೈತನ್ಯ ಜಾಸ್ತಿಯಾಗಿರುತ್ತದೆ.

2. ಯುರೇನಿಯಂ ಧಾತುವು ಬಹಳ ಅಪರೂಪವಾದುದು. ಆದರೆ, ಜಲ ಜನಕ ಎಲ್ಲೆಡೆಯಲ್ಲೂ ಇದೆ. ನಮ್ಮ ಸುತ್ತ ತುಂಬಿ ನಿಂತಿರುವ ಸಾಗರದ ನೀರಿನ ಪ್ರತಿ ಅಣುವೂ ಎರಡೂ ಜಲಜನಕದ ಪರಮಾಣುಗಳಿಂದ ತುಂಬಿವೆ. ಆದರೆ ಇದನ್ನು ಭಾರ ಪರಮಾಣುಗಳಾಗಿ ಪರಿವರ್ತಿಸಿಕೊಳ್ಳಬೇಕು.

ಇಷ್ಟು ಅತ್ಯದ್ಭುತ ಶಕ್ತಿಯನ್ನು ಹೊಂದಿರುವ ಪರಮಾಣುಗಳನ್ನು ಮಾರಕ ಕ್ಕಾಗಲೀ ಅಥವಾ ಮಾನವ ಕುಲವ ಏಳಿಗೆಗಾಗಲೀ ಬಳಸಿಕೊಳ್ಳುವುದು ಮಾನವನಿಗೆ ಬಿಟ್ಟಿರುವ ಸಂಗತಿ. ಏಕೆಂದರೆ, ಅವನು ಸರಿಯಾಗಿ ಆಲೋಚಿಸದೆ, ಒಮ್ಮೆ ಇಂಥ ಅಸ್ತ್ರ ಉಪಯೋಗಿಸಿದನೆಂದರೆ ತೀರಿತು. ಪ್ರಪಂಚದ ಮೇಲೆ ಸಹಸ್ರಾರು ವರ್ಷ ಗಳಿಂದ ಬೆಳೆದು ಬಂದ ನಾಗರೀಕತೆ, ಸಂಸ್ಕೃತಿ ಹೇಳ ಹೆಸರಿಲ್ಲದಂತಾಗಿ, ಬೂದಿಯ ಗುಡ್ಡೆಯಾಗುತ್ತದೆ. ಈ ಸಂದರ್ಭದಲ್ಲಿ ಒಬ್ಬ ಶ್ರೇಷ್ಠ ಮಹನೀಯರು ಹೇಳಿದ ಮಾತು ಜ್ಞಾಪಕಕ್ಕೆ ಬರುತ್ತದೆ. ಅವರು ಹೇಳಿದರು, "ಮೂರನೇ ಮಹಾಯುದ್ಧದ ಅಸ್ತ್ರಗಳು ಪರಮಾಣು, ಜಲಜನಕಬಾಂಬುಗಳೂ ಆದರೆ, ನಾಲ್ಕನೇ ಮಹಾಯುದ್ಧದ ಅಸ್ತ್ರಗಳು ಕಲ್ಲುಗುಂಡುಗಳು".

ಬೆಡಗಿನ ಸೋಬಾನ

ಜಿ. ಎಂ. ಹೆಗಡೆ

ಹಸಿಯು ಹಸಿಯಾದ ಬಳ್ಳಿ ಮನೆಯು
ವರ್ಣದಬಳ್ಳಿ ಕುಶಲಾದ ಬಳ್ಳಿ ಎಲೆಇಲ್ಲೆ
ಬೆಡಗಿನ ಜಾಣೆ ಕನ್ನಡಿಯು ತಿಳಿದ್ಹೇಳೆss ॥ ೧ ॥

ಕನ್ನಡಿಯನ್ಹೇಳುವssಲೆ ಇನ್ನೂsಚೋದಿಗವೇನೇ
ಪನ್ನಂಗಧರನ ಶಿವಬಲ್ಲ। ನಾರಿಯರ್ ಮುಡಿವ
ಮಂಡ್ಯಲ್ಲವೇನೇ ಹಸಿಯುವಳೇss ॥ ೨ ॥

ಹುಟ್ಟುತ್ತ ಹಸುರಾದ ಬೆಳೆಯುತ್ತ ಕೆಂಪಾದ
ಮುಪ್ಪಿನ ಕಾಲಕ್ಕೆ ಕರುದಾದ
ಬೆಡಗಿನ ಜಾಣೆ ಕನ್ನಡಿಯುತಿಳಿದ್ಹೇssಳೆ ॥ ೩ ॥

ಕನ್ನಡಿಯನ್ಹೇಳುವ ಲಿsಲೆ ಇನ್ನೂs ಚೋದಿಗವೇsನೇ,
ಪನ್ನಂಗಧರನ ಶಿವಬಲ್ಲ। ಈಚಲದ್ಹಣ್ಣಲ್ಲ
ವೇನೇss ಹಸಿಯುವಳೇss ॥ ೪ ॥

ಗೋಡೆಯ ಮೇಲಿನ ಪಾರಿವಾಳದ ಹಕ್ಕಿ
ನಾಲಿಗೆ ಉಂಟು ನುಡಿ ಇಲ್ಲ ।
ಬೆಡಗಿನ ಜಾಣೆ ಕನ್ನಡಿಯು ತಿಳಿದ್ಹೇssಳೆ ॥ ೫ ॥

ಕನ್ನಡಿಯನ್ಹೇಳುವssಲೆ ಇನ್ನೂs ಚೋದಿಗವೇನೇ
ಪನ್ನಂಗಧರನ ಶಿವಬಲ್ಲ। ನಾರೆಯರ್ ಬರೆವ
ಶೇಡ್ಯಲ್ಲವ್ಹೇನೇ ಹಸಿಯುವಳೇss. ॥ ೬ ॥

ಕಚ್ಚಿದರೆ ಕಚ್ಚುವುದು ಕಿಚ್ಚಲ್ಲ ಚೋಳಲ್ಲ
ಆಶ್ಚರ್ಯವಲ್ಲ ಶಿವಬಲ್ಲ
ಬೆಡಗಿನ ಜಾಣೆ ಕನ್ನಡಿಯು ತಿಳಿದ್ಹೇಳೆss ॥ ೭ ॥

ಕನ್ನಡಿಯನ್ನೋಳುವಲೆ ಇನ್ನೂs ಚೋದಿಗವೇನೇ
ಪನ್ನಂಗಧರನ ಶಿವಬಲ್ಲ। ಮೆಣಸೀನ
ಕಾಯಲ್ಲವೇನೇ ಹಸಿಯುವಳೆss ॥ ೮ ॥

ಹಾರುವಲೇ ಹಕ್ಕ್ಯಲ್ಲ ಕೋಡುವಲೆ ಪಶುವಲ್ಲ
ನಾಲ್ಕು ಕಾಲುಂಟು ನುಡಿಯಲ್ಲೆ
ಬೆಡಗಿನ ಜಾಣೆ ಕನ್ನಡಿಯ ತಿಳಿದ್ಹೇಳೆss ॥ ೯ ॥

ಕನ್ನಡಿಯ ನ್ಹೋಳುವssಲೆ ಇನ್ನೂs ಚೋದಿಗವೇನೇ,
ಪನ್ನಂಗಧರನs ಶಿವಬಲ್ಲ। ಮಂಚದ
ಕಾಲಲ್ಲವೇನೇ ಹಸಿಯುವಳೇ ॥ ೧೦ ॥

ಅಂಗೈಯ್ಯs ಕೊಟ್ಟರೆ ಮುಂಗೈಯ್ಯ ನುಂಗುವರು
ಶಿಂಗಳಕನಲ್ಲ ಶಿವಬಲ್ಲ ಬೆಡಗಿನ
ಜಾಣೆ ಕನ್ನಡಿಯ ತಿಳಿದ್ಹೇಳೇ ॥ ೧೧ ॥

ಕನ್ನಡಿಯನ್ಹೋಳುವರೆ ಇನ್ನೂsಚೋದಿಗವೇನೇ,
ಪನ್ನಂಗಧರನ ಶಿವಬಲ್ಲs ನಾರೆಯರ್ ತೊಡುವ
ರೈವಲಕಲ್ಲವೇನೇs ಹಸಿಯುವಳೇs ॥ ೧೨ ॥

ಮುಳ್ಳಿನಲ್ಲಿ ಹುಟ್ಟುವದು ಮುಳ್ಳಿನಲ್ಲಿ ಬೆಳೆಯುವದು
ಮುಳ್ಳು ತಾಗಿದರೆ ಅರಳುವದು;
ಬೆಡಗಿನ ಜಾಣೆ ಕನ್ನಡಿಯ ತಿಳಿದ್ಹೇಳೇs ॥ ೧೩ ॥

ಕನ್ನಡಿಯ ನ್ಹೋಳುವssಲೆ ಇನ್ನೂ ಚೋದಿಗವೇನೇs
ಪನ್ನಂಗಧರನsಶಿವಬಲ್ಲ। ಕ್ಯಾದಿಗೆಯ
ಹೂವಲ್ಲವೇನೇss ಹಸಿಯುವಳೇss ॥ ೧೪ ॥

ಕೆರೆಯ ಏರಿಯ ಮೇಲೆ ಮರಿಯ ದಿಬ್ಬಣ
ಹೋಗಿ ಹಿಟ್ಟಿಲ್ಲದ ರೊಟ್ಟಿ ಸುಡುವರ
ಬೆಡಗಿನ ಜಾಣೆ ತನ್ನಡಿಯ ತಿಳಿದ್ಹೇಳೆ, ॥ ೧೫ ॥

ಕನ್ನಡವನ್ಹೋಳುವssಲೆ ಇನ್ನೂsಚೋದಿಗವೇನೇ
ಪನ್ನಂಗಧರನ ಶಿವಬಲ್ಲ। ಜೇನಿನ
ಹುಟ್ಟಲ್ಲವೇನೇ ಹಸಿಯುವಳೇ ॥ ೧೬ ॥

ಮರದ ಮೇಲೆ ಹುಟ್ಟುವದು ಮರದ ಮೇಲೆ
ಬೆಳೆಯುವದು ನೆರಳು ನೀರು ತಾಗಿದರೆ ಅರಳುವದು
ಬೆಡಗಿನ ಜಾಣೆ ಕನ್ನಡಿಯ ತಿಳಿದ್ಹೇಳೇ ॥ ೧೭ ॥

ಕನ್ನಡಿಯ ನ್ಹೇಳುವsಲೆ ಇನ್ನೂs ಚೋದಿಗವೇನೇ
ಪನ್ನಂಗಧರನ ಶಿವಬಲ್ಲ । ಸೀತೆಯ
ದಂಡ್ಯಲ್ಲವೇನೇ ಹಸಿಯುವಳೇ. ॥ ೧೮ ॥

ಗುಡು ಗುಡು ಗುಟ್ಟುವ ಕೆಡಿಕೆಂಡ ಉದುರುವದು
ನೆಡು ಬೆನ್ನಲ್ಲಿ ಮೆಲುಕ ತೆಗೆಯುವದು
ಬೆಡಗಿನ ಜಾಣೆ ಕನ್ನಡಿಂಯ ತಿಳಿದ್ಹೇಳೆ. ॥ ೧೯ ॥

ಕನ್ನಡಿಯ ನ್ಹೇಳುವsಲೆ ಇನ್ನೂ ಚೋದಿಗವೇನೇ.
ಪನ್ನಂಗಧರನs ಶಿವಬಲ್ಲ । ಗೋವಿಯೇ
ಕಲ್ಲಲ್ಲವೇನೇ ಹಸಿಯುವಳೇ ॥ ೨೦ ॥

ಕಾನಿನಲ್ಲಿ ಹುಟ್ಟುವದು ಕಾನಿನಲ್ಲಿ
ಬೆಳೆಯುವದು. ನಾರಿಲ್ಲಿದs ದಂಡೆ ಮುಡುವಳss
ಬೆಡಗಿನ ಜಾಣೆ ಕನ್ನಡಿಯ ತಿಳಿದ್ಹೇಳೇ. ॥ ೨೧ ॥

ಕನ್ನಡಪನ್ಹೇಳುವsಲೆ ಇನ್ನೂ ಚೋದಿಗೆವೇನೇ,
ಪನ್ನಂಗಧರನ ಶಿವಬಲ್ಲ। ದ್ರೌಪತಿಯ
ದಂಡ್ಯಲ್ಲವೇನೇs ಹಸಿಯುವಳೇ. ॥ ೨೨ ॥

‘ಗೋವಿನ ಹಾಡು’ – ಮೂಲ ಆಕರ

ಎಂ. ಮಾಧವ ಪೈ

ಕನ್ನಡ ನಾಡಿನ ಆಬಾಲವೃದ್ಧರಿಗೆಲ್ಲ ಅತ್ಯಂತ ಮನಮುಟ್ಟಿದ ಕವನವೆಂದರೆ ಪುಣ್ಯಕೋಟಿಯೆಂಬ ಹಸುವಿನ ಕತೆಯನ್ನು ವರ್ಣಿಸಿದ ‘ಗೋವಿನ ಹಾಡು.’ ಇದು ಜನಪದ ಸಾಹಿತ್ಯದಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಅಂತಹ ಈ ಪದ್ಯಕತೆಗೆ ಮೂಲ ಆಕರ ಯಾವುದಾದರೂ ಇದೆಯೆ ? ಅಥವಾ ಅದೊಂದು ಕನ್ನಡಿಗನೊಬ್ಬನ ಸ್ವತಂತ್ರ ರಚನೆಯೆ ? ಎಂಬ ಪ್ರಶ್ನೆಗೆ ದಿವಂಗತ ಡಿ. ಎಲ್. ನರಸಿಂಹಾಚಾರ್ಯರು ತಾವು ಸಂಪಾದಿಸಿದ ‘ಗೋವಿನ ಹಾಡು’ ಪುಸ್ತಕದ ಮುನ್ನುಡಿಯಲ್ಲಿ ಹೀಗೆ ಹೇಳಿದ್ದಾರೆ– “ಇಲ್ಲಿ ಹೇಳಿರುವ ಕಥೆ ಬಹಳ ಹಳೆಯದು. ‘ಇತಿಹಾಸ ಸಮುಚ್ಚಯ’ ಎಂಬ ಪುರಾಣ ಕಥೆಗಳ ಪುಸ್ತಕದಲ್ಲಿ ಈ ಕಥೆ ಬರುತ್ತದೆ. ಈ ಗ್ರಂಥ ಸಂಸ್ಕೃತ ಭಾಷೆಯಲ್ಲಿದೆ. ಇದರ 20 ನೆಯ ಅಧ್ಯಾಯಕ್ಕೆ ‘ಬಹುಲೋಪಖ್ಯಾನ’ ಎಂದು ಹೆಸರು. ಬಹುಲಾ ಎಂಬುದು ಹಸುವಿನ ಹೆಸರು; ಕಾಮರೂಪಿ ಎಂಬುದು ಹುಲಿಯ ಹೆಸರು. ಕಥೆಯೆಲ್ಲ ಬಹುಮಟ್ಟಿಗೆ ಗೋವಿನ ಹಾಡಿನಲ್ಲಿ ಇರುವಂತೆಯೇ ಇದೆ.” ಈ ಹೇಳಿಕೆಯಿಂದ ಗೋವಿನ ಹಾಡಿನ ಕಥೆ ಪುರಾಣಗಳ ಕಥೆ ಎಂಬುದಾಗಿ ಸ್ಪಷ್ಟವಾಗುತ್ತದೆ. ಆದರೆ ಇದು ಯಾವ ಪುರಾಣದಲ್ಲಿ ಬರುತ್ತದೆ ಎಂಬುದನ್ನು ಅವಲೋಕಿಸಿದರೆ ಈ ಕಥೆ ಶ್ರೀ ಸ್ಕಾಂದ ಪುರಾಣದ ಏಳನೆಯ ಪ್ರಭಾಸ ಖಂಡದ ಮೂರನೆಯ ಅರ್ಬುದ ಖಂಡದಲ್ಲಿ ಕಪಿಲಾತೀರ್ಥ ಮಹಾತ್ಮ್ಯವರ್ಣನ ಎಂಬ ಇಪ್ಪತ್ತೊಂಬತ್ತನೆಯ ಅಧ್ಯಾಯದಲ್ಲಿ ವರ್ಣಿತವಾದುದೇ ಆಗಿರಬೇಕೆಂದು ತೋರುತ್ತದೆ. ಪುರಾಣವಾಚನ ನಡೆದಾಗ ಕೇಳಿಯೋ, ಅಥವಾ ತಾನೇ ಸ್ವತಃ ಪುರಾಣವನ್ನು ಓದಿಯೋ, ಅಲ್ಲಿ ಬಂದಿರುವ ಆ ಕಥೆಯನ್ನು ಕನ್ನಡಿಗನೊಬ್ಬನು ಗೋವಿನ ಹಾಡನ್ನು ಬರೆದಿದ್ದಾನೆ ಎಂಬುದು ಸ್ಪಷ್ಟವಾಗುತ್ತದೆ. ಶ್ರೀಸ್ಕಾಂದ ಪುರಾಣದಲ್ಲಿ ವರ್ಣಿತವಾದ ಕಥೆ ಹೀಗಿದೆ:

ಪುರಾತನ ಕಾಲದಲ್ಲಿ ಸುಪ್ರಭನೆಂಬ ರಾಜನಿದ್ದನು. ಅವನು ಬೇಟೆಯಾಡುವವನೂ ಜಿಂಕೆಗಳಿಗೆ ಅಹಿತವನ್ನುಂಟುಮಾಡುವುದರಲ್ಲಿ ನಿರತನೂ ಆಗಿದ್ದನು. ಮೃಗಗಳನ್ನು ಕೊಲ್ಲುವುದರಲ್ಲಿದ್ದ ಅವನ ಆಸಕ್ತಿಯು ಸ್ತ್ರೀಯರಲ್ಲಿಯೂ ಆನೆ ಕುದುರೆಗಳಲ್ಲಿ ಸಂಚರಿಸುವುದರಲ್ಲಿಯೂ ಅಥವಾ ಇನ್ನಾವುದೇ ಸುಖಾನುಭವದಲ್ಲಿಯೂ ಇರಲಿಲ್ಲ. ಇಂತಹ ಈ ರಾಜನು ಒಂದು ದಿನ ಮೃಗವಧೆಯಲ್ಲಿ ನಿರತನಾಗಿ ಅರ್ಬುದಾ

ಚಲಕ್ಕೆ ಹೋದನು. ಆ ಪರ್ವತದ ತಪ್ಪಲಲ್ಲಿ ಹಾಲನ್ನು ಕುಡಿಯುವುದರಲ್ಲಿ ಪ್ರೀತಿಯುಳ್ಳ ಶಿಶುವಿಗೆ ಹಾಲನ್ನೂಡಿಸುತ್ತಿರುವ ಹೆಣ್ಣು ಜಿಂಕೆಯನ್ನು ನೋಡಿ, ಬಿಲ್ಲನ್ನು ಹಿಡಿದುಕೊಂಡು ತೀಕ್ಷ್ಣವಾದ ಬಾಣದಿಂದ ಹೊಡೆದನು. ಎರಡನೆಯ ಬಾಣವನ್ನು ಪ್ರಯೋಗಿಸಲು ಉದ್ಯುಕ್ತನಾದ ಆ ರಾಜನನ್ನು ನೋಡಿ ಜಿಂಕೆಯು "ಎಲೈ ದೊರೆಯೆ! ನೀನೀಗ ಆಚರಿಸಿದುದು ಕ್ಷತ್ರಿಯ ಧರ್ಮವಲ್ಲ. ಏಕೆಂದರೆ ಮಲಗಿರುವ, ಮೈಥುನದಲ್ಲಿ ನಿರತವಾಗಿರುವ, ಹಾಲನ್ನು ಕುಡಿಯುತ್ತಿರುವ, ಕಾಹಿಲೆಯುಳ್ಳ ಗಂಡು ಜಿಂಕೆಯೂ, ಮರಿಯೊಡನೆ ಇರುವ ಹೆಣ್ಣು ಜಿಂಕೆಯೂ ಕೊಲ್ಲಲರ್ಹವಲ್ಲ. ನೀಚನಾದ ದೊರೆಯೆ! ನಿನ್ನ ಬಾಣದಿಂದ ನಾನು ಸಾಯುವೆನು. ನಾನಿಲ್ಲದೆ ನನ್ನ ಮರಿಯೂ ಸಾಯುವುದು. ನೀನು ನನ್ನನ್ನು ಅಧರ್ಮದಿಂದ ಕೊಂದುದರಿಂದ ಇದೇ ಪರ್ವತದ ತಪ್ಪಲಲ್ಲಿ ಭಯಂಕರ ವ್ಯಾಘ್ರನಾಗುವೆ" ಎಂದು ಹೇಳಿತು.

ರಾಜನಿಗೆ ತಾನು ಮಾಡಿರುವ ಆ ಮಹಾಪಾಪದ ಅರಿವುಂಟಾಗಿ ಸಾಯುತ್ತಿರುವ ಆ ಜಿಂಕೆಯನ್ನು ಸಮಾಧಾನಪಡಿಸಿ "ಸಾಧು ಜಿಂಕೆಯೆ! ನಿರ್ದಯನಾದ ನಾನು ಅವಿವೇಕದಿಂದ ನಿನ್ನನ್ನು ಕೊಂದೆನು, ಆದ್ದರಿಂದ ದೀನನಾದ ನನ್ನ ಶಾಪವನ್ನು ನೀಗಿಸು" ಎಂದು ಪ್ರಾರ್ಥಿಸಿಕೊಳ್ಳಲು ಆ ಮೃಗಿಯು, "ನೀನು ಕಪಿಲೆಯೆಂಬ ಹಸುವನ್ನು ಕಂಡು ಅದರೊಡನೆ ಮಾತನಾಡುವುದರಿಂದ ಮೊದಲಿನ ಸ್ಥಿತಿಯನ್ನು ಹೊಂದುವೆ" ಎಂದು ಹೇಳಿ, ಬಾಣದ ಗಾಯದ ವೇದನೆಯಿಂದಲೂ, ಪುತ್ರಸ್ನೇಹ ದಿಂದಲೂ ಪೀಡಿತವಾಗಿ ಮರಣಹೊಂದಿತು. ರಾಜನು ಕೂಡ ಆ ಕೂಡಲೇ ಭಯಂಕರ ಮುಖವುಳ್ಳ, ಹರಿತವಾದ ಹಲ್ಲು ಉಗುರುಗಳುಳ್ಳ ಹುಲಿಯಾಗಿ ಪರಿವರ್ತಿತನಾದನು. ಅಲ್ಲದೆ ಕೋಪದಿಂದ ತನ್ನ ಸೈನ್ಯವನ್ನೇ ಭಕ್ಷಿಸತೊಡಗಲು ಹತಶೇಷರಾದ ಕೆಲವು ಸೈನಿಕರು ಅತ್ಯಂತ ದುಃಖಿತರಾಗಿ ತಮ್ಮ ಮನೆಗಳನ್ನು ಸೇರಿ, ಪಟ್ಟಣದ ಚೌಕಗಳಲ್ಲಿ ರಾಜನು ಅರ್ಬುದ ಪರ್ವತದಲ್ಲಿ ವ್ಯಾಘ್ರನಾದ ವೃತ್ತಾಂತ ವನ್ನು ಯಥಾವತ್ತಾಗಿ ತಿಳಿಸಿದರು.

ಹೀಗಿರುವಾಗ ಅದೊಂದು ದಿನ ಆ ವ್ಯಾಘ್ರನಿರುವ ಬೆಟ್ಟದ ತಪ್ಪಲಿಗೆ ಗೋಪ ಗೋಪಿಯರಿಂದ ಸಹಿತವಾದ ಗೋವುಗಳ ಸಮೂಹವು ಬಾಯಾರಿಕೆಗೊಂಡು ಬಂದವು. ಆ ಗೋವುಗಳ ಹಿಂಡಿನ ಮುಂದೆ ಹೋಗುವ ಕಪಿಲೆಯೆಂಬ ಒಂದು ಹಸು ಹುಲ್ಲಿನ ಆಸೆಯಿಂದ ತನ್ನ ಹಿಂಡಿನಿಂದ ತಪ್ಪಿಸಿಕೊಂಡು, ಕತ್ತರಿಸದ ಹುಲ್ಲಿನ ತುದಿಗಳನ್ನು ಮೇಯುತ್ತ ಮೇಯುತ್ತ ಆ ಪರ್ವತದ ಶೂನ್ಯವೂ ಭಯಂಕರವೂ ಆದ ಗುಹೆಯನ್ನು ಪ್ರವೇಶಿಸಿತು. ಆಗ ಅಲ್ಲಿದ್ದ ಉಗ್ರದಂಷ್ಟ್ರಗಳುಳ್ಳ ಒಂದು ಹುಲಿಯು ಆ ಕಪಿಲೆಯನ್ನು ಹಿಡಿದುಕೊಳ್ಳಲು, ಗೋಕುಲದಲ್ಲಿ ಕಟ್ಟಿರುವ ಹಾಲನ್ನು ಕುಡಿಯುವ ತನ್ನ ಕರುವನ್ನು ಸ್ಮರಿಸಿಕೊಂಡು ದುಃಖದಿಂದ ರೋಧಿಸ ತೊಡಗಿತು.

ಅದನ್ನು ಕಂಡು ಹುಲಿಯು "ಮೂರ್ಖಧೇನುವೆ! ವ್ಯರ್ಥವಾಗಿ ಏತಕ್ಕೆ ಅಳುತ್ತಿರುವೆ? ನನ್ನೆಡೆಗೆ ಬಂದವರಾರೂ ಬದುಕಲಿಲ್ಲ. ನೀನು ನಿನ್ನಿಷ್ಟದೇವತೆಯನ್ನು ಸ್ಮರಿಸಿಕೋ" ಎಂದು ಸೂಚಿಸಲು, ಕಪಿಲೆಯು "ಹುಲಿಯೆ! ನಾನು ನನ್ನ ಪ್ರಾಣದ ಭಯದಿಂದ ಒಂದು ಕ್ಷಣವೂ ಅಳುತ್ತಿಲ್ಲ, ಹಾಲನ್ನು ಕುಡಿಯುವ ನನ್ನ ಎಳೆಕರು ಕೊಟ್ಟಿಗೆಯಲ್ಲಿ ನನ್ನನ್ನು ನಿರೀಕ್ಷಿಸುತ್ತಿದೆ. ಅದು ಇನ್ನೂ ಹುಲ್ಲು ತಿನ್ನುತ್ತಿಲ್ಲ. ಅದರಿಂದ ದುಃಖಗೊಂಡ ನಾನು ಕರುವಿನ ಮೇಲಿರುವ ಅಕ್ಕರೆಯಿಂದಾಗಿ ಅಳುತ್ತಿದ್ದೇನೆ. ಸತ್ಯವಾಗಿಯೂ ನಾನು ಸಾಯಲು ಹೆದರುತ್ತಿಲ್ಲ. ಸ್ವಾಮಿ! ನೀನು ಒಪ್ಪುವುದಾದರೆ ನಾನು ಕರುವಿಗೆ ಹಾಲನ್ನು ಕುಡಿಸಿ ಬಂಧು ಜನಗಳನ್ನು ನೋಡಿ ಅವರಿಗೆ ಹೇಳಿ ನಿನ್ನೆಡೆಗೆ ಮರಳಿ ಬರುವೆನು" ಎಂದು ಹೇಳಿಕೊಳ್ಳುತ್ತದೆ.

"ಹಸುವೆ! ನೀನು ಕರುವಿನ ಹತ್ತಿರ ಹೋಗಿ ನಿನ್ನ ಗೋಕುಲವನ್ನು ನೋಡಿಕೊಂಡು ಹಿಂತಿರುಗಿ ಬರುತ್ತೀ ಎಂಬುದನ್ನು ನಾನು ನಂಬುವುದಿಲ್ಲ. ನೀನು ಭಯದಿಂದ ನನ್ನೊಡನೆ ಹೀಗೆ ಹೇಳುತ್ತೀಯೆ. ಪ್ರಾಣಭಯಕ್ಕೆ ಸಮಾನವಾದ ಭಯವಿಲ್ಲ. ಆದ್ದರಿಂದ ಪ್ರಾಣಭಯದಿಂದ ನೀನು ತಿರುಗಿ ಬರುವುದಿಲ್ಲ." ಎಂದು ಹುಲಿಯು ಹೇಳಲು, ಕಪಿಲೆಯು "ಮೃಗರಾಜ! ಆಣೆ ಇಡುತ್ತೇನೆ. ಸತ್ಯವಾದ ನುಡಿಯನ್ನು ಕೇಳು, ನನ್ನಲ್ಲಿ ನಿನಗೆ ನಂಬಿಕೆಯಿದ್ದರೆ ನನ್ನನ್ನು ಬಿಡು" ಎಂದು ಕೇಳಿಕೊಳ್ಳುತ್ತದೆ. ಅದಕ್ಕೆ ಹುಲಿಯು "ನೀನು ಹಿಂತಿರುಗಿ ಬರುವ ವಿಷಯದಲ್ಲಿ ಮಾಡುವ ಶಪಥಗಳನ್ನು ಹೇಳು. ಅದರಿಂದ ನಾನು ನಂಬಿಕೆಗೊಂಡು ನಿನ್ನನ್ನು ಬಿಡಬಹುದೋ ಬಾರದೋ ಎಂಬುದನ್ನು ಆಲೋಚಿಸುವೆ" ಎಂದು ಹೇಳಲು, ಕಪಿಲೆಯು ಹೀಗೆ ಶಪಥ ಮಾಡುತ್ತದೆ–"ನಾನು ಮರಳಿ ಬಾರದಿದ್ದರೆ ವೇದಾಧ್ಯಯನ ಸಂಪನ್ನನಾದ ಬ್ರಾಹ್ಮಣನನ್ನು ವಂಚಿಸಿದ್ದರಿಂದುಂಟಾಗುವ ಪಾಪವೂ ಗುರುದ್ರೋಹ ನಿರತರಾದ ಮನುಷ್ಯರಿಗುಂಟಾಗುವ, ಗೋಬ್ರಾಹ್ಮಣರನ್ನು ಕೊಂದ, ಮಿತ್ರ ದ್ರೋಹದ, ಗುರುವಂಚನೆಯ, ಗೋಬ್ರಾಹ್ಮಣ ಅಗ್ನಿಗಳನ್ನು ಕಾಲಿನಿಂದ ತುಳಿದ, ಬಾವಿ, ಕೆರೆ, ತೋಟಗಳನ್ನು ಹಾಳುಮಾಡಿದ ಕೃತಘ್ನ ದುಷ್ಟರಿಗೊದಗುವ, ಮದ್ಯ ಮಾಂಸಗಳನ್ನು ತಿಂದವರಿಗೆ ದೊರಕುವ, ದೊರೆಯೊಡನೆ ಚಾಡಿ ಹೇಳುವವರಿಗೆ ಉಂಟಾಗುವ, ಹಣವನ್ನು ತೆಗೆದುಕೊಂಡು ವೇದವನ್ನು ಹೇಳಿಕೊಡುವವನಿಗೊದಗುವ, ಬ್ರಾಹ್ಮಣದಾನವನ್ನು ತಡೆಯುವವನಿಗುಂಟಾಗುವ, ವಿಶ್ವಾಸಘಾತಕನಿಗುಂಟಾಗುವ, ಪರಸ್ತ್ರೀಯರಲ್ಲಿ ಆಸಕ್ತರಾದವರು, ರಾತ್ರಿಕಾಲದಲ್ಲಿ ದಧಿ ಸಕ್ತುವನ್ನು ತಿನ್ನುವವರು, ಬದನೆಕಾಯಿ, ಬಿಳಿ ಕೆಂಪು ಮೂಲಕಗಳು, ಬೆಳ್ಳುಳ್ಳಿ ಇವುಗಳನ್ನು ಭಕ್ಷಿಸುವವರಿಗೆಲ್ಲ ಉಂಟಾಗುವ ಪಾಪವು ನನಗೆ ಸಂಭವಿಸುವುದು."

ಗೋವಿನ ಈ ಶಪಥಗಳನ್ನು ಕೇಳಿ ಆಶ್ಚರ್ಯಗೊಂಡು ಹುಲಿಯು ಅದರ ಮಾತನ್ನು ನಂಬಿ "ಮಂಗಳಕರಳೆ! ನೀನು ಗೋಕುಲಕ್ಕೆ ಹೋಗಿ ಹಿಂದಿರುಗಿ ಬಾ;

ಈ ಮೃಗರಾಜನನ್ನು ವಂಚಿಸಿದೆನೆಂದು ತಿಳಿಯಬೇಡ. ಸುತವತ್ಸಲಳೆ! ನೀನು ಹೊರಡು. ಕರುವನ್ನು ನೋಡಿ, ಅದಕ್ಕೆ ಪ್ರೀತಿಯಾಗಿ ಸ್ತನ್ಯವನ್ನಿತ್ತು ತಲೆಯನ್ನು ಆಘ್ರಾಣಿಸಿ ತಾಯಿ, ಸಹೋದರ, ಬಂಧು-ಬಾಂಧವರನ್ನೆಲ್ಲ ನೋಡಿಕೊಂಡು, ಸತ್ಯವನ್ನೇ ಮುಂದಿರಿಸಿಕೊಂಡು ಇಲ್ಲಿಗೆ ಬಾ" ಎಂದು ಒಪ್ಪಿಗೆಯನ್ನು ನೀಡಿತು.

ಹೀಗೆ ಹುಲಿಯಿಂದ ಒಪ್ಪಿಗೆಯನ್ನು ಪಡೆದು, ಕಣ್ಣೀರನ್ನು ಸುರಿಸುತ್ತ, ಮರುಗುತ್ತ ಕೂಗುತ್ತ ಕಪಿಲೆ ತನ್ನ ಗೋಕುಲಕ್ಕೆ ಬಂದಿತು. ಅಲ್ಲಿರುವ ಕರುವು ತಾಯಿ ಹಸುವಿನ ಆ ಶಬ್ದವನ್ನು ಕೇಳಿ, ತಾಯಿ ಬಂದಳೆಂದರಿತು ಶೀಘ್ರವಾಗಿ ಬಾಲವನ್ನು ಎತ್ತಿಕೊಂಡು ಸಂತೋಷದಿಂದ ಎದುರಾಗಿ ಓಡಿ ಬಂದು, ಅಕಾಲದಲ್ಲಿ ಬಂದಿರುವ ತಾಯಿಯ ಭಯಂಕರವಾದ ಅಂಬಾರವವನ್ನು ಕೇಳಿ, ಕಳವಳಗೊಂಡು "ಅಮ್ಮಾ! ನೀನು ಸೌಮ್ಯಳಾಗಿಲ್ಲ; ವ್ಯಥೆಗೊಂಡವಳಂತೆ ಕಾಣುತ್ತಿರುವೆ. ನೀನು ಅಕಾಲದಲ್ಲಿ ಏಕೆ ಬಂದಿರುವೆ? ನನಗೆ ಹೇಳು" ಎಂದು ಕೇಳಿತು. ಅದಕ್ಕೆ ಕಪಿಲೆಯು "ಮಗು! ಸ್ತನ್ಯವನ್ನು ಕುಡಿ: ಅನಂತರ ಕಾರಣವನ್ನು ಕೇಳು" ಎಂದು ಹೇಳಿ, ಆಮೇಲೆ "ನಾನು ನಿನಗಾಗಿ ಸ್ನೇಹದಿಂದ ಬಂದಿರುವೆನು. ಇಷ್ಟಬಂದಂತೆ ಸ್ತನ್ಯವನ್ನು ಕುಡಿದು ತೃಪ್ತಿಪಡು. ಮಗೂ! ಇದೇ ನನ್ನ ಕೊನೆಯ ದರ್ಶನವು. ನಾನು ನನ್ನ ಪ್ರಾಣವನ್ನು ಕಾಮರೂಪಿಯಾದ ಹುಲಿಗೆ ಕೊಡಬೇಕು. ನಿನಗಾಗಿ ಆ ಹುಲಿಯು ನನ್ನನ್ನು ಶಪಥಗಳಿಂದ ಬಿಟ್ಟಿರುವುದರಿಂದ ನಾನು ಈಗಲೇ ಮರಳಿ ಹೋಗಬೇಕು" ಎಂದು ತಿಳಿಸಲು, ಕರುವು "ಅಮ್ಮ! ನೀನು ಎಲ್ಲಿಗೆ ಹೋಗಲು ಬಯಸುವೆಯೋ ಅಲ್ಲಿಗೆ ನಾನೂ ಹೋಗುವೆನು. ನನಗೆ ನಿನ್ನೊಡನೆ ಸಾಯುವುದು ಶ್ಲಾಘ್ಯವಾದುದು. ಅಮ್ಮ! ನೀನಿಲ್ಲದಿದ್ದರೆ ನಾನೊಬ್ಬನೆ ಸಾಯಬೇಕಾಗುವುದು. ಅದೇ ಅಲ್ಲಿ ನಿನ್ನೊಡನೆ ನನ್ನದೂ ಮರಣವಾದರೆ, ತಾಯಿಯಲ್ಲಿ ಭಕ್ತಿಯುಳ್ಳವರಿಗಾಗುವ ಉತ್ತಮ ಗತಿಯು ನನಗೆ ಲಭಿಸುವುದು. ಆದ್ದರಿಂದ ನಾನು ನಿನ್ನೊಡನೆ ಅವಶ್ಯವಾಗಿ ಬರುವೆನು ಅಥವಾ ನೀನು ಇಲ್ಲೇ ಇರು. ಆ ಶಪಥಗಳು ನನ್ನವಾಗಲಿ. ನೀನು ಒಪ್ಪುವುದಾದರೆ ನಿನಗಾಗಿ ನಾನು ಹೋಗುವೆನು" ಎಂಬಿತ್ಯಾದಿಯಾಗಿ ಹೇಳಿದರೂ ತಾಯಿ ಒಪ್ಪದೆ ಹೀಗೆ ಹೇಳುತ್ತದೆ—"ಮಗೂ! ನನಗೆ ಮಾತ್ರ ಮರಣವು ಈಗ ವಿಹಿತವಾಗಿರುವುದು; ನಿನಗಲ್ಲ. ಒಬ್ಬರ ಮೃತ್ಯುವಿನಿಂದ ಮತ್ತೊಬ್ಬರಿಗೆ ಮೃತ್ಯುವುಂಟಾಗುವುದಿಲ್ಲ. ನಿನಗೆ ಇದೇ ಕೊನೆಯ ಸಂದೇಶವು—ಯಾವಾಗಲೂ ಕಾಡಿನಲ್ಲಿ ಜಾಗರೂಕತೆಯಿಂದ ಸಂಚರಿಸು; ವಿಷಮ ಸ್ಥಳದಲ್ಲಿರುವ ಹುಲ್ಲನ್ನು ಆಶೆಯಿಂದ ಮೇಯಲು ಹೋಗಬೇಡ"— ಎಂಬಿತ್ಯಾದಿಯಾಗಿ ಉಪದೇಶಿಸಿ, ಕರುವಿನ ಶಿರಸ್ಸನ್ನಾಘ್ರಾಣಿಸಿ ತನ್ನ ತಾಯಂದಿರನ್ನು ಸಖಿಯರನ್ನು ನೋಡಲು ಹೊರಟಿತು. ಅವರನ್ನು ಕಂಡು "ಮಾತೆಯರೆ! ನನ್ನ ಈ ಕೊನೆಯ ಸ್ಪಷ್ಟವಾದ ಮಾತನ್ನು ಆಲಿಸಿರಿ—ಅನಾಥನೂ ಬಲವಿಲ್ಲದವನೂ ದೀನನೂ ನೊರೆಯನ್ನು ಕುಡಿಯುವವನೂ ತಾಯಿಯ ವಿಯೋಗ

ದಿಂದ ದುಃಖಿಗೊಂಡವನೂ ಆದ ನನ್ನ ಬಾಲಕನನ್ನು ನೀವೆಲ್ಲ ಕಾಪಾಡಿರಿ. ಈ ನನ್ನ ಬಾಲಕನನ್ನು ಈಗಲೂ ಮುಂದೆಯೂ ನಿಮ್ಮ ಮಕ್ಕಳಂತೆ ಸ್ನಾನ ಮಾಡಿಸಿ, ಹಾಲನ್ನು ಕುಡಿಸಿ ಕಾಪಾಡಿ. ಭಾಗ್ಯಶಾಲಿನಿಯರೆ! ನಾನು ನನ್ನ ಸತ್ಯವನ್ನು ಪಾಲಿಸಲು ನನ್ನನ್ನು ಬಿಟ್ಟಿರುವ ಹುಲಿಯಿರುವ ಸ್ಥಳಕ್ಕೆ ಹೋಗುವೆನು" ಎಂದು ಬೇಡಿಕೊಂಡಿತು.

ಕಪಿಲೆಯ ನುಡಿಗಳನ್ನಾಲಿಸಿ ಉಳಿದ ಹಸುಗಳು "ಕಪಿಲೆಯೆ! ನೀನು ಹೋಗ ಬೇಡ. ಅದರಿಂದ ನಿನಗೆ ದೋಷವುಂಟಾಗುವುದಿಲ್ಲ. ಪ್ರಾಣನಾಶದ ಕಾಲದಲ್ಲಿಯೂ ಭಯಂಕರ ಯುದ್ಧದಲ್ಲಿಯೂ ಮಾಡಿದ ಶಪಥದಿಂದ ದೋಷ ಬರುವುದಿಲ್ಲವೆಂದು ಮುನಿಗಳು—'ನಾನು ಇತರ ಪ್ರಾಣಿಗಳ ಪ್ರಾಣರಕ್ಷಣೆಗಾಗಿ ಸುಳ್ಳನ್ನು ಹೇಳುವೆನು; ನನಗಾಗಿ ಸ್ವಲ್ಪವೂ ಸುಳ್ಳನ್ನು ಹೇಳುವುದಿಲ್ಲ' ಎಂಬ ಒಂದು ಗಾಥೆಯನ್ನು ಹೇಳುತ್ತಾರೆ" ಎಂದು ಬೋಧಿಸಿದರೂ ಕಪಿಲೆಯು ಒಪ್ಪುವುದಿಲ್ಲ. ಅದು "ಸಾವಿರ ಅಶ್ವಮೇಧ ಯಾಗಗಳನ್ನು ಸತ್ಯವನ್ನು ತಕ್ಕಡಿಯಿಂದ ತೂಗಿದರೆ ಆ ಅಶ್ವಮೇಧ ಯಾಗಗಳಿಗಿಂತ ಸತ್ಯವೇ ಅಧಿಕವಾಗುವುದು. ಆದುದರಿಂದ ಬದುಕುವ ಆಶೆಯಿಂದ ನಾನು ಸುಳ್ಳುಗಾರಳಾಗುವುದಿಲ್ಲ. ಪೂಜ್ಯರೆ! ನನಗಿನ್ನು ಅಪ್ಪಣೆ ಕೊಡಿ" ಎಂದು ಬೇಡಿಕೊಂಡಿತು. ಆಗ ಗೆಳತಿಯರೆಲ್ಲರೂ "ಕಪಿಲೆಯೆ! ನೀನು ಸತ್ಯಕ್ಕಾಗಿ ಬಿಡಲ ಶಕ್ಯವಾದ ಪ್ರಾಣವನ್ನೂ ತ್ಯಜಿಸುವುದರಿಂದ ದೇವಾಸುರರ ನಮಸ್ಕಾರಕ್ಕೆ ಅರ್ಹಳು. ಸತ್ಯವು ಪ್ರಮಾಣವಾಗಿದ್ದರೆ ನಿನಗೆ ಸತ್ಯದಿಂದ ನಿಜವಾಗಿಯೂ ಮೃತ್ಯುವು ಒದಗ ಲಾರದು. ನೀನು ಹೊರಡು; ನಿನ್ನ ದಾರಿಯು ಮಂಗಳಕರವಾಗಲಿ" ಎಂದು ಅಪ್ಪಣೆಯನ್ನೀಯಲು ಕಪಿಲೆ ಶೀಘ್ರವಾಗಿ ವ್ಯಾಘ್ರನೆಡೆಗೆ ಹೋಯಿತು.

ತನ್ನೆಡೆಗೆ ಹಿಂದಿರುಗಿ ಬಂದ ಕಪಿಲೆಯನ್ನು ಕಂಡು ಆ ಹುಲಿಯು ಆಶ್ಚರ್ಯ ಗೊಂಡು, ಹರ್ಷಗದ್ಗದಿತವಾಗಿ "ಸತ್ಯಮಂಗಳೆ! ನಿನಗೆ ಸುಖಾಗಮನವಾಗಲಿ. ಸತ್ಯ ವಂತರಿಗೆ ಪ್ರಪಂಚದಲ್ಲಿ ಎಲ್ಲಿಯೂ ಅಶುಭವಿಲ್ಲ. ಕಪಿಲೆಯೆ! ನೀನು ಮರಳಿ ಬರುವ ವಿಷಯದಲ್ಲಿ ಶಪಥಗಳಿಂದ ಮಾತು ಕೊಟ್ಟಿರುವೆ. ಆದರೂ ನಾನು ತಪ್ಪಿಸಿಕೊಂಡು ಹೋದ ಹಸು ತಿರುಗಿ ಹೇಗೆ ಬಂದೀತು ಎಂದು ಕೌತುಕಗೊಂಡೆನು. ಈಗ ನಿನ್ನನ್ನು ಬಿಟ್ಟಿರುವೆನು. ನೀನು ಗೋಕುಲದಲ್ಲಿ ಕಟ್ಟಿರುವ, ಹಾಲು ಕುಡಿಯುವ ದುಃಖಿತ ಕರುವಿನ ಹತ್ತಿರಕ್ಕೆ ಹಿಂತಿರುಗು" ಎಂದು ಹೇಳುತ್ತಿದ್ದಂತೆಯೇ ಜಿಂಕೆಯ ಶಾಪದಿಂದ ಮುಕ್ತವಾಗಿ ಆ ಹುಲಿಯು ತನ್ನ ಮೊದಲಿನ ಸ್ಥಿತಿಯನ್ನು ಹೊಂದಿ ದಿವ್ಯರೂಪವನ್ನು ಧರಿಸಿತು. ಅದು ಸಂತೋಷದಿಂದ "ಹಸುವೆ! ನಾನು ನಿನ್ನ ಅನುಗ್ರಹದಿಂದ ಈ ಭಯಂಕರ ಶಾಪದಿಂದ ಮುಕ್ತನಾದೆನು. ನಿನಗೆ ಯಾವ ಹಿತವನ್ನುಂಟು ಮಾಡಲಿ. ಶೀಘ್ರವಾಗಿ ಹೇಳು" ಎಂದು ಹೇಳಲು ಕಪಿಲೆಯು "ರಾಜೇಂದ್ರ! ನೀನು ಪಾಪ ಮುಕ್ತನಾದ್ದರಿಂದ ನಾನು ಧನ್ಯಳಾಗಿರುವೆನು. ಈಗ ನನಗೆ ಬಾಯಾರಿಕೆಯು ಬಹಳ

ವಾಗಿ ಪೀಡಿಸುತ್ತಿದೆ. ನೀರನ್ನು ತೆಗೆದುಕೊಂಡು ಬಾ. ನಾನು ಹೇಳಿದುದು ಸುಳ್ಳಲ್ಲ; ಸತ್ಯವಾದುದು" ಎಂದು ಹೇಳಿತು.

ಆ ದೊರೆಯು ತನ್ನ ಕೈಯಲ್ಲಿ ಬಿಲ್ಲನ್ನೆತ್ತಿಕೊಂಡು ಶೀಘ್ರವಾಗಿ ಬಾಣವನ್ನು ಹೂಡಿ ಭೂಮಿಗೆ ಹೊಡೆದನು. ಆಗ ಭೂಮಿಯಿಂದ ನಿರ್ಮಲವೂ ತಣ್ಣಗೂ ಇರುವ ನೀರು ಮೇಲಕ್ಕೆ ಉಕ್ಕಲು ಆ ಕಪಿಲೆಯು ಅದರಲ್ಲಿ ಮಿಂದು ಬಾಯಾರಿಕೆಯನ್ನು ನೀಗಿಸಿಕೊಂಡಿತು. ಅಷ್ಟರಲ್ಲಿ ಧರ್ಮವು ತಾನೇ ಅಲ್ಲಿಗೆ ಬಂದು ಕಪಿಲೆಯನ್ನು ಕುರಿತು "ನಾನು ನಿನ್ನ ಸತ್ಯದಿಂದ ಸಂತುಷ್ಟನಾಗಿರುವೆನು. ಮೂರು ಲೋಕಗಳಲ್ಲಿಯೂ ನಿನ್ನಂತಹ ಹಸುವಿಲ್ಲ. ನೀನೀಗ ಬೇಕಾದ ವರವನ್ನು ಕೇಳಿಕೋ" ಎನ್ನಲು, ಕಪಿಲೆಯು "ನಿನ್ನ ಅನುಗ್ರಹದಿಂದ ನಾನು, ದೊರೆ, ಗೋಕುಲ, ಸುಪ್ರಭ ಇವರೊಡನೆ ಮುಪ್ಪು ಮರಣಗಳಿಲ್ಲದ ದಿವ್ಯ ಸ್ಥಾನವನ್ನು ಸೇರುವಂತಾಗಲಿ. ಮನುಷ್ಯರ ಸಕಲ ಪಾಪಗಳನ್ನು ಪರಿಹರಿಸುವುದೂ ಇಷ್ಟಾರ್ಥಗಳನ್ನು ನೀಡುವುದೂ ಆದ ಈ ಪುಣ್ಯಕರವಾದ ಕೊಳವು ನನ್ನ ಹೆಸರಿನಿಂದ ಪ್ರಸಿದ್ಧಿಗೊಳ್ಳಲಿ" ಎಂದು ಬೇಡಿಕೊಂಡಿತು. ಅದಕ್ಕೆ ಧರ್ಮನು "ಹಾಗೇ ಆಗಲಿ" ಎಂದು ವರವಿತ್ತನು. ಅಂದಿನಿಂದ ಆ ಕ್ಷೇತ್ರ ಅತ್ಯಂತ ಪವಿತ್ರವಾಗಿದೆ.

ಈ ಕಥಾಭಾಗವನ್ನು ಅವಲೋಕಿಸಿದಾಗ ಶ್ರೀಸ್ಕಾಂದ ಪುರಾಣದ ಈ ಕಥೆಯನ್ನು ಹಿನ್ನೆಲೆಯಾಗಿಟ್ಟುಕೊಂಡು 'ಗೋವಿನ ಹಾಡು' ರಚಿತವಾಗಿದೆ ಎಂಬುದು ಮನವರಿಕೆಯಾಗದೆ ಇರಲಾರದು. ಆದರೆ 'ಗೋವಿನ ಹಾಡು' ಪುರಾಣ ಕಥೆಯ ಪೂರ್ತಿ ಅನುವಾದವಲ್ಲ. ಪುರಾಣದ ಕಥೆಯಲ್ಲಿ ಕೆಲವು ಮಾರ್ಪಾಡುಗಳನ್ನು ಗೋವಿನ ಹಾಡಿನ ಕವಿ ಮಾಡಿಕೊಂಡಿದ್ದಾನೆ. ಅವನು ಮಾಡಿಕೊಂಡ ಮಾರ್ಪಾಡುಗಳಲ್ಲಿ ಕೆಲವು ಮುಖ್ಯವಾದ ಅಂಶಗಳು ಇಂತಿವೆ :—

೧) ಪುರಾಣದ ಕಥೆ ನಡೆದದ್ದು ಪ್ರಭಾಸಕ್ಷೇತ್ರದ ಅರ್ಬುತಾಚಲದ ತಪ್ಪಲಲ್ಲಿ ಯಾದರೆ ಗೋವಿನ ಹಾಡಿನ ಕಥೆಯ ಪರಿಸರ ಕನ್ನಡನಾಡಿನದ್ದಾಗಿದೆಯೆಂದು ವರ್ಣನೆಗಳಿಂದ ಅನುಭವಕ್ಕೆ ಬರುತ್ತದೆ. ಈ ವರ್ಣನೆಯಲ್ಲಿಯೂ ಪ್ರಭಾಸ ಕ್ಷೇತ್ರದ ವರ್ಣನೆಯ ಪ್ರಭಾವವೂ ಕಂಡು ಬರುತ್ತದೆ.

೨) ಪುರಾಣದ ಕಥೆಯಲ್ಲಿಯೂ ಗೋವಿನ ಹಾಡಿನಲ್ಲಿಯೂ ಸತ್ಯಕ್ಕೆ ಪ್ರಾಮುಖ್ಯ ಕೊಟ್ಟಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಮಾತ್ರವಲ್ಲದೆ ಕಪಿಲೆಯನ್ನು 'ಸತ್ಯವಾದಿನೀಂ' ಎಂದು ವಿಶೇಷಿಸಿದೆ.

೩) ಪುರಾಣದ ಕಥೆಯಲ್ಲಿ ಗೋವಿನ ಹೆಸರು ಹೇಳಿಲ್ಲ. ಅದಕ್ಕೆ ಬದಲಾಗಿ ಕೇವಲ 'ಕಪಿಲೆ' ಹಸು ಎಂದು ಮಾತ್ರ ಹೇಳಿದೆ. ಆದರೆ ಆ ಹಸುವಿಂದ ಜಲಾಶಯವನ್ನು ಕುರಿತು 'ಪುಣ್ಯಮೇತಜ್ಜಲಾಶಯಂ' ಎಂದೂ 'ಸುಪುಣ್ಯಸಲಿಲೇ' ಎಂದೂ

'ತವನಾಮ್ನಾ ಸುಪುಣ್ಯಂ ಹಿ ತೀರ್ಥಮೇತದ್ಭವಿಷ್ಯತಿ' ಎಂದೂ ಹೇಳಿರುವ ಅಂಶಗಳು ಕನ್ನಡ ಕವಿಗೆ ಹಸುವನ್ನು 'ಪುಣ್ಯಕೋಟಿ' ಎಂದು ಹೆಸರಿಡಲು ಪ್ರೇರಕವಾಯಿತೆಂದು ಹೇಳಬಹುದು.

4) ಪುರಾಣದ ಕಥೆಯಲ್ಲಿ ಹುಲಿಗೆ ಹೆಸರಿಲ್ಲ. ಗೋವಿನ ಹಾಡಿನಲ್ಲಿ ಬರುವ ಹುಲಿಯ ಹೆಸರು 'ಅರ್ಬುತ'ನೆಂಬುದಾಗಿದೆ. ಇದಕ್ಕೆ ಕಾರಣವುಂಟು – ಶ್ರೀಸ್ಕಾಂದ ಪುರಾಣವನ್ನು ಅನುಸರಿಸಿ ಈ ಗೋವಿನ ಹಾಡು ರಚಿತವಾಗಿದೆ ಎಂಬುದಕ್ಕೆ ಇದೊಂದು ಬಲವಾದ ಆಧಾರ. ಪುರಾಣದ ಕಥೆಯಲ್ಲಿ ಬರುವ ಹುಲಿಗೆ ಹೆಸರಿಲ್ಲವಾದರೂ ಅದು ಇದ್ದುದು ಅರ್ಬುತ ಪರ್ವತದ ತಪ್ಪಲಲ್ಲಿ. ಹೀಗಾಗಿ ಕನ್ನಡದ ಕವಿ ತನ್ನ ಹಾಡಿನಲ್ಲಿ ಹುಲಿಗೆ ಆ ಪರ್ವತದ ಹೆಸರನ್ನೇ ಕೊಟ್ಟಿದ್ದಾನೆ. ಬಹುಲೋಪಾಖ್ಯಾನದ ಹುಲಿಗೆ 'ಕಾಮರೂಪಿ' ಎಂಬ ಹೆಸರಿದೆ. ಅದಕ್ಕೂ ಕಾರಣ ಶ್ರೀಸ್ಕಾಂದ ಪುರಾಣವೇ. ಏಕೆಂದರೆ ಶ್ರೀಸ್ಕಾಂದ ಪುರಾಣದಲ್ಲಿ ಒಂದೆಡೆ ಹುಲಿಯನ್ನು ಕುರಿತು "ವ್ಯಾಘ್ರಸ್ಯಕಾಮರೂಪಸ್ಯದಾತವ್ಯಂ ಜೀವಿತಂಮಯಾ'' (59) ಎಂದು ಹೇಳಿರುವುದುಂಟು. ಹೀಗಾಗಿ ಬಹುಲೋಪಾಖ್ಯಾನದಲ್ಲಿ ಹುಲಿಗೆ ಕಾಮರೂಪಿ ಎಂದೇ ಸಂಬೋಧಿಸಿರಬೇಕು.

5) ಪುಣ್ಯಕೋಟಿಯನ್ನು ತಡೆದು ನಿಲ್ಲಿಸಿದ ಹುಲಿಯು ಶಾಪದ ವೃತ್ತಾಂತ ಗೋವಿನ ಹಾಡಿನಲ್ಲಿ ವರ್ಣಿತವಾಗಲಿಲ್ಲ. ಆದರೂ ಅದರ ಛಾಯೆ – ಅಮ್ಮ ನೀನು ಸತ್ಯವಂತೆಯು । ನಿನ್ನ ದರುಶನ ಮಾತ್ರದಿಂದಲಿ । **ನಾನು ಪೂರ್ವದಿ ತಂದ ಫಲವು ।** ಇಂದು ಪರಿಹರವಾಯಿತು ॥ 59 ॥ ಎಂಬ ಪದ್ಯದಲ್ಲಿ ಕಾಣಲು ಸಿಗುತ್ತದೆ.

6) ಪುರಾಣದ ಕಪಿಲೆ ಧರ್ಮನನ್ನು ಕುರಿತು ಮನುಷ್ಯರ ಸಕಲ ಪಾಪಗಳನ್ನು ಪರಿಹರಿಸುವುದೂ ಇಷ್ಟಾರ್ಥಗಳನ್ನು ನೀಡುವುದೂ ಆದ ಈ ಕೊಳ ನನ್ನ ಹೆಸರಿನಲ್ಲಿ ಪ್ರಸಿದ್ಧಿಗೊಳ್ಳಲಿ ಎಂದು ಬೇಡಿಕೊಂಡಿದ್ದರೆ, ಗೋವಿನ ಹಾಡಿನ ಹಸು ಗೌಡನ ಕಂಡು ಎನ್ನ ವಂಶದ ಗೋವುಗಳೊಳಗೆ, ನಿನ್ನ ವಂಶದ ಗೊಲ್ಲರೊಳಗೆ ಮುನ್ನ ಸಂಕ್ರಾಂತಿ ಹಬ್ಬದೊಳಗೆ ಚಿನ್ನಕೃಷ್ಣನ ಭಜಿಸಿಯೆ, ಪಾಲುಪೊಂಗಲನಿಕ್ಕಿಸಯ್ಯ, ಬಾಲಗೋವ್ಗಳ ಕೂಡಿ ಸಾಗಲು ಲೋಲಕೃಷ್ಣನು ನಿಮಗೆ ಒಲಿವನು ಎಂದೂ ಈ ಎನ್ನ ವಾಕ್ಯವನ್ನು ಪಾಲಿಸು ಎಂದೂ ಹೇಳಿತೆಂದೂ ಕನ್ನಡನಾಡಿನ ಜಾಯಮಾನಕ್ಕನುಗುಣವಾಗಿ ಕವಿ ಬದಲಾಯಿಸಿದ್ದಾನೆ.

7) ಪುರಾಣದ ಕಪಿಲೆ ದಿವ್ಯಲೋಕಕ್ಕೆ ತನ್ನ ಸಕಲ ಬಂಧು – ಬಾಂಧವರೊಂದಿಗೆ ಹೋದರೆ ಗೋವಿನ ಹಾಡಿನ ಹಸು ಹೋಗುವುದಿಲ್ಲ. ಅದರ ಬದಲು ಗೋವಿನ ಹಾಡಿನ ಹುಲಿ ಆತ್ಮಹತ್ಯೆ ಮಾಡಿಕೊಂಡಿತೆಂದು ಚಿತ್ರಿಸಿ, ಆ ಹುಲಿಯ

ಪ್ರಾಣವನ್ನು ಬ್ರಹ್ಮನೂ ಚರ್ಮವನ್ನು ಶಿವನೂ, ತೆಗೆದುಕೊಳ್ಳಲು ಪರಿಯು ಹಸುವನ್ನು ಮನ್ನಿಸಿ ಬೇಗನೆ ದೊಡ್ಡಿಗೆ ಕಳುಹಿಸಿದ ಎಂದು ವರ್ಣಿಸಲಾಗಿದೆ.

8) ಗೋವಿನ ಹಾಡಿನ ಹಸು ಸ್ನಾನಮಾಡಿ ಗುಹೆಯ ಹತ್ತಿರ ಹೋಗಿ ಹುಲಿಯನ್ನು ಕರೆದು ತನ್ನನ್ನು ಸ್ವೀಕರಿಸು ಎಂದು ಹೇಳಿದರೆ, ಪುರಾಣದ ಹಸು ಹುಲಿಯು ಶಾಪವನ್ನು ಕಳೆದುಕೊಂಡು ಪುನಃ ರಾಜನಾದ ಮೇಲೆ ಹಸುವಿಗಾಗಿ ಭೂಮಿಯಿಂದ ಜಲವನ್ನು ತರಿಸಿಕೊಂಡು ಅದರಲ್ಲಿ ಸ್ನಾನ ಮಾಡುವಂತೆ ಬದಲಾಯಿಸಿ ಕೊಂಡಿದ್ದಾನೆ.

9) ಶ್ರೀಸ್ಕಾಂದ ಪುರಾಣದ ಕಥೆಯಲ್ಲಿನ ಕೆಲವು ಶ್ಲೋಕಗಳ ಛಾಯೆ ಕಂಡು ಬರುವ ಪದ್ಯಗಳು ಹೀಗಿವೆ—

ಸ್ಕಾಂ.ಪು. (1) ಸ್ಮರಂತಿ ಗೋಕುಲೇ ಬದ್ಧಂ ಸ್ವಸುತಂ ಕ್ಷೀರಪಾಯಿನಂ
ದುಃಖೇನ ರುವತೀಂ ತಾ ಸದೃಷ್ಟ್ವೋವಾಚ ಮೃಗಾಧಿಪಃ ॥ ೨೩ ॥

ಗೋ.ಹಾ. ಕನ್ನೆಮಗನ ಪಡೆದ ಪಶುವು । ತನ್ನ ಕಂದನ ನೆನೆದುಕೊಂಡು ।
ಪುಣ್ಯಕೋಟಿಯೆಂಬ ಪಶುವು । ಚೆನ್ನಾಗಿ ತಾ ಬರುತಿರೆ ॥ ೫೪ ॥

ಸ್ಕಾಂ.ಪು. (2) ಸ್ವಜೀವಿತ ಭಯಾದ್ವ್ಯಾಘ್ರ ನರೋದಿಮಿ ಕಥಂಚನ
ಪುತ್ರೋಮೇ ಬಾಲಕೋ ಗೋಷ್ಠ್ಯಾಂ ಕ್ಷೀರಪಾಯೀ ಪ್ರತೀಕ್ಷತೇ ॥ ೨೫ ॥

ಗೋ.ಹಾ. ಒಂದು ಬಿನ್ನಹ ಹುಲಿರಾಯನೆ । ಕಂದನೈದನೆ ಮನೆಯ ಒಳಗೆ ।
ಒಂದು ನಿಮಿಷದಿ ಮೊಲೆಯಕೊಟ್ಟು । ಬಂದು ನಾನಿಲ್ಲಿ ನಿಲ್ಲುವೆ ॥ ೬೪ ॥

ಸ್ಕಾಂ.ಪು. (3) ವ್ಯಾಘ್ರಸ್ಯ ಕಾಮರೂಪಸ್ಯದಾತವ್ಯಂ ಜೀವಿತಂ ಮಯಾ
ತೇನಾಹಂ ಶಪಥೈರ್ಮುಕ್ತಾ ಕಾರಣಾತ್ತವ ಪುತ್ರಕ ॥ ೫೯ ॥

ಮಯ್ಯಾದ್ಯ ತತ್ರಗಂತವ್ಯಂ ಮೃಗರಾಜ ಸಮಿಾಪತಃ
ಬದ್ಧಾ ಚ ಶಪಥೈಃ ಪುತ್ರದಾಸ್ಯಾಮಿ ಚ ಕಲೇವರಂ ॥ ೬೦ ॥

ಗೋ.ಹಾ. ಕೊಂದನೆಂಬ ದುಷ್ಟವ್ಯಾಘ್ರಗೆ । ಚೆಂದದಿಂದ ಭಾಷೆಯಿತ್ತು ।
ಕಂದ ನಿನ್ನನು ನೋಡಿ ಪೋಗುವೆ । ನೆಂದು ಬಂದೆನು ದೊಡ್ಡಿಗೆ ॥ ೭೩ ॥

ಸ್ಕಾಂ.ಪು. (4) ಭಾವಿನೀನಾಮಯಂ ಪುತ್ರಃ ಸಾಂಪ್ರತಂ ಚ ವಿಶೇಷತಃ
ಸ್ನಪನೀಯಃ ಪಾಯಿತವ್ಯಃ ಪ್ರೋಷ್ಯಃ ಪಾಲ್ಯಃ ಸ್ವಪುತ್ರವತ್ ॥ ೭೯ ॥

ಗೋ.ಹಾ. ಅಮ್ಮಗಳಿರಾ ಅಕ್ಕಗಳಿರಾ । ಎನ್ನತಾಯೊಡಹುಟ್ಟುಗಳಿರಾ ।
ನಿಮ್ಮ ಕಂದನೆಂದು ಕಂಡಿರಿ । ತಬ್ಬಲಿ ಮಗನೈದನೆ ॥ ೮೦ ॥

ಅಮ್ಮ ನೀವು ಎಲ್ಲರಿರಲು । ಎನ್ನ ಮನದೊಳು ಖೇದವೇತಕೆ ।
ನಿಮ್ಮ ಕಂದನೆಂದುಕೊಂಡಿರಿ । ತಬ್ಬಲಿ ಮಗನೈದನೆ ॥ ೮೫ ॥

ಹೀಗೆ ಗೋವಿನ ಹಾಡಿಗೆ ಶ್ರೀ ಸ್ಕಾಂದ ಪುರಾಣದ ಕತೆ ಮೂಲ ಆಕರವಾಗಿದೆ ಎಂದು ಹೇಳಬಹುದು. ಆದರೆ ಇದು ಅದರ ಅನುವಾದವಾಗಿ ರೂಪುಗೊಳ್ಳದೆ ಅತ್ಯಂತ ಸುಂದರವಾದ ರಸಭರಿತವಾದ ಕವನವಾಗಿ ಹೊರಹೊಮ್ಮಿ ಬಂದಿದೆ. ಈ ಕವನದಲ್ಲಿ ಪರಿಸರದ ನಿರ್ಮಾಣ ಇದರ ಹಿರಿಮೆಯಾಗಿ ನಿಲ್ಲುತ್ತದೆ. ಎಲ್ಲದಕ್ಕಿಂತ ಹೆಚ್ಚಾಗಿ ಆತ್ಮೀಯತೆಯು, ಅನುರಾಗ ಪರಿಪೂರ್ಣವಾದ ಒಂದು ಸಾಂಸಾರಿಕ ಚಿತ್ರದಂತೆ ಒಡಮೂಡಿ ಬಂದಿರುವ ಈ ಗೋವಿನ ಹಾಡು ಎಂದೆಂದೂ ಕನ್ನಡಿಗರಿಗೆ ಹೃದಯಂಗಮವಾಗಿ ನಿಲ್ಲುವಂತಹದ್ದಾಗಿದೆ. ಪುರಾಣದಲ್ಲಿ ವರ್ಣಿತವಾದ ಕಥೆ ಕನ್ನಡಕವಿಯ ಪ್ರತಿಭೆಯ ಮೂಸೆಯಲ್ಲಿ ಪುಟಕ್ಕಿಡಲ್ಪಟ್ಟು ಹೊಸದಾಗಿ ಎರಕಹೊಯ್ದ ಪುತ್ಥಳಿಗೊಂಬೆಯಾಗಿ ಮೆರಗುತಾಳಿದೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

ಗ್ರಂಥ ಋಣ

1. ಶ್ರೀ ಸ್ಕಾಂದ ಪುರಾಣಂ.
2. ಗೋವಿನಹಾಡು — ಸಂ. ಡಿ. ಎಲ್. ನರಸಿಂಹಾಚಾರ್ಯ.

ಮುದುಕ

ಹೆಚ್. ಹೆಚ್. ಗಂಗಾಧರಾಚಾರ್

ಗಡ್ಡ-ಮೀಸೆ, ಹುಬ್ಬು, ತಲೆಗೂದಲು ಮಾತ್ರವಲ್ಲ
ಮನ-ಮಾತುಗಳೂ ನರೆತು
ಸುತ್ತಲೂ ಹೆಣೆದುಕೊಂಡಿರುವ ಹರಯದ ನೆನಪುಗಳ ಮಧ್ಯೆ
ಕುಳಿತಿದ್ದೇನೆ-ಶಿಖಂಡಿ ಮುದುಕ,
ಈ ದೀರ್ಘ ಅವಧಿಯಲ್ಲಿ ಅರ್ಥವಾದದ್ದು ಅಲ್ಪ,
ನಿಗೂಢ ಮೊಟ್ಟೆಗಳ ಮೇಲೆ ಕೂರಲಾರೆ
ದೂರ ಹಾರಲಾರೆ.
ಹರಟೋಣವೆಂದರೆ ಮುದುಕಿಯೂ ಪಕ್ಕದಲ್ಲಿಲ್ಲ
ಅವಳಿಗೆ ಕೊಡೋಣವೆಂದರೂ ಏನೂ ಉಳಿದಿಲ್ಲ.
ಬಿಸಿರಕ್ತದ ಬೆಂಕಿಯಲ್ಲಿ ಕುದಿಯುತ್ತಿರುವ ಸೊಸೆ-ಮಗ
ಜಗತ್ತಿನ ಕೌತುಕಕ್ಕೆ ಈಗಷ್ಟೇ ಕಣ್ಣು ತೆರೆದಿರುವ ಮೊಮ್ಮಗ
ಇವರ ಉತ್ಸಾಹಕ್ಕೆ ನನ್ನ ಗೂರಲು ತಣ್ಣೀರನ್ನೇಕೆ ಎರಚಲಿ ?
ಭಗವದ್ಗೀತೆಯ ಮೇಲೆ ಕಣ್ಣೋಡಿಸಿದಾಗ
ಹರೆಯದಲ್ಲಿ ಸೂಳೆಯರ ಸೆರಗಿನಲ್ಲಿ ಹೊರಳಾಡಿದ ನೆನಪು ಮರುಕಳಿಸುತೆ
ಈಗ ಸುಕ್ಕಲು ಚರ್ಮ, ಮೂಳೆಯ ಹಂದರದಲ್ಲಿ
ಹಿಡಿ ಮಾಂಸವೂ ಸಿಕ್ಕುವುದಿಲ್ಲ.
ಮಾತಾಡಿದರೆ ನಾಯಿ. ತೂಕಡಿಸಿದರೆ ಗೂಬೆ.
ನಡೆಯಿರೋ ಹಾರೆ ಗುದ್ದಲಿ ಹಿಡಿದು ಮಸಣಕ್ಕೆ
ಸಿದ್ಧಪಡಿಸಿರೊ–ಚಟ್ಟ,
ಈಗಲೇ ತಿಥಿಮಾಡಿ, ಉಂಡೇ ಹೋಗುತ್ತೇನೆ,
ಉದ್ಧಾರ ಮಾಡಿದ್ದು ಸಾಕು,
ಇನ್ನು ಸಹಿಸಲಾರೆ, ಈ ಅಸಹ್ಯಮೌನ!

‘ಎಲ್ಲರಂಥವನಲ್ಲ ನನ ಗಂಡ’ – ಒಂದು ವಿಶ್ಲೇಷಣೆ

ಆರ್. ಭಾರತಾದ್ರಿ

1

ಆವೆ, ಕಾಮಿ ಕವನ ಸಂಕಲಗಳಿಂದ ಪ್ರಸಿದ್ಧರಾದಂಥ ಚೆನ್ನಯ್ಯನವರ ನಾಟಕವಿದು. ಈ ನಾಟಕ ಬರೆಯುವಾಗ ಅವರು ಬ್ರೆಕ್ಟ್‌ನಿಂದ ಸಂಪೂರ್ಣ ಪ್ರಭಾವಿತರಾಗಿದ್ದಾರೆ. ಬರ್ಟಾಲ್ಟ್‌ಬ್ರೆಕ್ಟ್ ಎಪಿಕ್ ಥಿಯೇಟರದ ಸರ್ವತತ್ತ್ವಗಳಿಗೆ ಅವರು ಋಣಿಯಾಗಿದ್ದಾರೆ. ಆದ್ದರಿಂದ ಬ್ರೆಕ್ಟನ ಎಪಿಕ್‌ಥೀಯೇಟರದ ತತ್ತ್ವಗಳನ್ನು, ಧ್ಯೇಯವನ್ನು ಅರ್ಥಮಾಡಿಕೊಂಡು ಪ್ರಸ್ತುತ ನಾಟಕದ ಪರಿವೀಕ್ಷಣೆ ನಡೆಯಿಸುವುದು ಒಳಿತು.

2

ರೂಢಿ ನಾಟಕಗಳು ಪ್ರೇಕ್ಷಕರನ್ನು ನಿಷ್ಕ್ರಿಯರನ್ನಾಗಿಸುತ್ತವೆ ; ಬದುಕು ಮತ್ತು ಸಮಾಜ ಒಂದು ವಿಧದಲ್ಲಿ ನಿಂತ ನೀರು ಎಂದು ಸಾರುತ್ತವೆ ; ಮಾನವನ ಶೀಲಗಳು ಬದಲಾಗದಂಥವು – ಅವು ಅವನ ಮೂಲ ಪ್ರವೃತ್ತಿಯನ್ನು ಅನುಸರಿಸುತ್ತವೆ. ಎಂದು ಅಭಿವ್ಯಕ್ತಿಸುತ್ತವೆ – ಎಂದೆಲ್ಲಾ ಪ್ರತಿಭಾವಂತ ಬ್ರೆಕ್ಟ್ ಗುರುತಿಸಿದ. ರಂಗಸಜ್ಜಿಕೆ, ಹಿನ್ನೆಲೆ ಸಂಗೀತ, ಭಾವನಾತ್ಮಕ – ಹೃದಯ ವಿದ್ರಾವಕ ಸನ್ನಿವೇಶಗಳು ಪ್ರೇಕ್ಷಕನ ಮತಿಗೆ ಕಡಿವಾಣ ಹಾಕಿಬಿಡುತ್ತವೆ ಎಂದು ತಿಳಿದ. ತಂತ್ರ ಮತ್ತು ಸತ್ವಗಳೆರಡರಲ್ಲೂ ನಾಟಕ ಬದಲಾಗಬೇಕು, ಮುಖ್ಯವಾಗಿ ಜನರನ್ನು ಯೋಚಿಸಲಿಕ್ಕೆ ಹತ್ತಿಸಬೇಕು ಎಂದು ವಿವೇಚನೆ ಮಾಡಹತ್ತಿದ. ಇವನಿಗೆ ಸ್ಫೂರ್ತಿದಾತ ಎರ್ವಿನ್ ಪಿಸ್ಕೇಟರ್ ಅಂತೂ ಈ ಮನೋ ಭೂಮಿಕೆಯೇ ಎಪಿಕ್ ಥಿಯೇಟರದ ಜನ್ಮಕ್ಕೆ ಕಾರಣವಾಯಿತು.

ಇಬ್ಸನ್ ಹ್ಯಾಪ್ಟ್‌ಮನ್‌ರ ಅಭಿಪ್ರಾಯದಂತೆ ನಾಟಕವು ಜೀವನದ ನಿಲುವುಗನ್ನಡಿ. ಅಂದರೆ ರಂಗದಲ್ಲಿ ನಡೆಯುವುದು ಜೀವನದಲ್ಲಿ ಕಂಡುಂಡದ್ದು. ಇದರಿಂದ ಪ್ರೇಕ್ಷಕರು ಭಾವುಕರಾಗಿಬಿಟ್ಟು ನಾಟಕವನ್ನು ತನ್ಮಯತೆಯಿಂದ ವೀಕ್ಷಿಸುತ್ತಾರೆ. ಈ ‘ಭಾವುಕತೆ’ಯನ್ನು ಪ್ರೇಕ್ಷಕರಿಂದ ತಪ್ಪಿಸಲು ಬ್ರೆಕ್ಟ್ ರಂಗಕ್ಕೂ ನೋಟಕರಿಗೂ ಪರಕೀಯತೆ ಏರ್ಪಡುವಂತೆ ಮಾಡಿದ. ರಂಗದಲ್ಲಿ ನಡೆಯುವುದು ಕೃತಕ, ಅಲ್ಲಿನ ವಸ್ತುಸ್ಥಿತಿಗೆ ಸಮಾಜದ ಗತಿಸ್ಥಿತಿ ಕಾರಣ, ನೀವು ಚಿತ್ತವಿಟ್ಟರೆ ಏನೆಲ್ಲವನ್ನೂ ಪಲ್ಲಟಿಸಬಹುದು ಎಂದು ಪ್ರೇಕ್ಷಕರಿಗೆ ಹೇಳುವುದೇ ಅವನ ಉದ್ದೇಶ. ಇವಕ್ಕೋಸುಗ ಯಾವುದೋ ಕಾಲ ದೇಶದ ಕಥನಗಳನ್ನು, ಜಾನಪದ ಕಥೆಗಳನ್ನು ತನ್ನ

ಉದ್ದೇಶಕ್ಕಾಗಿ ಬಳಸಿಕೊಳ್ಳತೊಡಗಿದ. ಇದೇ Historification. ಅಂದರೆ ಪ್ರೇಕ್ಷಕರನ್ನು ರಂಗದಿಂದ ಆದಷ್ಟು ದೂರದಲ್ಲಿಡುವುದು. ನಾಟಕವು ನಾಟಕಕ್ಕಾಗಿ, ನಾಟಕಶಾಲೆ ನಾಟಕಶಾಲೆಗಾಗಿ ಎಂದೆಲ್ಲಾ ಹೇಳುವುದು ಅವನ ಉದ್ದೇಶ. ಎರಡನೆಯದಾಗಿ ಪಾತ್ರಗಳ ಅಮುಖ್ಯತೆಯನ್ನು ಎತ್ತಿಹಿಡಿದಿದ್ದು. ಬ್ರೆಕ್ಟನಿಗೆ ಸಮಾಜದ ದುಷ್ಟ ಶಕ್ತಿಗಳೊಡನೆ ಸ್ಪಂದಿಸಬೇಕೆಂಬ ಅರಿವಿತ್ತು; ಆದರೆ ಪಾತ್ರಗಳೊಂದಿಗಲ್ಲ. ಸಂವಾದಗಳು ಬೆಳೆಯುತ್ತ ಹೋದರೆ ಪ್ರೇಕ್ಷಕರು ನಾಟಕದೊಡನೆ ಹೆಚ್ಚು involve ಆಗುತ್ತಾರೆ ಎಂತಲೇ ಕಥನಕ್ಕೆ (Narration) ಪ್ರಾಮುಖ್ಯವಿತ್ತ. ನಡುನಡುವೆ ಕಥನದ ಮೇಲಣ ವ್ಯಾಖ್ಯಾನ ವಿಮರ್ಶೆಗಳನ್ನು ಅಳವಡಿಸಿ, ನಾಟಕವೆಂದರೆ ಪರಕೀಯ (external), ಅದು ಸಂಪೂರ್ಣ ವಸ್ತುನಿಷ್ಠ (objective) ಎಂಬುದು ಪ್ರೇಕ್ಷಕರಿಗೆ ಅರಿವಾಗುವಂತೆ ಮಾಡಿದ. ಈ ಪರಿಣಾಮ ಪರಕೀಯತೆ (alienation effect) ಎಪಿಕ್ ಥಿಯೇಟರದ ಪ್ರಮುಖ ತತ್ತ್ವ. ಅಭಿನಯಕ್ಕೆ ಇಲ್ಲಿ ಪಾಶಸ್ತ್ಯವಿದೆ. ಆದರೂ ಅವನ ಪ್ರಮುಖೋದ್ದೇಶ—

> "To reveal the truth through making reality appear strange".

ಬ್ರೆಕ್ಟನ ಭಾಷೆಯಲ್ಲಿಯೇ ಹೇಳುವುದಾದರೆ—

"I do not like plays to contain pathetic overtones, they must be convincing like court pleas. The main thing is to teach the spectator to reach a verdict".

ಅಂದರೆ ಕಣ್ಣೀರು ತರಿಸುವಂಥ ನಾಟಕಗಳು, ಪ್ರೇಕ್ಷಕರನ್ನು ಒಳಗುಮಾಡಿಕೊಳ್ಳುವಂಥವುಗಳು ಬ್ರೆಕ್ಟನಿಗೆ ಹಿಡಿಸವು. ಅವನ ದೃಷ್ಟಿಯಲ್ಲಿ ನಾಟಕ ಕೋರ್ಟಿನ ಅಹವಾಲುಗಳಂತಿರಬೇಕು; ನೋಡುಗರಿಗೆ ಚಿಂತೆಗೆ ಅವಕಾಶವಿತ್ತು ಪರಕೀಯವೆಂಬಂತಿರಬೇಕು. ಆತ ಸಂಗೀತವನ್ನು ಬಳಸಿಕೊಂಡ. ಆದರೆ ಅದೂ ಅವನ ಪ್ರಮುಖೋದ್ದೇಶಗಳ ಸಾಧನೆಗಾಗಿಯೇ ಬಳಸಲ್ಪಟ್ಟಿತು. ಇನ್ನು ರಂಗಸಜ್ಜಿಕೆ. ಇದಂತೂ ಪ್ರೇಕ್ಷಕರೆದುರಿನಲ್ಲಿಯೇ ನಡೆಯಬೇಕು.

ಎಪಿಕ್ ಥಿಯೇಟರ್ ಅತ್ಯಂತ ಕಲಾತ್ಮಕವಾಗಿರುತ್ತದೆ. ಖುಷಿಪಡಿಸುತ್ತದೆ. ನೀವು ಪಡುತ್ತಿರುವುದು ರಂಜನೆ ಎಂಬುದನ್ನು ಪರಿಚಯಿಸಿ ಯೋಚಿಸಲಿಕ್ಕೂ ಹತ್ತಿಸುತ್ತದೆ. ಈ ನಾಟಕಕಾರರ ದೃಷ್ಟಿಯಲ್ಲಿ ಮನುಷ್ಯ ಬುದ್ಧಿಜೀವಿ. ಅವನ ಭಾವನೆಗಳಂತೆ ಸಮಾಜದ ಅಸ್ತಿತ್ವವಿಲ್ಲ; ಸಮಾಜವಿದ್ದಂತೆ ಅವನ ಭಾವನೆಗಳಿರುತ್ತವೆ. ನಿಜಕ್ಕೂ ಆಶಾಭಾವನೆ ಇರುವುದು ಈ ನಾಟಕಕಾರರಲ್ಲಿಯೇ. ಉದ್ದೇಶ ಎಷ್ಟೇ ವಿಫಲಗೊಳ್ಳಲಿ, ಪ್ರೇಕ್ಷಕರನ್ನು ಖುಷಿಪಡಿಸುವುದರ ಜತೆಗೆ ಸಕ್ರಿಯರನ್ನಾಗಿಸುತ್ತೇವೆ ಎಂದು ಹೊರಟ ಇವರ ಧ್ಯೇಯ ಸಾರ್ಥಕವೆನಿಸುತ್ತದೆ. ನಿಜಕ್ಕೂ ಹೇಳುವ

ದೆಂದರೆ ಜರ್ಮನಿಯು ನಾಸಿಗಳ ಕಪಿಮುಷ್ಟಿಯಿಂದ ಆಗತಾನೇ ಬಿಡುಗಡೆ ಹೊಂದು ತ್ತಿತ್ತು. ಪ್ರಪಂಚದೆಲ್ಲೆಡೆ ನಡೆಯಬಾರದ್ದು ನಡೆದು ಯುದ್ಧದ ಕಹಿಫಲ ಜನತೆ ಯನ್ನು ನಿಶ್ಚಲಗೊಳಿಸಿಬಿಟ್ಟಿತ್ತು. ಈ ಪ್ರಂಪಚ ಅವರಿಗೊಂದು ಹೊರಲಾರದ ಹೊರೆಯಾಗಿ ಬದುಕು ಬೇಡವೆನ್ನಿಸಿಬಿಟ್ಟಿತು. ಇಂಥ ಸಮಯದಲ್ಲಿ ಜನತೆಗೆ ಚೇತನ ಎಚ್ಚರಿಕೆಯೊಂದಿಗೆ ವಿವೇಚನೆಯೇ ಅಗತ್ಯ, ಪ್ರಪಂಚದ ಸ್ಥಿತ್ಯಂತರ ನಿರಂತರ ಎಂದು ಸಾರಿತು ಎಪಿಕ್‌ಥಿಯೇಟರ್. ಈ ದೃಷ್ಟಿಯಿಂದ ಇದರ ಸಾಧನೆ, ಸಿದ್ಧಿ ಎಲ್ಲವೂ ಅರ್ಥಪೂರ್ಣವಾಯಿತು. ಬ್ರೆಕ್ಟನ Caucasiun Chalk Circle, The good woman of Setezuan ಮೊದಲಾದ ನಾಟಕಗಳು ಎಪಿಕ್ ಥಿಯೇಟರದ ತತ್ತ್ವ ಗಳನ್ನು ತತ್ತ್ವತಃ ಅನುಸರಿಸಿವೆ.

3

ತಂತ್ರದ ದೃಷ್ಟಿಯಿಂದ ನಮ್ಮ ಯಕ್ಷಗಾನವು ಎಪಿಕ್‌ಥಿಯೇಟರನ್ನು ಹೋಲು ತ್ತದೆಯೆಂದು ನನಗನ್ನಿಸುತ್ತದೆ. ಆದರೆ ಸತ್ವದ ದೃಷ್ಟಿಯಿಂದ ಇದು ಅದಕ್ಕೆ ಎಷ್ಟರ ಮಟ್ಟಿಗೆ ಸಾಟಿಯೋ ತಿಳಿಯದು. ಬ್ರೆಕ್ಟನ ನಾಟಕಗಳ ಜತೆಗೆ ನಮ್ಮ ಜಾನಪದ ನಾಟಕಗಳೂ ಜನ್ನಯ್ಯನವರಿಗೆ ಸ್ಫೂರ್ತಿಯಿತ್ತಿವೆ. ಕರಪಾಲಮೇಳವು ತಮ್ಮ ನಾಟಕಕ್ಕೆ ಸ್ಫೂರ್ತಿಯನ್ನು ಒದಗಿಸಿತೆಂದು ಅವರೇ ಹೇಳಿಕೊಂಡಿದ್ದಾರೆ. ಬಹುಶಃ ತಾಂತ್ರಿಕವಾಗಿ ಈ ನಾಟಕ ಅಂದರೆ ಕರಪಾಲಮೆಳ ಅವರಿಗೆ ಸ್ಫೂರ್ತಿ ಒದಗಿಸಿರ ಬಹುದು. ಕರಪಾಲಮೇಳದಲ್ಲೂ ಕೂಡ ಒಬ್ಬನಾದ ಮೇಲೊಬ್ಬನಂತೆ ಮೂವರು ಕಥೆಯನ್ನು ನಿರೂಪಿಸುತ್ತಾರಂತೆ. ಮಧ್ಯೆ ಮಧ್ಯೆ ಹೇಗೆ, ಎತ್ತ, ಏನು ಎಂಬೆಲ್ಲ ಪ್ರಶ್ನೆಗಳೆದ್ದಾಗ, ಅವರವರಲ್ಲಿಯೇ ಪಾತ್ರಗಳನ್ನು ಹಂಚಿಕೊಂಡು ದೃಶ್ಯದ ಮೂಲಕ ನಿರೂಪಣೆ ಮಾಡುತ್ತಾರಂತೆ. ಅಂತು ಮತ್ತು ಕೇಶಿ ನಾಟಕದ ಪಾತ್ರಗಳನ್ನು ನಿರ್ವಹಿಸುವುದನ್ನು ನೋಡಿದಾಗ, ನಮ್ಮ ಯಕ್ಷಗಾನದ ಕೂಡುನಾಟಕ ನನಗೆ ನೆನಪಿಗೆ ಬರುತ್ತದೆ. ಪ್ರಸ್ತುತ ನಾಟಕವನ್ನು ಪರಿಕಿಸುವಾಗ ನನ್ನ ದೃಷ್ಟಿ ಇಷ್ಟೇ : ಎಪಿಕ್ ಥಿಯೇಟರದಿಂದ ಸ್ಫೂರ್ತಿ ಹೊಂದಿದ ಜನ್ನಯ್ಯನವರು ನಾಟಕವನ್ನು ಎಷ್ಟರ ಮಟ್ಟಿಗೆ ನಮ್ಮ ಮಣ್ಣಿಗೆ ಸಮೀಪವಾಗಿಸಿದ್ದಾರೆ ಎಂಬುದನ್ನು ನೋಡುವುದು. ಮತ್ತು ಈ ತಂತ್ರ ನಮ್ಮ ನಾಡಿಗೆ ಪರಕೀಯವಾಗಿ ಉಳಿದು ದೂರವಾಗುತ್ತದೋ ಅಥವಾ ಹೆಚ್ಚು ಅರ್ಥಪೂರ್ಣವಾಗಿ ಜನತೆಯನ್ನು ರಂಜಿಸುವುದರ ಜತೆಗೆ ಯೋಚಿಸ ಲಿಕ್ಕೂ ಹತ್ತಿರಲು ಸಹಾಯವಾಗುತ್ತದೋ ಎಂಬುದನ್ನು ವಿವೇಚಿಸುವುದು.

4

ನಮ್ಮ ದೇಶದ ಗಂಡ ಎಲ್ಲರಂಥವನಲ್ಲ, ತನ್ನದುಷ್ಟತನದಿಂದ ಪ್ರಜೆಗಳನ್ನು ಕುರಿಗಳನ್ನಾಗಿಸಿ ಆಳುತ್ತಿರುವ ಪುಂಡ–ಜನ ಮನಸ್ಸು ಮಾಡಿದರೆ ಏನೆಲ್ಲವನ್ನೂ

ಬದಲಿಸಬಹುದು, ಎಂಬುದನ್ನು ಹೇಳುವುದಕ್ಕೆ ಹೊರಡುತ್ತದೆ : 'ಎಲ್ಲರಂಥವನಲ್ಲ ನನಗಂಡ'. ಈ ನಾಟಕ ಆತ್ಮೀಯವಾಗಿ ಜಿಡುವುದು ಇಲ್ಲಿನ ಕಥಾಶಿಲ್ಪದ 'ಭಾರತೀಯತೆ'ಯಿಂದ. ಇದನ್ನು ಕಥಿಸುವವಳು ಸಂನ್ಯಾಸಿನಿ—ಸದಾಶಿದ್ಧ ಶರಣಮ್ಮ. ಆಗ ಅಂತು, ಕೇಶಿ, ಇಬ್ಬರು ಸಂನ್ಯಾಸಿಗಳು ನಡುನಡುವೆ ಪಾತ್ರಗಳನ್ನು ನಿರ್ವಹಿಸುತ್ತಾರೆ. ಇಲ್ಲಿಯೇ ವ್ಯಂಗ್ಯವಿದೆ. ನಮ್ಮ ದೇಶವು ಧರ್ಮದ ದಾಳಿಯಿಂದ ತತ್ತರ ಹೊಂದಿದೆ. ಈ ಜಾತಿ ಈ ಧರ್ಮದ ಪ್ರತಿನಿಧಿಗಳಂತಿರುವ ಸಂನ್ಯಾಸಿಗಳು ಮಾಡುವುದಾದರೂ ಏನು ? ಬೇಕೆಂದಾಗ ಗುಡುಗುಡಿ ಸೇದುವುದು, ಉಂಡು ಆರಾಮಾಗಿ ಮಲಗುವುದು. ಈ ಧಾರ್ಮಿಕ ವಿಡಂಬನೆಯು ನಾಟಕದ ಅರ್ಥದ ಮೊದಲ ಸ್ತರ. ಇನ್ನೊಂದು ವಿಶೇಷವೇನೆಂದರೆ ಸಂನ್ಯಾಸಿನಿ ಕಥೆ ಹೇಳುತ್ತಾಳೆ. ನಡೆದದ್ದನ್ನು ಚಾಚೂತಪ್ಪದಂತೆ ನಿವೇದಿಸುತ್ತಾಳೆಯೇ ವಿನಾ ವಿಮರ್ಶೆಗೆ, ವ್ಯಾಖ್ಯಾನಕ್ಕೆ ತೊಡಗುವುದಿಲ್ಲ. ಇದು ಧಾರ್ಮಿಕಮತಿಗಳ 'ನಿಶ್ಚಲತೆ'ಯನ್ನು ಬಿಂಬಿಸಬಹುದು. ನಿಜಕ್ಕೂ ನಡುನಡುವೆ ಸಕ್ರಿಯವಾಗಿ ಭಾಗವಹಿಸಿ ವ್ಯಾಖ್ಯಾನಿಸುವವರು ಅಂತು ಹಾಗೂ ಕೇಶಿ.

ನಮ್ಮ ದೇಶದ ಗಂಡ ಇದ್ದ. ಅವನು ರಾಜ. ಧರ್ಮಿಷ್ಟ, ದೈವಭಕ್ತನಾದ ಅವನು ಕೆಡಿಸಿದ ಹುಡುಗಿಯರ ಲೆಕ್ಕ ಇಡುವವನ ಕಂಡು ಬ್ರಹ್ಮ ನಕ್ಕನಂತೆ; ಅವನು ಕಡಿದು ಚೆಲ್ಲಿದ ರುಂಡಗಳ ಕಂಡು ಯಮ ನಾಚಿದನಂತೆ. ಇಂಥವ ಆಡಿದ್ದೇ ಆಟವಾಯಿತು ; ಹೂಡಿದ್ದೇ ಲಗ್ಗೆಯಾಯಿತು. ಇವ ಕಾಡಿಗೆ ಹೋದಾಗ ಸಂನ್ಯಾಸಿಗಳು ಅಂದರೆ ಜಂಗಮಲಿಂಗಗಳು ರಾಣಿಯರಿಗೆ ಪುತ್ರದಾನ ಮಾಡಿದರು ಎಂಬುದು ನಾಟಕವನ್ನು ಮತ್ತೊಂದು ಅರ್ಥದ ಸ್ತರಕ್ಕೆ ಒಯ್ಯುತ್ತದೆ. ರಾಜ ಎನ್ನಿಸಿಕೊಂಡವನ ಷಂಡತನ, ಧರ್ಮದ ಅಧಿಷ್ಠಾತೃಗಳಿಂದ ಆಗುವ ನೀಚ ಕಾರ್ಯ ಇಲ್ಲಿ ವಿಡಂಬಿತವಾಗಿವೆ. ಆಯಿತು. ರಾಜನನ್ನು ಉರುಳಿಸಲು ಜನ ಹೊಂಚು ಹಾಕಿದರು. ದಂಗೆ ಸಫಲ. ಜನನಾಯಕ ಗದ್ದುಗೆ ಏರಿದ. ಪ್ರಜಾಸತ್ತೆ ಅಮಷ್ಠಾನಕ್ಕೆ ಬಂದಿತು. ಆದರೆ ಆದದ್ದಾದರೂ ಏನು ? ಹಾಲಿನ ಹೊಳೆ ಹರಿಯುತ್ತಿದ್ದರೂ ಮಕ್ಕಳು ಹಾಲಿಲ್ಲದೆ ಸತ್ತವು. ಜನನಾಯಕ ಬರಿಯ ಮನುಷ್ಯ ಅಲ್ಲ. ದೇವರು. ಜನರಿಗೆ ಊಟ ಮಾಡುವ ಕಷ್ಟ ಕೊಡಬಾರದೆಂದು ತಾನೇ ಊಟ ಮಾಡತೊಡಗಿದ. ಜನರು ತಂದೆಯರಾಗುವ ತೊಂದರೆ ತೆಗೆದುಕೊಳ್ಳಬಾರದೆಂದು ತಾನೇ ಎಲ್ಲಾ ವಿಧದಲ್ಲೂ 'ತಂದೆ' ಅನ್ನಿಸಿದ. ಹೀಗೆ ಜನತಾ ರಾಜ್ಯ ಸುಭಿಕ್ಷವಾಯಿತು ! ಸರಿ. ಕೆಲವರು ಎಚ್ಚೆತ್ತರು. ಮಸಲತ್ತು ನಡೆಸಿದರು. ಆದರೆ ಜನ ಕುರಿಗಳು. ಜನನಾಯಕ ಕುರುಬ ತುಂಬಾ ಜಾಣ.

ಮಸಲತ್ತು ನಡೆಸಿದವರೇ ಮಣ್ಣು ಮುಕ್ಕಿದರು. ಸಾಮಾನ್ಯರೀತಿಯಲ್ಲಿ ಸಾಯದ ಅವನನ್ನು ಪೂರೈಸಲು ಒಬ್ಬ ಮುದುಕಿ ನಿಜಕ್ಕೂ ಗಂಡಸಾದವನಿಗೆ ಗುಟ್ಟು ಹೇಳಿಕೊಡುತ್ತಾಳೆ. ಏಳು ಸಮುದ್ರದಾಚೆ ಹೋಗಿ—ಅಲ್ಲಿನ ಸಕಲ ಪ್ರಲೋಭನೆ

ಗಳನ್ನು ಎದುರಿಸಿ, ಗಿಳಿಯ ಕತ್ತು ಕೊಯ್ಯುವುದೆಂದು. ಸರಿ. ಎಲ್ಲಾ ಮುಗಿಯು ತ್ತದೆ. ಬೆವರು ಸುರಿಸುವವರ ಕೈಯಲ್ಲಿ ರಾಜ್ಯಬಂದು ಸರ್ವವೂ ಕ್ಷೇಮವಾಯಿತೆಂದು ನಾಟಕ ಮುಕ್ತಾಯಗೊಳ್ಳುತ್ತದೆ. ಈ ಮುಕ್ತಾಯ ಕೃತಕವೆಂದು ಅನ್ನಿಸುತ್ತದೆ. ನಮ್ಮ ದೇಶವ ಗಂಡನ ಕಥೆ ಎಂದೆಂದಿಗೂ ಮುಗಿಯದಂಥದ್ದು. ಆದರೆ ಸಂನ್ಯಾಸಿನಿ ಹೇಗಾದರೂ ಈ ರಂಗದ ಮೇಲಿನ ಪ್ರಯೋಗ ನಿಲ್ಲಲೇ ಬೇಕಲ್ಲ ಎಂದು ಅಂತ್ಯ ಹಾಡಿಬಿಡುತ್ತಾಳೆ. ಈ ಆತುರತೆಯು, ಬೆವರು ಸುರಿಸುವವರು ಅಧಿಕಾರ ಮಾಡಿದರೆ ಎಲ್ಲವೂ ಸುಭಿಕ್ಷವೆಂಬುದೇ ಲೇಖಕರ ನಂಬುಗೆ ಎಂದು ಸಾರಿಬಿಡುವುದಿಲ್ಲ. ಬದಲಿಗೆ ಜನರನ್ನು ಯೋಚಿಸಲಿಕ್ಕೆ ಹಚ್ಚಿಸುತ್ತದೆ ಈ ಅಂತ್ಯದ ಬಗೆಗೆ. ಸ್ವತಃ ಕೇಶಿಯೇ ಸಂನ್ಯಾಸಿನಿ ಈ ತೆರನಾಗಿ ಕಥಾಂತ್ಯ ಮಾಡಿದಳೆಂದು ಸುಮ್ಮನೆ ಕೂರಬೇಡಿ, ಕೊಂಚ ಚಿಂತೆ ಮಾಡಿರಿ ಎಂದು ಪ್ರೇಕ್ಷಕರಿಗೆ ಹೇಳುತ್ತಾನೆ. ಈ ಅಂತ್ಯ ತೀರಾ ಕೃತಕ ಮತ್ತು ಅಸಂಭವನೀಯ ಎಂದು ನಿರ್ಧರಿಸುವಂತೆ ಮಾಡಿ ಬಿಡುತ್ತದೆ. ರಾಜಕೀಯ ಸ್ಥಿತಿಗತಿ ಗಳ ವಿಡಂಬನೆ ಈ ನಾಟಕದ ಪ್ರಮುಖವಾದ ಅರ್ಥದ ಸ್ತರ.

ಇಲ್ಲಿ ಪ್ರೇಕ್ಷಕ ನಾಟಕದೊಂದಿಗೆ ಮಿಳಿತಗೊಳ್ಳುವುದನ್ನು ಅಂತು, ಕೇಶಿ ತಪ್ಪಿಸುತ್ತಲೇ ಹೋಗಿದ್ದಾರೆ. ಸಂನ್ಯಾಸಿಗಳು ಜನನಾಯಕ ಕೊಂದುಬಿಡುತ್ತಾ ನೆಂದು ಹೆದರಿಬಿಟ್ಟಿದ್ದಾಗ ಸಂನ್ಯಾಸಿನಿ—

"ಇಷ್ಟು ಹೊತ್ತೂ ನೀವು ಕಥೆ ಒಳಗ ಪಾತ್ರ ಹಾಕಿದ್ರಿ ಅನ್ನದು ಮರ್ತು ಬಿಟ್ರೇನು ?" ಎಂದು ಎಚ್ಚರಿಸುತ್ತಾಳೆ. ಆಗ ನಾಟಕವನ್ನು ಅನುಭವಿಸುತ್ತಿದ್ದ ಪ್ರೇಕ್ಷಕರಿಗೆ ತಮ್ಮ ಭಾವುಕತೆಯನ್ನು ತಪ್ಪಿಸಿಕೊಳ್ಳಲು ಅವಕಾಶವಾಗುತ್ತದೆ. ಒಟ್ಟಿನಲ್ಲಿ ಪ್ರೇಕ್ಷಕ ಪ್ರೇಕ್ಷಕನಾಗಿ ಉಳಿದು ನಾಟಕ ಶಾಲೆಯಿಂದ ಹೊರಹೊರಟಾಗ 'ವಿವೇಚನೆ'ಯನ್ನು ಜಾಗೃತಗೊಳಿಸಿ ಕೊಂಡಿರುತ್ತಾನೆ ಎಂಬುದು ನಿಜ.

ಸಮಕಾಲೀನ ಅಂಶಗಳನ್ನು ಮೈಗೂಡಿಸಿಕೊಂಡಿರುವವರು ಅಂತು ಮತ್ತು ಕೇಶಿ. ಇವರಿಬ್ಬರೂ ಮನೋಧರ್ಮಗಳಲ್ಲಿ ವಿಭಿನ್ನರಾಗಿರುತ್ತಾರೆ. ಆದ್ದರಿಂದಲೇ ಬುದ್ಧಿ ಇಲ್ಲ, ತಲಿಇಲ್ಲ ಎಂದು ಬಡಿದಾಡುತ್ತಿರುತ್ತಾರೆ. ವಾಸ್ತವವಾಗಿ ಅಂತು, ಕೇಶಿಯರು ಸರ್ವಕಾಲದ ಜನತೆಯ ಪ್ರತಿನಿಧಿಗಳು ಅನ್ನಿಸುತ್ತದೆ. ಕೇಶಿ, ಜನತೆ ಮನಸ್ಸು ಮಾಡಿದರೆ ಏನೆಲ್ಲ ಬದಲಾವಣೆಯಾದೀತು ಎಂದು ನಂಬಿದವನು. ಆಗ—

"ಕುರಿ ಸಿಂಹನ ನುಂಗ್ತೈತಿ; ಹಂದಿ ಆನಿ ಆಗ್ತೈತಿ; ಎತ್ತು ಕಿರುಬನ್ನ ಹಿಡಿತೈತಿ", ಎಂದೆಲ್ಲಾ ಆಶಿಸಿದವನು. ಪ್ರಪಂಚದ ಸ್ಥಿತ್ಯಂತರದ ನಿರಂತರತೆಗೆ ಒತ್ತುಹಾಕುವ ಇವನು ಜನನಾಯಕನ ರಾಜ್ಯಭಾರದಲ್ಲಿ —

'ನ್ಯಾಯದೇವತೆಯ ರಾಜ್ಯ ಐತಿ ಇದು',

ಎಂಬ ಅಂತುವಿನ ಹೇಳಿಕೆಯ ವಿಪರ್ಯಾಸವನ್ನು ಕಾಣುತ್ತಾನೆ. ಮಿಠಾಯಿ ಅಂಗಡಿಯಿಂದ ರೊಟ್ಟಿಯನ್ನು ಕದ್ದವನನ್ನು ಕೊಂಡೊಯ್ಯುತ್ತಿರುತ್ತಾರೆ ಗಲ್ಲು ಗಂಬಕ್ಕೆ ಒಡಿದು ! ಕೇಶಿ ಚಿಂತಿಸುತ್ತಾನೆ — ಹಾಗೆ ಅವನು ಮಾಡುವುದಕ್ಕೆ ಕಾರಣ ಒಂದು ತೊಟ್ಟು ಗಂಜಿಬಿದ್ದು ಪಾರವಾಗಿತ್ತು; ಕಾನೂನೂ ತಾನೇ ಯಾರ ಪರ ಇದೆ ? ದರೋಡೆ ಮಾಡುವವರಿಗೆ, ಲಂಚಕೋರರಿಗೆ ಎಂಥದೂ ಶಿಕ್ಷೆ ಇಲ್ಲ. ಯಾಕೆಂದರೆ ಅವರೆಲ್ಲರ ನಾಯಕ ಜನನಾಯಕ. ಬಡವ ಮಾಡಿದ್ದು ಬ್ರಂಹ್ಮಾಂಡ.......ಕೇಶಿಯ ಮತಿ ಜನನಾಯಕನ ಸ್ಥಿತಿಗತಿಗಳನ್ನು ಸಮರ್ಥನೀಯವಾಗಿ ವಿಡಂಬಿಸುತ್ತದೆ. ಈ ರೀತಿ ಪರಿಸ್ಥಿತಿಯ ಬದಲಾವಣೆಗೆ ಯತ್ನಿಸುವವರು ನಮ್ಮಲ್ಲಿದ್ದರು, ಈಗಲೂ ಇದ್ದಾರೆ. ಕೇಶಿಯೇ 'ವ್ಯಕ್ತಿ' ಯ ಪಾತ್ರವನ್ನು ನಿರ್ವಹಿಸುವುದರಲ್ಲಿ ಅರ್ಥವಿದೆ. ಇನ್ನು ಎರಡನೆಯ ರೀತಿಯ ಜನಗಳು ಇವರಿಗೆ ವಿಚಾರ ಮಾಡುವುದೆಂದರೆ ಆಗದು. "ಹೌದಪ್ಪನ ಚಾವಡಿಯೊಳಗೆ ಹೌದಪ್ಪ; ಇಲ್ಲಪ್ಪನ ಚಾವಡಿಯೊಳಗೆ ಇಲ್ಲಪ್ಪ"— ಎಂಬ ಗಾದೆಗೆ ಹೊಂದಿಕೊಂಡವರು. ಇವರ ಪ್ರತಿನಿಧಿ ಅಂತು. ಹೇಗೋ ಹೊಂದಿಕೊಂಡು ಹೋಗುವವ. ಕುರಿಗಳಾಗಿ ಬದುಕುವುದು ಪ್ರಜೆಗಳ ಕರ್ಮ, ಕುರುಬನಾಗಿ ಮಜಾಮಾಡುವುದು 'ಗಂಡ'ನ ಪುಣ್ಯ ಎಂದು ತಿಳಿದಂಥವನು. ರಾಜನನ್ನು ಮೆಚ್ಚಿಕೊಂಡಂತೆ. ಜನನಾಯಕನನ್ನೂ ಮೆಚ್ಚಿಕೊಳ್ಳುತ್ತಾನೆ. ಸರಿ. ಬೆವರು ಸುರಿಸುವವರ ರಾಜ್ಯಕ್ಕೂ adjust ಆಗಿಬಿಡುತ್ತಾನೆ. 'ಜನ ಅನ್ನಿಲ್ದೆ ನೆಗೆದು ಬಿದ್ರೂ' ಇವನ ದೃಷ್ಟಿಯಲ್ಲಿ 'ರಾಜ್ಯಸ್ವರ್ಗಾತು'. ಅಂತು, ಕೇಶಿ, ನಮ್ಮನಿಮ್ಮೆಲ್ಲರ ಪ್ರತಿನಿಧಿಗಳಾಗಿ, ಸಮ – ಸರ್ವಕಾಲೀನ ಪರಿಸ್ಥಿತಿಯ ದ್ವಿವಿಧ ಮನೋಧರ್ಮಗಳ ಮೂರ್ತಿಗಳಾಗಿ ನಾಟಕ ಹೆಚ್ಚು ಅರ್ಥಪೂರ್ಣವಾಗುವಂತೆ ಮಾಡುತ್ತಾರೆ.

ಚನ್ನಯ್ಯನವರು, ದೈವವಿದೆ, ಅದೆಲ್ಲವನ್ನೂ ನೋಡಿಕೊಳ್ಳುತ್ತದೆ ಎಂದು ಕುಳಿತುಬಿಟ್ಟರೆ ಸಾಧ್ಯವಿಲ್ಲ, ಪ್ರಯತ್ನಪಡಬೇಕು ಎಂಬ ವಿಚಾರವೂ ಪ್ರೇಕ್ಷಕರಲ್ಲಿ ಜಾಗೃತವಾಗುವಂತೆ ಮಾಡುತ್ತಾರೆ. ಬ್ರೆಕ್ಟನ Good woman of Setezuanನಲ್ಲಿನ ದೇವತೆಗಳ ನಿಷ್ಕ್ರಿಯತೆಯು ಈ ವಿಚಾರದ ಅಳವಡಿಕೆಗೆ ಪ್ರಚೋದನೆಯಾಗಿರಬಹುದು. ಮುದುಕಿ — ಹುಡುಗಿಯರ ಸಂಭಾಷಣೆಯಲ್ಲಿ ಈ ವಿಚಾರವು ಅಡಕಗೊಂಡಿದೆ. ಹುಡುಗಿ ವ್ಯಂಗ್ಯವಾಗಿ—

"ದ್ರೌಪದಿ ಸೀರಿ ಅಕ್ಷಯ ಮಾಡಿದ್ದು ಅವನ ಲೀಲಾ ಐತಿ", ಎಂಬುದನ್ನು ನಂಬಿದ ಹೆಂಗಸರ ಮಾನಾ ತೆಗೆದರೂ ಲೀಲಾಮೂರ್ತಿ ಬಾಯಿ ಚಪ್ಪರಿಸುತ್ತಿದ್ದನ, ಎಂದು ಪ್ರಶ್ನಿಸಿದಾಗ ಮುದುಕಿ—

"ಹಂಗಂತ ಸುಮ್ಮನ ಕುಂತರ ಏನೂ ಆಗದಿಲ್ಲ. ಈಗ ಏನಾರ ಮಾಡಾಕಾಬೇಕು" ಎಂಬ ನಿಲುವಿಗೆ ಬರುತ್ತಾಳೆ.

ಜಾನಪದ ರೀತಿಯು ಈ ಕಥನ ಕ್ರಮೇಣ ನಾಟಕಕಾರರ ಕಥನವಾಗಿಬಿಡುತ್ತದೆ. ಜನಪದದ ಕಥನದ ಬದಲಾವಣೆಯೊಂದಿಗೆ, ಪರಂಪರೆಯ ನಂಬಿಕೆಗಳ ವಿರೋಧ ಹಾಗೂ ಅವುಗಳ ಮೂಲೋತ್ಪಾಟನೆಗೆ ಬೇಕಾದಂಥ ಸಿದ್ಧತೆಗಳ ಪ್ರಚೋದನೆ ಸಾಧ್ಯವಾಗಿದೆ. ವಾಸ್ತವವಾಗಿ ಏಳುಸಮುದ್ರದಾಚೆ ಕೀಳು ಸಮುದ್ರ ಹೊಕ್ಕು ಹೋದಂಥವ ಹಿಂದಿರುಗಿ ಬಂದೇ ಬರುತ್ತಾನೆ ಜಾನಪದ ಕಥೆಗಳಲ್ಲಿ. ಆದರೆ ಇಲ್ಲಿ ಮುದುಕಿ ಒಳಹೊಕ್ಕುವ ಗುಟ್ಟು ಹೇಳಿಕೊಟ್ಟಿರುತ್ತಾಳೆಯೇ ವಿನಾ ಹೊರಬರುವುದನ್ನಲ್ಲ. ಹೊರಬಂದರೆ ಮತ್ತೊಬ್ಬ ಜನನಾಯಕನಾದಾನೆಂದು. ಇನ್ನು ಅವನನ್ನು ಪ್ರೀತಿಸಿದ ಹುಡುಗಿ. ಜನಪದ ಕಥೆಗಳ ಪ್ರಕಾರ — ಆಕೆ ಅವನನ್ನು ಅಗಾಧವಾಗಿ ಪ್ರೇಮಿಸಿ, ತನ್ನ ಪ್ರೇಮದ ಬಲದಿಂದ ಪ್ರಿಯನನ್ನು ಬದುಕಿಸಿಕೊಳ್ಳುತ್ತಾಳೆ; ಕೂಡಿಸುಖಿಸುತ್ತಾಳೆ. ಆದರೆ ಇಲ್ಲಿ ನಾಲ್ಕಾರುದಿನ ದುಃಖಪಟ್ಟು ಆಮೇಲೆ ಮರೆತು ಮತ್ತೊಬ್ಬನನ್ನು ಕೂಡಿ ಖುಷಿಯಾಗಿರುತ್ತಾಳೆ. ಇದು 'ಬದಲಾವಣೆ ಆಗಿಯೇ ಆಗುತ್ತದೆ' ಎಂಬ ನಂಬಿಕೆಗೆ ಒತ್ತುಕೊಡುತ್ತದೆ.

ಚನ್ನಯ್ಯನವರ ನಾಟಕದ ಓಘ ವೇಗವಾಗಿದೆ: ಖುಷಿ ಕೊಡುತ್ತದೆ. ಸಂಭಾಷಣೆಗಳೋ ಲವಲವಿಸುತ್ತವೆ. ನಕ್ಕುನಗಿಸುವಂತೆಯೇ ಅರ್ಥಪೂರ್ಣವಾಗಿವೆ. ಅವರು ತತ್ತ್ವಪದಗಳನ್ನು ಬಳಸಿಕೊಳ್ಳುವರೀತಿ, ಸಂಭಾಷಣೆಗಳನ್ನು ಆಡುಮಾತಿಗೆ ಹತ್ತಿರ ತೆಗೆದುಕೊಂಡು ಹೋಗಿರುವುದು ನಾಟಕದ ಯಶಸ್ಸಿಗೆ ಕಾರಣವಾಗಿದೆ. ಮಡಿವಂತರು ಮೂಗು ಮುಚ್ಚಿಕೊಳ್ಳುವಂಥ ಕೆಲವು ಮಾತುಗಳು ಇಲ್ಲಿವೆ. ಆದರೆ ಮಡಿ, ಅಮಡಿಗಳನ್ನು ಲೆಕ್ಕಿಸದೆ, ಬದುಕನ್ನು ಅರ್ಥಪೂರ್ಣವಾಗಿ ನೋಡುವ, ನಾಳಿನ ಭವಿಷ್ಯವನ್ನು ಕ್ರಿಯಾಪೂರ್ಣವಾಗಿಸುವಂತೆ ಮಾಡುವ ದೃಷ್ಟಿ ಮತ್ತು ಚಿಂತನೆಗಳು ಅತ್ಯಗತ್ಯ. ಆದ್ದರಿಂದ ದೃಷ್ಟಿಯು ಸ್ಪಷ್ಟತೆಗೆ ಅನಿವಾರ್ಯವಾಗಿ ಶೂದ್ರತನವನ್ನು ತುಂಬಲೇಬೇಕೆನ್ನಿಸಿದರೆ ತುಂಬಲಿ. ಅಭ್ಯಂತರವಿಲ್ಲ. ಆದರೆ ಅತಿಯಾಗಬಾರದಷ್ಟೆ.

5

ಕನ್ನಡದಲ್ಲಿ ಬಂದಿರುವ ಅಬ್ಸರ್ಡ್ ನಾಟಕಗಳ ಧೋರಣೆಗೂ ಈ ನಾಟಕದ ಧೋರಣೆಗೂ ಅಜಗಜಾಂತರ. ಅಬ್ಸರ್ಡ್ ನಾಟಕಗಳು ಬದುಕಿನ ವಿಷಮಸ್ಥಿತಿಯನ್ನು ಒಪ್ಪಿಕೊಂಡು, ಈ ಸ್ಥಿತಿಯಿಂದ ಮನುಷ್ಯ ಬಿಡುಗಡೆ ಹೊಂದುವುದು ಅಸಾಧ್ಯ ಎಂದು ಹೇಳಿಬಿಡುತ್ತವೆ. ಅಥವಾ ಮಾನವನ ವೈಫಲ್ಯತೆ ಮತ್ತು ಪರಿಸ್ಥಿತಿಗಳ ಅನಿವಾರ್ಯ ಜಂಬಗಳಾಗಿಬಿಡುತ್ತವೆ. ಆದರೆ ಈ ನಾಟಕದಲ್ಲಿ ಯಾವುದೂ ಅನಿವಾರ್ಯ ಹಾಗೂ ತಟಸ್ಥವೆಂಬ ಧೋರಣೆಯಿಲ್ಲ. ಬದಲಾವಣೆಗೆ ಒತ್ತು ಕೊಡುವುದೇ ಇದರ ಉದ್ದೇಶ.

6

ಈ ತಂತ್ರ ಕನ್ನಡಕ್ಕೆ ಹೊಸದು. ಆದರೆ ಪ್ರೇಕ್ಷಕರಿಗೆ ಬದುಕು ಅರ್ಥಪೂರ್ಣವಾಗುವಂತೆ ಮಾಡಿಕೊಳ್ಳಲು ಪ್ರಚೋದಿಸಲು ಸಹಾಯ ಮಾಡುವ ಇದು ಜರ್ಮನಿಗೆ ಮಾತ್ರವಲ್ಲ, ನಮಗೂ ಅತ್ಯವಶ್ಯ ಅನ್ನಿಸುತ್ತದೆ. ಇಂದು ನಾವು ಬದಲಾಗಬೇಕು; ಚಂದ್ರನನ್ನು ತಲುಪಿರುವ ದೇಶಗಳಿಗೆ ಹೊಯ್ ಕಯ್ ಆಗಿ ನಿಲ್ಲಬೇಕು. ಹಾಗಾಗಬೇಕಾದರೆ ಜನ ವಿವೇಚನಾವಂತರಾಗಬೇಕು. ಅವರೂ ಈ ಬದಲಾಗದಂಥ ನಿಂತ ನೀರಂಥ ಸ್ಥಿತಿಯನ್ನು ಬದಲಿಸಬೇಕು. ಈ ರೀತಿಯ ಕ್ರಾಂತಿ ಆಗಲು ಸಾಹಿತ್ಯವು ಸಹಕರಿಸಬೇಕು. ಆದರೆ ಉಪದೇಶವೇ ಸರ್ವವಾಗದೆ, ಸಾಹಿತ್ಯವು ಆನಂದವನ್ನೂ ಉದ್ದೀಪಿಸಬೇಕು.

"ನಾಟಕಗಳು ಪಾಚಿಗೆಟ್ಟು ನಿಂತುಬಿಡದೇ ಇರುವುದಕ್ಕೆ ಬ್ರೆಕ್ಟನಂಥ ವಿಪರೀತಗಾರರು ಅವಶ್ಯಕ"—

ಎಂದು ಎಸ್. ವಿ. ರಂಗಣ್ಣನವರು ಕೇವಲ ಭಿನ್ನರುಚಿಗಾಗಿ ಬ್ರೆಕ್ಟನನ್ನು ಮೆಚ್ಚಿದ್ದಾರೆ. ನನಗೆ, ಬದುಕು ಅರ್ಥಪೂರ್ಣವಾಗಲಿಕ್ಕೆ, ಸಾಹಿತ್ಯವು ಜನತೆಯ ಜಡತೆಯನ್ನು ನಿವಾರಿಸಲಿಕ್ಕೆ ಬ್ರೆಕ್ಟನಂಥವರು ಬೇಕು ಅನ್ನಿಸಿ, ರಂಗಣ್ಣನವರ ಮೆಚ್ಚಿಕೆ ತೀರಾ ಕ್ಷೀಣವಾದುದು ಅನ್ನಿಸುತ್ತದೆ.

7

ಒಟ್ಟಾರೆ ಹೇಳುವುದಾದರೆ, 'ಎಲ್ಲರಂಥವನಲ್ಲ ನನ ಗಂಡ' ದಂಥ ನಾಟಕ ಕನ್ನಡಕ್ಕೆ ಹೊಸದು; ವಿಶಿಷ್ಟವಾದುದು. ಬ್ರೆಕ್ಟನನ್ನು ಬರಿ ಅನುಸರಿಸಿಬಿಟ್ಟಿದ್ದರೆ ಚನ್ನಯ್ಯನವರಿಗೆ ಅಂಥಾ ಯಶಸ್ಸು ಸಿಗುತ್ತಿರಲಿಲ್ಲ. ಅವರು ಅವನಿಂದ ತತ್ತ್ವಗಳನ್ನು ಕಲಿತು ಮಿಕ್ಕೆಲ್ಲವನ್ನೂ ನಮ್ಮ ನೆಲದಲ್ಲಿಯೇ ನಿಂತು ಸೃಷ್ಟಿಸಿದರು. ಅಲ್ಲಲ್ಲಿ ಬ್ರೆಕ್ಟನ ನಾಟಕಗಳ ಪ್ರಭಾವ ಕಂಡುಬಂದರೂ ಅಲ್ಲಿರುವ ಭಾರತೀಯರ ಚಿತ್ರವನ್ನು ಅಲ್ಲಗಳೆಯಲಾಗದು.

ಗ್ರಂಥ ಋಣ

1. ಬ್ರೆಕ್ಟ್ ಆನ್ ಥಿಯೇಟರ್ (English Edition)
2. ಪಾಶ್ಚಾತ್ಯ ಗಂಭೀರ ನಾಟಕಗಳು—ಎಸ್. ವಿ. ರಂಗಣ್ಣ
3. ಬ್ರೆಕ್ಟ್ ಮತ್ತು ಎಪಿಕ್ ಥಿಯೇಟರ್ ಎಂಬ ಲೇಖನ (ಪರಂಪರೆ-1)

—ಎಚ್. ಎಂ. ಚನ್ನಯ್ಯ

ನೋವಿನ ಗ್ರಹಿಕೆ

ಮೂಲ : ನಿಸ್ಸಿಂ ಎಜಿಕಿಲ್ ಅನುವಾದ : **ಸುಮತೀಂದ್ರ ನಾಡಿಗ**

ನೋವು
ಒಂದು ಸಂಕೀರ್ಣ ಅನುಭವ.
ನಾವು ಬೆಳೆದು ಬಂದಿರುವ ಸಂಸ್ಕೃತಿಯಲ್ಲಿ ಅದಕ್ಕೆ ನಾವು ಕೊಡುವ ಅರ್ಥ
ಅದನ್ನು ಹೇಗೆ ಅನುಭವಿಸುತ್ತೇವೆ
ಮತ್ತು ಅದಕ್ಕೆ ಹೇಗೆ ಪ್ರತಿಕ್ರಿಯಿಸುತ್ತೇವೆ
ಎನ್ನುವುದನ್ನು ನಿರ್ಧರಿಸುತ್ತದೆ.
ಉದಾಹರಣೆಗೆ ನಮ್ಮ ಸಂಸ್ಕೃತಿಯಲ್ಲಿ
ಹೆರಿಗೆಯನ್ನು ತುಂಬ ನೋವಿನ ಅನುಭವವಾಗಿ ಗಣಿಸುತ್ತೇವೆ.
ಆದರೂ ಮಾನವಶಾಸ್ತ್ರಜ್ಞರು
ಹೆರಿಗೆಯ ಕಾಲದಲ್ಲಿ ಯಾವ ನೋವನ್ನು ತೋರಿಸದ
ಹೆಂಗಸನ್ನು ಪತ್ತೆಮಾಡಿದ್ದಾರೆ.
ಆ ಹೆಂಗಸು ಇನ್ನೇನು ಹೆರಿಗೆಯಾಗುತ್ತದೆ ಎನ್ನುವವರೆಗೂ
ಹೊಲದಲ್ಲಿ ದುಡಿಯುತ್ತಾಳೆ.
ಅವಳ ಹೆರಿಗೆಯ ಸಮಯಕ್ಕೆ ಅವಳ ಗಂಡ
ಹಾಸಿಗೆಯಲ್ಲಿ ಮಲಗಿ ತುಂಬ ನೋವಿರುವ ಹಾಗೆ ನರಳುತ್ತಾನೆ.
ಆ ಅತೀವಯಾತನೆಯಿಂದ ಸುಧಾರಿಸಿಕೊಳ್ಳುವುದಕ್ಕೆ
ಮಗುವಿನ ಜೊತೆಯಲ್ಲಿ ಗಂಡನೇ ಹಾಸಿಗೆ ಹಿಡಿದಿರುತ್ತಾನೆ.
ತಾಯಿ
ತತ್‌ಕ್ಷಣವೆ ಪೈರನ್ನು ನೋಡುವುದಕ್ಕೆ ಹೊರಟು ಹೋಗುತ್ತಾಳೆ.

ಅಕ್ಬರ್ ಮಹಾಶಯ
(1556 – 1605)

ಹೆಚ್. ರೇವಣಸಿದ್ದಪ್ಪ

'ಇತಿಹಾಸದ ಮೇಲೆ ಹೊಸಬೆಳಕು' ಎಂಬ ಪುಸ್ತಕವು ಪಿ. ಎನ್. ಓಕ್‌ರ ಭಾಷಣಗಳ ಒಂದು ಸಂಕಲನ. ಇದರಲ್ಲಿ ಅಕ್ಬರ್‌ನನ್ನು ಕುರಿತು "ಅವನನ್ನು ಒಬ್ಬ ಮಹಾಸೀಜ ಎಂದು ಬೇಕಾದರೆ ಕರೆದುಕೊಳ್ಳಿ; ನನ್ನ ಆಕ್ಷೇಪಣೆ ಏನೂ ಇಲ್ಲ," ಎಂದಿದ್ದಾರೆ. ಓಕರ ಈ ವಿಚಾರ ಸರಣಿಯನ್ನು ಗಮನಿಸಿದಾಗ ಅವರು ಒಬ್ಬ ಇತಿಹಾಸಕಾರರಂತೆ ಕಂಡುಬರುವುದಿಲ್ಲ; ಕೇವಲ ಒಬ್ಬ ವಕೀಲರಂತೆ ಕಂಡು ಬರುತ್ತಾರೆ. (ಅವರು ಎಂ. ಎಲ್. ಪದವೀಧರರೂ ಆಗಿದ್ದಾರೆ.)

ಇತಿಹಾಸಕಾರನು ನಿಷ್ಪಕ್ಷಪಾತವಾಗಿ ಸತ್ಯ ಪರಿಶೋಧನೆ ಮಾಡಬೇಕು; ಅಷ್ಟೇ ನಿಷ್ಪಕ್ಷಪಾತದ ಭಾಷೆಯಲ್ಲಿ ಹೇಳಬೇಕು. ಆದರೆ ಪಿ. ಎನ್. ಓಕರು ಈ ಎರಡೂ ಅಂಶಗಳನ್ನೂ ಗಮನದಲ್ಲಿ ಇಟ್ಟುಕೊಂಡಿಲ್ಲವೆನಿಸುತ್ತದೆ. ಅವರ ಹೇಳಿಕೆಗಳಲ್ಲಿ ದ್ವೇಷವೇ ಎದ್ದು ಕಾಣುತ್ತದೆ. ಸತ್ಯವೇ ಹಿಂದೆ ಬೀಳುತ್ತದೆ. ಅನೇಕ ಕಡೆಗಳಲ್ಲಿ ಅನವಶ್ಯಕ ವಿಚಾರಗಳೂ ನಿರ್ಧಾರಗಳೂ ಕಂಡುಬರುತ್ತವೆ.

ಪಿ. ಎನ್. ಓಕರು ತಮ್ಮ ಆಧಾರ ಲೇಖಕರನ್ನಾಗಿ ವಿನ್ಸೆಂಟ್ ಸ್ಮಿತ್, ಬದಾಯುನಿ, ನಿಜಾಮುದ್ದೀನ್, ಅಬುಲ್ ಫಜಲ್ ಮೊದಲಾದವರನ್ನು ಆರಿಸಿಕೊಂಡಿದ್ದಾರೆ. 'ಅವರೆಲ್ಲರೂ ಹಿಂದೂ ದ್ವೇಷಿಗಳು ಆದುದರಿಂದ ಅವರು ಅಕ್ಬರನ ಬಗ್ಗೆ ಹೇಳಿರುವುದೆಲ್ಲವೂ ಸತ್ಯವಾಗಿರಲೇಬೇಕು' ಎಂದು ಅಭಿಪ್ರಾಯ ಪಡುತ್ತಾರೆ! ವಿನ್ಸೆಂಟ್ ಸ್ಮಿತ್ ಹಿಂದೂ ದ್ವೇಷಿಯಾಗಿದ್ದರೆಂಬುದು ಸತ್ಯಕ್ಕೆ ದೂರವಾದ ಮಾತು. ಬದಾಯುನಿ ಹಿಂದೂ ದ್ವೇಷಿಯಾಗಿದ್ದುದಲ್ಲದೆ, ಅಕ್ಬರನ ದ್ವೇಷಿಯೂ ಆಗಿದ್ದನೆಂಬುದನ್ನು ಓಕರು ಮರೆತಂತೆ ಕಾಣುತ್ತದೆ. ಅಕ್ಬರನ ಧರ್ಮ ಸಹಿಷ್ಣುತೆ ಬದಾಯುನಿಗೆ ಸಹಿಲಾರದ್ದಾಗಿತ್ತು. ನಿಜಾಮುದ್ದೀನ್ ಹಿಂದೂ ದ್ವೇಷಿಯಾಗಿದ್ದನೆಂಬುದು ನಿಜವಾದರೂ, ಅಬುಲ್ ಫಜಲ್ ಹಿಂದೂ ದ್ವೇಷಿ ಎಂಬುದು ಸಲ್ಲದು. ಹೆಚ್. ಜಿ. ರಾಲಿನ್‌ಸನ್ ಹೇಳುವಂತೆ, ಫಜಲ್ ಕಬೀರನ ಹಾಗೆ ವಿಶ್ವಧಾರ್ಮಿಕ ಭಾವನೆಯುಳ್ಳವನಾಗಿದ್ದನು. "O God, in every temple I see those who seek thee, be it in mosque, men murmur holy prayers, or, in church, the bells ring for thee .... " ಎಂಬ ಫಜಲ್‌ನ ಕವನವೇ ಇದಕ್ಕೆ ಸಾಕ್ಷಿ.

ಬುದಾಯುನಿಯು ಹೆಚ್ಚು ಮತಾಂಧನಾಗಿದ್ದನು ಎಂಬುದಕ್ಕೆ ಪುಟಗಟ್ಟಲೆ ನಿದರ್ಶನಗಳನ್ನು ಓಕರು ಕೊಡುತ್ತಾ ಬರುತ್ತಾರೆ. ಈ ನಿದರ್ಶನಗಳು ಅಕ್ಬರನ ವ್ಯಕ್ತಿತ್ವಕ್ಕೆ ಸಂಬಂಧಪಡುವುದಿಲ್ಲ.

ಮತನ್ವೇಷಿಯ ಅಭಿಪ್ರಾಯಗಳನ್ನು ಸಮರ್ಥಿಸುವುದು ಓಕರ ಪ್ರತಿದ್ವೇಷಕ್ಕೆ ಸಾಕ್ಷಿಯಾಗಿದೆ. ಫಿರೋಜ್‌ಷಹನ ಕಾಲದ ವಿವರಣೆ, ಮತ್ತು ಇತರೇ ಮುಸ್ಲಿಮ ರಾಜರ ಖಂಡನೆಗಳು ಅಕ್ಬರನ ವ್ಯಕ್ತಿತ್ವಕ್ಕೆ ಸಂಬಂಧವಿಲ್ಲದವುಗಳು. ಉಳಿದವರ ಮತದ್ವೇಷ ವಿವರಣೆ ಅಪ್ರಾಸಂಗಿಕವೆನಿಸುತ್ತದೆ. ಬದಾಯುನಿ ಮತ್ತು ಅಬುಲ್ ಫಜಲ್‌ರನ್ನು ಯುರೋಪಿಯನರೇ ಮತಾಂಧರು, ನಿರ್ಲಜ್ಜ ಹೊಗಳು ಭಟ್ಟರು ಎಂದು ಕರೆದಿರುವುದನ್ನು ಸಮರ್ಥಿಸಿ ಅವರನ್ನೇ ಆಧಾರ ಲೇಖಕರನ್ನಾಗಿ ಸ್ವೀಕರಿಸಿರುವುದೂ ಸೂಕ್ತವಲ್ಲ.

ತರ್ಕದಿಂದ ಅಕ್ಬರನ ವ್ಯಕ್ತಿತ್ವವನ್ನು ನಿರ್ಣಯಿಸೋಣವೆಂದು ಹೊರಟು, "ಅಕ್ಬರನು ಒಬ್ಬ ಆಕ್ರಮಣಕಾರಿ, ವಿದೇಶೀಯ ; ಅಂಥ ವ್ಯಕ್ತಿ ಇಲ್ಲಿನ ನಾಗರಿಕರಾದ ಹಿಂದೂಗಳ ಬಗ್ಗೆ ಪ್ರೀತಿ ಪ್ರೇಮ ಸಹಕಾರಗಳಿಂದ ನಡೆದುಕೊಂಡನು ಎಂದು ನಂಬುವುದು ಅಸಾಧ್ಯ" ಎನ್ನುತ್ತಾರೆ, ಓಕರು. ಇದರಲ್ಲಿರುವ ತರ್ಕವೇನು ? ಅಕ್ಬರ್ ವಿದೇಶೀಯ. ಆದರೂ ಅವನು ಅನೇಕ ಹಿಂದೂ ಮಂತ್ರಿಗಳನ್ನು ಸರದಾರರನ್ನು ಮನ್‌ಸಬ್‌ದಾರರನ್ನಾಗಿ ನೇಮಿಸಿಕೊಂಡಿರಲಿಲ್ಲವೇ ? ಅವನ ಹಿಂದೂ ಪತ್ನಿ ಜೋಧ್‌ಬಾಯಿ ಹಿಂದೂ ರೀತಿಯಲ್ಲಿ ಪೂಜೆ ಮಾಡುತ್ತಿರಲಿಲ್ಲವೇ ? ಅಕ್ಬರ್ ಸರ್ವಧರ್ಮ ಸಮಾಲೋಚನೆಗಳನ್ನು ನಡೆಸುತ್ತಿರಲಿಲ್ಲವೇ ? ತನ್ನ ಹೊಸ ಧರ್ಮಕ್ಕೆ ಸೇರಲು ಯಾರನ್ನೂ ಒತ್ತಾಯ ಮಾಡಲಿಲ್ಲವೆಂಬುದೂ ಸತ್ಯವಲ್ಲವೇ ?

"However, by 1578, Akbar was passing through the spiritual crisis which showed a shift from Sunni orthodox to a general eclelicism. The Moghal Emperor's mind was moving in the same direction as that of Akhnaton in Ancient Egypt, to a Solar Monotheism. As Badayuni says, the hoam or the 'Sacred Flame' kept alive by the Hindu consorts of his harem assumed the importance of Zarathustra's Temple-Fire and was placed in charge of Abul Fazal," ಎಂದು ಪ್ರೊ॥ ಅಜೀಜ್ ಅಹ್ಮದ್ ಹೇಳಿದ್ದಾರೆ.

"ರಾಣಾ ಪ್ರತಾಪ್, ದುರ್ಗಾವತಿ ಮೊದಲಾದವರು ಭಾರತೀಯ ಪರಂಪರೆಯ ಮತ್ತು ಜೀವನ ಪದ್ಧತಿಯ ಪುರಸ್ಕರ್ತರು, ಭಾರತದ ವೀರರು ; ಅಕ್ಬರನಾದರೋ ಅಂಥವರನ್ನು ವಿರೋಧಿಸಿ, ಅವರ ಮೂಲೋತ್ಪಾಟನೆ ಮಾಡಲು ಕಂಕಣ ತೊಟ್ಟಿದ್ದನು ಎಂದ ಮೇಲೆ ಅಕ್ಬರನು ಆಕ್ರಮಣಕಾರಿ ಎಂದಲ್ಲದೇ ಮತ್ತಾವ ಹೆಸರಿ

ನಿಂದ ಕರೆಯಬೇಕು ? ನಾವು ರಾಣಾಪ್ರತಾಪ್ ಮತ್ತು ದುರ್ಗಾವತಿಯರನ್ನಾಗಲೀ-ಇಲ್ಲವೇ – ಅಕ್ಬರನನ್ನಾಗಲೀ ಮಹಾಪುರುಷರೆಂದು ಕರೆಯಬಹುದೇ ಹೊರತು ಇಬ್ಬರೂ ಮಹಾಪುರುಷರೆಂದು ಕರೆಯಲಾಗದು" ಎಂದು ಘೋಷಿಸಿದ್ದಾರೆ ಓಕರು. ರಾಣಾಪ್ರತಾಪ್ ಮತ್ತು ದುರ್ಗಾವತಿಯಂತಹವರನ್ನು ಸ್ವಾತಂತ್ರ್ಯ ವೀರರೆಂದು ಒಪ್ಪಲೇಬೇಕು. ಆದರೆ ಅವರ ಶತ್ರುವು ದುಷ್ಟನೇ ಎನ್ನುವುದು ಹೇಗೆ? ಸಮ್ರಾಟನಾದವನು ರಾಜ್ಯವನ್ನು ವಿಸ್ತರಿಸುವುದು ಸಮರ್ಥ ರಾಜನೀತಿ ಎನಿಸುತ್ತದೆ. ಅಕ್ಬರನು ಸಾಮ್ರಾಟನಾದುದು ಅವನ ಸಮರ ವಿದ್ಯೆಗೆ, ದಕ್ಷತೆಗೆ ಸಾಕ್ಷಿಯಾಗಿದೆ. ಅಕ್ಬರನು ತನ್ನನ್ನು ವಿದೇಶೀಯನೆಂದು ತಿಳಿದುಕೊಂಡಿರಲಿಲ್ಲ. ಹೊರದೇಶದ ಖಲೀಫನಿಗೆ ಕಾಣಿಕೆಗಳನ್ನು ನಿಲ್ಲಿಸಿ, ಹೊರದೇಶದ ಮಕ್ಕಾಕ್ಕೆ ಹೋಗುವುದನ್ನು ಕೂಡಾ ಅಕ್ಬರ್ ನಿಷೇಧಿಸಿದ್ದನು. ಹಿಂದೂ ಮುಸ್ಲಿಮರನ್ನು ಸಮಾನ ದೃಷ್ಟಿಯಿಂದ ನೋಡಿಕೊಂಡನು. ಇವೆಲ್ಲವೂ ಅಕ್ಬರನ ಭಾರತೀಕರಣಕ್ಕೆ ಸಾಕ್ಷಿಯಾಗಿವೆ.

ಅಕ್ಬರನು ಜನಿಸಿದ್ದು ಕೊಲೆಗಡುಕರ ವಂಶ ; ಅವನು ತೈಮೂರ್, ಚಂಗೆಸ್ ಖಾನ್ ವಂಶದವನು ಎನ್ನುತ್ತಾರೆ ಓಕರು. ಹುಟ್ಟಿನಿಂದ ಅಕ್ಬರನು ಭಾರತೀಯನಾಗಿರಲಿಲ್ಲ. ಆದರೂ ಅಂಥ ಕ್ರೂರ ಕೊಲೆಗಡುಕರ ವಂಶದಲ್ಲಿ ಹುಟ್ಟಿ ಅವರ ಅವಗುಣಗಳನ್ನು ಕಡಿಮೆ ಮಾಡಿಕೊಂಡು, ಅವರಿಗಿಂತಲೂ ಉದಾತ್ತವ್ಯಕ್ತಿತ್ವವನ್ನು ಪಡೆದು ಒಳ್ಳೆಯ ಧ್ಯೇಯಗಳನ್ನು ಹೊಂದಿ ರಾಜ್ಯವಾಳಿದುದು ಅವನ ಕೀರ್ತಿಯನ್ನು ಹೆಚ್ಚಿಸಿರುವ ಸಂಗತಿಗಳು. ಸರ್ವ ಧರ್ಮಗಳ ಪ್ರತಿನಿಧಿಗಳನ್ನೂ ತನ್ನ ಆಸ್ಥಾನಕ್ಕೆ ಬರಮಾಡಿಕೊಂಡು ಅವರನ್ನು ಗೌರವಿಸಿದನು. ಅಕ್ಬರ್ ತನ್ನ ಧರ್ಮ ಸಮಾವೇಶಗಳಲ್ಲಿ ಹೀಗೆ ಹೇಳಿದ್ದನು : "For an empire ruled by One Head, it is a bad thing to have members divided among themselves... There are as many factions as religions. We ought to bring them into one, in such a fashion that, that should be both 'one and all' with the great advantage of not losing what is good in any one religion, while gaining what is better in another. In that way honour would be rendered to God, peace would be given to the people and security to the Empire". ಈ ಉದ್ದೇಶದಿಂದ 'ದಿನ್-ಎ-ಇಲಾಹಿ' ಪ್ರಚಾರಕ್ಕೆ ತಂದನು. ಆದರೆ ಯಾರನ್ನೂ ಈ ಧರ್ಮಕ್ಕೆ ಸೇರಲು ಬಲಾತ್ಕರಿಸಲಿಲ್ಲ. ಇದು ಅಕ್ಬರನ ಶ್ರೇಷ್ಠ ವ್ಯಕ್ತಿತ್ವಕ್ಕೆ ನಿದರ್ಶನ. ಈ ಪ್ರಯತ್ನದಲ್ಲಿ ಅಕ್ಬರನ ಪ್ರಥಮ ಉದ್ದೇಶ, ದೇವರಲ್ಲಿ ನಂಬಿಕೆ ಹೆಚ್ಚಿಸುವುದು ; ಎರಡನೆಯ ಉದ್ದೇಶ, ಜನರಲ್ಲಿ ಶಾಂತಿ-ಸೌಹಾರ್ದತೆ ನೆಲೆಸುವುದು ; ಕೊನೆಯ ಉದ್ದೇಶ, ಸಾಮ್ರಾಜ್ಯ ಭದ್ರತೆಯಾಗಿತ್ತು. ಇದು ಅತ್ಯಂತ ಗಮನೀಯ ಅಂಶ.

ಅಕ್ಬರನ ಸೌಂದರ್ಯದ ಬಗ್ಗೆ ಆರೋಪ ಮಾಡುತ್ತಾ ಗಾತ್ರ, ಬಣ್ಣ, ಮೂಗಿನ ಹೊಳ್ಳೆ ಮಗ್ಗುಲಲ್ಲಿನ ಕಲೆ, ಅವನ ಅನಕ್ಷರತೆ ಇವುಗಳ ಕುರಿತು ವ್ಯಂಗ್ಯವಾಗಿ ನುಡಿದಿರುವುದು ಓಕರ ವ್ಯಕ್ತಿತ್ವಕ್ಕೇ ಗೌರವವನ್ನು ತರುವಂಥದುದಲ್ಲ. ಅನಕ್ಷರಸ್ಥನಾಗಿ, ಅಂಥ ಸುಂದರನಲ್ಲದಿದ್ದರೂ, ಅತೀ ವಿದ್ಯಾವಂತನಾಗಿದ್ದ ತುಘಲಕನಿಗಿಂತ ಅಕ್ಬರ್ ಸಾವಿರಪಾಲು ಒಳ್ಳೆಯ ಮುಸ್ಲಿಮ್ ರಾಜನೆನಿಸುತ್ತಾನೆ.

"ಅಕ್ಬರನು ದಿನವಿಡೀ ಬಂಗಿ, ಗಾಂಜಾ, ಚರಸ್‌ಪೋಸ್ ಮಿಶ್ರಣಗಳನ್ನು ಸೇವಿಸುತ್ತಿದ್ದನೆಂದೂ, ಅವನ ಮಕ್ಕಳು ಮೊಮ್ಮಕ್ಕಳೂ ಅತೀ ಕುಡಿತದಿಂದಲೇ ಪ್ರಾಣ ನೀಗಿದರು," ಎಂದು ಓಕರು ಆರೋಪಿಸಿದ್ದಾರೆ. ಇವೆಲ್ಲವನ್ನು ಯಾರೂ ಅಲ್ಲಗಳೆಯಲಾರರು. ಆದರೆ ಇವುಗಳಿಂದ ಅಕ್ಬರನ ಆರೋಗ್ಯಕ್ಕೆ ಕೇಡು ಮಾಡಿತೇ ಹೊರತು, ಅವನ ರಾಜಕೀಯ ವ್ಯಕ್ತಿತ್ವಕ್ಕೆ ಅಲ್ಲ. ಅಕ್ಬರನ ವಿಷಯ ಲಂಪಟ, ಅವನ "ಜನಾನಾದಲ್ಲಿ 5000 ಹೆಂಗಸರಿದ್ದರು" ಎಂದು ಅವರು ಹೇಳುತ್ತಾರೆ. ಆದರೆ ಬದಾಯುನಿಯ ಉತ್ಪ್ರೇಕ್ಷೆಗಳಲ್ಲಿ ಇದೂ ಒಂದು.

ಅಕ್ಬರನು ಸಾಮಂತರಾಜರ ಗಂಡು ಮಕ್ಕಳನ್ನೂ ತನ್ನ ಆಸ್ಥಾನದಲ್ಲಿ ಅಡವಾಗಿಟ್ಟುಕೊಳ್ಳುತ್ತಿದ್ದನೆಂದೂ, ಸ್ವಾತಂತ್ರ್ಯಪ್ರಿಯ ಸಾಮಂತರು ದಂಗೆ ಎದ್ದರೆ ಅವರ ಮಕ್ಕಳನ್ನು ಕೊಲ್ಲಿಸುವ ಭೀತಿ ಇಟ್ಟಿದ್ದನೆಂದು, ಓಕರು ಆರೋಪಿಸುತ್ತಾರೆ. ಇದು ರಾಜನೀತಿಗೆ, ಚಾಣಾಕ್ಷತೆಗೆ ವಿರುದ್ಧವಾಗಲಾರದು.

ಅಕ್ಬರನು ಸತೀಸಹಗಮನವನ್ನು ತಡೆದು ಸತೀ ಹೋಗಬಯಸಿದ ಸ್ತ್ರೀಯರನ್ನು ತನ್ನ ಜನಾನಾಕ್ಕೆ ಸೇರಿಸುತ್ತಿದ್ದನೆಂಬ ಅಪಾದನೆಯು ಬದಾಯುನಿಯದಾದ ಕಾರಣ ಅದರ ಸತ್ಯಾಸತ್ಯದ ವಿಚಾರ ಸಂಶಯಾಸ್ಪದವಾಗಿದೆ. ಅಕ್ಬರನ ಬಲಾತ್ಕಾರದ ಮದುವೆಗಳು ಕಟ್ಟುಕತೆಗಳ ಕಂತೆಗೆ ಸೇರಿದವುಗಳೆನ್ನಬಹುದು.

ಅಕ್ಬರನ ಕಾಲದಲ್ಲಿ ಸದಾ ದಂಗೆಗಳೇಳುತ್ತಿದ್ದವೆಂದು ಶ್ರೀವಾಸ್ತವರು ಹೇಳಿರುವುದನ್ನು ಓಕರು ಪ್ರಸ್ತಾಪಿಸುತ್ತಾರೆ. ಈ ದಂಗೆಗಳಿಗೆ ದೇಶೀಯರ ಸ್ವಾತಂತ್ರ್ಯಪ್ರಿಯತೆಯೇ ಕಾರಣವಾಗಿತ್ತೇ ಹೊರತು ದುರಾಡಳಿತೆಯಲ್ಲ ಎಂಬ ಅಂಶ ಗಮನೀಯ. ಇಂಥ ದಂಗೆಗಳನ್ನು ದಕ್ಷತೆಯಿಂದ ಹತ್ತಿಕ್ಕಿ ಶಾಂತಿ ಸ್ಥಾಪಿಸಿದುದನ್ನು ಓಕರು ಅಲ್ಲಗಳೆಯಲಾರರು. ಅಲ್ಲಾಉದ್ದೀನ್ ಖಿಲ್ಜಿ, ಔರಂಗಜೇಬ್ ಮೊದಲಾದವರಂತೆ ದೇವಾಲಯಗಳ ನಾಶದಲ್ಲಿ ಅಕ್ಬರ್ ನಿರತನಾಗಿರಲಿಲ್ಲ ಎಂಬ ವಿಷಯವನ್ನು ಓಕರೂ ನಿರಾಕರಿಸಲಾರರು.

ಅಕ್ಬರ್ ಅನಕ್ಷರಸ್ಥನಾದರೂ, ಅಬುಲ್‌ಫಜಲ್ ಮೊದಲಾದವರಿಂದ ಓದಿಸಿ ತಿಳಿದುಕೊಳ್ಳುತ್ತಿದ್ದನು. ಅನೇಕ ಭಾರತೀಯ, ಸಂಸ್ಕೃತ, ಹಿಂದೀ ಕೃತಿಗಳನ್ನು ಪರ್ಶಿಯನ್ ಭಾಷೆಗೆ ಪರಿವರ್ತಿಸಲು ಕಾರಣವಾದನು. ಕೆ. ಎಂ. ಪಣಿಕ್ಕರ್

ಹೇಳುವಂತೆ ಹೀರ ವಿಜಯ ಸೂರಿಯವರನ್ನು ಅವನು ಧಾರ್ಮಿಕ ಸಭೆಯಲ್ಲಿ 'ಜಗದ್ಗುರು' ಎಂದು ಸನ್ಮಾನಿಸಿದುದು ಉಲ್ಲೇಖನಾರ್ಹವಾದುದು.

ವಿಲ್ ಡ್ಯೂರಾಂಟ್ (Will Durant) ಎಂಬ ಆಧುನಿಕ ಇತಿಹಾಸಕಾರರ ಅಭಿಪ್ರಾಯದಂತೆ. "ಫ್ರಾನ್ಸಿನಲ್ಲಿ ಕ್ಯಾಥೊಲಿಕರು ಪ್ರೊಟೆಸ್ಟೆಂಟರನ್ನು ಕೊಲೆ ಮಾಡುತ್ತಿರುವಾಗ, ಸ್ಪೇನ್‌ನಲ್ಲಿ ಕ್ಯಾಥೊಲಿಕರು ಯಹೂದಿಗಳನ್ನು 'ಅನ್ವೇಷಣೆ'ಗೆ ಗುರಿಮಾಡಿ ಚಿತ್ರಹಿಂಸೆ ಕೊಡುತ್ತಿದ್ದಾಗ, ಇಟಲಿಯಲ್ಲಿ ಬ್ರೂನೋ ಮೊದಲಾದವರನ್ನು ಸಜೀವವಾಗಿ ಸುಡುತ್ತಿರುವಾಗ, ಅಕ್ಬರನು ತನ್ನ ಸಾಮ್ರಾಜ್ಯದಲ್ಲಿ ಸರ್ವ ಧರ್ಮಗಳ ಪ್ರತಿನಿಧಿಗಳನ್ನು ಬರಮಾಡಿಕೊಂಡು 'ಶಾಂತಿ ದೀಕ್ಷೆ' ತೊಟ್ಟನು. ಅವನ ಮುಸ್ಲಿಮ್ ಪ್ರಜೆಗಳು ಇದರಿಂದ ಅಸೂಯೆಗೊಂಡರು. ಅಕ್ಬರ್ ಮರಣ ಶಯ್ಯೆಯಲ್ಲಿದ್ದಾಗ ಮುಲ್ಲಾಗಳು ಅವನನ್ನು ಇಸ್ಲಾಂ ಧರ್ಮಕ್ಕೆ ಪುನಃ ಪರಿವರ್ತಿಸಲು ಪ್ರಯತ್ನಪಟ್ಟರು. ಅಕ್ಬರನು ಯಾವ ಧರ್ಮ ದೀಕ್ಷೆಯಿಲ್ಲದೇ, ಯಾವ ಪಂಗಡಕ್ಕೂ ಸೇರದೇ ದೇಹಾಂತಗೊಂಡನು. ಅವನ ಭೌತಿಕ ದೇಹದ ಹಿಂದೆ ಹೆಚ್ಚಿನ ಸಂಖ್ಯೆಯಲ್ಲಿ ಅವನ ಬಂಧುಗಳು ಹೋಗಲಿಲ್ಲ. ಅವನ ಮಕ್ಕಳು, ಆಸ್ಥಾನಿಕರು ಶೋಕತೋರ್ಪಡಿಸಿ ಅದೇ ಸಂಜೆ (ಜಹಾಂಗೀರನ) ಸಿಂಹಾಸನಾರೋಹಣ ಉತ್ಸವದಲ್ಲಿ ಮೈ ಮರೆತರು. ವಿಖ್ಯಾತ ಶ್ರೇಷ್ಠ ಮತ್ತು ಪ್ರಬುದ್ಧ ರಾಜನೊಬ್ಬನಿಗೆ ಇದು ಕಠೋರವಾದ ಮರಣವಾಗಿತ್ತು."

ಈ ಕಾರಣಗಳಿಂದ ಅಕ್ಬರನನ್ನು ಒಬ್ಬ ಮಹಾಶಯನೆಂದು ಪರಿಗಣಿಸಲೇ ಬೇಕು.

ಗ್ರಂಥ ಋಣ

ಪಿ.ಎನ್. ಓಕ್ : ಇತಿಹಾಸದ ಮೇಲೆ ಹೊಸ ಬೆಳಕು
V. Smith : Akbar the Great
Lane Poole : Medieval India
J. Nehru : Discovery of India
Will Durant : Oriental Heritage
K.M. Panikkar : Survey of Indian History
Iswari Prasad : History of Medieval India
Aziz Ahmad : Study of Islamic Culture in Indian Environment.

ಮಂಥನ

1. ತ್ರಿಪದಿ ಮತ್ತು ಏಳೆಯ ಬಗ್ಗೆ ಒಂದೆರಡು ವಿಚಾರಗಳು

ನಾಗವರ್ಮನು 'ಬಿಸುರುಹೋದ್ಭವಗಣಂ...' ಎಂಬ ಪದ್ಯದಲ್ಲಿ ತ್ರಿಪದಿಯ ಆರು–ಹತ್ತನೆಯ ಸ್ಥಾನಗಳಲ್ಲಿ ಬ್ರಹ್ಮಗಣವೂ, ಉಳಿದ ಎಡೆಗಳಲ್ಲಿ ವಿಷ್ಣುಗಣಗಳೂ ಬರುತ್ತದೆಂದು ಹೇಳುತ್ತಾನೆ. ನಾಗವರ್ಮನು ತ್ರಿಪದಿಗೆ ಹೇಳಿರುವ ಲಕ್ಷಣವು ಇಷ್ಟೇ ಎಂದು ಸಾಮಾನ್ಯವಾಗಿ ಭಾವಿಸಲಾಗಿದೆ. ಆದರೆ ವಾಸ್ತವವಾಗಿ ಹಾಗಿಲ್ಲ. ಅದನ್ನು ವಿಚಾರಿಸುವುದೇ ಈ ಟಿಪ್ಪಣಿಯ ಉದ್ದೇಶ.

ತ್ರಿಪದಿಯ ಲಕ್ಷಣವನ್ನು ಹೇಳಿದ ಮೇಲೆ ಸೂಚಿಸಿದ ಪದ್ಯವಾದ ಮೇಲೆ 'ಚಿತ್ರ' ಮತ್ತು 'ಚಿತ್ರಲತೆ'ಯೆಂಬೆರಡು ತ್ರಿಪದಿಯ ಪ್ರಭೇದಗಳ ಲಕ್ಷಣಗಳನ್ನು ಹೇಳುತ್ತಾನೆ. ಚಿತ್ರದ ಲಕ್ಷಣವು 'ಛಂದೋಂಬುಧಿ'ಯಲ್ಲಿ ಹೀಗಿದೆ:

> **ಭುಜಗಪಕ್ಷ ಗತಿಶಿಖಿವ್ರಜಪದಗಣದೊಳ**
> **ಗಜ ರಸದಶದೊಳ್ ಪೆಱವೆಡೆಯೊಳಗಧೋ**
> **ಕ್ಷಜ ಗಣಮಾದೊಡದು ಚಿತ್ರಂ[1]**

ಆದರೆ ರಾಮಾನುಜೈಂಗಾರ್ಯರ ಪ್ರತಿಯಲ್ಲಿ ಸ್ವೀಕರಿಸಲಾದ ಮೇಲಿನ ಪದ್ಯದ ಪಾಠವು ಸರಿಯಾಗಿಲ್ಲವೆಂಬುದು ನಾಗವರ್ಮನೇ 'ಚಿತ್ರಲತೆ'ಗಿತ್ತ ಲಕ್ಷಣದಿಂದ ತಿಳಿಯುತ್ತದೆ. ಏಕೆಂದರೆ ಅಲ್ಲಿ ಮಿಕ್ಕ ವಿಷಯಗಳಲ್ಲಿ ಚಿತ್ರದಂತೆಯೇ ಇರುವ, ಆದರೆ ಕೊನೆಯ ಗಣವು ರುದ್ರವಾಗಿರುವ ತ್ರಿಪದಿಯನ್ನೇ 'ಚಿತ್ರಲತೆ' ಎಂದಿದ್ದಾನೆ. ಇಲ್ಲಿನ ಮೊದಲ ಗಣವು ವಿಷ್ಣುವಾಗಿಯೇ ಇದೆ, ಆದ್ದರಿಂದ ಚಿತ್ರತ್ರಿಪದಿಯ ಮೊದಲ ಗಣವೂ ವಿಷ್ಣುವಾಗಿಯೇ ಇರಬೇಕು–ಎಂದರೆ ಚಿತ್ರದ ಲಕ್ಷಣವು ಹೀಗಿರಬೇಕು :

> **ಭುಜಪಕ್ಷಗತಿಶಿಖಿವ್ರಜ ಪದಗಣದೊಳ**
> **ಗಜ ರಸದಶದೊಳ್ ಪೆಱವೆಡೆಯೊಳಗಧೋ**
> **ಕ್ಷಜ ಗಣಮಾದೊಡದು ಚಿತ್ರಂ**

ರಾಮಾನುಜೈಂಗಾರ್ಯರು ಸ್ವೀಕರಿಸಿರುವ ಪಾಠದಲ್ಲಿ 'ಭುಜಗಪಕ್ಷ' ಎಂಬುದಕ್ಕೆ 'ರುದ್ರ' ಎಂದು ಅರ್ಥ ಹೇಳಬಹುದೇ ಹೊರತು, 'ಗತಿಶಿಖಿ'ಗಳಿಗೆ ಏನು ಅರ್ಥ ಕಲ್ಪಿಸುವುದು ? ಅದರ ಬದಲು 'ಭುಜಪಕ್ಷ' ಎಂಬ ಪಾಠವನ್ನು ಸ್ವೀಕರಿಸಿದರೆ ಇಡೀ ಪದ್ಯಕ್ಕೆ ಸಂಪೂರ್ಣವಾಗಿಯೂ ಸಮರ್ಪಕವಾಗಿಯೂ ಅರ್ಥವನ್ನು ಸೂಚಿಸಬಹುದು.

---

1 ಎಂ. ಎ. ರಾಮಾನುಜೈಂಗಾರ್ : ಛಂದೋಂಬುಧಿ (1946) : ಪಂಚಮಾಧಿಕಾರ ಪದ್ಯ 11

ಈ ಪರಿಷ್ಕೃತ ಪಾಠಕ್ಕೆ ಹೀಗೆ ಅರ್ಥೈಸಬಹುದು : ಭುಜ = 2, ಪಕ್ಷ = 2, ಗತಿ = 4, ಮತ್ತು ಶಿಖಿ = 3 ಕ್ರಮವಾಗಿ ಈ ಸಂಖ್ಯೆಯ ಗಣಗಳಿಂದ ಅಲ್ಲಿನ ಸಾಲುಗಳು ಕೂಡಿರುತ್ತವೆ ಎಂಬುದೇ ಈ ಪದ್ಯದ ಆಶಯ.

ನಾವು ಮೇಲಿನಂತೆ ಅರ್ಥೈಸುವುದಕ್ಕೆ ಜಯಕೀರ್ತಿಯೂ ಸಹಾಯಕ್ಕೆ ಬರುತ್ತಾನೆ; ಅವನು ಹೇಳುವ 'ಚಿತ್ರಾ ತ್ರಿಪದಿ'ಯೇ ನಾಗವರ್ಮನ ಚಿತ್ರ. ಅವನ ಲಕ್ಷಣ–ಲಕ್ಷ್ಯಪದ್ಯ ಹೀಗಿದೆ :

> ಕರಕರಾಬ್ಧಿತ್ರ್ಯಂಶ ಚರಣ ದಿಗ್ರಸರತಿಃ
> ಸ್ಮರಮಯೀ ಲಾದಿಗಿರಿ ಹರಾಂಶಾ ಚಾಂತ
> ವಿರಮಣಚ್ಚಿತ್ರಾ ತ್ರಿಪದಿಕಾ.[2]

ತ್ರಿಪದಿಯ ಮೊದಲನೇ ಸಾಲನ್ನು ಎರಡು ಸಾಲುಗಳನ್ನಾಗಿ ಒಡೆಯಬಹುದೆಂಬ ಅಂಶವನ್ನು, ಜಯಕೀರ್ತಿಯ ಕಾಲದಲ್ಲಿ ಅದನ್ನು ಎರಡು ಸಾಲುಗಳಾಗಿ ಭಾವಿಸಿದ್ದರೆಂಬುದನ್ನು, ಅವನು ಏಲೆಗೆ ಕೊಟ್ಟ ಲಕ್ಷಣದಿಂದ ಊಹಿಸುತ್ತೇವೆ. ಇದು ಸರಿ. ಆದರೆ ಅವನು ಈ ಅಂಶವನ್ನು ಎಲ್ಲಿಯೂ ಸ್ಪಷ್ಟವಾಗಿ ಹೇಳಿಲ್ಲ. ಆದರೆ ಮೇಲಿನ 'ಚಿತ್ರಾ ತ್ರಿಪದಿಕಾ'ದ ಲಕ್ಷಣಪದ್ಯದಲ್ಲಿಯೂ ಇದು ಸೂಚಿತವಾಗಿದೆ. ಅವನು ಮೊದಲ ಸಾಲಿನಲ್ಲಿ ಕರ = 2, ಕರ = 2, ಅಬ್ಧಿ = 4, ಹಾಗೂ ತ್ರ್ಯಂಶ = 3 ಇವುಗಳನ್ನು ಹೇಳಿರುವುದು ತ್ರಿಪದಿಯು ನಾಲ್ಕು ಸಾಲುಗಳಿಂದೊಡಗೂಡಿದೆಯೆಂದೂ, ಕ್ರಮವಾಗಿ ಅವುಗಳ ಸಂಖ್ಯಾಗಣಗಳು 2, 2, 4 ಹಾಗು 3 ಎಂದು ಇದು ಸೂಚಿಸುತ್ತದೆ. 'ಚಿತ್ರ'ಕ್ಕೆ ನಾಗವರ್ಮನು ಕೊಟ್ಟ ಲಕ್ಷಣ ಪದ್ಯದಲ್ಲಿಯೂ 'ಭುಜಪಕ್ಷಗತಿಶಿಖಿ' ಎಂದು ಹೇಳಿರುವುದರ ಉದ್ದೇಶವಾದರೂ ಇದೇ ಆಗಿದೆ. ಎಂದರೆ ತ್ರಿಪದಿಯ ಮೊದಲ ಸಾಲನ್ನು ಎರಡು ಪಾದಗಳನ್ನಾಗಿ ಭಾವಿಸುತ್ತಿದ್ದ ವಿಚಾರ ನಾಗವರ್ಮನಿಗೆ ತಿಳಿದಿತ್ತು. ಅದನ್ನು ಪ್ರತಿಸಾಲಿನ ಗಣಗಳ ಸಂಖ್ಯೆಯನ್ನು ಹೇಳುವುದರ ಮೂಲಕ ಸೂಚಿಸಿದ್ದಾನೆ. ಈ ಅಂಶವು ಸ್ಪಷ್ಟವಾಗಿ ಉಕ್ತವಾಗಿರುವುದು 'ಸಂಗೀತ ರತ್ನಾಕರ'ದಲ್ಲಿ :

> ಆದ್ಯೌ ದ್ವಿದ್ವಿಗಣೌ ಪಾದೌ ತೃತೀಯಶ್ಚ ಚತುರ್ಗಣಃ ॥
> ಚತುರ್ಥಸ್ತ್ರಿಗಣಃ ಪಾದೇಷ್ವೇಕಾದಶ ಗಣಾ ಇಮೇ
> ರತೇ ಷಷ್ಠಶ್ಚ ದಶಮಃ ಶೇಷಾಃ ಸ್ಯುರ್ಮಾನ್ಯಥಾ ಗಣಾಃ ॥
> ಗೀತ್ವಾದ್ಯಪಾದೌ ತದನು ಕಿಂಚಿಚ್ಛೇಷಂ ತೃತೀಯಕಂ
> ತತಃ ಸಮಗ್ರಂ ಗೀತ್ವಾ ಚತುರ್ಥೋ ಯದಿ ಗೀಯತೇ ॥
> ತದಾಸ್ಯಾ ತ್ರಿಪದೀ ತಾಲಹೀನಾ ಕರ್ಣಾಟಭಾಷಯಾ ॥ [3]

---

2 ಡಿ. ಎಸ್. ಕರ್ಕಿ : ಛಂದೋವಿಕಾಸ (1970) ಪು. 81ರಲ್ಲಿ ಉದ್ಧೃತ

3 Sangitaratnakara (Adyar Series), Vol. II (1944) ಚತುರ್ಥಾಧ್ಯಾಯ, ಶ್ಲೋಕಗಳು 267–270

ಇಲ್ಲಿ ತುಂಬ ಸ್ಪಷ್ಟವಾಗಿಯೇ ತ್ರಿಪದಿಗೆ ನಾಲ್ಕು ಸಾಲುಗಳೆಂದು ಹೇಳಿ ಕ್ರಮವಾಗಿ 2, 2, 4, 3 ಗಣಗಳೆಂದು ಹೇಳಿದೆ. 'ಮಾನಸೋಲ್ಲಾಸ' ದಲ್ಲೂ ಈ ಅಂಶವು ಸೂಚಿತವಾಗಿದೆ ;

'ಆದ್ಯಂ ಪಾದದ್ವಯಂ ಗೀತ್ವಾ ಕಿಂಚಿಚ್ಛೇಷಂ ತೃತೀಯಕಮ್
ತೃತೀಯಂ ಪುನರಾವರ್ತ್ಯ ಚತುರ್ಥಂ ಪರಿಗೀಯತೇ ॥ [4]

ತ್ರಿಪದಿಯ ಹಾಡುವ ವಿಚಾರವನ್ನು ಹೇಳುತ್ತ, ಇಲ್ಲಿ ಮೊದಲೆರಡು ಪಾದಗಳನ್ನು ಹಾಡಿ ಮೂರನೆಯ ಪಾದದ ಸ್ವಲ್ಪಭಾಗವನ್ನು ಉಳಿಸಿ ಹೇಳಿ, ಅನಂತರ ಮೂರನೆಯ ಸಾಲನ್ನಿಡೀ ಪುನರಾವರ್ತಿಸಿ, ನಾಲ್ಕನೆಯ ಸಾಲನ್ನು ಹಾಡಬೇಕು – ಎಂಬ ಇಲ್ಲಿನ ಆಶಯದಲ್ಲಿಯೂ ತ್ರಿಪದಿಯು ನಾಲ್ಕು ಸಾಲಿನ ರಚನೆಯೆಂಬುದು ಸೂಚಿತವಾಗಿದೆ.

ಎಂದರೆ, ಒಟ್ಟಿನಲ್ಲಿ, ತ್ರಿಪದಿಯ ಮೊದಲನೆಯ ಸಾಲನ್ನು ಎರಡು ಸಾಲನ್ನಾಗಿ ಒಡೆಯುತ್ತಿದ್ದ ಅಂಶವು ನಾಗವರ್ಮನಿಗೂ ತಿಳಿದಿತ್ತು. ಆದರೆ ಅವನು ಅದನ್ನು ಜಯಕೀರ್ತಿಯಂತೆ ಸೂಚ್ಯವಾಗಿ ಹೇಳಿದ್ದಾನೆ, ಅಷ್ಟೆ. ಹೀಗಾಗಿ 'ಚಿತ್ರ' ದ ಲಕ್ಷಣವನ್ನು ಹೇಳುವಲ್ಲಿ ತ್ರಿಪದಿಯನ್ನು ನಾಲ್ಕು ಸಾಲನ್ನಾಗಿ ಭಾವಿಸುತ್ತಿದ್ದ ಅಂಶವನ್ನೇ ಹೇಳಿದಂತಾಯಿತು. ನಾವು ತ್ರಿಪದಿಯೆಂದು ಸಾಮಾನ್ಯವಾಗಿ ಭಾವಿಸುವುದೇ ನಾಗವರ್ಮನ 'ಚಿತ್ರ', ಜಯಕೀರ್ತಿಯ 'ಚಿತ್ರಾತ್ರಿಪದಿಕಾ'. ಇದರ ಕೊನೆಯ ಗಣವು ರುದ್ರವಾಗಿದ್ದರೆ ಆಗ ಅದು ನಾಗವರ್ಮನ ಪ್ರಕಾರ 'ಚಿತ್ರಲತೆ' ಯೆನಿಸಿಕೊಂಡರೆ, ಜಯಕೀರ್ತಿ ಅದನ್ನು 'ವಿಚಿತ್ರಾ' ಎಂದು ಕರೆಯುತ್ತಾನೆ.

ಇನ್ನು ಏಳೆಯ ವಿಚಾರ : ಕಿಟ್ಟೆಲ್ ಹಾಗೂ ರಾಮಾನುಜೈಂಗಾರ್ಯರಿಬ್ಬರ ಆವೃತ್ತಿಗಳಲ್ಲಿಯೂ "ಭುಜಗಪಕ್ಷ ಪುರಗಣ" ಎಂದು ಏಳೆಯ ಲಕ್ಷಣ - ಲಕ್ಷ್ಯ ಪದ್ಯವು ಪ್ರಾರಂಭವಾಗುತ್ತದೆ. ಆದರೆ ಅದರ ಸರಿಯಾದ ಸ್ವರೂಪವು ಕೆಳಗಿನಂತಿರಬೇಕೆಂಬುದನ್ನು ಪಲವರು ಗುರುತಿಸಿದ್ದಾರೆ :

ಭುಜಪಕ್ಷ ಪುರಗಣ
ವ್ರಜದೊಳಾಜಜಿಸೊಳಕ್ಕು
ಮಜಗಣಮೇಳೆಗಿಭಗತೀ

ಇಲ್ಲಿಯೂ ಭುಜ = 2, ಪಕ್ಷ = 2, ಪುರ = 3 ಎಂದು ಅರ್ಥೈಸುವುದರ ಮೂಲಕ ಆ ಸಂಖ್ಯೆಗಳು ಏಳೆಯ ಪ್ರತಿಸಾಲಿನ ಗಣಗಳ ಸಂಖ್ಯೆಯನ್ನು ಸೂಚಿಸಿರುವುದನ್ನು ಕಾಣಬಹುದು. ಎಂದರೆ ಇಲ್ಲಿಯೂ ಮೊದಲಿನ ಸಾಲನ್ನು ತ್ರಿಪದಿಯ ಮೊದಲ

4 ಡಿ. ಎಲ್. ಎನ್. ಪೀಠಿಕೆಗಳು, ಲೇಖನಗಳು – ಪು. 692 ರಲ್ಲಿ ಉದ್ಧೃತ

ಸಾಲಿನಂತೆ ಎರಡು ಪಾದಗಳಾಗಿ ಭಾವಿಸಬಹುದೆಂಬುದನ್ನು ನಾಗವರ್ಮನು ಗಮನಿಸಿದ್ದಾನೆ. 'ಸಂಗೀತ ರತ್ನಾಕರ'ದಲ್ಲಿ ಏಳೆಯ ಲಕ್ಷಣವನ್ನು ಹೀಗೆ ನಿರೂಪಿಸಲಾಗಿದೆ.

ಪಂಚ ಕಾಮಾ ರತಿಶ್ಚೈಕಾ ಕಾಮೋಂತೇ ಚರಣತ್ರಯೇ ।
ಪ್ರತ್ಯೇಕಂ ತಾಸು ಚೇದೇತಾಶ್ಛಂದಸ್ಯತ್ರ್ಯೇಲಿಕಾ ಮತಾ ॥[5]

ಮೊದಲು ಐದು ವಿಷ್ಣುಗಣಗಳು, ನಂತರ ಒಂದು ಬ್ರಹ್ಮ, ಕೊನೆಯಲ್ಲಿ ಮತ್ತೆ ವಿಷ್ಣು - ಹೀಗೆ ಇವು ಮೂರು ಪಾದಗಳಲ್ಲಿ ವ್ಯಾಪಿಸಿರುವುದನ್ನು ತಿಳಿಸಲಾಗಿದೆ. ಒಟ್ಟಾರೆ ನಾಗವರ್ಮನು ತ್ರಿಪದಿ ಮತ್ತು ಏಳೆಗಳ ಲಕ್ಷಣವನ್ನು ಹೇಳುವಾಗ ಪ್ರತಿ ಸಾಲಿನ ಗಣಗಳ ಸಂಖ್ಯೆಯನ್ನು ಹೇಳಿದ್ದಾನೆ; ಇವೆರಡರ ಮೊದಲ ಸಾಲು ಎರಡಾಗಿ ಭಾಗವಹಿಸುತ್ತದೆಂಬ ವಿಷಯವು ಅವನಿಗೆ ತಿಳಿದಿತ್ತು, ಇಲ್ಲದಿದ್ದರೆ ಮೊದಲ ಸಾಲಲ್ಲಿ ನಾಲ್ಕು ಗಣವೆಂದು ಹೇಳುವುದರ ಬದಲು ಎರಡು + ಎರಡು ಎಂದು ಹೇಳುತ್ತಿರಲಿಲ್ಲ – ಎಂಬುದು ನಮ್ಮ ಅಭಿಪ್ರಾಯ.

ಪಿ. ವಿ. ನಾರಾಯಣ

2. ಪಂಪಭಾರತದ ಒಂದು ಕ್ಲಿಷ್ಟ ಪದ್ಯ

ಮಹಾಕವಿ ಪಂಪನ ಕೃತಿರತ್ನವಾದ 'ವಿಕ್ರಮಾರ್ಜುನ ವಿಜಯ' ಅಥವಾ 'ಸಮಸ್ತ ಭಾರತ'ದ ಕೆಲವು ಪದ್ಯಗಳು ಚಾರಿತ್ರಿಕ ವಿಚಾರಗಳಿಂದಲೂ, ಕ್ಲಿಷ್ಟ ಪದಗಳಿಂದಲೂ, ಒಗಟು ರೂಪದಲ್ಲೂ ಹೆಣೆಯಲಾಗಿವೆಯೆಂದು ಕಾಣುತ್ತವೆ. ಸಾಹಿತ್ಯಾಚಾರ್ಯರೆಂದು ಸುಪ್ರಸಿದ್ಧ ಕೀರ್ತಿಶಾಲಿಗಳಾದ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಬರೆದು (1971 ರಲ್ಲಿ) ಮೈಸೂರ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟವಾದ 'ಪಂಪಭಾರತ ದೀಪಿಕೆ'ಯು, ಅಧ್ಯಯನ ಶೀಲರಿಗೆ 'ದೀಪಿಕೆ'ಯಂತೆ ಕಾವ್ಯಾರ್ಥದ ಬಗೆಗೆ ಬೆಳಕನ್ನು ಚೆಲ್ಲುವ ಕೈಪಿಡಿಯಾಗಿದೆ. ಪಂಪಭಾರತದ ಪದ್ಯಗಳ ಬಗೆಗೆ ಶ್ರೀಯುತರು ಬರೆದ ಪ್ರತಿಪದಾರ್ಥ, ವಿಶೇಷಾರ್ಥಗಳ ಆಧಾರಗಳಿಂದ ಕೂಡಿದ ವ್ಯಾಖ್ಯಾನ ಸಾಹಿತ್ಯಕ – ಚಾರಿತ್ರಿಕ – ಪೌರಾಣಿಕ ವಿಚಾರ ಶೀಲರಿಗೊಂದು ಕೈದೀವಿಗೆಯಾಗಿ ರಾರಾಜಿಸುತ್ತಿದೆಯೆಂಬುದಕ್ಕೆ ಸಂಶಯವಿಲ್ಲ! ಅಲ್ಲಿ ಕೆಲವು ಪದ್ಯಗಳ ಕೆಲವು ಪದಗಳ ಬಗೆಗೆ ಇತರ ಕೃತಿರತ್ನಗಳಿಂದ – ಶಾಸನಗಳಿಂದ ಬೆಂಬಲದ ಸೂಚನೆಯೂ ಇವೆ. 'ಎಲ್ಲ ಬಲ್ಲವರಿಲ್ಲ', 'ಬಲ್ಲವರು ಬಹಳಿಲ್ಲ'ವೆಂಬಂತೆ, ಶ್ರೀ ಡಿ. ಎಲ್. ಎನ್. ಅವರು, ಕೆಲವೆಡೆ ತುಸ ತಡವರಿಸಿದ ವಿಭಾಗವಿಲ್ಲದೆಯೆಂಬುದೂ ಸುಳ್ಳಲ್ಲ! ಅಂತಹ ಗಡುಚು ಕಡೆಗಳಲ್ಲಿ, ತನಗೇನೂ ಪರಿಮೆಯೇ ಆಗದೆಡೆಯಲ್ಲಿ, ಶ್ರೀ ಡಿ. ಎಲ್. ಎನ್. ಪ್ರಾಮಾಣಿಕವಾಗಿ ಸೂಚಿಸಿದುದುಂಟು! ಶ್ರೀಯುತರಿಗೂ ಸಮಸ್ಯಾತ್ಮಕವಾದ

---

5. Sangitaratnakara (Adyar Series), vol. iv (1974)
ಚತುರ್ಥಾಧ್ಯಾಯ : ಶ್ಲೋಕ 125

ಪದ್ಯವೊಂದನ್ನು ಬರೆದು, ಅದರ ಬಗೆಗೆ ತುಸ ವಿವೇಚಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಶ್ರೀಯುತರು ಸೂಚಿಸಿದ ಪರಿಯಲ್ಲಿ ಸಾಗಿದರೆ, ನಮಗೇನು ತಿಳಿಯಬಹುದೆಂಬುದನ್ನು ವಾಚಕಮಹೋದಯರಲ್ಲಿ ನಿವೇದಿಸಲಾಗಿದೆ.

"ಸುರಭಿ ದೇವತೆಯೆಂಬ ಗೋಸನೆ ಮಾಣ್ದುದು,
ಏಱುವುದೊಂದದೆಂದಿರದೆ ಮಾಣ್ದುದು ದೇವವಾರಣ,
ಏೞ್ ಉಂಟವು ಪೋದೊಡಾ
ಖರಕರಂಗಱುದೆಂದೆ ಮಾಣ್ದುವು
ಮಾಣ್ದುವಾ ಹರಿ ನೀನೆ ಪೇೞಱುಯವೆಂದಿವು
ಭದ್ರದೇವರ ಚಾಗದೊಳ್ ಪೊಱಗಾದುವೇ ॥" (ಪಂ. ಭಾ. 1–29)

"ಈ ಪದ್ಯದಲ್ಲಿಯೂ ಬದ್ದೆಗನ ದಾನದ ಹಿರಿಮೆಯನ್ನು ವರ್ಣಿಸಿದೆ. ಅದರಲ್ಲಿ ಅನೇಕ ಪಾಠಕ್ಲೇಶಗಳಿರುವುದರಿಂದ ಅದರ ಅರ್ಥ ಸರಿಯಾಗಿ ಆಗುವುದಿಲ್ಲ. ಕೊನೆಯ ಪಂಕ್ತಿ ಅರಿಯಪೆಂದಿವು – ಅಪೂರ್ವ ವಸ್ತುಗಳಾದ ಇವು. ಭದ್ರದೇವನ ಚಾಗದೊಳ್ – ಭದ್ರದೇವನು ಮಾಡುವ ದಾನಗಳಲ್ಲಿ. ಪೊರಗಾದುವೇ – ಹೊರಗಾದುವೇ. ಆದುವು ಎಂಬ ಭಾವ. ಈ ಅಪೂರ್ವ ವಸ್ತುಗಳು ಯಾವವು ? ಸುರಭಿ–ಕಾಮಧೇನು. ಬೇಡಿದವರಿಗೆ ಬೇಡಿದ್ದನ್ನೆಲ್ಲ ಕೊಡುತ್ತೇನೆಂದು ಹೇಳುವ ಆ ದೇವತೆಯ ಗೋಸನೆ–ಕೂಗು, ಸಾರಿ ಹೇಳುವುದು. ಮಾಣ್ದುದು–ನಿಂತು ಹೋಯಿತು. ಎಂದರೆ ಬದ್ದೆಗನ ದಾನ ಕಾಮಧೇನುವನ್ನು ಕೂಡ ಮೀರಿಸಿತು. ಇಲ್ಲಿ 'ಗೋಸನೆ' ಎಂದಿರುವ ಪಾಠಾಂತರ ಸ್ವೀಕಾರಯೋಗ್ಯ. ಉಳಿದ ವಸ್ತುಗಳ ಸ್ವರೂಪ ಖಚಿತವಾಗಿ ತಿಳಿಯುವುದಿಲ್ಲ. ಖರಕರ–ಸೂರ್ಯ, ದೇವವಾರಣ–ಇಂದ್ರನ ಆನೆ, ಐರಾವತ. ಏಳೆಯುಂಟವು-ಅವು ಏಳೇ ಇವೆ ಎಂದರೆ ಏನೋ ? ಆ ಹರಿ – ಆ ಕುದುರೆಗಳು, ಎಂದರೆ ಸೂರ್ಯನ ಸಪ್ತಾಶ್ವಗಳು. **ಪದ್ಯದ ತಾತ್ಪರ್ಯ ತಿಳಿಯುವಂತಿಲ್ಲ**"

(ಪಂಪಭಾರತ ದೀಪಿಕೆ, ಪುಟ 12)

ನಿವೇದನೆ: (1) ಈ ಪದ್ಯದಲ್ಲಿ ರಾಜನ ದಾನಶೀಲತೆಯನ್ನು ಹೇಳುವಲ್ಲಿ ಬೇರೆಯವುಗಳ ಅಪೂರ್ಣತೆಯನ್ನು — ಅಸಾರವನ್ನು — ಸಾರಿದಂತಿದೆ. ಇದನ್ನು ಹೀಗೆ ಅರ್ಥವಿಸಬಹುದೆಂದು ತೋರುತ್ತದೆ:

ಸುರಭಿ (ಸುರಭಿಯು) ದೇವತೆಯೆಂಬ ಗೋಸನೆ ಮಾಣ್ದುದು (ಆ ಕಾಮಧೇನು ವೊಂದು ದೇವತೆಯೆಂಬ ಕೂಗು ನಿಂತಿತು — ಇವನ ದಾನದ ಕ್ರಮದ ಇದಿರಲ್ಲಿ ಅದು ದೇವತೆಯೆಂದಾಗಲಿಲ್ಲ).

ದೇವವಾರಣ — ಅದೊಂದು 'ಏಱು' ವುದೆಂಬ ಗೋಸನೆ ನಿಂತಿತು (ಇವನಲ್ಲಿ ಅಂತಹ 'ಏಱು' ವ ಹಲವು ಆನೆಗಳಿವೆ).

ಏರಕರನ — ಸೂರ್ಯನ. ಕುದುರೆಗಳು ಏಳೇ ಇವೆಯೆಂದರೂ ಅವುಗಳ ಗೋಸನೆ ನಿಂತಿತು (ಈತನಲ್ಲಿ ಅಂತಹ ಹಲವು ಕುದುರೆಗಳಿವೆ.)

ಅವೆಲ್ಲ ' ಹರಿ ' ಯೆಂಬ ಗೋಸನೆ ನಿಂತಿತು (ಹರಿಯೆಂದರೆ, ಈ ಮೇಲಿಂದ ಧೇನು, ವಾರಣ, ಕುದುರೆಗಳೆಂದು ನಿಘಂಟುಗಳಿಂದ ತಿಳಿಯುತ್ತದೆ). ಅವಕ್ಕಿಂತ ಮಿಗಿಲಾದ ನೀನೆ ಹರಿಯಾಗಿದ್ದಿ ! (ಅವಕ್ಕಿಂತ ಮಿಗಿಲಾದಂತೆ ಹರಿಯೆಂಬ ಹೆಸರು ನಿನಗಿದೆ, ಅಂದರೆ, ಅವಕ್ಕಿಂತ ಹೆಚ್ಚಿನದಾಗಿ ನಿನ್ನಲ್ಲಿ ಆ ಗುಣಗಳಿವೆ. ಆ ಮೇರೆಗೆ ನೀನೇ ಅವಕ್ಕಿಂತ ಹೆಚ್ಚಿನ ಹರಿ !) ಅಪೂರ್ವ ವಸ್ತುಗಳಾದ ಇವು ಬದ್ದೆಗನ ತ್ಯಾಗದಲ್ಲಿ ಹೊರಗಾದುವು — ಎಂಬ ಭಾವನೆಯಿಲ್ಲಿದೆ (ಆ ದೇವತಾರೂಪದ ಸುರಭಿ, ದೇವವಾರಣ, ದೇವಾಶ್ವಗಳ ಬಗೆಗೆ ಏನೆಲ್ಲಾ ಮಹಿಮೆಯಿದೆಯೋ ಅವೆಲ್ಲ ಬೇರೆ ಪುರಾಣಗಳಿಂದ ತಿಳಿಯಬಹುದಾಗಿದೆ. ಬದ್ದೆಗನೊಬ್ಬನೇ ಅವೆಲ್ಲಾ ಅಪೂರ್ವ ವಸ್ತುಗಳಿಗಿಂತ ಮಿಕ್ಕಿನವನೆಂದೇ ಇಲ್ಲಿ ಲೇಸಾಗಿದೆ).

(2) ಅಥವಾ, ಈ ಪದ್ಯದ ಬಗೆಗೆ ಹೀಗೆನ್ನಬಹುದೇನೋ ?

ಸುರಭಿ ಬೇಡಿದವರಿಗೆ ಬೇಡಿದ್ದನ್ನೆಲ್ಲ ಕೊಡುತ್ತೇನೆಂಬ ದೇವತೆಯೆಂಬ ಗೋಸನೆ ನಿಂತಿತು (ಇವನು ದಾನ ಕೊಡುವಲ್ಲಿ ಅಂತಹ ಸುರಭಿಗಳು ಹಲವಿದ್ದುವು).

ದೇವವಾರಣ ಅದೊಂದು ಏರುವುದೆಂಬ ಗೋಸನೆ ನಿಂತಿತು (ಇವನು ದಾನಗೊಡುವಲ್ಲಿ ಅಂತಹ ಹಲವು ವಾರಣಗಳಿವೆ).

ಸೂರ್ಯನ ಕುದುರೆಗಳು ಏಳೆಂಬ ಗೋಸನೆ ನಿಂತಿತು. (ಇವನು ದಾನಗೊಡುವಲ್ಲಿ ಅಂತಹ ಅನೇಕಾಶ್ವಗಳಿವೆ).

ಆ (ಅವೆಲ್ಲ) ಹರಿಯೆಂಬ ಗೋಸನೆ ನಿಂತಿತು (ನೀನೆ ಅಂತಹ ಹರಿಯೆಂದು, ಅವೆಲ್ಲಕ್ಕಿಂತ ನೀನೇ ಹೆಚ್ಚೆಂದು ಅರ್ಥ).

ಅಂತಹ ಸುರಭಿ, ವಾರಣ, ಅಶ್ವಗಳನ್ನು ದಾನಗೊಡಲು ತೊಡಗುವುದರಿಂದ ನೀನೇ ವಿಶಿಷ್ಟನಾದ ' ಹರಿ ' ಯೆಂದು ಇಲ್ಲಿ ಹೇಳಿದಂತಿದೆ ! ಅಪೂರ್ವ ವಸ್ತುಗಳಾದ ಅವು ಭದ್ರದೇವನ ತ್ಯಾಗದಲ್ಲಿ ಹೊರಗಾದುವೆ ಸೈ !

ಸನ್ಮಾನ್ಯ ಪ್ರಾಧ್ಯಾಪಕಾಚಾರ್ಯರಾದ ಶ್ರೀ ಡಿ. ಎಲ್. ಎನ್. ಅವರು. ಈ ಗ್ರಂಥವಲ್ಲಾಗಲೀ, ಇತರತ್ರ ಕೂಡಾ, ಅರ್ಥಗಾರಿಕೆಯಲ್ಲಿ — ವಿವರಣೆಯಲ್ಲಿ ' ಅಹಮಿಕೆ ' ಯನ್ನು ಕಾಣಿಸಿದ್ದಿಲ್ಲ; ಆಗ್ರಹದಿಂದ ಒಡನುಡಿದಂತಿಲ್ಲೆಂಬುದು ಇಲ್ಲಿ ಗಮನೀಯ ! ಈ ಬಗೆಗೆ ಶ್ರೀಯುತರು ಈ ' ಪಂಪಭಾರತ ದೀಪಿಕೆ ' ಯ ' ಅರಿಕೆ ' ಯಲ್ಲಿ ಹೇಳಿದುದನ್ನು ನಾವು ಮೊದಲಾಗಿ ಗಮನಿಸಬೇಕು :

" ಹಲವೆಡೆಗಳಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿದೆ. ನನ್ನದೇ ಸರಿಯೆಂಬ ಹಠವೇನೂ ಇಲ್ಲ. ಜಿಜ್ಞಾಸುವಿನ ದೃಷ್ಟಿಯಿಂದ ಕೆಲವಂಶಗಳನ್ನು ಚರ್ಚಿಸಿದೆ.

ನನಗೆ ಸಂದೇಹವೆಂದು ತೋರಿದೆಡೆಗಳಲ್ಲಿ ಪ್ರಶ್ನೆ ಚಿಹ್ನೆಯನ್ನು ಧಾರಾಳವಾಗಿ ಬಳಸಿದ್ದೇನೆ. ತಿಳಿಯದ ಅಂಶಗಳಿಗೂ ಇದೇ ಚಿಹ್ನೆಯನ್ನು ಅಲ್ಲಲ್ಲಿ ಹಾಕಿದೆ. ಈ ಪ್ರಶ್ನೆಚಿಹ್ನೆ ತೆಗೆದುಹಾಕುವ ಕೆಲಸ ಮುಂದಿನ ವಿದ್ವಾಂಸರಿಗೆ ಸೇರಿದುದಾಗಿದೆ; ಈ ಕ್ಷೇತ್ರದಲ್ಲಿ ಸಂಶೋಧನೆ ಮುಂದುವರಿದು, ಹೊಸ ಆಧಾರಗಳು ತಲೆದೋರುವುದ ರಿಂದ ಸಮಸ್ಯೆಗಳ ಪರಿಹಾರ ಸಾಧ್ಯವಾಗಬಹುದು. ಇವನ್ನೆಲ್ಲ ಸಹಾನುಭೂತಿ ಯಿಂದ ನೋಡಬೇಕೆಂದು ನನ್ನ ನಮ್ರತೆಯ ವಿನಂತಿ" (ಪುಟ. 14).

ಶ್ರೀ ಡಿ. ಎಲ್. ಎನ್. ಆಚಾರ್ಯರ ಈ ನಿಷ್ಕಪಟ ಮನೋಭಾವದ ಆಸಕ್ತಿ, ಸತ್ಯಾರ್ಥದ ತಿಳಿವಿನಲ್ಲಿ ಆತುರ, ವಿನಯಪರ ವಾಕ್ಯಗಳು ಸದಾ ಆದರ್ಶಗಳು. ಆ ಮೇರೆಗೆ ಸಹೃದಯರಾದ ವಿವೇಚಕರು ನಿರ್ಲೇಪಚಿತ್ತದಿಂದ ಈ ಬಗೆಗೆ ವಿವರಣಕ್ಕೆಳಸಬೇಕಾಗಿ ಪ್ರಾರ್ಥಿಸುತ್ತೇನೆ.

ವಿದ್ವಾನ್. ಕೆ. ವೆಂಕಟರಾಯಾಚಾರ್ಯ

3. ವಿದ್ವತ್ಪೂರ್ಣ – ವಿರೋಧಾಭಾಸ

ತೀರ ಮೊದಲನೆಯದಾಗಿ ನಮಗೆ ಈವರೆಗೆ ದೊರೆತ ಹಲ್ಮಿಡಿಯ ಶಾಸನದಿಂದ ಇಂದಿನ ತನಕ ಕನ್ನಡನುಡಿ ಬಿಡಿಸಲಾರದ ಬೆಸುಗೆಯಾಗಿ ಸಂಸ್ಕೃತ ಭಾಷೆಯ ನಿಕಟ ಸಂಬಂಧವನ್ನು ಪಡೆದಿರುತ್ತದೆ. ಆ ಶಾಸನದಲ್ಲಿ ಬಂದಿರುವ 'ಪೆತ್ತಜಯನ್' ಎಂಬ ಸಮಸ್ತ ಪದವು ಇದಕ್ಕೆ ಅರ್ಥಪೂರ್ಣವಾದ ನಿದರ್ಶನವಾಗಿದೆ. ಇಂದಿಗೂ ಸಂಸ್ಕೃತವು ಕನ್ನಡದ ಮೇಲೆ ತನ್ನ ಗೆಲವಿನ ಬಾವುಟ ನಿಲ್ಲಿಸಿ 'ಪೆತ್ತಜಯನ್' ಎಂದು ಸಾರುತ್ತದೆ. ತಾತ್ವಿಕ, ಪಾರಿಭಾಷಿಕ ಪದರಚನೆಯಲ್ಲಿಯಂತೂ ಸರಿಯೆ, ದಿನ ಬಳಕೆಯ ಮಾತು ಗಳಲ್ಲಿಯೂ ಸಂಸ್ಕೃತವು ಕನ್ನಡ ನುಡಿಯ ಮೇಲೆ ಸಾಕಷ್ಟು ತನ್ನ ಪ್ರಭಾವ ಬೀರಿರು ತ್ತದೆ. ಹೀಗಾಗಿ ಹಿಂದೆ ರೂಢಿಯಲ್ಲಿ ಇದ್ದಿರಬಹುದಾದ ಅವೆಷ್ಟೋ ಕನ್ನಡಪದಗಳು ಕಣ್ಮರೆಯಾಗಿಬಿಟ್ಟಿವೆ. ತನ್ನ ಕಾಲಮೇಲೆ ತಾನು ನಿಲ್ಲುವೆನೆಂದು ಪಣತೊಟ್ಟಿದ್ದರೆ ತಮಿಳಿನಂತೆ ಬಹುಶಃ ಸಂಸ್ಕೃತ ಪ್ರಭಾವದಿಂದ ಅಲಿಪ್ತವಾಗಿ ಕನ್ನಡವು ನಿಜವಾಗಿ ಅಚ್ಚಗನ್ನಡವಾಗುವುದು ಸಾಧ್ಯವಿತ್ತು. ಆದರೆ ಈಗ ಆ ಕಾಲ ಮೀರಿ ಹೋಗಿದೆ ಕನ್ನಡದ ಮಾತಿನ ಮತ್ತು ಬರವಣಿಗೆಯ ರೂಢಿಯಲ್ಲಿ ಅಚ್ಚಗನ್ನಡದ ಕಳೆ ಹೆಚ್ಚು ವಂತೆ ಮಾಡುವುದು, ಸಂಸ್ಕೃತದ ಆಡಂಬರ-ಆಧ್ಯತೆ ಹೆಚ್ಚದಂತೆ ನೋಡಿಕೊಳ್ಳುವುದು ಮಾತ್ರ ಈಗ ಸಾಧ್ಯ ಮತ್ತು ಅವಶ್ಯ. ಈ ಪ್ರಯತ್ನದಲ್ಲಿ ಸಂಸ್ಕೃತ ಭಾಷೆಯ ವ್ಯಾಕರಣ-ನಿಘಂಟುಗಳ ಖಚಿತವಾದ ತಿಳಿವಳಿಕೆಯಿಂದ ಅವರ ಜಾಯಮಾನಕ್ಕೆ ಸರಿ ಹೋಗುವ ಬಗೆಯಲ್ಲಿ ಸಂಸ್ಕೃತ ಪದಗಳನ್ನು ಬಳಸಬೇಕಾಗುತ್ತದೆ, ಬಳಸಿದವುಗಳನ್ನು ಅರ್ಥವಿಸಿಕೊಳ್ಳಬೇಕಾಗುತ್ತದೆ. 'ಸಂಸ್ಕೃತದಲಿನ್ನೇನು?' ಎಂಬ ಹೆಮ್ಮೆಯಿಂದ ಕನ್ನಡದ ಕಣಜವನ್ನು ಅಕ್ಷಯನಿಧಿಯಾಗಿ ಮಾಡುವ ಅವಸರದಲ್ಲಿ ಸಂಸ್ಕೃತದ

ಅಜ್ಞಾನದ ಮೂಲಕ ಕನ್ನಡವನ್ನು ಅಪಪ್ರಯೋಗಗಳಿಂದ ಅಪಾರ್ಥಗಳಿಂದ ತುಂಬ ಬಾರದು.

ಈ ದೃಷ್ಟಿಯಿಂದ ಉದಾಹರಣೆಯೆಂದು ಎರಡು ಸಂಸ್ಕೃತ ಪದಗಳನ್ನು ಎತ್ತಿಕೊಂಡು ಇಲ್ಲಿ ವಿಶ್ಲೇಷಣೆ ಮಾಡುವ ಉದ್ದೇಶವಿದೆ. ಈವೊತ್ತು ಪತ್ರಿಕೆಗಳಲ್ಲಿ ಮತ್ತು ಪುಸ್ತಕಗಳಲ್ಲಿ ವಿದ್ವತ್ಪೂರ್ಣ ಲೇಖನ ಅಥವಾ ಭಾಷಣ ಎಂಬ ಪ್ರಶಂಸೆ ಆಗಾಗ ಬರುತ್ತದೆ. ವಿದ್ಯಾವಂತರೂ ಪಂಡಿತರೂ ಈ ಪದವನ್ನು ಬಳಸುತ್ತಾರೆ. ಅವರು ಸೂಚಿಸುವ ಅರ್ಥವೆಂದರೆ ಆಯಾ ಲೇಖನ ಅಥವಾ ಭಾಷಣ ವಿದ್ವತ್ತೆ ಅಂದರೆ ಪಾಂಡಿತ್ಯದಿಂದ ತುಂಬಿ ತುಳುಕುವಂಥದು ಎಂದು. ಈ ಅರ್ಥ ಸರಿಯಾಗಿದೆಯೆಂದೇ ಮೇಲ್ನೋಟಕ್ಕೆ ಕಾಣುತ್ತದೆ. ಅದೆಷ್ಟು ಸರಿ ಎಂಬುದನ್ನು ಪರಿಶೀಲಿಸಬೇಕು. ವಿದ್ವಸ್ ಎಂಬ ಮೂಲಶಬ್ದವು ವಿಶೇಷಣಾರ್ಥದಲ್ಲಿ ವಿದ್ವಾನ್, ವಿದುಷೀ, ವಿದ್ವತ್ ಎಂಬ ಲಿಂಗಭೇದಾನುಗುಣವಾದ ರೂಪಹೊಂದಿ ತಿಳಿದ, ವಿವೇಕಿಯಾದ, ಪಂಡಿತನಾದ ಎಂಬ ಅರ್ಥದ ಜೊತೆಗೆ ವಿವೇಕಿಯಾದ, ಪಂಡಿತನಾದ ಮನುಷ್ಯ ಎಂಬ ನಾಮವಾಚಕ ಅರ್ಥವನ್ನೂ ಹೊಂದುತ್ತದೆ. ಸಮಸ್ತಪದದಲ್ಲಿ ಪೂರ್ವಪದವಾಗಿ ಅದು ವಿದ್ವತ್ ಎಂಬ ರೂಪವನ್ನು ತಳೆದು ಮೂಲಾರ್ಥದಲ್ಲಿಯೆ ಉಳಿಯುತ್ತದೆ. ಆದರಿಂದ ವಿದ್ವತ್ಪೂರ್ಣ ಎಂದರೆ 'ವಿದ್ವಾಂಸರಿಂದ ತುಂಬಿದ' ಎಂಬ ಅರ್ಥವು ಸಹಜವಾಗಿ ಪ್ರಾಪ್ತವಾಗುತ್ತದೆ. ಅಂತೇ ಪಂಡಿತರು ಸೇರುವ ಸಭೆ ಸಮ್ಮೇಳನಗಳನ್ನು 'ವಿದ್ವತ್ಪೂರ್ಣ' ಎಂದು ವಿಶೇಷಿಸುವುದು ಯುಕ್ತವಾಗಿದೆ. ಆದರೆ ಲೇಖನ-ಭಾಷಣಗಳನ್ನು 'ವಿದ್ವತ್ಪೂರ್ಣ' ಎಂದು ಹೇಳುವುದು ಸರಿಯಾಗದು. ಹಾಗೆ ಹೇಳಿದರೆ ವಿದ್ವಜ್ಜನರಿಂದ ತುಂಬಿದ ಭಾಷಣ-ಲೇಖನವೆಂಬ ವಿಚಿತ್ರ ಅರ್ಥವನ್ನು ಸೂಚಿಸಿದಂತಾಗುತ್ತದೆ. 'ಪಾಂಡಿತ್ಯಪೂರ್ಣ' ಎಂಬ ಅರ್ಥವನ್ನು ತಿಳಿಸುವುದಿದ್ದರೆ 'ವಿದ್ವತ್ತಾಪೂರ್ಣ' ಅಥವಾ 'ವಿದ್ವತ್ವಪೂರ್ಣ' ಎಂಬ ಪದವು ಸರಿಯಾಗುತ್ತದೆ. ವಿದ್ವತ್ಕಲ್ಪ, ವಿದ್ವಜ್ಜನ, ವಿದ್ವತ್ಸಭೆ, ವಿದ್ವತ್ ಸಂಭಾವನೆ, ವಿದ್ವತ್ಸೇವೆ ಈ ಮುಂತಾದ ಸಮಸ್ತ ಪದಗಳಲ್ಲಿ ವಿದ್ವತ್ ಇವಕ್ಕೆ ಮೂಲಾರ್ಥವೇ ಇರುವುದು. 'ವಿದ್ವತ್ತು' ಎಂಬ ಉಲ್ಲೇಖವನ್ನು ಕೊಟ್ಟು ಅದು 'ವಿದ್ವತ್' ಇದರ ತದ್ಭವವೆಂದು ಕಿಟೆಲ್ ಕೋಶವು ತಿಳಿಸುತ್ತದೆ. ಆದರೆ ವಿದ್ವತ್ ಇದು ಸಂಸ್ಕೃತದಲ್ಲಿ ಪ್ರಾತಿಪದಿಕ ಅಥವಾ ಮೂಲಶಬ್ದವಲ್ಲ. ವಿದ್ವಸ್ ಇದು ಮೂಲಶಬ್ದ. ಅದರಿಂದ ವಿದ್ವತ್ ಎಂಬ ರೂಪವು ನಿಷ್ಪನ್ನವಾಗಿ ಸಮಾಸಪೂರ್ವಕವಾಗಿ ಸಂಸ್ಕೃತ ರೂಢಿಯಲ್ಲಿದೆ. ವಿದ್ವತ್ ಇದರಿಂದ ವಿದ್ವತ್ತು ಬಂದಿದ್ದರೂ ಕೂಡ ಅದು ಕೇಶಿರಾಜನ ಪ್ರಕಾರ ಸಮಸಂಸ್ಕೃತವಾಗುತ್ತದೆ, ತದ್ಭವವಾಗಲಾರದು. ಅವನು ನಾಮಪ್ರಕರಣದಲ್ಲಿ ಕ್ಷುತ್, ವಿದ್ಯುತ್ ಮುಂತಾಗಿ ದ್ವಿತ್ವಬೆರಸಿದ ಉತ್ವವನ್ನು ಪಡೆಯುತ್ತವೆ ಎಂದು ಹೇಳಿದ್ದಾನೆ. ಹಾಗೆಯೆ ವಿದ್ವಸ್ ಇದರಿಂದ ವಿದ್ವಾಂಸ ಎಂಬ ಸಂಸ್ಕೃತದ ಪ್ರಥಮಾಬಹುವಚನ

ರೂಪವು ಕನ್ನಡದಲ್ಲಿ ಸಮಸಂಸ್ಕೃತವಾಗುವುದೆಂದು ಅವನು ಮುಂದೆ ಹೇಳಿರುವು ದುಂಟು. ಇದನ್ನೂ ಸಹ ಕಿಟೆಲ್‌ಕೋಶದಲ್ಲಿ ತದ್ಭವವೆಂದು ಸೂಚಿಸಲಾಗಿದೆ. ಸಂಸ್ಕೃತ ಜನ್ಯವೆಂಬ ವ್ಯಾಪಕ ಅರ್ಥದಲ್ಲಿ ತದ್ಭವವೆಂಬ ಪದವನ್ನು ಇಲ್ಲಿ ಬಳಸಿರು ವಂತೆ ಕಾಣುತ್ತದೆ. ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ವಿದ್ವತ್ತು ಎಂಬುದು ದಕ್ಷಿಣ ಕರ್ನಾಟಕದಲ್ಲಿ ಬಹುಕಾಲದಿಂದ ವಿದ್ವತ್ವ, ವಿದ್ವತ್ತೆ ಎಂಬ ಅರ್ಥದಲ್ಲಿ ರೂಢವಾಗಿದೆ. ಅದೇ ಅರ್ಥವು ಅದಕ್ಕೆ ಮೂಲವಾಗಿದ್ದ ವಿದ್ವತ್ ಇದಕ್ಕೆ ಆರೋಪಿತವಾಗಿ ವಿದ್ವತ್‌ಪೂರ್ಣ ಎಂಬ ಸಮಸ್ತ ಪದಗಳಲ್ಲಿ ಸಾರ್ವತ್ರಿಕವಾಗಿ ಉಳಿದುಕೊಂಡು ಬಂದಿರುವ ಸಂಭವವಿರುತ್ತದೆ. ಇದರಲ್ಲಿ ತಪ್ಪೇನು ಎಂದು ಕೇಳಬಹುದು. ಯಾಕಂದರೆ ಹಲವು ಸಂಸ್ಕೃತ ಶಬ್ದಗಳು ತಮ್ಮ ಮೂಲಾರ್ಥದ ಜೊತೆಗೆ ಇಲ್ಲವೆ ಅದಕ್ಕೆ ಬದಲಾಗಿ ಬೇರೆಯಾದ ಅರ್ಥವನ್ನು ಕನ್ನಡ ಸಲುವಳಿಯಲ್ಲಿ ಪಡೆದಿರುತ್ತವೆ. ಆದರೆ ವಿದ್ವತ್ ಇದು ವಿದ್ವತ್ತು ಎಂಬ ಪ್ರತ್ಯೇಕ ಅಸ್ತಿತ್ವವನ್ನು ಪಡೆಯುವ ಅರ್ಥ ಮೂಲಕ್ಕಿಂತ ಬೇರೆಯಾಗಿರುವುದಕ್ಕೆ ಈ ಯುಕ್ತಿವಾದವು ಸರಿ ಹೋಗಬಹುದು. 'ವಿದ್ವತ್‌ಪೂರ್ಣ' ಎಂಬ ತರದ ಪೂರ್ತಿಯಾಗಿ ಸಂಸ್ಕೃತಸಮಸ್ತ ಪದವಾಗಿರುವ ಸಂದರ್ಭದಲ್ಲಿ ಅರ್ಥ ವ್ಯತ್ಯಾಸಕ್ಕೆ ಇದು ಅನ್ವಯುವಾಗಲಾರದು, ಆಗಕೂಡದು.

ವಿರೋಧಾಭಾಸ ಎಂದರೆ ವಿರೋಧದ ಆಭಾಸ, ವಿರೋಧವಿರುವಂತೆ ತೋರು ವಿಕೆ. ಯಾವ ಮಾತಿನಲ್ಲಿ ವಿರೋಧವಿರುವಂತೆ ತೋರುತ್ತದೆಯೋ ಅಂದರೆ ನಿಜವಾದ ವಿರೋಧವಿರುವುದಿಲ್ಲವೋ ಅದು ವಿರೋಧಾಭಾಸ. ಅಂತೆಯೆ ಅಲಂಕಾರಗಳಲ್ಲಿ ವಿರುದ್ಧಾಭಾಸ ಅಥವಾ ವಿರೋಧಾಭಾಸ ಎಂಬ ಶ್ಲೇಷ ಚಮತ್ಕಾರ ಮೂಲಕವಾದ ಅಲಂಕಾರವಿರುತ್ತದೆ. ಅದರಲ್ಲಿ ಒಂದರ್ಥದಲ್ಲಿ ಕಂಡುಬರುವ ವಿರೋಧವು ಇನ್ನೊಂದು ಅರ್ಥದಿಂದ ಪರಿಹಾರವಾಗುತ್ತದೆ. ಸಂಸ್ಕೃತ, ಕನ್ನಡ ಕಾವ್ಯಗಳಲ್ಲಿ ವಿರೋಧಾಭಾಸಕ್ಕೆ ಹೇರಳವಾದ ಉದಾಹರಣೆಗಳು ಸಿಗುತ್ತವೆ. ವಿರೋಧಾಭಾಸದ ಅಂಶವು ವಿಶೇ ಷೋಕ್ತಿ, ವಿಭಾವನೆ, ವಿಷಮದಂಥ ವಿರೋಧ ಮೂಲಕವಾದ ಅಲಂಕಾರಗಳಲ್ಲಿ ಕಂಡುಬರುತ್ತವೆ. ಆದರೆ ಇವುಗಳಲ್ಲೆಲ್ಲ ವಿರೋಧವು ಆಭಾಸ ಮಾತ್ರ ಎಂಬುದು ಸಮಾನ ಲಕ್ಷಣವಾಗಿರುತ್ತದೆ. ಕೂಡಿ ಇರಲಾರದ ವಸ್ತುಗಳು ಕೂಡಿ ಇರುವುದಾಗಿ ವರ್ಣಿಸುವುದರಲ್ಲಿ ಕೂಡ ಒಂದು ಬಗೆಯ ವಿರೋಧಾಭಾಸವಿರುತ್ತದೆ. ಇಂಥ ಉದಾಹರಣೆಗಳಲ್ಲಿ ಕೂಡಿ ಇರಲಾರದ ವಸ್ತುಗಳ ಕೂಡಿಕೆಯಲ್ಲಿ ವಿರೋಧ ಕಾಣು ತ್ತದೆ, ಅದಕ್ಕೆ ಕೊಡುವ ಕಾರಣದಿಂದ ವಿರೋಧವು ಅಳಿದು ಹೋಗುತ್ತದೆ. ಇಂದು ನಿಜವಾದ ವಿರೋಧ ಅಥವಾ ವಿಸಂಗತಿ ಇರುವ ಉಕ್ತಿ ಅಥವಾ ಸಂದರ್ಭಗಳನ್ನು ಕುರಿತು ಮಾತಾಡುವಾಗ ಮತ್ತು ಬರೆಯುವಾಗ ಕೆಲವು ಸಲ ವಿರೋಧಾಭಾಸಪದವನ್ನು ಉಪಯೋಗಿಸಲಾಗುತ್ತಿದೆ. ಇಂಥಲ್ಲಿಯೂ ಒಮ್ಮೊಮ್ಮೆ ಸರಿಯಾದ ಮಾಹಿತಿ

ಅಥವಾ ವಿಷಯ ಜ್ಞಾನವಿಲ್ಲದೆ ಇರುವುದರಿಂದ ವಿರೋಧದ ಆಭಾಸವೇ ಇರಬಹುದು. ಆಮೇಲೆ ಸರಿಯಾದ ತಿಳಿವಳಿಕೆ ದೊರೆತೊಡನೆ ವಿರೋಧವು ಪರಿಹಾರವಾಗಬಹುದು. ಆದರೆ ವಿರೋಧಾಭಾಸ ಎಂಬ ಪದವನ್ನು ಬಳಸುವಾಗ ನಿಜವಾದ ವಿರೋಧವಿದು ಎಂಬ ಮನೋಭಾವವಿರುತ್ತದೆ. ಆದ್ದರಿಂದ ವಿರೋಧಾಭಾಸ ಎಂಬ ಮಾತಿನ ಬಳಕೆ ಯಥಾರ್ಥವಾಗುವುದಿಲ್ಲ. ಮೊದಲಾಗಲಿ ಆಮೇಲಾಗಲಿ Contradiction ಅಥವಾ Incongruity ಇದೆ ಎಂಬ ಸ್ಪಷ್ಟಭಾವವು ಮನಸ್ಸಿನಲ್ಲಿರುವಾಗಂತೂ ವಿರೋಧಾಭಾಸ ಎಂಬ ಪದ ಪ್ರಯೋಗವು ಯುಕ್ತವಾಗುವದಿಲ್ಲ. ಒಂದು ಭಾಷೆಯ ಬೆಳೆವಣಿಗೆ ಅದನ್ನು ಬಳಸುತ್ತಿರುವವರ ಮನಸ್ಸಿನ ಬೆಳವಣಿಗೆಯನ್ನು ಅವಲಂಬಿಸಿರುತ್ತದೆ. ಮನಸ್ಸಿನ ಬೆಳವಣಿಗೆ ವಿಚಾರ-ವಿವೇಕ ಪ್ರಜ್ಞೆಯಲ್ಲಿರುವಂತೆ ತಕ್ಕ ಪದಗಳ ಬಳಕೆಯಲ್ಲಿಯೂ ಇರುತ್ತದೆ. ಅದು ಕಡಿಮೆಯಾದರೆ 'ವಿದ್ವತ್‌ಪೂರ್ಣ-ವಿರೋಧಾಭಾಸ'ಗಳು ಹೆಚ್ಚುತ್ತ ಹೋಗಬಹುದೆಂಬ ಭಯ ಮೂಡುತ್ತದೆ.

ರಂ. ಶ್ರೀ. ಮುಗಳಿ

4. ವಿಮರ್ಶೆಯಲ್ಲಿ ವಿಸಂಗತಿಯ ಒಂದು ಸಾಧ್ಯತೆ

ಒಂದು ಕಾದಂಬರಿಯನ್ನು ವಿಮರ್ಶಿಸುವಾಗ ಎದುರಿಸಬೇಕಾದ ಸಮಸ್ಯೆಯೊಂದಿದೆ. ಅದನ್ನು ಹೀಗೆ ವಿವರಿಸಬಹುದು. ವಿಮರ್ಶೆಯಲ್ಲಿ ವಿಮರ್ಶಕ ತಾನು ತಳೆಯುವ ನಿಲುವುಗಳನ್ನು ಸಮರ್ಥಿಸಲು ಕಾದಂಬರಿಯಿಂದ ಕೆಲವು ಘಟನೆಗಳನ್ನೋ, ಘಟನೆಗಳ ವಿನ್ಯಾಸವನ್ನೋ ಉಲ್ಲೇಖಿಸುತ್ತಾನೆಯಷ್ಟೆ. ಹೀಗೆ ಉಲ್ಲೇಖಿಸಿದಾಗ ತರ್ಕಸರಿಯಿದ್ದು ಅದಕ್ಕೆ ನೀಡುವ ಲಕ್ಷ್ಯ ಇಲ್ಲವೇ ಉದಾಹರಣೆ ತಪ್ಪಾಗಿರುವ ಎಂದರೆ ತಕ್ಕದಲ್ಲದೇ ಹೋಗುವ ಸಾಧ್ಯತೆಗಳಿವೆ.

ಈಗ ಒಂದು ಉದಾಹರಣೆಯ ಮೂಲಕ ಇದನ್ನು ವಿವರಿಸಬಹುದು. ಶ್ರೀ ಎಸ್. ಎಲ್. ಭೈರಪ್ಪನವರ ' ದಾಟು ' ಕಾದಂಬರಿಯನ್ನು ಪ್ರತಿಗಾಮಿ ನಿಲುವುಗಳನ್ನುಳ್ಳ ಕೃತಿಯೆಂದು ಹೇಳುವ ವಿಮರ್ಶಕರು ತಮ್ಮ ಮಾತನ್ನು ಸಮರ್ಥಿಸಲು ಆ ಕೃತಿಯಿಂದ ಒಂದು ಘಟನೆಯನ್ನು ಉದಾಹರಿಸುತ್ತಾರೆ. ಆ ಘಟನೆ ಹೀಗಿದೆ. ಆ ಕೃತಿಯಲ್ಲಿ ವೆಂಕಟರಮಣಯ್ಯ ಎನ್ನುವ ಬ್ರಾಹ್ಮಣ ಕುಮುದಿನಿಯೆಂಬ ಗರ್ಭಿಣಿ ಹೆಂಗಸನ್ನು ಶಪಿಸುತ್ತಾನೆ. ಆಕೆಯನ್ನು ಸೊಸೆಯಾಗಿ ಪಡೆದ ವಂಶ ಮುಂದೆ ಬೆಳೆಯದೇ ಹೋಗಲಿ ಎಂಬುದೇ ಆ ಶಾಪದ ತಿರುಳು. ಕುಮುದಿನಿ ಸಾಯುತ್ತಾಳೆ. ಆಕೆ ಸೊಸೆಯಾಗಿದ್ದ ಮೇಲುಗಿರಿಗೌಡರ ವಂಶ ಬೆಳೆಯುವ ಸಾಧ್ಯತೆ ಕೂಡ ಕಾದಂಬರಿಯ ಕೊನೆಗೆ ಇಲ್ಲವಾಗುತ್ತದೆ.

ಇಲ್ಲಿ ವಿವಾದಕ್ಕೆ ಒಳಗಾಗಿರುವ ಅಂಶವೆಂದರೆ ಬ್ರಾಹ್ಮಣನಾದ ವೆಂಕಟರಮಣಯ್ಯ ನೀಡುವ ಶಾಪ ಫಲಿಸುತ್ತದೆಯೆಂದು ಸಾರುವ ಯತ್ನ ಕಾದಂಬರಿಯಲ್ಲಿದೆ

ಯೆಂದು ಹೇಳುತ್ತಿರುವುದು. ಇದೊಂದು ಪ್ರತಿಗಾಮಿ ಧೋರಣೆ. ಈ ವಿವರಣೆಯನ್ನು ಒಪ್ಪದ ಕೆಲವರು ಶಾಪದ ಪರಿಣಾಮವಾಗಿ ಕುಮುದಿನಿ ಸತ್ತಳೆನ್ನಲಾಗದು, ಅದು ಕಾಕತಾಳೀಯವೆನ್ನುತ್ತಾರೆ.

ಈ ಘಟನೆಯ ಹಿಂದೆ ಪ್ರತಿಗಾಮಿ ಧೋರಣೆಯಿದೆಯೆನ್ನುವವರು ತಾವೇ ಒಂದು ವಿರೋಧಾಭಾಸವನ್ನು ಉಂಟುಮಾಡಿಕೊಂಡಿದ್ದಾರೆ. ಬ್ರಾಹ್ಮಣ್ಯದ ಗೆಲುವನ್ನು ಸಾಧಿಸುವುದು ಪ್ರತಿಗಾಮಿಯೆನ್ನುವಾಗ ಅವರ ನೆಲೆಯಾವುದು ? ಬ್ರಾಹ್ಮಣ್ಯ ಗೆಲ್ಲುವುದು ಸುಳ್ಳು ಎಂದು ತಾನೇ ? ಹಾಗಿದ್ದಮೇಲೆ ಕಾದಂಬರಿ ಬ್ರಾಹ್ಮಣ್ಯವನ್ನು ಸಾಧಿಸುತ್ತಿದೆಯೆಂದರೆ ಸುಳ್ಳನ್ನು ಸತ್ಯವೆಂದು ವಾದಿಸಲು ಹೊರಟಿದೆಯೆಂದಾಯ್ತು. ಎಂದರೆ ಕಾದಂಬರಿಯ ಈ ಘಟನೆಯಲ್ಲಿ ಪ್ರತಿಗಾಮಿ ಧೋರಣೆಯಿರದೆ ತರ್ಕಹೀನತೆಯಿದೆ; ಅದೇ ದೋಷವೆಂದಾಯ್ತು.

ಪ್ರತಿಗಾಮಿಧೋರಣೆ ಅಸ್ತಿತ್ವವಿಲ್ಲದ ಸುಳ್ಳುಸಂಗತಿಗಳನ್ನು ಸಾಧಿಸುವುದರಲ್ಲಿ ಇರುವುದಿಲ್ಲ. ಒಂದು ನಿರ್ದಿಷ್ಟ ಪರಿಸರದಲ್ಲಿ ಜವಾಬುದಾರಿ ಪದ್ಧತಿಯನ್ನು ಎತ್ತಿಹಿಡಿಯುವುದು ಪ್ರತಿಗಾಮಿ ನಿಲುವಾಗಬಹುದು. ಏಕೆಂದರೆ ಅದು ಇರುವುದನ್ನು, ಇರಬೇಕಾದುದರ ವಿರುದ್ಧ ಎತ್ತಿ ಹಿಡಿಯುತ್ತದೆ.

ಆದ್ದರಿಂದ ಬ್ರಾಹ್ಮಣ್ಯದ ಗೆಲುವು ಎಂಬುದೇ ಬುಡವಿಲ್ಲದ ಎಂದರೆ ಶಾಪ ಫಲಿಸುವುದೆಂಬ ಅವೈಜ್ಞಾನಿಕ ಮಾತು. ಅದನ್ನು ಒಪ್ಪುವ ಕಾದಂಬರಿ 'ಸುಳ್ಳು' ಹೇಳುತ್ತಿದೆಯೆಂದಾಗುತ್ತದೆಯೇ ಹೊರತು 'ತಪ್ಪು' ಹೇಳುತ್ತಿದೆಯೆಂದಾಗುವುದಿಲ್ಲ.

ಈಗ ನಿಜವಾಗಿಯೂ ಈ ಘಟನೆಯು ಅರ್ಥವಂತಿಕೆಯೇನೆಂಬ ಪ್ರಶ್ನೆಯೇಳುತ್ತದೆ. ಅರೆಹುಚ್ಚ ವೆಂಕಟರಮಣಯ್ಯ ಶಾಪಕೊಟ್ಟರೆ ಅದು ಅವನ ಒಳತೋಟಿಯ ಪರಿಣಾಮ. ಕುಮುದಿನಿ ಸತ್ತದ್ದು ಅವಳ ದೌರ್ಬಲ್ಯದಿಂದಾಗಿ. ಇವೆರಡರ ನಡುವೆ ತರ್ಕಬದ್ಧವಾದ ಸಂಬಂಧವೇನೂ ಇಲ್ಲ. ಈ ಮಾತನ್ನು ವಿರೋಧಿಸುವವರು ಹೀಗೆ ಹೇಳಬಹುದು : ವೆಂಕಟರಮಣಯ್ಯನ ಉಳಿದೆಲ್ಲಾ ಅರೆಹುಚ್ಚು ಮಾತುಗಳನ್ನು ಒಂದಿಲ್ಲೊಂದು ಬಗೆಯಲ್ಲಿ ನಿಜವಾಗಿಸುವ ಪ್ರಯತ್ನ ಕಾದಂಬರಿಯಲ್ಲಿದೆ. ಉದಾಹರಣೆಗೆ ಜಲಪ್ರಳಯದ ಮಾತನ್ನವನು ಆಡುತ್ತಾನೆ. ಕೊನೆಯಲ್ಲಿ ಒಂದು ಮಿನಿಜಲಪ್ರಳಯವೇ ನಡೆದು ಹೋಗುತ್ತದೆ. ಎಂದಮೇಲೆ ಈಗ ಹೇಳಿದ ಶಾಪದ ಘಟನೆಯನ್ನು ಪರಸ್ಪರ ಕಾರ್ಯ-ಕಾರಣಸಂಬಂಧದಲ್ಲಿ ಇಡುವುದು ತಪ್ಪಲ್ಲ.

ಈ ವಾದಕ್ಕೂ ಕೂಡ ಈಗಾಗಲೇ ಹೇಳಿದ ಮಾತೇ ಅನ್ವಯಿಸುತ್ತದೆ. ತರ್ಕಬದ್ಧವಾಗಿ ಸಂಬಂಧವನ್ನು ಸೂಚಿಸಲಾಗದೇ ಸುಮ್ಮನೆ ಎರಡು ಘಟನೆಗಳನ್ನು ಒಂದು ಇನ್ನೊಂದರ ಫಲವೆಂದು ಕಾದಂಬರಿ ಹೇಳಿದರೆ ಅದು ಸುಳ್ಳಾಗುತ್ತದೆ: ಹಾಗೆಂದು ಪರಸ್ಪರ ಸಂಬಂಧವಿದೆಯೆಂದು ವಿಮರ್ಶೆ ಭಾವಿಸಿದರೆ ಅದು ವಿಸಂಗತಿಯಾಗುತ್ತದೆ.

ಈಗ ವಿವಾದದ ಎರಡನೆಯ ಮುಖವನ್ನು ಗಮನಿಸಬಹುದು. ಎರಡು ಘಟನೆಗಳ ಸಂಬಂಧವನ್ನು ಕಾಕತಾಳೀಯವೆಂದು ವಾದಿಸುವುದು ಕೂಡ ಸರಿಯಾಗುವುದಿಲ್ಲ ಈ ವಾದದಿಂದ ಕೃತಿಯ ವಿಕ್ಷಿಪ್ತ ಸಂಗತಿಗಳನ್ನು ಮರೆಮಾಚಲು ಸಾಧ್ಯವಾಗಬಹುದು. ನಾವೀಗ ನೋಡಿದ 'ದಾಟು'ವಿನ ಘಟನೆಯ ವಿವರಣೆಯಲ್ಲಿ ಕಾಕತಾಳೀಯವೆಂದು ಹೇಳಿದ್ದು ಜಾರಿಕೆಯ ಮಾತೆಂದು ತೋರಿದರೂ ಅಪಾಯಕಾರಿಯಲ್ಲ. ಹಾಗೆ ಅಪಾಯಕಾರಿಯಾಗಬಹುದಾದ ಒಂದು ಸಂದರ್ಭವನ್ನು ಈಗ ನೋಡಬಹುದು.

ಶ್ರೀ ಭೈರಪ್ಪನವರದೇ ಇನ್ನೊಂದು ಕಾದಂಬರಿ 'ವಂಶವೃಕ್ಷ'ದಿಂದ ಒಂದು ಘಟನೆಯನ್ನು ನೋಡಬಹುದು. ಶ್ರೋತ್ರಿಯರ ವಂಶದ ಸೊಸೆ ಕಾತ್ಯಾಯನಿ ರಾಜಾರಾಯನನ್ನು ಮದುವೆಯಾದಾಗ: ಶ್ರೀನಿವಾಸ ಶ್ರೋತ್ರಿಗಳು 'ಒಂದು ವಂಶದ ಕುಡಿಯನ್ನು ಅರಳಿಸಿದ ಕೊಂಬೆ ಇನ್ನೊಂದು ವಂಶದ ಕುಡಿಯನ್ನು ಅರಳಿಸಲಾರದು' ಎಂಬರ್ಥದ ಮಾತುಗಳನ್ನು ಹೇಳುತ್ತಾರೆ. ಅದು ಸಹಜವಾಗಿಯೇ ಕಾಣುತ್ತದೆ. ಕಾದಂಬರಿಯಲ್ಲಿ ಮುಂದೆ ಕಾತ್ಯಾಯನಿಗೆ ಸಾಲಾಗಿ ಗರ್ಭಪಾತಗಳಾಗುತ್ತವೆ.

ಈ ಘಟನೆ ಪ್ರತಿಗಾಮಿ ಧೋರಣೆಯನ್ನು ಹೊಂದಿದೆ. ಏಕೆಂದರೆ ಶ್ರೋತ್ರಿಗಳು ಹೇಳಿದ ಮಾತುಗಳು ಕಾತ್ಯಾಯನಿಯ ಮೇಲೆ ಪರಿಣಾಮ ಬೀರಿವೆ. ಕಾತ್ಯಾಯನಿಯ ಗೆಲುವು ಎಂದರೆ ಶ್ರೋತ್ರಿಯರ ಮಾತಿನ ಸೋಲು ಕಾದಂಬರಿಯ ಒಟ್ಟು ದೃಷ್ಟಿಕೋನವನ್ನೆ ಬದಲಾಯಿಸುತ್ತದೆ. ಎಂದರೆ ತನ್ನ ದೃಷ್ಟಿಕೋನವನ್ನು ಸಾಧಿಸಲು ಕಾತ್ಯಾಯನಿಯನ್ನು ದುರ್ಬಲಳನ್ನಾಗಿಸಿ ಶ್ರೋತ್ರಿಯರಿಗೆ ಪ್ರಬಲ ಪ್ರತಿಸ್ಪರ್ಧಿಯಾಗಲು ಆಕೆಗಿದ್ದ ಅವಕಾಶವನ್ನು ಕಸಿದುಕೊಳ್ಳಲಾಗಿದೆ.

ಆದರೆ 'ದಾಟು'ವಿನಲ್ಲಿ ಹೀಗಾಗುವುದಿಲ್ಲ. ಕುಮುದಿನಿಯನ್ನು ದುರ್ಬಲಳನ್ನಾಗಿಸಲಾಗಿದೆಯೆಂದರೂ ಆಕೆ ಸಬಲಳಾಗುವುದು ಕಾದಂಬರಿಯ ಸಂವಿಧಾನದಲ್ಲಿ ಬದಲಾವಣೆ ತರಬಹುದಾದರೂ, ಅದರ ಧೋರಣೆಯ ಮೇಲೇನೂ ಪರಿಣಾಮ ಬೀರುವುದಿಲ್ಲ. ಅಲ್ಲದೆ ವೆಂಕಟರಮಣಯ್ಯನ 'ಶಾಪ' ವೈಯಕ್ತಿಕ ಒಳತೋಟಿಯ ಪರಿಣಾಮವಷ್ಟೆ. ಶ್ರೋತ್ರಿಯರ ಮಾತು ಸಾರ್ವತ್ರಿಕ ಸತ್ಯದ ಧಾಟಿಯಲ್ಲಿದೆ.

ಪ್ರತಿಗಾಮಿ ಧೋರಣೆಯನ್ನು ವಂಶವೃಕ್ಷದ ಘಟನೆಯಲ್ಲಿ ಕಾಣುವುದು ಹೇಗೆ? ಶ್ರೋತ್ರಿಯರ ಮಾತು ತೀರ ಸರಳೀಕೃತಗೊಂಡದ್ದಾಗಿದೆ. ಎರಡನೆ ಮದುವೆ ಮಾಡಿಕೊಂಡ ಹೆಂಗಸು ತನ್ನ ಎರಡನೆಯ ಗಂಡನಿಂದ ಮಕ್ಕಳನ್ನು ಪಡೆಯಲೂ ಬಹುದು; ಪಡೆಯದೇ ಇರಲೂ ಬಹುದು. ಇದಕ್ಕೆ ಯಾವ ನಿಯಮವೂ ಇಲ್ಲ. ಮಕ್ಕಳನ್ನು ಪಡೆಯದೇ ಇರುವ ಸಂದರ್ಭಗಳೂ ಇರುತ್ತವೆಯಷ್ಟೆ. ಈ ಸಂದರ್ಭಗಳನ್ನು ಶ್ರೋತ್ರಿಯರ ಮಾತುಗಳ ಹಿನ್ನೆಲೆಯಲ್ಲಿ ವಿವರಿಸುವ

ಪ್ರಯತ್ನ ಕಾದಂಬರಿಯಲ್ಲಿದೆ. ಏಂದಮೇಲೆ ತಪ್ಪುಕಾರಣಗಳನ್ನು ಹುಡುಕಿದಂತಾಯಿತಷ್ಟೆ.

ಕಾತ್ಯಾಯನಿಯ ಗರ್ಭಪಾತಗಳಿಗೂ ಶ್ರೋತ್ರಿಯರ ಮಾತುಗಳಿಗೂ ಇರುವ ಸಂಬಂಧ ಕಾಕತಾಳೀಯವೆಂದು ವಾದಿಸುವುದು ಅಪಾಯಕಾರಿ. ಕೃತಿಯು ಯಾವುದೇ ಎರಡು ಘಟನೆಗಳ ಹಿಂದಿನ ಯೋಜಿತ ಸಂಬಂಧಕ್ಕೂ ಕಾದಂಬರಿಯ ಧೋರಣೆಗೂ ನಿಕಟ ಸಂಬಂಧವಿರುವಾಗ ಆ ಎರಡು ಘಟನೆಗಳ ಸಂಬಂಧ ಕಾಕತಾಳೀಯವೆಂದು ವಾದಿಸುವುದು ವಿಮರ್ಶೆಯ ವಿಸಂಗತಿಯ ಇನ್ನೊಂದು ಸಾಧ್ಯತೆ.

ಕೊನೆಯಲ್ಲಿ: ವಿಮರ್ಶೆಯ ಕ್ರಿಯೆಯಲ್ಲಿ ಜರಗಬಹುದಾದ ಕೆಲವು ವಿಸಂಗತಿಗಳನ್ನು ನಿರೂಪಿಸಲು 'ದಾಟು' ಮತ್ತು 'ವಂಶವೃಕ್ಷ'ಗಳಿಂದ ಘಟನೆಗಳನ್ನು ಉದಾಹರಿಸಲಾಯಿತು. ಇಲ್ಲಿ ಆ ಎರಡು ಕೃತಿಗಳ ವಿಮರ್ಶನ ಕೆಲಸ ನಡೆದಿಲ್ಲ. ಅಥವಾ ಇಲ್ಲಿ ಸೂಚಿತವಾದ ಧೋರಣೆಗಳೇ ಇಡೀ ಕೃತಿಯ ಧೋರಣೆಯೆಂದೂ ಸಾಧಿಸುವಂತಿಲ್ಲ.

ಕೆ. ವಿ. ನಾರಾಯಣ

5. ಕಳಿಜಿನ್–ಶಬ್ದಾರ್ಥ ಜಿಜ್ಞಾಸೆ

ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಸಿದ್ಧವಾಗುತ್ತಿರುವ ಬೃಹತ್ ಕನ್ನಡ ನಿಘಂಟಿನ ಪುಟ 1651ರಲ್ಲಿ **ಕಳಿಜಿನ್** ಶಬ್ದಕ್ಕೆ ನಿಷ್ಪತ್ತಿ ತಿಳಿಯದೆಂದು ಕೇವಲ ಪ್ರಶ್ನಾರ್ಥಕ ಚಿಹ್ನೆ ಹಾಕಿದ್ದಾರೆ. ಈ ಶಬ್ದ ಬಳಕೆಯಾಗಿರುವ ಏಕೈಕ ಪ್ರಯೋಗ:

> ಕಲಿದೋರನಾನೋಡಿಸಿ ಪಲರಾನಿಱಿದು ಕೊನ್ದು ಗೆಲ್ದು
> ತಾನುಮ್ಮಡಿದು ಕಳಿಜಿನ್ ಸುರಾಲಯಮೇಱಿದಾನ್

ಇದು ಎಪಿಗ್ರಾಫಿಯಾ ಕರ್ನಾಟಿಕಾದ ಎಂಟನೆಯ ಸಂಪುಟದಲ್ಲಿ ಉಲ್ಲೇಖವಾಗಿರುವ ಸೊರಬದ (542–6) ಶಾಸನವೊಂದರ ಪದ್ಯಭಾಗ. ಶಾಸನದ ಕಾಲ ಸುಮಾರು 800 ಈ ಶಾಸನದಲ್ಲಿ ಪೂರ್ವದ ಹಳಗನ್ನಡದ ಪಳೆಯುಳಿಕೆಗಳಿವೆ:

ಅ. ಪ್ರಥಮ ಪುರುಷದ ಆಖ್ಯಾತ ಪ್ರತ್ಯಯಕ್ಕೆ ದೀರ್ಘ ಸ್ವರ ಬಂದಿದೆ; ಏಱಿದಾನ್ (→ಏಱಿದನ್)

ಆ. ಬಿಂದುವಿಗೆ ನಕಾರವಿದೆ; ಕೊನ್ದು (ಕೊಂದು)

ಇ. ದ್ವಿತೀಯಾ ವಿಭಕ್ತಿಗೆ ದೀರ್ಘವಿದೆ; ಕಲಿದೋರನಾನ್ (→ಕಲಿದೋರನನ್)

ಈ. ಶಬ್ದಾದಿಯ ಸ್ವರ, (ದ$_1$) ಸ$_1$ ದ$_2$ ಸ$_2$ ಮಾದರಿಯಲ್ಲಿ, ಇ→ಎ–ಆಗಿಲ್ಲ: ಇಱಿದು ಈ ಶಬ್ದ ಇಱಿದು→ಎಱಿದು→ಇಱಿದು→ಇರಿದು ಎಂಬಂತೆ ಕನ್ನಡ ಭಾಷೆಯ ಸ್ಥಿತ್ಯಂತರಗಳಲ್ಲಿ ವ್ಯತ್ಯಾಸಗಳನ್ನು ಪಡೆದಿದೆ.

ಕಳಿಜಿನ್ ಎಂಬುದು ಕನ್ನಡ ಭಾಷೆಯಲ್ಲಿ ಅಪರೂಪದ ಶಬ್ದ. ಕನ್ನಡದಲ್ಲಿ ಇದರ ಬಳಕೆ ತುಂಬ ಹಿಂದೆಯೇ ನಿಂತುಹೋಗಿದೆ. ಇದು ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದ ಶಬ್ದ. ತಮಿಳಿನಲ್ಲಿ ಇದರ ಜ್ಞಾತಿ ರೂಪಗಳಿವೆ; ಕಳಿಜು. ಕಳುಜು. ಅವುಗಳ ಅರ್ಥ 'ಗಂಡಾನೆ'

ಕನ್ನಡದಲ್ಲಿ ಹೆಣ್ಣಾನೆ ಎಂಬರ್ಥದ 'ಪಿಡಿ' ಶಬ್ದವಿದೆ. ಅದಕ್ಕೆ ಸಂವಾದಿಯಾಗಿ ಗಂಡಾನೆ ಎಂಬರ್ಥದ ಶಬ್ದವಿರಬೇಕೆಂದು ಸಹಜವಾಗಿಯೇ ನಿರೀಕ್ಷಿಸುತ್ತೇವೆ. ಅಂಥ ಒಂದು ಶಬ್ದವೇ ಕಳಿಜಿನ್. ಸೊರಬದ ಶಾಸನ ಅದರ ಏಕಮಾತ್ರ ಪ್ರಯೋಗ ಉಳಿಸಿಕೊಂಡಿದೆ. ಶಾಸನದ ಸಾರಾಂಶ: ಕಲಿದೋರನನ್ನು ಓಡಿಸಿ, ಹಲವರನ್ನು ಇರಿದು ಕೊಂದು ಗೆದ್ದು, ತಾನೂ ಮಡಿದು 'ಕಳಿಜನು' ಸುರಾಲಯವನ್ನು ಸೇರಿದನು. ಇಲ್ಲಿ 'ಕಳಿಜಿನ್' ಎಂದರೆ 'ಗಂಡಾನೆಯಂಥವನು' ಎಂದು ಅರ್ಥ. ಶಾಸನ ಪಾಠದಲ್ಲಿನ ವರ್ಣನೆಯಲ್ಲಿ ಸಾಹಸದ ಹೋರಾಟಕ್ಕೆ, ಆನೆಯ ಧೈರ್ಯಸ್ವಭಾವಕ್ಕೆ ಚೆನ್ನಾಗಿ ಹೊಂದುತ್ತದೆ.

ಈ ವಿವರಣೆಯಿಂದ ಸ್ಪಷ್ಟವಾಗುವಂತೆ ಕನ್ನಡ ನಿಘಂಟಿನ ಮರು ಮುದ್ರಣದಲ್ಲಿ, ಅಥವಾ ಅಚ್ಚಾಗಲಿರುವ ಅನುಬಂಧದಲ್ಲಿ ಕಳಿಜಿನ್ ಶಬ್ದಕ್ಕೆ ಈಗಿರುವ ಪ್ರಶ್ನಾರ್ಥಕ ಚಿಹ್ನೆ ತೆಗೆದು (ಅಥವಾ ಉಳಿಸಿಕೊಂಡು) ತಮಿಳು ಜ್ಞಾತಿ ಶಬ್ದವಾದ ಕಳಿಜು/ಕಳುಜು' ಎಂಬುದನ್ನು ಕೊಡಬೇಕೆಂದು ತೋರುತ್ತದೆ.

ಹಂಪ. ನಾಗರಾಜಯ್ಯ

ಸಂಪಾದಕೀಯ

ಅಭಿನಂದನೆ

ಕನ್ನಡದ ಹೊಸ ತಲೆಮಾರಿನ ಅನೇಕ ಕವಿಗಳಿಗೆ ಪ್ರಚೋದಕರಾಗಿ ನವ್ಯ ಸಾಹಿತ್ಯ ಪರಂಪರೆಯ ಪ್ರಮುಖ ನಾಯಕರಾಗಿ ಹೆಸರುಗಳಿಸಿರುವ ಶ್ರೀ ಗೋಪಾಲ ಕೃಷ್ಣ ಅಡಿಗರಿಗೆ ಅವರ " ವರ್ಧಮಾನ " ಕವಿತೆಯ ಸಂಕಲನಕ್ಕೆ ಈ ವರ್ಷ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿರುವುದು ಅತ್ಯಂತ ಸಂತೋಷದ ಸಂಗತಿಯಾಗಿದೆ. ಶ್ರೇಷ್ಠ ಕವಿಗಳಲ್ಲದೆ, ಉತ್ತಮ ವಿಮರ್ಶಕರೂ ವಿಚಾರವಾದಿಗಳೂ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಕೃಷಿ ಮಾಡಿ ತಮ್ಮ ಲೇಖನಿಯನ್ನು ಹದಗೊಳಿಸಿಕೊಂಡಿರು ವವರೂ ಆದ ಅವರನ್ನು " ಸಾಧನೆ " ಯು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ.

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯನ್ನು ಹತ್ತು ಸಂಪುಟಗಳಲ್ಲಿ ಪ್ರಕಟಿಸಬೇಕೆಂಬ ದೊಡ್ಡ ಯೋಜನೆಯನ್ನು ಹಾಕಿಕೊಂಡು, ಅದರಲ್ಲಿ ಮೊದಲ ಸಂಪುಟವನ್ನು ಈಗ ಹೊರ ತಂದಿದೆ. ದಿನಾಂಕ 30 - 11 - 74 ರಂದು ಉಪಕುಲಪತಿ ಡಾ॥ ಎಚ್. ನರಸಿಂಹಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸಮಾರಂಭದಲ್ಲಿ ಕನ್ನಡದ ಖ್ಯಾತ ಸಾಹಿತಿ ಡಾ॥ ಶಿವರಾಮ ಕಾರಂತರು ಆ ಮೊದಲ ಸಂಪುಟವನ್ನು ಬಿಡುಗಡೆ ಮಾಡಿದರು. ಉಳಿದ ಸಂಪುಟಗಳು ಸಿದ್ಧವಾಗುತ್ತಿವೆ. ಕರ್ನಾಟಕದ ಅನೇಕ ವಿದ್ವಾಂಸ ಸಕ್ರಿಯ ಸಹಕಾರದಿಂದ ಸಾಗುತ್ತಿರುವ ಈ ಕಾರ್ಯ ಇನ್ನು ಮೂರು ನಾಲ್ಕು ವರ್ಷಗಳಲ್ಲಿ ಮುಗಿದು ಕನ್ನಡಿಗರ ಕೈಗೆ ಎಲ್ಲಾ ಸಂಪುಟಗಳೂ ಬರಲೆಂದು ಹಾರೈಸುತ್ತೇವೆ.

ಈ ಸಂಚಿಕೆಯ ಲೇಖಕರು

ದಿ॥ ಡಿ. ಎಲ್. ನರಸಿಂಹಾಚಾರ್	
ಕೆ. ಉಮಾಪತಿ ಶೆಟ್ಟಿ	ಗ್ರಂಥಪಾಲಕ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಡಾ॥ ಜಿ. ಎಸ್. ಶಿವರುದ್ರಪ್ಪ	ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಹಂಪ. ನಾಗರಾಜಯ್ಯ	ಅಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಎಂ. ಎಸ್. ಜೈಪ್ರಕಾಶ್	769, 5ನೇ ಬ್ಲಾಕ್ ರಾಜಾಜಿನಗರ ಬೆಂಗಳೂರು 560010
ಟಿ. ಎಸ್. ವಿಜಯಪ್ಪ	ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 1
ಟಿ. ಎಸ್. ನಾಗರಾಜಶೆಟ್ಟಿ	ದ್ವಿತೀಯ ಎಂ.ಎ., ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಡಾ॥ ಎಂ. ಬಸವಣ್ಣ	ಮನಶ್ಶಾಸ್ತ್ರ ವಿಭಾಗ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ ತಿರುಪತಿ
ದಿ॥ ತೀ. ನಂ. ಶ್ರೀಕಂಠಯ್ಯ	

ಬಿ. ಸಿ. ಜವಳಿ	ಪಠ್ಯಪುಸ್ತಕ ನಿರ್ದೇಶನಾಲಯ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 3
ಆಶಾ ಬಿ. ಪಾಟೀಲ	ಎರಡನೆ ಪಿ.ಯು.ಸಿ. ಮೌಂಟ್ ಕಾರ್ಮೆಲ್ ಕಾಲೇಜು ಬೆಂಗಳೂರು 560001
ಎಸ್. ಸುಂದರರಾಜನ್	ಸಸ್ಯಶಾಸ್ತ್ರ ಅಧ್ಯಾಪಕ ಸೆಯಿಂಟ್ ಜೋಸೆಫ್ಸ್ ಕಾಲೇಜು ಬೆಂಗಳೂರು 560001
ಜಿ. ಎಂ. ಹೆಗಡೆ	ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ 3
ಎಂ. ಮಾಧವ ಪೈ	'ಸಿದ್ಧೇಶ್ವರ ನಿಲಯ' ಎಡ 6ನೇ ಅಡ್ಡರಸ್ತೆ ರವೀಂದ್ರನಗರ, ಶಿವಮೊಗ್ಗ
ಎಚ್. ಎಚ್. ಗಂಗಾಧರಾಚಾರ್	ಸಹ ಅಧ್ಯಾಪಕ ಎಸ್. ಜೆ. ಪಾಲಿಟೆಕ್ನಿಕ್, ಭದ್ರಾವತಿ
ಆರ್. ಭಾರತಾದ್ರಿ	ದ್ವಿತೀಯ ಎಂ.ಎ. ವಿದ್ಯಾರ್ಥಿ ಕನ್ನಡ ಅಧ್ಯಯನ ಕೇಂದ್ರ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು 560056
ಸುಮತೀಂದ್ರ ನಾಡಿಗ್	27, ನಿಪ್ಪನ್ ಕಾರ್ಖಾನೆ ರಸ್ತೆ, ಕೆ.ಜಿ. ನಗರ ಬೆಂಗಳೂರು 560019
ಎಚ್. ರೇವಣಸಿದ್ಧಪ್ಪ	ಇತಿಹಾಸ ಅಧ್ಯಾಪಕ ಸಿದ್ಧಗಂಗಾ ಕಾಲೇಜು, ತುಮಕೂರು
ಪಿ. ವಿ. ನಾರಾಯಣ	ಕನ್ನಡ ವಿಭಾಗ, ವಿಜಯ ಕಾಲೇಜು ಬೆಂಗಳೂರು 560004

ವೆಂಕಟರಾಯಾಚಾರ್ಯ — ಸುರತ್ಕಲ್ಲು (ದಕ್ಷಿಣ ಕನ್ನಡ)

ಡಾ॥ ರಂ. ಶ್ರೀ. ಮುಗಳಿ — ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಕೆ. ವಿ. ನಾರಾಯಣ — ಅಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಹಂಪ. ನಾಗರಾಜಯ್ಯ — ಅಧ್ಯಾಪಕ, ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ

ಸಂಪುಟಗಳ ವಿವರ

ಸಂಪುಟ	1	ಕನ್ನಡ ಸಾಹಿತ್ಯದ ಆರಂಭಕಾಲದಿಂದ ಕ್ರಿ.ಶ. 850 ರ ವರೆಗೆ
ಸಂಪುಟ	2	ಕ್ರಿ.ಶ. 850 ರಿಂದ ಕ್ರಿ.ಶ. 1150 ರ ವರೆಗೆ
ಸಂಪುಟ	3	ಕ್ರಿ.ಶ. 1150 ರಿಂದ ಕ್ರಿ.ಶ. 1350 ರ ವರೆಗೆ
ಸಂಪುಟ	4	ಕ್ರಿ.ಶ. 1350 ರಿಂದ ಕ್ರಿ.ಶ. 1600 ರ ವರೆಗೆ
ಸಂಪುಟ	5	ಕ್ರಿ.ಶ. 1600 ರಿಂದ ಕ್ರಿ.ಶ. 1850 ರ ವರೆಗೆ
ಸಂಪುಟ	6	ಕ್ರಿ.ಶ. 1850 ರಿಂದ ಕ್ರಿ.ಶ. 1920 ರ ವರೆಗೆ
ಸಂಪುಟ	7	ಕ್ರಿ.ಶ. 1920 ರಿಂದ ಕ್ರಿ.ಶ. 1947 ರ ವರೆಗೆ
ಸಂಪುಟ	8	ಕ್ರಿ.ಶ. 1947 ರಿಂದ ಕ್ರಿ.ಶ. 1972 ರ ವರೆಗೆ
ಸಂಪುಟ	9	ಈ ಎಂಟೂ ಸಂಪುಟಗಳಲ್ಲಿ ವಿಶೇಷವಾಗಿ ಚರ್ಚಿತವಾಗದ ಸಂಗತಿಗಳು : ನಿದರ್ಶನಕ್ಕೆ – ಜನಪದ ಸಾಹಿತ್ಯ, ಕನ್ನಡ ಗದ್ಯದ ಇತಿಹಾಸ, ಪ್ರಮುಖವಾದ ಸಾಹಿತ್ಯ ಪ್ರಕಾರಗಳು, ಶಾಸ್ತ್ರ ಸಾಹಿತ್ಯದ ಅವಲೋಕನ, ವಿಮರ್ಶೆಯ ಬೆಳವಣಿಗೆ ಇತ್ಯಾದಿ
ಸಂಪುಟ	10	ಇತರ ಭಾಷೆಯ ಸಾಹಿತ್ಯಗಳೊಂದಿಗೆ, ಕನ್ನಡ ಸಾಹಿತ್ಯವನ್ನಿರಿಸಿ ನಡೆಯಿಸಿದ ತೌಲನಿಕ ಸಮೀಕ್ಷೆ, ಕನ್ನಡ ಸಾಹಿತ್ಯದ ಸಾಧನೆ ಸಿದ್ಧಿ ಇತ್ಯಾದಿ

ಸಂಪುಟಗಳ ಬಿಡುಗಡೆಯ ವಿವರ

ಪ್ರಥಮ ಸಂಪುಟದ ಬಿಡುಗಡೆ ··· 30–10–1974

		1975	1976	1977
ಯುಗಾದಿಯಂದು	···	ಸಂಪುಟ 2	ಸಂಪುಟ 5	ಸಂಪುಟ 8
ಸ್ವಾತಂತ್ರ್ಯ ದಿನದಂದು	···	ಸಂಪುಟ 3	ಸಂಪುಟ 6	ಸಂಪುಟ 9
ಕನ್ನಡ ರಾಜ್ಯೋತ್ಸವದಿನದಂದು	···	ಸಂಪುಟ 4	ಸಂಪುಟ 7	ಸಂಪುಟ 10

ಕನ್ನಡ ಸಾಹಿತ್ಯದ ಆರಂಭ ಕಾಲದಿಂದ, ಆಧುನಿಕ ಕಾಲದವರೆಗೆ ಹಲವು ಕಾಲಮಾನಗಳನ್ನು ಮಾಡಿಕೊಂಡು ಅಂದಂದಿನ ಇತಿಹಾಸ, ಭಾಷೆ, ಸಂಸ್ಕೃತಿ, ಧರ್ಮಗಳ ಹಿನ್ನೆಲೆಯಲ್ಲಿ ಸಾಹಿತ್ಯವನ್ನು ಪರಿಶೀಲಿಸಲಾಗಿದೆ. ಅಂದಂದಿನ ಕಾಲಮಾನಗಳ ಸಾಹಿತ್ಯವನ್ನು ಸಮಗ್ರವಾಗಿ ಪರಿಶೀಲಿಸುವುದರ ಜತೆಗೆ, ಈ ಸಾಹಿತ್ಯ ಚರಿತ್ರೆ ಪ್ರಮಾಣಭೂತವೂ ಪುನರ್‌ಮೌಲ್ಯಮಾಪನ ದೃಷ್ಟಿಯಿಂದ ರಚಿತವಾದದ್ದೂ ಆಗಿರಬೇಕೆಂಬುದು ಈ ಯೋಜನೆಯ ಉದ್ದೇಶವಾಗಿದೆ. ಅಲ್ಲದೆ ಸಮಗ್ರ ಕನ್ನಡ ಸಾಹಿತ್ಯದ ಪರಿಶೀಲನೆ, ಭಾರತೀಯ ಹಾಗೂ ಜಾಗತಿಕ ಸಾಹಿತ್ಯದ ಹಿನ್ನೆಲೆಯಲ್ಲಿ ನಡೆಯುವುದು ಹೆಚ್ಚು ಅರ್ಥಪೂರ್ಣವೆಂಬ ಅಂಶವನ್ನು ಇಲ್ಲಿ ಉದ್ದಕ್ಕೂ ಗಮನದಲ್ಲಿರಿಸಿಕೊಳ್ಳಲಾಗಿದೆ.

ಈ ಸಂಪುಟಗಳ ರಚನೆಯಲ್ಲಿ ಕನ್ನಡ ನಾಡಿನ ವಿವಿಧ ಕ್ಷೇತ್ರಗಳಲ್ಲಿರುವ ಪರಿಣತ ಲೇಖಕರ ಸಹಕಾರವನ್ನು ಪಡೆಯಲಾಗಿದೆ. ಕ್ರೌನ್ ಚತುರ್ಥಾಂಶ ಆಕಾರದಲ್ಲಿ ಹೊರಬರುವ ಈ ಹತ್ತು ಸಂಪುಟಗಳು ಸುಮಾರು ಮೂರು ಸಾವಿರ ಪುಟಗಳಷ್ಟು ದೀರ್ಘವಾಗುವ ಸಂಭವವಿದೆ.

* *

ಸಂಪುಟಗಳ ಬೆಲೆ

ಹತ್ತು ಸಂಪುಟಗಳಿಗೆ : ರೂ. 300

1976 ರ ಸ್ವಾತಂತ್ರ್ಯ ದಿನ (15–8–1976) ದೊಳಗಾಗಿ ಹತ್ತು
ಸಂಪುಟಗಳನ್ನು ಕೊಳ್ಳಬಯಸುವವರಿಗೆ ಪ್ರಕಾಶನಪೂರ್ವ ಬೆಲೆ : ರೂ. 250
[ಈ ಹಣವನ್ನು ಒಂದೇ ಬಾರಿ ಅಥವಾ ನಾಲ್ಕು ತಿಂಗಳಿಗೊಮ್ಮೆ 50 ರೂ. ಗಳಂತೆ
ಐದು ಕಂತುಗಳಲ್ಲಿ ಕೊಡಬೇಕಾಗುತ್ತದೆ] ಅಂಚೆ ವೆಚ್ಚ ಪ್ರತ್ಯೇಕ
ಸದ್ಯಕ್ಕೆ ಬಿಡಿ ಸಂಪುಟಗಳ ಮಾರಾಟವಿಲ್ಲ

ತಮ್ಮ ಪ್ರತಿಗಳನ್ನು ದಯಮಾಡಿ ಕಾಯ್ದಿರಿಸಿ

ಬೆಂಗಳೂರು
ವಿಶ್ವವಿದ್ಯಾಲಯದ ಪ್ರಕಟಣೆಗಳ ವಿವರಗಳಿಗೆ
ದಯವಿಟ್ಟು ವ್ಯವಹರಿಸಿ :

ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು 560056

ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ